ವಿಷಯಾನುಕ್ರಮಣಿಕೆ

ಆಧ್ಯಾತ್ಮಗ್ರಂಥಾವಳಿ

ಶ್ರೀ ಶಾಂಕರಭಾಷ್ಯಸಮೇತ

ಪ್ರಶ್ನೋಪನಿಷತ್ತು

(ಉಪನಿಷತ್ತಿನ ಮತ್ತು ಭಾಷ್ಯದ ಸಂಸ್ಕೃತಮೂಲ,
ಅನುವಾದ, ಟಿಪ್ಪಣಿ, ಸಾರ–ಮುಂತಾದವುಗಳೊಡನೆ)

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಕ್ರಮಾಂಕ ೫

ಆಧ್ಯಾತ್ಮಪ್ರಕಾಶಕಾರ್ಯಾಲಯ
ಬೆಳೆಗೊಳ
1992.

ಪ್ರಥಮಮುದ್ರಣ 1000
ದ್ವಿತೀಯಮುದ್ರಣ 1145
ತೃತೀಯಮುದ್ರಣ 1000
ನಾಲ್ಕನೆಯ ಮುದ್ರಣ 1000

All Rights Reserved
ಇವರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

ಮುದ್ರಣಸ್ಥಾನ :
ಅಧ್ಯಾತ್ಮಪ್ರಕಾಶಮುದ್ರಣಾಲಯ,
ಹೊಳೆನರಸೀಪುರ.

ವಿನ್ನಹ

ಬ್ರಹ್ಮೀಭೂತ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ಪ್ರಥಮಬಾರಿಗೆ 1943 ನೇ ಇಸವಿಯಲ್ಲಿ ಪ್ರಶ್ನೋಪನಿಷತ್ತನ್ನು ಶಂಕರಭಾಷ್ಯದ ಕನ್ನಡಾನುವಾದಸಹಿತವಾಗಿ ಅಧ್ಯಾತ್ಮಪ್ರಕಾಶಕಾರ್ಯಾಲಯದ ಮೂಲಕ ಪ್ರಕಟಿಸಿದರು. ಅನಂತರ ಈ ಗ್ರಂಥವು 1948-1974 ರಲ್ಲಿ ಎರಡು-ಮೂರನೆಯ ಮುದ್ರಣಗಳನ್ನು ಕಂಡಿತು. ಪ್ರತಿಗಳೆಲ್ಲ ಮಾರಾಟವಾದ್ದರಿಂದ ಈಗ ನಾಲ್ಕನೆಯ ಬಾರಿಗೆ ಪುನರ್ಮುದ್ರಿಸಿ ಪ್ರಕಟಿಸಲಾಗಿದೆ. ಗ್ರಂಥಶರೀರದಲ್ಲಿ ಯಾವ ಬದಲಾವಣೆಯನ್ನೂ ಮಾಡಿರುವುದಿಲ್ಲ.

ಕಾರ್ಯಾಲಯದವರು ನಿರಂತರವಾಗಿ ಕೈಗೊಂಡಿರುವ ಆಧ್ಯಾತ್ಮಗ್ರಂಥ ಪ್ರಕಟನಾಕಾರ್ಯದಲ್ಲಿ ಉದಾರಾಶಯರಾದ ಅನೇಕ ಮಹನೀಯರು ತಮ್ಮ ಸಹಾಯಧನವನ್ನು ಸಲ್ಲಿಸುತ್ತಾ ಬಂದಿದ್ದಾರೆ. ಈ ಗ್ರಂಥಕ್ಕೆ ಕೆಳಗೆ ಕಂಡಂತೆ ಸಹಾಯಧನವನ್ನು ಕೃತಜ್ಞತೆಯಿಂದ ಸ್ವೀಕರಿಸಲಾಗಿದೆ.

	ಶ್ರೀಗಳಾದ :-	ಮೊಬಲಗು
೧	ಹೆಜ್ಜಾಜಿ ಶ್ರೀನಿವಾಸಮೂರ್ತಿಗಳು, ಬೆಂಗಳೂರು	1001-00
೨.	ವಿ. ಸತ್ಯನಾರಾಯಣರಾಯರು, ಚಿಕ್ಕಹೆಜ್ಜಾಜಿ	501-00
೩.	ಶ್ರೀಮತಿ ಮಿಸ್ ರತ್ನಾ ಎನ್. ರಾವ್‌ರವರು, ಪುಣೆ	1001-00
೪.	ಎನ್. ಶಿವರಾಮ್‌ರವರು, ರಿ|| ಸೂಪರಿಂಟೆಂಡಿಂಗ್ ಎಂಜಿನಿಯರ್, ಮೈಸೂರು (ತಂದೆಯವರಾದ ದಿ|| ಎನ್. ನೀಲಕಂಠಪ್ಪನವರ ನೆನಪಾಗಿ)	1001-00
೫.	ವೈ. ನಾಗೇಶರಾಯರು, ಮೈಸೂರು (ತಾಯಿಯವರಾದ ದಿ|| ರಾಜಾಮಣಿ ವೆಂಕಟನರಸಪ್ಪನವರ ನೆನಪಾಗಿ)	501-00
೬.	ಎಸ್. ಪಿ. ಚಂದ್ರಶೆಟ್ಟರು, ಎಂಜಿನಿಯರ್, ಮೈಸೂರು	1001-00
೭.	ಮುರಗಲ್ ಕೃಷ್ಣಯ್ಯಶೆಟ್ಟರು, ಗೋಪಾಲಕೃಷ್ಣ ಕಾಫಿ ವರ್ಕ್ಸ್, ಕೋಲಾರ	1000-00
	ಒಟ್ಟು ರೂ.	6,006-00

ಈ ಮಹಾಶಯರುಗಳಿಗೆಲ್ಲ ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಈ ಮೂಲಕ ಸಮರ್ಪಿಸುತ್ತೇನೆ.

ಇತಿ-ಸಜ್ಜನವಿಧೇಯ,

ಹೊಳೆನೆರಸೀಪುರ,
ತಾ|| 20-11-1992

ಪಿ.ಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,
ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

ಪೀಠಿಕೆ



ಮುಂಡಕಪ್ರಶ್ನಗಳ ಸಂಬಂಧ

ಅಥರ್ವವೇದದ ವಿಷಯವಾಗಿ ಮುಂಡಕೋಪನಿಷತ್ತಿನ ಪೀಠಿಕೆಯಲ್ಲಿ ಬರೆದಿರುವದನ್ನು ಓದುಗರು ಇಲ್ಲಿಯೂ ನೆನಪಿಟ್ಟುಕೊಳ್ಳಬೇಕು. ಮುಂಡಕದಂತೆ ಪ್ರಶ್ನವೂ ಆ ವೇದಕ್ಕೆ ಸೇರಿದ ಉಪನಿಷತ್ತೆಂದು ಆಚಾರ್ಯರು ಅಭಿಪ್ರಾಯಪಟ್ಟಿರುವರಲ್ಲವೆ, ಮುಂಡಕವು ಮಂತ್ರವೆಂದೂ ಪ್ರಶ್ನವು ಬ್ರಾಹ್ಮಣವೆಂದೂ ಅವರು ಬರೆದಿರುತ್ತಾರೆ. ಅಥರ್ವವೇದದ ಅಧ್ಯಯನವು ನಮ್ಮ ದೇಶದಲ್ಲಿ ಕಂಡುಬರುತ್ತಿಲ್ಲವಾದ್ದರಿಂದಲೂ ಈ ವೇದದ ಬ್ರಾಹ್ಮಣವೂ ಪೂರ್ತಿಯಾಗಿ ದೊರೆಯುತ್ತಿಲ್ಲವಾದ್ದರಿಂದಲೂ ಈ ಎರಡು ಉಪನಿಷತ್ತುಗಳೂ ಈ ವೇದದ ಮಂತ್ರಬ್ರಾಹ್ಮಣಗಳ ಯಾವ ಭಾಗದಲ್ಲಿರುವವೋ ತಿಳಿಯದಾಗಿದೆ. ಇದು ಹೇಗಾದರೂ ಇರಲಿ. ಮುಂಡಕದಲ್ಲಿ ವಿವರಿಸಿರುವ ಪರಾಪರವಿದ್ಯೆಯನ್ನು ಅದೇ ಕ್ರಮದಲ್ಲಿ ಇಲ್ಲಿ ವಿಸ್ತರಿಸಿರುವದರಿಂದ ಆ ಉಪನಿಷತ್ತಿಗೆ ಇದು ಬ್ರಾಹ್ಮಣಸ್ಥಾನದಲ್ಲಿರುವದೆಂಬುದು ನಿರ್ವಿವಾದವಾಗಿದೆ.

ಈ ಎರಡು ಉಪನಿಷತ್ತುಗಳಲ್ಲಿಯೂ ಮೊದಲು ಕರ್ಮೋಪಾಸನೆಗಳ ಫಲವನ್ನು ಹೇಳಿರುತ್ತದೆ. ಕರ್ಮಕ್ಕೆ ಅನಿತ್ಯವಾದ ಸ್ವರ್ಗವು ಫಲ ; ಆ ಫಲವು ಮುಗಿದ ಬಳಿಕ ಅವರವರ ಕರ್ಮಶೇಷಕ್ಕೆ ತಕ್ಕಂತೆ ಜನ್ಮವಾಗುವದು. (ಮುಂ. ೧-೨-೧೦ರಿಂದ ೧೦ ; ಪ್ರ. ೧-೯, ೧-೧೪), ಕರ್ಮವನ್ನೂ ಉಪಾಸನೆಯನ್ನೂ ಸೇರಿಸಿಕೊಂಡು ಮಾಡಿದರೆ ಮುಕ್ತಿ ಹಿಂದಿರುಗದ ಬ್ರಹ್ಮಲೋಕವೂ ಕ್ರಮ ಮುಕ್ತಿಯೂ ಫಲ (ಮುಂ. ೧-೨-೧೧ ; ಪ್ರ. ೧-೧೬). ಹೀಗೆ ಕರ್ಮವನ್ನೂ ಕರ್ಮೋಪಾಸನೆಗಳನ್ನೂ ಹೇಳಿದ ಬಳಿಕ ಈ ಎರಡು ಉಪನಿಷತ್ತುಗಳಲ್ಲಿಯೂ ಕೇವಲಜ್ಞಾನವನ್ನು ಹೇಳಿರುತ್ತದೆ. ಕರ್ಮಜ್ಞಾನಗಳ ಸ್ವಭಾವತಾರತಮ್ಯವನ್ನು ನೋಡಿದರೆ ಕರ್ಮವನ್ನೂ ಜ್ಞಾನವನ್ನೂ ಸೇರಿಸಿಕೊಂಡರೆ ಮುಕ್ತಿ ಎಂಬ ಸಮುಚ್ಚಯವಾದಿಗಳ ಮತವು ಯುಕ್ತಿವಿರುದ್ಧವಾಗುವದೆಂದು ಆಚಾರ್ಯರು ತೋರಿಸಿಕೊಟ್ಟಿರುತ್ತಾರೆಂಬುದನ್ನು ಮುಂಡಕದ ಪೀಠಿಕೆಯಲ್ಲಿ ನಾವು ಆಗಲೆ ತಿಳಿಸಿರುತ್ತೇವೆ. ಈ ಎರಡು ಉಪನಿಷತ್ತುಗಳಲ್ಲಿಯೂ ಜ್ಞಾನದಿಂದಾಗುವ ಫಲವು ಕೂಡಲೆ ಆಗಿಬಿಡುವದೆಂದು ಹೇಳಿರುತ್ತದೆ. ಆತ್ಮಜ್ಞಾನವಾದಕೂಡಲೆ ಸಂಸಾರಬಂಧದಿಂದ ಬಿಡುಗಡೆಯಾಗುವದೆಂದು ಈ ಉಪನಿಷತ್ತುಗಳಲ್ಲಿ ಸದ್ಯೋಮುಕ್ತಿಯನ್ನೇ ಪ್ರತಿಪಾದಿಸಿರುತ್ತದೆ (ಮುಂ. ೩-೨-೨, ೩-೨-೬, ೭, ೮, ೯ ; ಪ್ರ. ೪-೧೧, ೬-೫). ಈ ಮುಕ್ತಿಯ ಸ್ವರೂಪವನ್ನೂ ಜೀವನ್ಮುಕ್ತನಿಗೆ ಅವಿದ್ಯಾಲೇಶವು ಇರುವದೆಂಬ ಅರ್ವಾಚೀನವೇದಾಂತಿಗಳ ಮತದ ಅಸಾರತೆಯನ್ನೂ

ಭಾಷ್ಯನೆ. ಸಾರವಾಗಿ ನಾವು ಮುಂಡಕದ ಪೀಠಿಕೆಯಲ್ಲಿ ಆಗಲೆ ತೋರಿಸಿಕೊಟ್ಟಿರುತ್ತೇವಾದ್ದರಿಂದ ಇಲ್ಲಿ ಆ ವಿಷಯಕ್ಕೂ ಹೇಳತಕ್ಕದ್ದು ಏನೂ ಉಳಿದಿರುವದಿಲ್ಲ.

ಪ್ರಶ್ನೋಪನಿಷತ್ತಿನ ವಿಷಯಗಳ ವಿಂಗಡ

ಪರವಿದ್ಯೆಗೆ ವಿಷಯವಾಗಿರುವ ಅಕ್ಷರವೆಂಬ ಪರಬ್ರಹ್ಮವೇ ನಮ್ಮಗಳೆಲ್ಲರ ಆತ್ಮನು. ಆ ಅಕ್ಷರದಿಂದಲೇ ಜಗತ್ತು ಹುಟ್ಟಿ, ಅದರಲ್ಲಿಯೇ ಇದ್ದು, ಅದರಲ್ಲಿಯೇ ಲಯವಾಗುವಂತೆ ಅವಿದ್ಯೆಯಿಂದ ತೋರುತ್ತಿರುವದು ; ಇದನ್ನು ಸರಿಯಾಗಿ ಅರಿತುಕೊಂಡರೆ ನಮ್ಮಗಳ ಆತ್ಮನು ಅದ್ವಿತೀಯನೂ ನಿತ್ಯಶುದ್ಧ ಮುಕ್ತಸ್ವಭಾವನೂ ಆಗಿರುವನೆಂದು ನಿಶ್ಚಯವಾಗುತ್ತದೆ. ಇಂಥ ಅಕ್ಷರವನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಂಡಂತೆ ಎಂಬುದು ಈ ಎರಡು ಉಪನಿಷತ್ತುಗಳಿಗೂ ಸಮಾನವಾದ ವಿಷಯವಾಗಿರುತ್ತದೆ. ಇದನ್ನು ಪ್ರಶ್ನೋಪನಿಷತ್ತಿನಲ್ಲಿ ತಿಳಿಸಿಕೊಟ್ಟಿರುವ ಕ್ರಮವು ಯಾವದೆಂದರೆ : ಸ್ಥೂಲಪ್ರಪಂಚ, ಸೂಕ್ಷ್ಮಪ್ರಪಂಚ–ಇವುಗಳೊಡನೆ ಆತ್ಮನನ್ನು ಬೆರೆಯಿಸಿ ತಿಳಿದುಕೊಳ್ಳುವಾಗ ಸ್ಥೂಲೋಪಾಧಿಯಿಂದ ಆತ್ಮನು ಪ್ರಜಾಪತಿ ಎನಿಸಿಕೊಳ್ಳುತ್ತಾನೆ : ಸೂಕ್ಷ್ಮೋಪಾಧಿಯಿಂದ ಪ್ರಾಣ ಎನಿಸಿಕೊಳ್ಳುತ್ತಾನೆ. ವಿಚಾರಮಾಡಿದ ಸ್ಥೂಲವು ಭೋಗ್ಯವಾಗಿಯೂ ಸೂಕ್ಷ್ಮವು ಭೋಕ್ತೃವಾಗಿಯೂ ಇರುತ್ತದೆ, ಅಂದರೆ ಸ್ಥೂಲವು ಸೂಕ್ಷ್ಮದ ಅಧೀನವಾಗಿರುತ್ತದೆ. ಆದರೆ ಈ ಸೂಕ್ಷ್ಮವೂ ಆತ್ಮನ ಅಧೀನವಾಗಿರುತ್ತದೆ. ಇದಿಷ್ಟೂ ಮೊದಲನೆಯ ಮೂರು ಪ್ರಶ್ನೆಗಳ ಸಾರ. ನಾಲ್ಕನೆಯ ಪ್ರಶ್ನೆಯಲ್ಲಿ ಅವಸ್ಥಾತ್ರಯವಿಚಾರದಿಂದ ಈ ಅರ್ಥವನ್ನು ಮನಗಾಣಿಸಿಕೊಟ್ಟಿರುತ್ತದೆ. ಐದನೆಯ ಪ್ರಶ್ನೆಯಲ್ಲಿ ಓಂಕಾರಧ್ಯಾನದಿಂದ ಈ ಅರ್ಥವನ್ನು ಉಪಾಸಕನು ಕ್ರಮಕ್ರಮವಾಗಿ ಮನಗಾಣುವ ಬಗೆಯನ್ನು ಹೇಳಿಕೊಟ್ಟಿರುತ್ತದೆ ; ಆರನೆಯ ಪ್ರಶ್ನೆಯಲ್ಲಿ ಜಗದುತ್ಪತ್ತಿಸ್ಥಿತಿಲಯವೆಂಬುದು ಅವಿದ್ಯಾನಿಮಿತ್ತವಾಗಿರುವದರಿಂದ ನಿಜವಾಗಿ ಆತ್ಮನು ನಿತ್ಯಶುದ್ಧನೂ ಅದ್ವಿತೀಯನೂ ಆಗಿರುತ್ತಾನೆಂಬುದನ್ನು ಸ್ಪಷ್ಟಗೊಳಿಸಿರುತ್ತದೆ.

ಪ್ರಶ್ನಭಾಷ್ಯದ ವಿಶೇಷಗಳು

ಮುಂಡಕಪ್ರಶ್ನೆಗಳ ಸಂಬಂಧವನ್ನು ವಿಶದೀಕರಿಸಿ ಅಕ್ಷರಾಖ್ಯಪರಮಾತ್ಮನ ಜ್ಞಾನದಿಂದ ಸದ್ಯೋಮುಕ್ತಿಯನ್ನೂ ಉಪಾಸನೆಯಿಂದ ಕ್ರಮಮುಕ್ತಿಯನ್ನೂ ನಿರೂಪಣಮಾಡುವ ಪ್ರಸಂಗದಿಂದ ಈ ಉಪನಿಷತ್ತಿನ ಭಾಷ್ಯದಲ್ಲಿ ಆಚಾರ್ಯರವರು ಅವಸ್ಥಾತ್ರಯವಿಚಾರ, ಜ್ಞಾನಸ್ವರೂಪವಿಚಾರ, ಕರ್ತೃತ್ವಭೋಕ್ತೃತ್ವ ವಿಚಾರ–ಎಂಬ ಮೂರು ವಿಚಾರಗಳನ್ನು ಮಾಡಿರುತ್ತಾರೆ. ವೇದಾಂತದ ಅಸಾಧಾರಣಪ್ರಕ್ರಿಯೆಯನ್ನು ಭಾಷ್ಯಕಾರರು ಈ ವಿಚಾರಗಳಲ್ಲಿ ಹೇಗೆ ಸ್ಫುಟ

ಗೊಳಿಸಿರುವರೆಂಬುದನ್ನು ತಿಳಿಯಿಸಿಬ್ಬಿಸುವವರ ಉಪಯೋಗಕ್ಕಾಗಿ ಈ ಮೂರು ವಿಚಾರಗಳ ಸಾರಸಂಗ್ರಹವಾಗಿ ಇಲ್ಲಿ ಕೆಲವು ವಾಕ್ಯಗಳನ್ನು ಬರೆದಿಡುವೆವು. ಆಚಾರ್ಯರಿಗೆ ಸಮ್ಮತವಾಗಿರುವ ಅದ್ವೈತಸಿದ್ಧಾಂತವು ಸಾರ್ವತ್ರಿಕಾನುಭವವನ್ನೂ ತದನುಸಾರಿಯಾದ ಯುಕ್ತಿಬಲವನ್ನೂ ಆಧಾರವಾಗಿಟ್ಟುಕೊಂಡೇ ಏರ್ಪಟ್ಟಿರುವದೆಂಬುದು ಓದುಗರಿಗೆ ಇದರಿಂದ ಮನವರಿಕೆಯಾಗುವದೆಂದು ನಮ್ಮ ನಂಬಿಕೆ.

ಅವಸ್ಥಾತ್ರಯವಿಚಾರ

ಅವಸ್ಥಾತ್ರಯವೆಂಬುದು ಎಲ್ಲಾ ಜೀವರಿಗೂ ಸಮಾನವಾಗಿರುತ್ತದೆ(೩-೯) ಯಾದರೂ ಇದನ್ನು ಅನುಭವಿಸುವ ಆತ್ಮನ ಸ್ವರೂಪವನ್ನು ಕುರಿತು ಉಪಾಸನೆ ಮಾಡುವವರಿಗೂ ವಿಚಾರಮಾಡುವವರಿಗೂ ಅನಿತರಸಾಧಾರಣವಾದ ಮೋಕ್ಷ ಫಲವುಂಟು (೭೬, ೮೬)–ಎಂಬುದೊಂದು ವಿಶೇಷೋಪದೇಶವು ಈ ಭಾಷ್ಯದಲ್ಲಿ ಬರುತ್ತದೆ. ಎಚ್ಚರದಲ್ಲಿರುವ ಜೀವದೆಗಳ ಸ್ಥೂಲಶರೀರವು ಪ್ರಜಾಪತಿ ಎಂಬ ವಿರಾಟ್ಪುರುಷನ ಅಂಶವೆಂದು ಉಪನಿಷತ್ತಿನ ಒಂದನೆಯ ಪ್ರಶ್ನೆಯಲ್ಲಿಯೂ ಕರಣಸಮೂಹವು ಪ್ರಾಣನೆಂಬ ಹಿರಣ್ಯಗರ್ಭನ ಅಂಶವೆಂದು ಎರಡನೆಯ ಪ್ರಶ್ನೆಯಲ್ಲಿಯೂ ಈ ಪ್ರಾಣನು ಆತ್ಮನಿಂದಲೇ ಹುಟ್ಟಿ (೩೯) ಹೊರಗಿನ ಅವಿದ್ಯಾದಿಗಳ ರೂಪದಿಂದಲೂ (೪೫; ಒಳಗೆ ಪ್ರಾಣಾದಿವೃತ್ತಿಗಳ ರೂಪದಿಂದಲೂ (೪೨ರಿಂದ ೫೦) ಇದ್ದುಕೊಂಡು ಆತ್ಮನಿಗೆ ಉಪಾಧಿಯಾಗಿರುವನೆಂದು ಮೂರನೆಯ ಪ್ರಶ್ನೆಯಲ್ಲಿಯೂ ಸಿದ್ಧವಾಗಿರುತ್ತದೆ. ಇದನ್ನು ನೆನಪಿಟ್ಟರೆ ಎಚ್ಚರವೆಂಬ ಅವಸ್ಥೆಯಲ್ಲಿ ಇಡಿಯ ಪ್ರಪಂಚನೇ ಆತ್ಮನಿಗೆ ಉಪಾಧಿಯಾಗಿರುವದೆಂದೂ ಆದ್ದರಿಂದ ಅವಸ್ಥಾತ್ರಯವಿಚಾರವೆಂದರೆ ಅದ್ವಿತೀಯಾತ್ಮನ ವಿಚಾರವೇ ಎಂದೂ ವಿದ್ಯಾರ್ಥಿಯು ತಿಳಿಯುತ್ತಾನೆ. ಈ ಅಭಿಪ್ರಾಯವನ್ನು ಮಾಂಡೂಕ್ಯಭಾಷ್ಯದಲ್ಲಿ ಆಚಾರ್ಯರು ಕಂಠೋಕ್ತವಾಗಿ ಹೇಳಿರುತ್ತಾರೆ; ಈ ಉಪನಿಷತ್ತಿನ ಭಾಷ್ಯದಲ್ಲಿಯೂ ಸಂಗ್ರಹವಾಗಿ ಸೂಚಿಸಿರುತ್ತಾರೆ (೫೧, ೭೮). ಈ ಅಭಿಪ್ರಾಯವನ್ನು ಲಕ್ಷ್ಯವಿಟ್ಟು ನಾವು ಸ್ವಪ್ನವನ್ನು ನಿರೂಪಣೆಮಾಡಿದರೆ ಕನಸಿನಲ್ಲಿ ಆತ್ಮನು ಸ್ವಯಂಜ್ಯೋತಿಯಾಗಿರುವನೆಂದೂ ಸುಷುಪ್ತಿಯಲ್ಲಿ ಸರ್ವವೂ ಅಕ್ಷರಸ್ವರೂಪನಾದ ಆತ್ಮನಲ್ಲಿಯೇ ಲಯವಾಗುವದೆಂದೂ ಭಾಷ್ಯಕಾರರು ಪ್ರತಿಪಾದಿಸಿರುವದರ ಪ್ರಯೋಜನವು ಎದ್ದುಕಾಣುತ್ತದೆ. ಮೊದಲನೆಯದಾಗಿ ಜೀವನಿಗೆ ಸ್ವತಃ ಅವಸ್ಥೆಗಳ ಅನುಭವವೆಂಬುದು ಇಲ್ಲವೇ ಇಲ್ಲವೆಂದೂ ಉಪಾಧಿನಿಮಿತ್ತವಾಗಿಯೇ ಅವನಿಗೆ ಜಾಗ್ರತ್ಸ್ವಪ್ನಗಳು ಉಂಟಾಗುತ್ತಿರುವವೆಂದೂ (೬೨) ಆಚಾರ್ಯರು ಹೇಳಿರುವದನ್ನು ಮನಸ್ಸಿಗೆ ತಂದುಕೊಳ್ಳಬೇಕು. ಸ್ಥೂಲೋಪಾಧಿಯಿಂದ

ಎಚ್ಚರವೆಂಬ ಅವಸ್ಥೆಯೂ ಸೂಕ್ಷ್ಮೋಪಾಧಿಯಿಂದ ಕನಸೆಂಬ ಅವಸ್ಥೆಯೂ ಜೀವನಿಗೆ ಭಗುತ್ತಿರುವುದರಿಂದ ಜೀವನು ಸ್ವತಃ ಅವಸ್ಥಾರಹಿತವಾದ ಅಕ್ಷರವೇ ಆಗಿರುತ್ತಾನೆಂದು ಇದರಿಂದಲೇ ನಿರ್ಣಯಿಸಬಹುದಾಗಿರುತ್ತದೆ. ಕನಸಿನಲ್ಲಿ ವಾಸನಾರೂಪವಾದ ಉಪಾಧಿಯೇ ಸರ್ವಕರಣವಿಷಯಗಳೂ ಆಗಿರುವದರಿಂದ ಅದನ್ನು ಬೆಳಗುತ್ತಿರುವ ಆತ್ಮಚೈತನ್ಯವು ಸ್ವಯಂಜ್ಯೋತಿಯು, ಮಂತ್ರೋಂದರ ನೆರವನ್ನು ಕೋರದೆ ವಾಸನೆಗಳನ್ನು ಬೆಳಗುತ್ತಿರುವದು ಎಂತಲೂ ನಿದ್ರೆಯಲ್ಲಿ ಯಾವ ಉಪಾಧಿಗಳ ಸಂಬಂಧವೂ ಇಲ್ಲದಿರುವದರಿಂದ ಆಲ್ಲಿಯೂ ಸ್ವಯಂ ಜ್ಯೋತಿಯೆಂತಲೂ ಭಾಷ್ಯಕಾರರು ಹೇಳಿರುತ್ತಾರೆ (೬೪ ರಿಂದ ೬೭).

ಎರಡನೆಯದಾಗಿ ಆತ್ಮನು ಸ್ವಯಂಜ್ಯೋತಿ ಎಂದು ಮುಂತಾಗಿ ವ್ಯವಹರಿಸುವದೂ ಅವಿದ್ಯಕ(೬೩)ವೆಂದು ಆಚಾರ್ಯರು ಹೇಳಿರುವದನ್ನು ನಾವು ಮನಸ್ಸಿಗೆ ಹತ್ತಿಸಿಕೊಳ್ಳಬೇಕು. ಕನಸಿನಲ್ಲಿ ವಾಸನೆಗಳನ್ನು ಕಾಣುವದೆಂಬುದೂ ಅವಿದ್ಯೆಯಿಂದ, ತನ್ನಿನಿದ್ರೆಯಲ್ಲಿ ಆ ಉಪಾಧಿಗಳ ಸಂಬಂಧವಿಲ್ಲವೆಂಬುದೂ ಅವಿದ್ಯೆಯಿಂದ (೬೬). ನಿಜವಾಗಿ ನೋಡಿದರೆ ಸುಷುಪ್ತಿಯಲ್ಲಿ ಅವಿದ್ಯಾಕೃತವಾದ ಪೃಥಿವ್ಯಾದಿಭೂತಗಳೂ ಅವುಗಳ ಕಾರಣವಾದ ತನ್ಮಾತ್ರೆಗಳೂ ಭೌತಿಕವಾದ ಸರ್ವಕರಣಗಳೂ ಸಂಪೂರ್ಣವಾಗಿ ಇಲ್ಲವಾಗುವದರಿಂದ ಆತ್ಮಸ್ವರೂಪವು ಅದ್ವಿತೀಯವಾದ ತನ್ನ ಸ್ವಭಾವದಿಂದಲೇ ಇರುತ್ತಿರುವದು (೬೯ ೭೦,೭೧). ಆ ಅವಸ್ಥೆಯಲ್ಲಿ ಈಗ ತೋರುತ್ತಿರುವ ಸೋಪಾಧಿಕವಾದ ಜೀವರೂಪವೂ ಶುದ್ಧವಾದ ಅಕ್ಷರವೆಂಬ ಪರಮಾತ್ಮರೂಪದಲ್ಲಿಯೇ ಒಂದಾಗಿರುತ್ತದೆ (೭೩). ಯಾವ ಸ್ವರೂಪದಲ್ಲಿ ಹೀಗೆ ಎಲ್ಲವೂ ಒಂದಾಗಿರುವದೋ ಆ ಅಕ್ಷರವೆಂಬ ಪರಮಾತ್ಮಸ್ವರೂಪವನ್ನು ಆರಿತವನು ಸರ್ವವೂ ಸರ್ವಜ್ಞನೂ ಆಗಿರುತ್ತಾನೆ (೪–೧೦, ೧೧) ಎಂಬರ್ಥವನ್ನು ತಿಳಿಸುವ ಮುಂತ್ರಗಳು ಅವಸ್ಥಾತ್ರಯವಿಚಾರದಿಂದಾಗುವ ಸದ್ಯೋಮುಕ್ತಿಯೆನ್ನು ತಿಳಿಸುತ್ತವೆ ಎಂದು (೭೬, ೭೭) ಆಚಾರ್ಯರವರು ತಿಳಿಸಿಕೊಟ್ಟಿರುತ್ತಾರೆ.

ಅವಸ್ಥಾತ್ರಯದಲ್ಲಿರುವ ಆತ್ಮಸ್ವರೂಪವನ್ನು ಹೀಗೆ ನೇರವಾಗಿ ವಿಚಾರದಿಂದ ಅರಿತು ತನ್ನಿಷ್ಟೆಯನ್ನು ಹೊಂದಲಾರದೆ ಇರುವವರು ಓಂಕಾರದಮೂಲಕವಾಗಿ ಉಪಾಸನೆಮಾಡಿ ಕಾಲಾಂತರದಲ್ಲಾದರೂ ಜ್ಞಾನವನ್ನು ಹೊಂದಿ ಕ್ರಮಮುಕ್ತಿಯೆನ್ನು ಪಡೆಯಬಹುದು ಎಂಬ ಅಭಿಪ್ರಾಯವನ್ನು ಐದನೆಯ ಪ್ರಶ್ನೆಯಲ್ಲಿ ಭಾಷ್ಯಕಾರರು ತೋರಿಸಿಕೊಟ್ಟಿರುತ್ತಾರೆ. ಪರವಿದ್ಯೆಯಿಂದ ಮುಕ್ತಿಯನ್ನು ಪಡೆಯಬಹುದೆಂದು ತಿಳಿಸುವದಕ್ಕಾಗಿಯೇ ಹೊರಟಿರುವ ಸಂದರ್ಭದಲ್ಲಿ ಈ ಕ್ರಮಮುಕ್ತಿಯನ್ನು ಹೇಳಿರುವದು ಯಾವಾಗ ಎಲ್ಲಿ ಮುಕ್ತಿಯಾದರೂ ಅಕ್ಷರಾಖ್ಯ ಪುರುಷನ ಸ್ವರೂಪದ ಜ್ಞಾನದಿಂದಲೇ ಆಗಬೇಕಾಗಿರುವದೆಂದು ತಿಳಿಸುವದಕ್ಕೆಂದು ನಿಶ್ಚಯಿಸಬೇಕು. ಓಂಕಾರವನ್ನು ಕೇವಲ ಉಪಾಸನೆಗೇ ಅಲ್ಲದೆ

ಜ್ಞಾನಕ್ಕೆ ಸಾಧನವಾಗಿ ಮಾಡಿಕೊಂಡಿರುವದು ಮುಂಡಕಭಾಷ್ಯ (೨-೨-೪), ಮಾಂಡೂಕ್ಯಭಾಷ್ಯ (೭)- ಇವುಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಇದರಂತೆ ಪ್ರಾಣವಿಚಾರಣಪ್ರಕರಣದಲ್ಲಿ ಪ್ರಾಣಗಳನ್ನು ಅಗ್ನಿಗಳೆಂದು ಉಪಾಸನೆ ಮಾಡುವವನನ್ನು ಉಪಾಸ್ಯವಾಯುವು ಪ್ರತಿದಿನವೂ ಸುಷುಪ್ತಿಯಲ್ಲಿ ಅಗ್ನಿಹೋತ್ರ ಸ್ವರ್ಗಸ್ಥಾನೀಯವಾದ ಬ್ರಹ್ಮವನ್ನು ಸೇರಿಸುತ್ತಿರುವದೆಂದು ಹೇಳಿರುವದು ಸುಷುಪ್ತಿಯಲ್ಲಿ ಅಕ್ಷರಬ್ರಹ್ಮವೊಂದೇ ಇರುವದೆಂಬ ತತ್ತ್ವವನ್ನು ಆವಲಂಬಿಸಿಯೇ ಮಾಡಿರುವ ಉಪಾಸಕನ ಸ್ತುತಿಯೆಂದು ತಿಳಿಯಬೇಕು. ಏಕೆಂದರೆ ಸುಷುಪ್ತಿಯೆಂಬುದು ಕಾರ್ಯಕರಣವ್ಯವಹಾರವಿಲ್ಲದ ಅವಸ್ಥೆಯೆಂದು ತಿಳಿಸುವದೇ ಈ ಮಹಾಪ್ರಕರಣದ ಉದ್ದೇಶವಾಗಿರುತ್ತದೆ (೫೮, ೬೯).

ಜ್ಞಾನಸ್ವರೂಪವಿಚಾರ

ಅಕ್ಷರವೆಂಬ ಪರಮಾತ್ಮನಿಂದಲೇ ಪ್ರಾಣಾದಿಕಲೆಗಳು ಹುಟ್ಟಿ, ಅವನಲ್ಲಿಯೇ ತೋರಿಕೊಳ್ಳುತ್ತಿದ್ದು, ಅವನಲ್ಲಿಯೇ ಅಡಗುತ್ತಿರುವದರಿಂದ ಆ ಆತ್ಮನು ಅದ್ವಿತೀಯನು ಎಂದು ತಿಳಿಸುವದಕ್ಕೋಸ್ಕರ ಹದಿನಾರು ಕಲೆಗಳೂ ಅಕ್ಷರನೆಂಬ ಪುರುಷನಿಂದ ಹುಟ್ಟಿತ್ತವೆ ಎಂದು ಆರನೆಯ ಪ್ರಶ್ನೆಯಲ್ಲಿ (೬-೨) ಹೇಳಿರುತ್ತದೆ. ಭಾಷ್ಯಕಾರರು ಶ್ರುತಿಯಲ್ಲಿ ಹೇಳಿರುವ ಈ ವಿಷಯವನ್ನು ಅನುಭವಾರೂಢವಾಗಿ ಮಾಡಿಕೊಳ್ಳುವದಕ್ಕಾಗಿ ಚಾರ್ವಾಕರು, ವೈಶೇಷಿಕರು, ವಿಜ್ಞಾನವಾದಿಗಳೂ ಶೂನ್ಯವಾದಿಗಳೂ ಆದ ಬೌದ್ಧರು- ಎಂಬ ಮತಾಂತರದವರ ಪ್ರಕ್ರಿಯೆಗಿಂತ ಅತ್ಯಂತವಿಲಕ್ಷಣವಾಗಿರುವ ಅದ್ವಿತೀಯೆಕೂಟಸ್ಥಚೈತನ್ಯವಾದವೆಂಬ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸಿರುತ್ತಾರೆ. ಈ ಸಂದರ್ಭದಲ್ಲಿ ಮಾಡಿರುವ ಚರ್ಚೆಯನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲಿಸುವಂತೆ ಇಲ್ಲಿ ಸಂಗ್ರಹಿಸಿಕೊಡುವೆವು.

(ಅ) ಜ್ಞಾನವು (ಅರಿವು) ಎಂಬುದು ಭೂತಧರ್ಮಗಳೆಂದು ಲೋಕಾಯತಿಕರಾದ ಚಾರ್ವಾಕರೆ ಮತ. ಚೈತನ್ಯವು ವಿಷಯಿಯಾಗಿರುವದರಿಂದ ತನಗೆ ವಿಷಯವಾಗಿರುವ ಭೂತಗಳಿಗೆ ಅದು ಧರ್ಮವಾಗಲಾರದೆಂಬುದು ಸ್ಪಷ್ಟವಾಗಿರುವದರಿಂದ ಆಚಾರ್ಯರು ಆ ಮತವನ್ನು ಖಂಡಿಸುವದಕ್ಕೆ ಹೋಗಿಲ್ಲ.

(ಆ) ಜ್ಞಾನವು ಆತ್ಮನ ಧರ್ಮವಾಗಿ ಹುಟ್ಟಿಸಾಯುತ್ತಿರುವದು, ಆತ್ಮನು ಚೈತನ್ಯಸ್ವರೂಪನಲ್ಲ- ಎಂಬ ವೈಶೇಷಿಕಾದಿಗಳಿಗೆ ಜ್ಞೇಯವಿಲ್ಲದಮಾತ್ರದಿಂದ ಜ್ಞಾನವು ಇಲ್ಲವೆಂದು ಹೇಳುವ ಬೌದ್ಧಸಿದ್ಧಾಂತವೂ ಬಂದೊದಗುತ್ತದೆ (೯೨). ಆದ್ದರಿಂದ ಒಂದೇ ರೂಪವಾಗಿರುವ ಆತ್ಮಸ್ವರೂಪಚೈತನ್ಯವನ್ನು ಅವರೂ ಒಪ್ಪಬೇಕು ಎಂದು ಭಾಷ್ಯಕಾರರು ಹೇಳಿರುತ್ತಾರೆ.

(೫) ಜ್ಞಾನವು ಜ್ಞೇಯವಿಲ್ಲದೆ ಇರಲಾರದು : ಜ್ಞಾನವು ಕ್ಷಣಿಕವಾಗಿರುತ್ತದೆ ಎಂಬ ವಿಜ್ಞಾನವಾದಿಗಳ ಮತದ ಖಂಡನೆಯು ಸಾಧಿಸಾಧನೇಸೆಂದರೆ:

ಜ್ಞಾನದ ಅಭಾವವನ್ನು ಕಲ್ಪಿಸುವದಕ್ಕೂ ಜ್ಞಾನವು ಬೇಕೇಬೇಕಾಗುತ್ತದೆ; ಏಕೆಂದರೆ ಜ್ಞಾನದಂತೆ ಜ್ಞಾನಾಭಾವವೂ ಜ್ಞೇಯವೇ ಆಗಿರುತ್ತದೆ (೯೨). ಜ್ಞಾನವು ಜ್ಞೇಯವಿರುವವರೆಗೆ ಇದ್ದೇ ಇರಬೇಕೆಂದು ಈ ವಾದಿಗಳು ಹೇಳುತ್ತಿರುವದರಿಂದ ಜ್ಞಾನವು ನಿತ್ಯವೆಂದೇ ಅವರು ಒಪ್ಪಬೇಕಾಗುತ್ತದೆ. ಜ್ಞೇಯವು ಜ್ಞಾನವಿಲ್ಲದೆಯೂ ಇರಬಹುದೆಂದು ಅವರು ಹೇಳುವದಾದರೆ ಜ್ಞೇಯವಿಲ್ಲದಿದ್ದರೆ ಜ್ಞಾನವಿರಬಾರದು ಎಂಬ ಅವರ ವಾದಕ್ಕೆ ಆಧಾರವೇ ಇಲ್ಲದೆಹೋಗುತ್ತದೆ. ಜ್ಞಾನವು ತನ್ನನ್ನು ತಾನೇ ಅರಿಯುತ್ತದೆ ಎಂಬುದು ಈ ವಾದಿಗಳ ಅಂಗೀಕಾರವಾಗಿರುವದರಿಂದ ಜ್ಞಾನಜ್ಞೇಯಸ್ವಭಾವಗಳಲ್ಲಿ ಯಾವ ಹೆಚ್ಚುಕಡಿಮೆಯನ್ನೂ ಇವರು ತೋರಿಸುವದಕ್ಕೆ ಬರುವದಿಲ್ಲ: ಆದ್ದರಿಂದ ಜ್ಞೇಯವು ಜ್ಞಾನಕ್ಕಿಂತ ಬೇರೆಯಾಗಿರಬಹುದಾದರೂ ಜ್ಞಾನವು ಮಾತ್ರ ಜ್ಞೇಯವನ್ನು ಬಿಟ್ಟಿರಲಾರದು—ಎಂದು ಕಲ್ಪಿಸುವದಕ್ಕೆ ಆಗುವದಿಲ್ಲ (೯೩). ಸುಷುಪ್ತಿಯಲ್ಲಿ ಹೊರಗಿನ ಜ್ಞೇಯಗಳನ್ನು ಒಪ್ಪದಿದ್ದರೂ ತನ್ನನ್ನು ತಾನು ಅರಿಯುವ ಜ್ಞಾನವು ಅಲ್ಲಿದೆ ಎಂದು ಅವರು ಒಪ್ಪುತ್ತಿರುವದರಿಂದ ಹೊರಗಿನ ಜ್ಞೇಯಗಳ ಅಭಾವಕ್ಕಿಂತ ಆ ಜ್ಞಾನವು ಬೇರೆಯೆಂದೂ ಆ ಜ್ಞಾನವೇ ಅಭಾವರೂಪವಾದ ಜ್ಞೇಯವನ್ನೂ ಅರಿಯುವದೆಂದೂ ಅವಶ್ಯವಾಗಿ ಒಪ್ಪಬೇಕಾಯಿತು (೯೪). ಇದೂ ಅಲ್ಲದೆ ಜ್ಞಾನವು ತನ್ನನ್ನು ತಾನು ಅರಿಯುವದೆಂದರೂ ಹೀಗೆ ತನ್ನನ್ನು ತಾನು ಅರಿಯುವದೆಂಬುದನ್ನು ಅರಿಯುವದಕ್ಕೆ ಮತ್ತೊಂದು ಜ್ಞಾನ, ಆದನ್ನು ಅರಿಯುವದಕ್ಕೆ ಇನ್ನೊಂದು ಜ್ಞಾನ—ಹೀಗೆ ಅನವಸ್ಥಾದೋಷವು ಗಂಟುಬೀಳುತ್ತದೆ. ಜ್ಞಾನವು ತನ್ನನ್ನು ತಾನು ಅರಿತುಕೊಂಡರೂ ತಾನು ಹಾಗೆ ಅರಿಯುವನೆಂಬುದನ್ನು ಅರಿತಕೊಳ್ಳಲಾರದೆ ಇರುವದರಿಂದ ಅಸರ್ವಜ್ಞವೆಂದೂ ಆಗುತ್ತದೆ.

ಆದರೆ ಕೂಟಸ್ಥ ಚೈತನ್ಯವಾದಿಗಳ ಮತದಲ್ಲಿ ಈ ಯಾವ ದೋಷವೂ ಬರುವಂತಿಲ್ಲ. ಈ ಸಿದ್ಧಾಂತದಲ್ಲಿ ಚೈತನ್ಯವು ಜ್ಞೇಯವಲ್ಲ, ಬರಿಯ ಜ್ಞಾನವೇ; ಆದ್ದರಿಂದ ಅದನ್ನು ಅರಿಯುವದಕ್ಕೆ ತಾನಾಗಲಿ ಮತ್ತೊಂದು ಜ್ಞಾನವಾಗಲಿ ಬೇಕಿಲ್ಲವಾದ್ದರಿಂದ ಜ್ಞಾನವು ಸರ್ವಜ್ಞವಲ್ಲವೆಂಬ ದೋಷವಾಗಲಿ ಅನವಸ್ಥಾದೋಷವಾಗಲಿ ಬರುವದಿಲ್ಲ (೯೫). ಈ ಚೈತನ್ಯಕ್ಕೆ ಹುಟ್ಟಿಲ್ಲ, ಸಾವಿಲ್ಲ; ಜ್ಞೇಯವಾದ ಕಲೆಗಳಿಗೆ ಹುಟ್ಟುಸಾವುಗಳುಂಟೆಂಬುದನ್ನು ಈ ಚೈತನ್ಯವೇ ಅರಿಯುತ್ತಿರುವದು. ಯಾವ ಜ್ಞೇಯವಸ್ತುವಾದರೂ ಜ್ಞಾತವಾಗಿಯೇ ಇರಬೇಕಾದ್ದರಿಂದ ಜ್ಞಾನವನ್ನು ಬಿಟ್ಟು ಜ್ಞೇಯವು ಇರಲಾರದು (೯೧), ಜ್ಞಾನವೂ ಒಂದು ಜ್ಞೇಯವಿಲ್ಲದಿದ್ದರೆ ಮತ್ತೊಂದು ಜ್ಞೇಯವನ್ನು ಬೆಳಗುತ್ತಿರುವದರಿಂದಲೂ (೯೧

ಯಾವ ಜ್ಞೇಯವೂ ಇಲ್ಲದ ಸುಷುಪ್ತಿಯಲ್ಲಿಯೂ ಅದು ಇರುತ್ತಿರುವದರಿಂದಲೂ (೯೩) ಅದು ಇದ್ದಂತೆಯೇ ಇರುವದೆಂದೂ ನಾಮರೂಪಾದ್ಯುಪಾಧಿಗಳಿಂದ ಅದ್ವಿತೀಯ ಚೈತನ್ಯವೇ ನಾನಾವಿಧವಾಗಿ ತೋರುತ್ತಿರುವದೆಂದೂ (೯೫) ಸಿದ್ಧವಾಗುತ್ತದೆ ಎಂದು ಭಾಷ್ಯಕಾರರು ತಮ್ಮ ಸಿದ್ಧಾಂತದ ಹೆಚ್ಚುಗಾರಿಕೆಯನ್ನು ತಿಳಿಸಿಕೊಟ್ಟಿರುತ್ತಾರೆ.

ಕರ್ತೃತ್ವಭೋಕ್ತೃತ್ವವಿಚಾರ

ಅಕ್ಷರವೆಂಬ ಹೆಸರಿನ ಪರಮಾತ್ಮನಿಂದಲೇ ಪ್ರಾಣಾದಿಕಲೆಗಳು ಅವಿದ್ಯಾ ನಿಮಿತ್ತವಾಗಿ ಹುಟ್ಟಿ, ಅವನಲ್ಲಿಯೇ ಇದ್ದು, ಕೊನೆಗೆ ಅವನಲ್ಲಿಯೇ ಲಯವಾಗುತ್ತವೆ. ಕಲೆಗಳು ಹೀಗೆ ಅವಿದ್ಯಾಕೃತವಾಗಿ ಹುಟ್ಟುತ್ತಿರುವದರಿಂದ ವಿದ್ಯೆಯಿಂದ ಅವುಗಳು ಇಲ್ಲವೆಂದು ಮನಗಂಡು ಮೃತ್ಯುರೂಪವಾದ ಸಂಸಾರದಿಂದ ಬಿಡುಗಡೆಯನ್ನು ಹೊಂದಬಹುದು (೧೧೫) ಎಂಬುದು ಉಪನಿಷತ್ತಿನ ಸಿದ್ಧಾಂತವು. ಆದ್ದರಿಂದಲೇ ಈ ಉಪನಿಷತ್ತಿನ ಕೊನೆಯಲ್ಲಿ "ಅವಿದ್ಯಾಸಾಗರದಿಂದ ಕಡೆಹಾಯಿಸಿರುವ ನೀನೇ ನಮಗೆ ತಂದೆ" (೬-೨೨) ಎಂದು ಶಿಷ್ಯರು ಗುರುವಿಗೆ ತಮ್ಮ ಕೃತಜ್ಞತೆಯನ್ನು ತೋರಿಸಿರುತ್ತಾರೆ.

ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರವು ಅವಿದ್ಯಾಕೃತವಾದ ಉಪಾಧಿಗಳಿಂದ ಆಗಿರುತ್ತದೆ ಎಂಬ ಈ ಸಿದ್ಧಾಂತಕ್ಕೆ ಅದು ಪರಮಾರ್ಥವಾಗಿಯೇ ಇದೆ ಎಂಬ ವಾದಗಳು ವಿರುದ್ಧವಾಗಿವೆ. ಈಶ್ವರನ ಸಂಕಲ್ಪದಿಂದ ಪರಮಾಣುಗಳು ಒಂದರೊಡನೊಂದು ಜೆರೆತು ಸತ್ಯವಾದ ಪ್ರಪಂಚವು ಸೃಷ್ಟಿಯಾಗುತ್ತದೆ. ಜೀವರು ಕರ್ತೃಭೋಕ್ತೃಸ್ವರೂಪರೇ ಆಗಿರುತ್ತಾರೆ. ಅವರಿಗೆ ದೇಹಾದಿಗಳಿಗಿಂತ ವ್ಯತಿರಿಕ್ತವಾಗಿರುವ ತಮ್ಮ ಸ್ವರೂಪದ ವಿಷಯದಲ್ಲಿರುವ ತಪ್ಪುತಿಳಿವಳಿಕೆಯಿಂದ ಸತ್ಯವಾದ ಬಂಧವುಂಟಾಗಿರುತ್ತದೆ-ಎಂಬುದು ವೈಶೇಷಿಕರ ಪ್ರಕ್ರಿಯೆ. ತ್ರಿಗುಣಾತ್ಮಕಪ್ರಧಾನವೆಂಬ ಪ್ರಕೃತಿಯು ಮಹತ್ತು, ಅಹಂಕಾರ-ಮುಂತಾದ ರೂಪದ ಜಗತ್ತಾಗಿ ಸತ್ಯವಾಗಿಯೇ ಪರಿಣಮಿಸಿರುತ್ತದೆ. ಅಸಂಗರಾದ ಪುರುಷರಿಗೆ ತಮ್ಮ ಸ್ವರೂಪವನ್ನೂ ಪ್ರಕೃತಿಯು ಪರಿಣಾಮಗಳಾದ ಅಂತಃಕರಣಾದಿಗಳನ್ನೂ ಬಿಡಿಸಿಕೊಂಡು ಅರಿಯದೆ ಇರುವ ಅವಿವೇಕದಿಂದ ಪರಮಾರ್ಥವಾಗಿಯೇ ಭೋಕ್ತೃತ್ವವೆಂಬ ಬಂಧವಾಗಿದೆ ಎಂಬುದು ಸಾಂಖ್ಯರ ಪ್ರಕ್ರಿಯೆ. ಈ ಎರಡು ಪ್ರಕ್ರಿಯೆಗಳೂ ಅತ್ಯಂತಭಿನ್ನವಾಗಿಯೂ ಪರಸ್ಪರವಿರುದ್ಧವಾಗಿಯೂ ಇದ್ದರೂ ಅನಾತ್ಮಪ್ರಪಂಚವೆಲ್ಲವೂ ಅವಿದ್ಯಕವೆಂಬ ಸಿದ್ಧಾಂತಕ್ಕೆ ಎರಡೂ ಪ್ರತಿಪಕ್ಷಗಳೇ ಆಗಿರುತ್ತವೆ. ಸಾಂಖ್ಯರ ಸಿದ್ಧಾಂತವೂ ದ್ವೈತವೇ ಆದರೂ ಆತ್ಮನು ಕೂಟಸ್ಥನೆಂದೂ ಅಸಂಗನೆಂದೂ ಹೇಳುವ ಅದ್ವೈತಕ್ಕೆ ಹತ್ತಿರವಾಗಿರುವದರಿಂದಲೂ ಸಾಂಖ್ಯಮತದಲ್ಲಿ

ಯಾವ ಭಾಗವು ಕರುಗೆ ಅಪಸ್ಮೃತವೆಂಬುದನ್ನ ತಿಳಿಸುವದಕ್ಕೇ ಆಚಾರ್ಯರು ಹೀಗ್ಗಾಗಿ ಪ್ರಯತ್ನಿಸಿರುತ್ತಾರೆ.

"ಆತ್ಮನು ಕರ್ತೃವಲ್ಲ, ಪ್ರಧಾನವೇ ಸಂಸಾರಮೋಕ್ಷಗಳಿಗೆ ಕರ್ತೃ; ಆದರೆ ಆತ್ಮನು ನಿಜವಾಗಿಯೂ ಸಂಸಾರಮೋಕ್ಷಗಳನ್ನು ಅನುಭವಿಸುವ ಭೋಕ್ತೃವಾಗಿರುತ್ತಾನೆ" ಎಂಬ ಸಾಂಖ್ಯರ ವಾದವನ್ನೇ ಮುಖ್ಯವಾಗಿ ಇಲ್ಲಿ ಖಂಡಿಸಿರುತ್ತದೆ– (೧೦೧). ಸಾಂಖ್ಯನ ಪ್ರಕ್ರಿಯೆ ಏನೆಂದರೆ: ಪ್ರಧಾನವು ಜಡವಾದ್ದರಿಂದ ಮಹತ್ತು, ಅಹಂಕಾರ–ಮುಂತಾದ ತತ್ತ್ವಾಂತರಗಳಾಗಿ ಪರಿಣಮಿಸಬಹುದು. ಅದು ಸಾವಯವವಾಗಿರುವದರಿಂದ ಬೇರೆಬೇರೆಯಾದ ರೂಪಗಳನ್ನು ಪಡೆಯುವ ಅಶುದ್ಧವಸ್ತುವಾಗಿರುತ್ತದೆ. ಆತ್ಮನೇ ಸೃಷ್ಟಿಕರ್ತನಾಗಿ ಜಗದ್ರೂಪದಿಂದ ಪರಿಣಮಿಸುವನೆಂದರೆ ಅವನು ಜಡಸ್ವರೂಪನೂ ಸಾವಯವನೂ ಅನಿತ್ಯನೂ ಅಶುದ್ಧರೂಪನೂ ಆಗಬೇಕಾಗುವದು (೧೦೩). ಆದರೆ ಆತ್ಮನು ಭೋಕ್ತೃಸ್ವರೂಪನಾಗುವಾಗಲೂ ಪರಿಣಮಿಸುವವಿಲ್ಲವಾದ್ದರಿಂದ ಅಷ್ಟನೂತ್ರದಿಂದ ಅವನಲ್ಲಿ ಯಾವ ದೋಷವೂ ಉಂಟಾಗುವಂತಿಲ್ಲ (೧೦೩, ೧೦೫) ಆದ್ದರಿಂದ ತರ್ಕಶುದ್ಧವಾಗಿರುವ ಸಾಂಖ್ಯಸಿದ್ಧಾಂತಕ್ಕನುಗುಣವಾಗಿ ಸೃಷ್ಟಿವಾಕ್ಯಗಳಿಗೆ ಅರ್ಥವನ್ನು ಮಾಡಬೇಕು. ಅರಸನಿಗೆ ಬೇಕಾದ ಕಾರ್ಯವನ್ನು ಮಾಡಿಕೊಡುವ ಅಧಿಕಾರಿಯನ್ನೂ "ಅರಸ"ನೆಂದು ಉಪಚಾರಕ್ಕೆ ಕರೆಯುವಂತೆ ಪುರುಷನಿಗೆ ಭೋಗಮೋಕ್ಷಗಳನ್ನೆಂಟುಮಾಡುವದಕ್ಕಾಗಿ ಮಹದಾದಿರೂಪದಿಂದ ಪರಿಣಮಿಸುವ ಪ್ರಧಾನರೂಪವನ್ನೂ ಚೇತನವೆಂದು ಉಪಚಾರಕ್ಕಾಗಿ ಭಾವಿಸಿ ಶ್ರುತಿಯಲ್ಲಿ ಆಲೋಚನಾಪೂರ್ವಕವಾದ ಸೃಷ್ಟಿಯನ್ನು ಹೇಳಿದೆಯೆಂದು ಕಲ್ಪಿಸುವದು ಯುಕ್ತ. ಹಾಗಿಲ್ಲವಿದ್ದರೆ ಆತ್ಮನು ತಾನೇ ತನಗೆ ಬಂಧವನ್ನು ಸೃಷ್ಟಿಸಿಕೊಂಡನೆಂಬ ಅನಿಷ್ಟವೂ ಬಂದೊದಗುತ್ತದೆ.

ಕರ್ತೃತ್ವಭೋಕ್ತೃತ್ವಗಳೆರಡೂ ಅವಿದ್ಯಕವೆಂಬ ವೇದಾಂತಿಯ ಅಭಿಮತವೇನೆಂದರೆ: ಕರ್ತೃತ್ವಭೋಕ್ತೃತ್ವಗಳೆರಡೂ ವಿಕಾರಗಳೇ ಆಗಿರುವಲ್ಲಿ ಕರ್ತೃತ್ವವು ಅವಿದ್ಯಕವೆಂದು ಒಪ್ಪಿಕೊಂಡು ಭೋಕ್ತೃತ್ವವು ಮಾತ್ರ ಪಾರಮಾರ್ಥಿಕವೆಂದು ಹೇಳುವದಕ್ಕೆ ಯಾವ ಕಾರಣವೂ ಇರುವದಿಲ್ಲ (೧೦೪). "ಭೋಕ್ತೃತ್ವವು ಬಂದಾಗಲೂ, ಪುರುಷನು, ದಾಸಿವಾಳದಹೂವಿನಿಂದ ಕೆಂಪಿನ ಸಂಪರ್ಕವನ್ನು ಪಡೆಯುವ ಸ್ಫಟಿಕದಂತೆ ತನ್ನ ಸ್ವರೂಪದಿಂದಲೇ ಇರುತ್ತಾನಾದ್ದರಿಂದ ಚಿತ್ಕಾತ್ಕರ್ತ್ವವೇ ಅವನ ತತ್ತ್ವವೆಂದಾಗುತ್ತದೆ; ಆದ್ದರಿಂದ ಭೋಕ್ತೃತ್ವವು ಪರಮಾರ್ಥವಾಗಿಯೇ ಆಗುವದೆಂದರೂ ದೋಷವುಂಟಾಗುವದಿಲ್ಲ" ಎಂಬ ಸಾಂಖ್ಯನ ಮತವು ಯುಕ್ತವಲ್ಲ. ಏಕೆಂದರೆ ಪ್ರಧಾನವು ಮಹದಾದಿಗಳಾಗಿ ಮಾರ್ಪಟ್ಟು ಮತ್ತೆ ಪ್ರಧಾನವೇ ಆಗುವಂತೆಯೇ ಪುರುಷನು ಭೋಗಕಾಲಕ್ಕೆ

ಭೋಕ್ತೃವಾಗಿ ಮಾರ್ಪಟ್ಟ ಬಳಿಕ ಚಿನ್ಮಾತ್ರನೇ ಆಗುತ್ತಾನೆಂದು ಅವನು ಒಪ್ಪಿರುವದರಿಂದ ಈ ಎರಡು ವಿಕಾರಗಳಲ್ಲಿ ಯಾವ ಹೆಚ್ಚುಕಡಿಮೆಯನ್ನೂ ತರ್ಕದಿಂದ ಸಿದ್ಧಪಡಿಸುವದಕ್ಕೆ ಆಗುವಹಾಗಿಲ್ಲ (೧೦೫). ಪುರುಷನು ಭೋಗ ಕಾಲದಲ್ಲಿಯೂ ಚಿನ್ಮಾತ್ರನೇ ಎಂದರಂತೂ ಪುರುಷನ ಭೋಕ್ತೃತ್ವ ವೂ ಕರ್ತೃತ್ವದಂತೆ ಅವಿದ್ಯಕನೇ ಆಗಿಬಿಡುತ್ತದೆ (೧೦೬). ಅಥವಾ ಅದು ಪರಮಾರ್ಥವೇ ಎನ್ನಲಾದರೆ ಪ್ರಧಾನಕ್ಕೂ ಪರಮಾರ್ಥವಾದ ಭೋಕ್ತೃತ್ವವನ್ನೇ ಒಪ್ಪಬೇಕಾಗುತ್ತದೆ (೧೦೭). ಭೋಗಕ್ಕೆ ಪ್ರಧಾನಪುರುಷರಿಬ್ಬರಿಗೂ ಬೇಕಾಗಿರುವದರಿಂದ ಇಬ್ಬರೂ ಭೋಕ್ತೃಗಳೆಂದು ಒಪ್ಪಿದರೆ ಪುರುಷನಿಗೆ ಪ್ರಧಾನವು ಭೋಗವನ್ನೂ ಮೋಕ್ಷವನ್ನೂ ಉಂಟುಮಾಡಿಕೊಡುತ್ತದೆ ಎಂದು ಪುರುಷನಿಗೆ ಮುಖ್ಯತ್ವವನ್ನೂ ಪ್ರಧಾನಕ್ಕೆ ಅವನ ಅಧೀನತ್ವವನ್ನೂ ಹೇಳುವದು ತಪ್ಪಾಗುವದು (೧೦೮). ಆದ್ದರಿಂದ ಕರ್ತೃತ್ವಭೋಕ್ತೃತ್ವಗಳೆರಡೂ ಪುರುಷನಿಗೆ ಅವಿದ್ಯೆಯಿಂದ ಕಲ್ಪಿತವಾಗಿರುವವೆಂದು ಸಾಂಖ್ಯರೂ ಒಪ್ಪಬೇಕು (೧೦೯). ಇದರ ಜೊತೆಗೆ ಪ್ರಧಾನವೆಂಬುದು ಪುರುಷನಿಗಿಂತ ನಿಜವಾಗಿಯೇ ಇರುವ ವಸ್ತು ಎಂಬ ಹಟವನ್ನ ಕೊರೆದು ಆತ್ಮೈಕತ್ವವನ್ನೇ ಒಪ್ಪಬೇಕು. ಹಾಗಿಲ್ಲದಿದ್ದರೆ ಆತ್ಮನಿಗಿಂತ ಬೇರೆಯಾಗಿರುವ ಪರಮಾಣುಗಳೇ ಮುಂತಾದವನ್ನು ತಿರಸ್ಕರಿಸುವದಕ್ಕೆ ಯಾವ ಸಾಧನೆಯುಕ್ತಿಯೂ ಇಲ್ಲವೆ ಶ್ರುತಿವಿರೋಧದ ಜೊತೆಗೆ ಯುಕ್ತಿವಿರೋಧವೂ ಗುಂಟುಬೀಳುತ್ತದೆ (೧೦೩). ಆದ್ದರಿಂದ ಒಬ್ಬನೇ ಆಗಿರುವ ಆತ್ಮನಲ್ಲಿ ಅವಿದ್ಯೆಯಿಂದ ಸವಿಶೇಷತ್ವವು ಕಲ್ಪಿತವಾಗಿರುವದೆಂದೂ (೧೦೩) ಆದನ್ನು ಅಲ್ಲಗಳೆಯುವದಕ್ಕಾಗಿಯೇ ಶಾಸ್ತ್ರವು ಹೊರಟಿದೆಯೆಂದೂ (೧೦೯) ವರ್ಣಿಸುತ್ತದೆ. ಈ ರೀತಿಯಲ್ಲಿ ನೋಡಿದರೆ ಅವಿದ್ಯಾಕಲ್ಪಿತವಾದ ನಾಮರೂಪಕರ್ಮಗಳೆಂಬ ಉಪಾಧಿಯಿಂದ ಆಗಿರುವ ಅನೇಕ ಶಕ್ತಿಗಳೂ ಸಾಧನೆಗಳೂ ಪರಮಾತ್ಮನಿಗೆ ಇರುವದರಿಂದ ಅವನೇ ಸೃಷ್ಟಿಕರ್ತನೆಂಬ ವೇದಾಂತಸಿದ್ಧಾಂತವೇ ನಿರ್ದುಷ್ಟವಾಗಿರುತ್ತದೆ(೧೦೯).

ಭಾಷ್ಯದ ವ್ಯಾಖ್ಯಾನಕಾರರು

ಭಾಷ್ಯಕ್ಕೆ ವ್ಯಾಖ್ಯಾನವನ್ನು ಬರೆದಿರುವವರು 'ಶ್ರೀಮದಾನಂದಜ್ಞಾನ' ರೆಂದು ಆನಂದಾಶ್ರಮಮುದ್ರಣಾಲಯದಲ್ಲಿ ಪ್ರಕಟವಾಗಿರುವ ಪುಸ್ತಕದಲ್ಲಿ ಆಚ್ಛಾಗಿದೆಯಾದರೂ ಅದೇ ಪುಸ್ತಕದ ಕೊನೆಯಲ್ಲಿ (ಪು. ೭೬[1]) "ಶ್ರೀಮತ್ಕೈವಲ್ಯೇ-ನ್ದ್ರಶಿಷ್ಯಜ್ಞಾನೇನ್ದ್ರ ಗುರುಚರಣಸೇವಿನಾರಾಯಣೇನ್ದ್ರ ಸರಸ್ವತೀವಿರಚಿತಂ ಪ್ರಶ್ನೋಪನಿಷದ್ಭಾಷ್ಯವಿವರಣಂ ಸಮಾಪ್ತಮ್" ಎಂಬ ವಾಕ್ಯವು ಐದು ಹಸ್ತ

1. ಇಲ್ಲಿ ತೋರಿಸಿರುವ ಪುಟಸಂಖ್ಯೆಗಳು ಆನಂದಾಶ್ರಮದಲ್ಲಿ ಆಚ್ಛಾಗಿರುವ ಆನಂದಗಿರಿಕೃತ ವ್ಯಾಖ್ಯಾನಸಮೇತವಾದ ಶಾಂಕರಭಾಷ್ಯದವುಗಳಾಗಿವೆ.

ಪ್ರತಿಗಳಲ್ಲಿರುವದಾಗಿ ಒಂದು ಟಿಪ್ಪಣಿಯನ್ನೂ ಕೊಟ್ಟಿರುತ್ತದೆ. ಆದ್ದರಿಂದ ವ್ಯಾಖ್ಯಾನಕಾರರು "ನಾರಾಯಣೇಂದ್ರಸರಸ್ವತಿ" ಗಳೆಂಬವರೆಂದೂ ಕೆಲವರ ಮತನಿತ್ತೆಂದು ತಿಳಿಯಬೇಕಾಗಿದೆ. ಈ ವ್ಯಾಖ್ಯಾನದಲ್ಲಿ ವಾಚಸ್ಪತಿಮಿಶ್ರರ ಸೂತ್ರಭಾಷ್ಯವ್ಯಾಖ್ಯಾನವಾದ ಭಾಮತಿಯನ್ನೂ (ಪುಟ ೪೯) ಶಂಕರಾನಂದರವರ ಉಪನಿಷದ್ವ್ಯಾಖ್ಯಾನವನ್ನೂ (ಪು. ೪೯-೫೦) ಪರಾಮರ್ಶಿಸಿರುವದರಿಂದ ಈ ನಾರಾಯಣೇಂದ್ರಸರಸ್ವತಿಗಳು ಆಚಾರ್ಯರಿಗಿಂತ ಬಹಳ ಈಚಿನವರೆಂದು ತಾನೇ ಸ್ಪಷ್ಟವಾಗಿರುತ್ತದೆ. ಆದ್ದರಿಂದ ಈ ವ್ಯಾಖ್ಯಾನದಲ್ಲಿ ಸುಷುಪ್ತಿಯಲ್ಲಿ "ಆನಂದಮಯಕೋಶವೆಂಬ ಹೆಸರಿನ ಅಜ್ಞಾನವಿರುವದೆಂದೂ" (ಪು. ೩೨. ೪೨), ಓಂಕಾರೋಪಾಸನಾಪ್ರಕರಣದಲ್ಲಿ 'ಏಕಮಾತ್ರಾವಶಿಷ್ಟೋಂಕಾರಾಭಿಧ್ಯಾನ'ವೆಂಬ ಭಾಷ್ಯಕ್ಕೆ "ಏಕಮಾತ್ರಾತ್ಮಕವಾದ ಓಂಕಾರವು, ಎಂದರೆ ಅಕಾರವು" ಎಂದೂ (ಪು. ೪೯) ಬರೆದಿರುವ ಭಾಷ್ಯವಿರುದ್ಧಾಭಿಪ್ರಾಯವನ್ನು ನಾವು ಕೈಬಿಟ್ಟಿರುತ್ತೇವೆ.

ಮುಂಡಕಭಾಷ್ಯವ್ಯಾಖ್ಯಾನದಲ್ಲಿಯೂ ಪ್ರಶ್ನಭಾಷ್ಯವ್ಯಾಖ್ಯಾನದಲ್ಲಿಯೂ ಕಾಣಬರುವ ಸೃಷ್ಟಿವಿಚಾರದ ಅಭಿಪ್ರಾಯವನ್ನು ಪ್ರಸಂಗವಶದಿಂದ ಇಲ್ಲಿ ವಿಮರ್ಶಿಸುವದು ಯುಕ್ತವೆಂದು ನಮಗೆ ತೋರುತ್ತದೆ. ಮುಂಡಕಭಾಷ್ಯದಲ್ಲಿ ಅಕ್ಷರವೆಂಬ ಹೆಸರಿನ ಪರಮಪುರುಷನಿಂದ ಪಂಚಭೂತೋತ್ಪತ್ತಿಯನ್ನು ವಿವರಿಸುವಾಗ "ಶಬ್ದ, ಸ್ಪರ್ಶ, ರೂಪ ರಸ, ಗಂಧ-ಎಂಬ ಮುಂದುಮುಂದಿನ ಗುಣಗಳು ಆಯಾ ಭೂತಗಳಲ್ಲಿ ಹಿಂದಿನ ಭೂತಗಳ ಗುಣಗಳೊಡನೆ ಕೂಡಿ ಇರುವವೆಂದು" ಭಾಷ್ಯಕಾರರು (ಮುಂ. ೨-೧-೩, ಭಾ. ಭಾ ೫೮) ಬರೆದಿರುತ್ತಾರೆ. ಆಗ ವ್ಯಾಖ್ಯಾನಕಾರರು "ಮೊದಲು ಸೂಕ್ಷ್ಮಭೂತಗಳು ಉಂಟಾಗಿ ಪಂಚೀಕರಣದಿಂದ ಸ್ಥೂಲಭೂತಗಳಾದ ಬಳಿಕ ಒಂದೊಂದು ಭೂತದಲ್ಲಿಯೂ ಐದೈದು ಗುಣಗಳು ಏರ್ಪಡುವವೆಂದು ಛಾಂದೋಗ್ಯಾದಿಗಳಲ್ಲಿ ಹೇಳಿರುವಲ್ಲಿ ಈ ಭಾಷ್ಯದಲ್ಲಿ ಮಾತ್ರ ಮೊದಲಿನ ಸೃಷ್ಟಿಯಲ್ಲಿಯೇ ಆಕಾಶಕ್ಕೆ ಒಂದು ಗುಣ, ವಾಯುವಿಗೆ ಎರಡು ಗುಣ, ತೇಜಸ್ಸಿಗೆ ಮೂರು ಗುಣ-ಎಂದು ಮುಂತಾಗಿ ಹೇಳಿರುವದು ಪಂಚೀಕರಣಪ್ರಕ್ರಿಯೆಗೆ ವಿರುದ್ಧವಾಗಿದೆಯಾದರೂ ಭೂತಸೃಷ್ಟಿಯಲ್ಲಿ ಶ್ರುತಿಗೆ ತಾತ್ಪರ್ಯವಿಲ್ಲವೆಂಬುದನ್ನು ತಿಳಿಸುವದಕ್ಕೆಂದು ಇಲ್ಲಿ ಬೇರೊಂದು ಪ್ರಕ್ರಿಯೆಯನ್ನು ಹೇಳಿರುವದರಿಂದ ದೋಷವಿಲ್ಲ (ಮುಂ. ವ್ಯಾ. ಪು. ೩೩) ಎಂದು ಭಾಷ್ಯವಾಕ್ಯಗಳಿಗೆ ಅವಿರೋಧವನ್ನು ಕಲ್ಪಿಸಿರುತ್ತಾರೆ. ಪ್ರಶ್ನಭಾಷ್ಯದಲ್ಲಿ (ಭಾ. ಭಾ. ೧೧೩) "ಹಿರಣ್ಯಗರ್ಭನೆಂಬ ಪ್ರಾಣನಿಂದ ಶ್ರದ್ಧೆಯನ್ನೂ ಆಮೇಲೆ ಕರ್ಮಫಲವನ್ನೂ ಅನುಭವಿಸುವದಕ್ಕೂ, ಸಾಧಿಸುವದಕ್ಕೂ ಆಶ್ರಯವಾಗಿರುವ ಕಾರಣರೂಪವಾದ ಮಹಾಭೂತಗಳನ್ನೂ ಪರಮಾತ್ಮನು ಸೃಷ್ಟಿಸಿದನು. ಪಂಚಭೂತಗಳಲ್ಲಿ ಉತ್ತರೋತ್ತರವಾಗಿ

ಒಂದೊಂದು ಗುಣವು ಹೆಚ್ಚುತ್ತಾ ಹೋಗಿರುತ್ತದೆ. ಇವುಗಳಿಂದಲೇ ಕರ್ಮೇಂದ್ರಿಯಗಳೂ ಬುದ್ಧೀಂದ್ರಿಯಗಳೂ ಮನಸ್ಸೂ ಆಗಿರುತ್ತದೆ" ಎಂದು ಬರೆದಿರುತ್ತದೆ. ಇಲ್ಲಿ ವ್ಯಾಖ್ಯಾನಕಾರರು (ಪ್ರ. ವ್ಯಾ. ಪು. ೭೧, ೭೯) "ಇಲ್ಲಿ ಹಿರಣ್ಯಗರ್ಭಸೃಷ್ಟಿ ಎಂದರೆ ಹಿರಣ್ಯಗರ್ಭನಿಗೆ ಉಪಾಧಿಯಾದ ಸಮಷ್ಟಿಪ್ರಾಣವು ಸೂಕ್ಷ್ಮಭೂತಗಳಾದಮೇಲೆ ಪ್ರಾಣನನ್ನೂ ಆ ಬಳಿಕ ಪಂಚೀಕೃತವಾದ ಭೂತಗಳನ್ನೂ ಸೃಷ್ಟಿ ಮಾಡಿದನು–ಎಂದು ಭಾಷ್ಯಕ್ಕೆ ಅರ್ಥವನ್ನು ಕಲ್ಪಿಸಬೇಕು. ಹಾಗಿಲ್ಲದಿದ್ದರೆ ಭೂತಗಳ ಕಾರ್ಯವಾದ ಪ್ರಾಣವು ಭೂತಗಳಿಗಿಂತ ಮೊದಲೇ ಸೃಷ್ಟವಾಯಿತೆಂದು ಭಾಷ್ಯಕಾರರು ವಿರುದ್ಧೋಕ್ತಿಯನ್ನು ಆಡಿದವರಾಗುವರು. ಹಾಗಾದರೆ ಸ್ಥೂಲಭೂತಗಳಾದಮೇಲೆ ಇಂದ್ರಿಯಮನಸ್ಸುಗಳ ಸೃಷ್ಟಿಯನ್ನು ಹೇಳಿದಂತಾಗಿ ವಿರುದ್ಧವಚನವಾಗುವದಿಲ್ಲವೆ? ಎಂದರೆ ಪಂಚಭೂತಗಳಿಂದಾಗಿನ ಶರೀರವನ್ನು ಆಶ್ರಯಿಸಿಕೊಂಡೇ ಇಂದ್ರಿಯಮನಸ್ಸುಗಳು ಕೆಲಸಮಾಡಬೇಕಾಗಿರುವದರಿಂದ ಹೀಗೆ ಕ್ರಮವನ್ನು ಹೇಳಿದೆ ಎಂದು ತಿಳಿಯಬೇಕು" ಎಂಬರ್ಥದ ವಾಕ್ಯಗಳನ್ನು ಬರೆದಿರುತ್ತಾರೆ.

ಈ ಎರಡು ವ್ಯಾಖ್ಯಾನಗಳೂ ಒಂದಕ್ಕೊಂದು ವಿರುದ್ಧವಾಗಿರುವವೆಂಬುದನ್ನು ವಾಚಕರು ಮೊದಲು ಮನದಂದುಕೊಳ್ಳಬೇಕು. ಮುಂಡಕವ್ಯಾಖ್ಯಾನದಲ್ಲಿ ಭಾಷ್ಯವು ಪಂಚೀಕರಣಪ್ರಕ್ರಿಯೆಗೆ ವಿರುದ್ಧವಾಗಿದೆ ಎಂದು ಕಂಠೋಕ್ತವಾಗಿ ಹೇಳಿರುತ್ತದೆ: ಪ್ರಶ್ನವ್ಯಾಖ್ಯಾನದಲ್ಲಿ ಪಂಚೀಕರಣಕ್ಕೆ ಅನುಗುಣವಾಗಿಯೇ ಭಾಷ್ಯಕ್ಕೆ ಅರ್ಥನನ್ನು ಮಾಡಿರುತ್ತದೆ! ಉಪನಿಷತ್ತಿನ ಶಾಂಕರಭಾಷ್ಯವನ್ನು ಗ್ರಂಥಾಂತರದ ಶಾಂಕರಭಾಷ್ಯಕ್ಕೆ ಹೋಲಿಸಿ ಏಕವ್ಯಾಕತೆಯನ್ನು ಕಲ್ಪಿಸುವ ಪ್ರಯತ್ನವು ಈ ಎರಡು ವ್ಯಾಖ್ಯಾನಗಳಲ್ಲಿಯೂ ಕಂಡುಬರುವದಿಲ್ಲ.

ಸೃಷ್ಟಿಯನ್ನು ಪ್ರತಿಪಾದಿಸಿರುವವರಲ್ಲಿ ಶ್ರುತಿಗೆ ಪರಮತಾತ್ಪರ್ಯವಿಲ್ಲವೆಂದು ಭಾಷ್ಯಕಾರರೂ ಬರೆದಿರುತ್ತಾರಾದರೂ ಆಕಾಶಾದಿಸೃಷ್ಟಿವಚನಗಳೂ ಪರಸ್ಪರ ವಿರುದ್ಧವಲ್ಲವೆಂದು ಬಾದರಾಯಣರು ತೋರಿಸಿಕೊಟ್ಟಿರುತ್ತಾರೆಂದೂ (ಸೂ. ಭಾ. ೧–೪–೧೪) ಶ್ರುತಿಗಳು ಪರಸ್ಪರವಿರುದ್ಧವಾಗಿರುವದರಿಂದ ಅವೈದಿಕರ ಪಕ್ಷಗಳಂತೆ ವೇದಾಂತಿಗಳ ಪಕ್ಷವೂ ಅಪ್ರಮಾಣವೆಂಬ ಶಂಕೆಯನ್ನು ಪರಿಹರಿಸುವದಕ್ಕಾಗಿ (ಸೂ. ಭಾ. ೩–೧–೧) ಅವರು ಸೃಷ್ಟಿಕ್ರಮವನ್ನು ಅಂಗೀಕರಿಸಿರುತ್ತಾರೆಂದೂ ಸೂತ್ರಭಾಷ್ಯದಲ್ಲಿ ಅವರು ವಿವರಿಸಿರುತ್ತಾರಾದ್ದರಿಂದಲೂ ಭಾಷ್ಯಗತಸೃಷ್ಟಿವಾಕ್ಯಗಳನ್ನೂ ಸಮರಸವಾಗಿ ಮಾಡಿಕೊಳ್ಳುವದು ಅವಶ್ಯವಾಗಿರುತ್ತದೆ.

ಈ ದೃಷ್ಟಿಯಿಂದ ನೋಡುವಾಗ ತೋರುವದೇನೆಂದರೆ: ಮುಂಡಕಭಾಷ್ಯದಲ್ಲಿ (೧–೧–೮ ಭಾ. ಭಾ. ೩೨) ಜಗತ್ಸೃಷ್ಟಿಯ ಕ್ರಮವನ್ನು ಹೇಳುವದಕ್ಕೇ ಶ್ರುತಿಯು ಬಂದಿರುವದೆಂಬ ಸ್ಪಷ್ಟೋಕ್ತಿಯಿದೆ. ಅಲ್ಲಿ ಅವ್ಯಾಕೃತದಿಂದ ಪ್ರಾಣ ಅಥವಾ ಹಿರಣ್ಯಗರ್ಭ, ಹಿರಣ್ಯಗರ್ಭನಿಂದ ಮನಸ್ಸು, ಮನಸ್ಸಿನಿಂದ ಆಕಾಶಾದಿಭೂತ

ಪಂಚಕ, ಆ ಬಳಿಕ ಅಂಡಕ್ರಮದಿಂದ ಭೂರಾದಿಲೋಕಗಳು.ಹೀಗೆ ಒಂದರಿಂದ ಒಂದು ಆದವು ಎಂದು ಹೇಳಿರುತ್ತದೆ. ಇದರಂತೆಯೇ ಪ್ರಶ್ನಭಾಷ್ಯದಲ್ಲಿಯೂ (ಪ್ರ. ೬-೩. ಭಾ. ಭಾ. ೯೯) ಪ್ರಾಣಾದಿಕಲೆಗಳ ಸೃಷ್ಟಿಕ್ರಮವನ್ನು ಶ್ರುತಿಯಲ್ಲಿ ಹೇಳಿದೆಯೆಂದೇ ಬರೆದಿರುತ್ತದೆ. ಅಲ್ಲಿ ಹಿರಣ್ಯಗರ್ಭ, ಶ್ರದ್ಧೆ, ಪಂಚಭೂತಗಳು, ಇಂದ್ರಿಯಗಳು, ಮನಸ್ಸು-ಹೀಗೆ ಸೃಷ್ಟಿಯಾಯಿತೆಂದು ವರ್ಣಿಸಿರುತ್ತದೆ. ಇವೆ ರಡು ಶ್ರುತಿಗಳಿಗೂ ಏಕವಾಕ್ಯತೆಯಾಗುವದು ಕಷ್ಟ; ಏಕೆಂದರೆ ಮುಂಡಕದಲ್ಲಿ ಮನಸ್ಸಿನಿಂದ ಭೂತಪಂಚಕವಾಯಿತೆಂದಿದೆ, ಪ್ರಶ್ನದಲ್ಲಿ ಭೂತಗಳಿಂದ ಇಂದ್ರಿ ಯವೂ ಮನಸ್ಸೂ ಆಯಿತೆಂದಿದೆ. ಈ ವಿರೋಧಕ್ಕೆ ನಮಗೆ ತೋರುವ ಪರಿಹಾರ ವೇನೆಂದರೆ: ಮುಂಡಕದಲ್ಲಿ ಹೇಳಿರುವ ಮನಸ್ಸು ಸಮಷ್ಟ್ಯುಪಾಧಿಯು; ಇದನ್ನು ಶ್ರದ್ಧೆಯೆಂಬ ಮಾತಿನಿಂದಲೇ ಉಪಲಕ್ಷಣವಾಗಿ ಪ್ರಶ್ನದಲ್ಲಿ ಹೇಳಿರು ತ್ತದೆ. ಪ್ರಶ್ನದಲ್ಲಿ ಹೇಳಿರುವ ಮನಸ್ಸೂ ಇಂದ್ರಿಯಗಳೂ ಭೂತಗಳಿಂದ ಆಗುಂಟಾಗುವ ವ್ಯಷ್ಟಿಗಳು. ಹೀಗೆ ಅರ್ಥವನ್ನು ಮಾಡಿದರೆ ಸೂತ್ರಭಾಷ್ಯದಲ್ಲಿ ಹೇಳಿರುವ (ಸೂ. ಭಾ. ೨-೩-೧೫) ಭೌತಿಕಕರಣಗಳು, ಅಭೌತಿಕಕರಣಗಳು- ಎಂಬ ವಿಕಲ್ಪಕ್ಕೂ ಬೃಹದಾರಣ್ಯಕಭಾಷ್ಯದಲ್ಲಿ (೧-೨-೧, ೨೨) ಹೇಳಿರುವ ಮನಸ್ಸು ಮತ್ತು ಭೂತಸೃಷ್ಟಿ, ಅಂಡೋತ್ಪತ್ತಿ-ಈ ಕ್ರಮಕ್ಕೂ ಹೊಂದುಗಡೆ ಯಾಗುವದೆಂದು ಹೇಳಬಹುದು. ಮುಂಡಕ (೨-೧-೩), ಪ್ರಶ್ನ (೬-೪), ತೈತ್ತಿರೀಯ (೨-೧)-ಈ ಭಾಷ್ಯಗಳಲ್ಲಿಯೂ ಆಕಾಶಾದಿಯಾಗಿ ಭೂತಗಳಲ್ಲಿ ಒಂದೊಂದು ಗುಣವು ಹೆಚ್ಚುತ್ತಾ ಹೋಗಿ ಪೃಥ್ವಿಯಲ್ಲಿ ಐದು ಗುಣಗಳಿರುವ ವೆಂದು ಹೇಳಿರುವದು ಸೂಕ್ಷ್ಮಭೂತಗಳ ವಿಷಯವೇ ಎಂದೂ ಅವುಗಳಿಂದ ಪಂಚೀಕೃತವಾದ ಭೂತಗಳುಂಟಾಗುವಾಗ ಒಂದೊಂದು ಸ್ಥೂಲಭೂತದಲ್ಲಿಯೂ ಐದು ಗುಣಗಳೂ ಇರುವವೆಂದೂ ಕಲ್ಪಿಸಿದರೆ ಛಾಂದೋಗ್ಯದಲ್ಲಿ ಭಾಷ್ಯಕಾರರು (೬-೩-೩, ೪) ಹೇಳಿರುವ ಪಂಚೀಕರಣಕ್ಕೂ ವಿರೋಧವಾಗುವದಿಲ್ಲವೆಂದು ತೋರುತ್ತದೆ. ಇಲ್ಲಿ ನಾವು ಕಲ್ಪಿಸಿರುವ ಏಕವಾಕ್ಯತಾಪ್ರಕ್ರಿಯೆಯಲ್ಲಿರುವ ಗುಣದೋಷಗಳನ್ನು ನಿರ್ಣಯಿಸುವ ಭಾರವನ್ನು ತತ್ತ್ವವಿಮರ್ಶಕರಾದ ವಿದ್ವಾಂಸರಿಗೆ ಬಿಟ್ಟುಬಿಟ್ಟು ಈ ಪೀಠಿಕೆಯನ್ನು ಇಲ್ಲಿಗೆ ಮುಗಿಸುತ್ತೇವೆ.

ಗ್ರಂಥಕರ್ತ.

ಸಂಕೇತಾಕ್ಷರಗಳ ವಿವರ:

ಅ. ವೇ.	...	ಅಥರ್ವವೇದ
ಋ. ವೇ.	...	ಋಗ್ವೇದ
ಕೌ.	...	ಕೌಷೀತಕೀ ಬ್ರಾಹ್ಮಣೋಪನಿಷತ್ತು
ತೈ. ಅ.	...	ತೈತ್ತಿರೀಯಾರಣ್ಯಕ
ನೂಂ. ಕಾ.	...	ನೂಂಪೂರ್ಕಕಾರಿಕಾ
ಯಾ. ಸ್ಮೃ.	...	ಯಾಜ್ಞವಲ್ಕ್ಯಸ್ಮೃತಿ

ವಿಶೇಷ :—ಉಪನಿಷತ್ತುಗಳು, ಗೀತೆ, ಸೂತ್ರ.ಇವನ್ನೂ ಇವುಗಳ ಭಾಷ್ಯಗಳನ್ನೂ ಆಯಾ ಅಕ್ಷರಗಳಿಂದ ತಿಳಿಸಿದೆ. ಉದಾ : ತೈ= ತೈತ್ತಿರೀಯಭಾಷ್ಯ ಹೀಗೆಯೇ ಉಳಿದವುಗಳನ್ನು ತಿಳಿಯಬೇಕು.

ವಿಷಯಾನುಕ್ರಮಣಿಕೆ

ಸೂಚನೆ : ಸಂಖ್ಯೆಗಳು ಭಾಷ್ಯಭಾಗಗಳನ್ನು ಸೂಚಿಸುವವು.

ಒಂದನೆಯ ಪ್ರಶ್ನೆ

ಸುಕೇಶಾದಿಗಳ ಗುರೂಪಸತ್ತಿ (೩–೩)– ಕಬಂಧಿಯ ಪ್ರಶ್ನೆ : ಪ್ರಜೆಗಳು ವಿಕರಿಂದ ಹುಟ್ಟುತ್ತಾರೆ ? (೪) ಪ್ರಜಾಪತಿಯಿಂದ ರಯಿಪ್ರಾಣಗಳ ಸೃಷ್ಟಿ (೫)– ರಯಿ ಮತ್ತು ಪ್ರಾಣ ಎಂದರೆ ಯಾರು? (೬-೧೧)–ಸಂವತ್ಸರರೂಪಿಯಾದ ಪ್ರಜಾಪತಿ (೧೩,೧೬).ಮಾಸ ರೂಪಿಯಾದ ಪ್ರಜಾಪತಿ (. ೭).ಅಹೋರಾತ್ರರೂಪನಾದ ಪ್ರಜಾಪತಿ (೧೮) ಅನ್ನರೂಪ ನಾದ ಪ್ರಜಾಪತಿ (೧೯)–ಕರ್ಮಿಗಳಿಗೂ ಸಮುಚ್ಚಯಾನುಷ್ಠಾನವನ್ನು ಮಾಡುವವರಿಗೂ ದೊರಕುವ ಫಲಗಳು (೨೧–೨೩) ಪುಟ ೨–೨೯.

ಎರಡನೆಯ ಪ್ರಶ್ನೆ

ಈ ಪ್ರಶ್ನೆಯ ಸಂಬಂಧ (೨೪) ಭಾರ್ಗವನ ಪ್ರಶ್ನೆ : ಶರೀರದಲ್ಲಿರುವ ಪ್ರಾಣಗಳು ಯಾವವು ? (೨೪)–ಪ್ರಾಣಸಂವಾದ (೨೫-೨೬)– ಮುಖ್ಯಪ್ರಾಣನ ಹೆಚ್ಚುಗಾರಿಕೆ (೨೭) ಮುಖ್ಯಪ್ರಾಣನ ಸ್ತುತಿ (೨೮–೩೬). ಪುಟ ೩೦–೪೫.

ಮೂರನೆಯ ಪ್ರಶ್ನೆ

ಕೌಸಲ್ಯನ ಪ್ರಶ್ನೆಗಳು : ಪ್ರಾಣನ ಉತ್ಪತ್ತ್ಯಾದಿಗಳು ಹೇಗೆ ಆಗುತ್ತವೆ ? (೩೭)– ಪಿಪ್ಪಲಾದನು ಕೌಸಲ್ಯನನ್ನು ಮೆಚ್ಚಿದ್ದು (೩೮) ಪ್ರಾಣದ ಉತ್ಪತ್ತಿ, ೀ ಆದು ಶರೀರಕ್ಕೆ ಬರುವ ಬಗೆ (೩೯)–ಪ್ರಾಣದ ವಿಭಾಗಕ್ರಮ (೪೦–೪೪)–ಪ್ರಾಣವು ಆಧ್ಯಾತ್ಮಾಧಿಭೂತ ಗಳನ್ನು ಧರಿಸಿರುವ ಬಗೆ (೪೫–೪೬)–ಉತ್ಕ್ರಾಂತಿಕ್ರಮ (೪೭) ಪ್ರಾಣೋಪಾಸನೆಯ ಫಲ (೪೮–೪೯). ಪುಟ ೪೭–೬೧.

ನಾಲ್ಕನೆಯ ಪ್ರಶ್ನೆ

ಮುಂದಿನ ಗ್ರಂಥದ ಸಂಬಂಧ (೫೧) ಈ ಪ್ರಶ್ನೆಯ ವಿಷಯ (೫೨–೫೪)–ಕರಣಗಳ ನಿದ್ರೆ (೫೫)–ಪ್ರಾಣಗಳ ಎಚ್ಚರ, ಪ್ರಾಣಾಗ್ನಿಹೋತ್ರದ ಭಾವನೆ (೫೬–೫೯)– ಮನಸ್ಸಿಗೆ ಸ್ವಪ್ನಾನ.ಭವ (೬೦) ಮನಸ್ಸಿನ ಸ್ವಾತಂತ್ರ್ಯದ ಬಗ್ಗೆ ಆಕ್ಷೇಪಸಮಾಧಾನಗಳು (೬೨)– ಸ್ವಯಂಜ್ಯೋತಿಷ್ಟ್ವದ ಬರ್ಡೆ (೬೩–೬೬)–ಕನಸಿನಲ್ಲಾಗುವ ಅನುಭವದ ವಿವರ (೬೭)– ಸುಷುಪ್ತಿಯಲ್ಲಾಗುವ ನಿರುಪಾಧಿಕ ಸುಖ (೬೮)– ಸುಷುಪ್ತಿಯಲ್ಲಿರುವ ಅದ್ವಯಾತ್ಮ ಸ್ವರೂಪ (೬೯–೭೪)–ಉಪಸಂಹಾರ (೭೫-೭೭). ಪುಟ ೬೨-೭೩

ಐದನೆಯ ಪ್ರಶ್ನೆ

ಈ ಪ್ರಶ್ನೆಯ ಸಂಬಂಧ (೭೮) ಸತ್ಯಕಾಮನ ಪ್ರಶ್ನೆ : ಓಂಕಾರಧ್ಯಾನದ ಫಲ ಏನು ? (೭೯).ಓಂಕಾರವು ಬ್ರಹ್ಮಪ್ರತೀಕ (೮೦) ಮಾತ್ರೆಗಳಲ್ಲಿ ಒಂದೊಂದರ ಜ್ಞಾನ ದಿಂದ ಕೂಡಿದ ಉಪಾಸನೆ (೮೧–೮೨) ಓಂಕಾರದ ಪೂರ್ಣೋಪಾಸನೆಯ ಫಲ (೮೩)– ಉಪಸಂಹಾರ (೮೪-೮೬). ಪುಟ ೭೪–೧೦೯.

ಆರನೆಯ ಪ್ರಶ್ನೆ

ಈ ಪ್ರಶ್ನೆಯ ಸಂಬಂಧ (೪೭)–ಸುಕೇಶನ ಪ್ರಶ್ನೆ ; ಷೋಡಶಕಲೆಗಳ ಪುರುಷನಿರುವ ದೆಲ್ಲಿ ? (೪೫)-ಪುರುಷನು ಶರೀರದೊಳಗೇ ಇರುತ್ತಾನೆ (೪೪–೪೮) ಆತ್ಮಜ್ಯೋತಸ್ಸುವು ಕೂಟಸ್ಥವೂ ಅದ್ವಿತೀಯವೂ ಆಗಿದೆ (೪೧)– ಜ್ಞಾನಕ್ಕೆ ಅಭಾವವಿಲ್ಲ (೪೨)– ಜ್ಞಾನವು ಜ್ಞೇಯವನಲ್ಲ (೪೩)-ಕೂಟಸ್ಥಜ್ಯೋತಸ್ಸುವಾದದಲ್ಲಿ ಯಾವ ದೋಷವೂ ಇಲ್ಲ (೪೫)-ಪುರುಷನು ಶರೀರದಲ್ಲಿರುವ ಬಗೆ (೪೪–೪೮).ಪುರುಷನಿಂದ ಕಲೆಗಳ ಸೃಷ್ಟಿ (೪೯–೫೦) ಆತ್ಮನು ಸೃಷ್ಟಿಕರ್ತನೆಂಬ ಬಗ್ಗೆ ಚರ್ಚೆ (೫೦–೫೨). ಆತ್ಮನಲ್ಲಿರುವ ಕರ್ತೃತ್ವಭೋಕ್ತೃತ್ವಗಳೆರಡೂ ಅವಿದ್ಯಕ (೫೩)– ಸಾಂಖ್ಯಾದಿಮತಗಳ ಖಂಡನೆಯ ಉದ್ದೇಶ (೫೪)–ಆತ್ಮನ ಕರ್ತೃತ್ವಭೋಕ್ತೃತ್ವಗಳೆರಡೂ ಅಪರಮಾರ್ಥವೆಂದು ಒಪ್ಪಬೇಕು(೫೫)-ಅದ್ವೈತಪ್ರಕ್ರಿಯೆಯಲ್ಲಿ ಯಾವ ದೋಷವೂ ಇಲ್ಲ (೫೬)–ಅಜೇತನಕರ್ತೃತ್ವವಾದದಲ್ಲಿ ದೋಷ (೫೭) ಅವಿದ್ಯೆಯಿಂದ ಕಲೆಗಳ ಉತ್ಪತ್ತಿ, ವಿದ್ಯೆಯಿಂದ ಲಯ (೫೮). ಕಥೆಯ ಉಪಸಂಹಾರ (೫೯).

ಪುಟ ೧೧೦–೧೫೪.

ಉಪನಿಷತ್ತಿನ ಸಾರ .... ಪುಟ ೧೫೫–೧೫೯

ಮಂತ್ರಗಳ ಅನುಕ್ರಮಣಿಕೆ .... ಪುಟ ೧೬೦–೧೬೩

ಶಬ್ದಾನುಕ್ರಮಣಿಕೆ ... ಪುಟ ೧೬೩–೧೬೮

॥ ಓಂ ॥

ಶ್ರೀ ಶಾಂಕರಭಾಷ್ಯಸಮೇತ

ಪ್ರಶ್ನೋಪನಿಷತ್ತು



ಭಾಷ್ಯಕಾರರ ಅವತರಣಿಕೆ

(ಭಾಷ್ಯ)

೧. ಮೈತ್ರ್ಯೇಕ್ತಸ್ಯಾರ್ಥಸ್ಯ ವಿಸ್ತರಾನುವಾದಿ ಇದಂ ಬ್ರಾಹ್ಮಣಮ್ ಆರಭ್ಯತೇ । ಋಷಿಪ್ರಶ್ನಪ್ರತಿವಚನಾಪ್ಯಾಯಿಕಾ ತು ವಿದ್ಯಾಸ್ತುತಯೇ । ಏವಂ ಸಂವತ್ಸರಬ್ರಹ್ಮಚರ್ಯಸಂವಾಸಾದಿಯುಕ್ತೈಃ ತಪೋಯುಕ್ತೈರ್ಗಾರ್ಹಾ[1] ಪಿಪ್ಪಲಾದವತ್[2] ಸರ್ವಜ್ಞಕಲ್ಪೈರಾಚಾರ್ಯೈರ್ವಕ್ತವ್ಯಾ ಚ ನ[3] ಯೇನ ಕೇನಚಿದಿತಿ ವಿದ್ಯಾಂ ಸ್ತೌತಿ । ಬ್ರಹ್ಮಚರ್ಯಾದಿಸಾಧನಸೂಚನಾಚ್ಚ ತತ್ಕರ್ತವ್ಯತಾ ಸ್ಯಾತ್ ॥

(ಭಾಷ್ಯಾರ್ಥ)

ಮಂತ್ರದಲ್ಲಿ ಹೇಳಿದ ವಿಷಯವನ್ನು ವಿಸ್ತಾರವಾಗಿ ತಿರುಗಿ ಹೇಳುವ ಈ ಬ್ರಾಹ್ಮಣವನ್ನು[4] ಪ್ರಾರಂಭಿಸುತ್ತದೆ. ಋಷಿಗಳು ಕೇಳಿದಂತೆಯೂ (ಪಿಪ್ಪಲಾದನು ಅದಕ್ಕೆ) ಉತ್ತರಕೊಟ್ಟಂತೆಯೂ ಕಥೆಯನ್ನು ಬರೆದಿರುವದು ವಿದ್ಯೆಯನ್ನು ಹೊಗಳುವದಕ್ಕೆ. ಹೀಗೆ[5] (ಒಂದು) ವರ್ಷ ಬ್ರಹ್ಮಚರ್ಯ(ಗುರುಕುಲ)ವಾಸದಿಂದ ಕೂಡಿ ತಪಸ್ಸಿನಿಂದ ಕೂಡಿರುವವರು ಮಾತ್ರ[6] ಇದನ್ನು ತಿಳಿಯುವದಕ್ಕಾಗುತ್ತದೆ; ಪಿಪ್ಪಲಾದನಂತೆ ಸರ್ವಜ್ಞರಂತಿರುವ ಆಚಾರ್ಯರಿಂದ ಮಾತ್ರ ಇದನ್ನು ಹೇಳುವದಕ್ಕಾಗುತ್ತದೆಯೇ ಹೊರತು ಯಾರೆಂದರೆ

---

1. "ಸಂವತ್ಸರಬ್ರಹ್ಮಚರ್ಯಸಂವಾಸಾದಿತಪೋಯುಕ್ತೈಃ" ಎಂದು ವಾ॥ ಪಾಠ.
2. "ಪಿಪ್ಪಲಾದಾದಿವತ್" ಎಂಬ ಅ॥ ಪಾಠದಲ್ಲಿ 'ಆದಿ' ಹೆಚ್ಚು.
3. "ನ ಸಾ" ಎಂಬ ಆ॥ ಪಾಠದಲ್ಲಿ 'ಸಾ' ಹೆಚ್ಚು.
4. ಮುಂಡಕವನ್ನು ಮಂತ್ರವೆಂದೂ ಪ್ರಶ್ನೋಪನಿಷತ್ತನ್ನು ಬ್ರಾಹ್ಮಣವೆಂದೂ ಇಟ್ಟುಕೊಂಡಿದೆ.
5. ಸುಕೇಶಾದಿಗಳಂತೆ.
6. ಒಂದನೆಯ ಪ್ರಶ್ನೆಯ ಎರಡನೆಯ ಮಂತ್ರದಲ್ಲಿ ತಪಸ್ಸು, ಬ್ರಹ್ಮಚರ್ಯ, ಶ್ರದ್ಧೆ–ಇವುಗಳಿಂದಕೂಡಿ ಗುರುಕುಲದಲ್ಲಿರಬೇಕೆಂದು ಹೇಳಿದೆ.

ಅವರು[1] (ಹೇಳುವದಕ್ಕೂ ಅರಿತುಕೊಳ್ಳುವದಕ್ಕೂ ಆಗಲಾರದು) ಎಂದು ವಿದ್ಯೆಯನ್ನು ಇಲ್ಲಿ ಹೊಗಳಿದೆ[2]. ಬ್ರಹ್ಮಚರ್ಯವೇ ಮುಂತಾದ ಸಾಧನೆಗಳನ್ನು ಸೂಚಿಸಿರುವದರಿಂದ ಅವನ್ನು ಮಾಡಬೇಕೆಂದು[3] (ವಿಧಿಸಿದಂತೆಯೂ) ಆಗುವದು.

ಒಂದನೆಯ ಪ್ರಶ್ನೆ

ಸುಕೇಶಾದಿಗಳ ಗುರೂಪಸತ್ತಿ

ಸುಕೇಶಾ ಚ ಭಾರದ್ವಾಜಃ ಶೈಬ್ಯಶ್ಚ ಸತ್ಯಕಾಮಃ ಸೌರ್ಯಾಯಣೀ ಚ ಗಾರ್ಗ್ಯಃ ಕೌಸಲ್ಯಶ್ಚಾಶ್ವಲಾಯನೋ ಭಾರ್ಗವೋ ವೈದರ್ಭಿಃ ಕಬನ್ಧೀ ಕಾತ್ಯಾಯನಸ್ತೇ ಹೈತೇ ಬ್ರಹ್ಮಪರಾ ಬ್ರಹ್ಮನಿಷ್ಠಾಃ ಪರಂ ಬ್ರಹ್ಮಾನ್ವೇಷಮಾಣಾ ಏಷ ಹ ವೈ ತತ್ ಸರ್ವಂ ವಕ್ಷ್ಯತೀತಿ ತೇ ಹ ಸಮಿತ್ಪಾಣಯೋ ಭಗವನ್ತಂ ಪಿಪ್ಪಲಾದಮುಪಸನ್ನಾಃ ॥ ೧ ॥

೧. ಸುಕೇಶಭಾರದ್ವಾಜನೂ ಶೈಬ್ಯಸತ್ಯಕಾಮನೂ ಸೌರ್ಯಾಯಣಿ ಗಾರ್ಗ್ಯನೂ ಕೌಸಲ್ಯ ಆಶ್ವಲಾಯನನೂ ಭಾರ್ಗವವೈದರ್ಭಿಯೂ ಕಬಂಧಿಕಾತ್ಯಾಯನನೂ- ಆ ಇವರು ಬ್ರಹ್ಮವರರಾಗಿ ಬ್ರಹ್ಮನಿಷ್ಠರಾಗಿದ್ದರು. ಪರಬ್ರಹ್ಮವನ್ನು ಹುಡುಕಿಕೊಂಡು 'ಈತನೇ ಅದೆಲ್ಲವನ್ನೂ ಹೇಳುವನು' ಎಂದು ಅವರು ಸಮಿತ್ಪಾಣಿಗಳಾಗಿ ಭಗವಂತನಾದ ಪಿಪ್ಪಲಾದನ ಬಳಿಗೆ ಬಂದರು.

(ಭಾಷ್ಯ)

೨. ಸುಕೇಶಾ ಚ ನಾಮತಃ, ಭರದ್ವಾಜಸ್ಯ ಅಪತ್ಯಂ ಭಾರದ್ವಾಜಃ | ಶೈಬ್ಯಶ್ಚ ಶಿಬೇರಪತ್ಯಂ ಶೈಬ್ಯಃ, ಸತ್ಯಕಾಮೋ ನಾಮತಃ | ಸೌರ್ಯಾಯಣೀ ಸೂರ್ಯಸ್ಯ ಅಪತ್ಯಂ ಸೌರ್ಯಃ | ತಸ್ಯ ಅಪತ್ಯಂ ಸೌರ್ಯಾಯಣಿಃ |

1. ಸಾಧನರಹಿತರು ಇದನ್ನು ಅರಿತುಕೊಳ್ಳಲಾರರು. ಸತ್ಯ, ತಪಸ್ಸು, ಬ್ರಹ್ಮಚರ್ಯ–ಇವುಗಳನ್ನು ಮು.. ೩–೧–೫ರಲ್ಲಿ ವಿಧಿಸಿರುವದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

2. ಗುರುಶಿಷ್ಯರನ್ನು ಹೊಗಳಿರುವದು ವಿದ್ಯೆಯನ್ನು ಹೊಗಳುವದಕ್ಕೆ. ಮುಂ. ಭಾ. ಸಂಬಂಧ ಭಾ. ಭಾ. ೧ನ್ನು ನೋಡಿ.

3. ವಿದ್ಯೆಯನ್ನು ಹೊಗಳುವದಕ್ಕಾಗಿ ಬ್ರಹ್ಮಚರ್ಯಾದಿಗಳನ್ನು ಹೇಳಿದ್ದರೂ ಅವನ್ನು ಅವಶ್ಯವಾಗಿ ಮಾಡಬೇಕೆಂದು ಶ್ರುತಿಯ ಅಭಿಪ್ರಾಯ.

ಭಾನ್ವಸಃ[1] ಸೌರ್ಯಾಯಣೇ ಇತಿ। ಗಾರ್ಗ್ಯಃ ಗರ್ಗಗೋತ್ರೋತ್ಪನ್ನಃ। ಕೌಸಲ್ಯಶ್ಚ ನಾಮತಃ, ಅಶ್ವಲಸ್ಯ ಅಪತ್ಯಮ್ ಆಶ್ವಲಾಯನಃ। ಭಾರ್ಗವಃ ಭೃಗೋರ್ಗೋತ್ರಾಪತ್ಯಂ ಭಾರ್ಗವಃ ವೈದರ್ಭಿಃ ವಿದರ್ಭೇ(ಷು) ಭವಃ। ಕಬನ್ಧೀ ನಾಮತಃ, ಕಾತ್ಯಸ್ಯ ಅಪತ್ಯಂ ಕಾತ್ಯಾಯನಃ ವಿದ್ಯಮಾನಃ ಪ್ರಪಿತಾಮಹೋ ಯಸ್ಯ ಸಃ। ಯುವಪ್ರತ್ಯಯಃ। ತೇ ಹ ಏತೇ ಬ್ರಹ್ಮಪರಾಃ ಅಪರಂ ಬ್ರಹ್ಮ ಪರಶ್ಚೈನೇ ಗತಾಃ। ತದನಿಷ್ಠಾನನಿಷ್ಠಾಶ್ಚ ಬ್ರಹ್ಮನಿಷ್ಠಾ। ಪರಂ ಬ್ರಹ್ಮ ಅನ್ವೇಷಮಾಣಾಃ ಕಿಂ ತತ್ ಯನ್ನಿತ್ಯಂ ವಿಜ್ಞೇಯಮ್ ಇತಿ ತತ್ಪ್ರಾಪ್ತ್ಯರ್ಥಂ ಯಥಾಕಾಮಂ ಯತಿಷ್ಯಾಮಃ ಇತ್ಯೇವಂ ತದನ್ವೇಷಣಂ ಕುರ್ವನ್ತಃ। ತದಧಿಗಮಾಯ ಏಷ ಹ ವೈ ತತ್ ಸರ್ವಂ ವಕ್ಷ್ಯತಿ ಇತಿ ಆಚಾರ್ಯಮ್ ಉಪಜಗ್ಮುಃ। ಕಥಮ್? ತೇ ಹ ಸಮಿತ್ಪಾಣಯಃ ಸಮಿದ್ಭಾರಗೃಹೀತಹಸ್ತಾಃ ಸನ್ತಃ ಭಗವನ್ತಂ ಪೂಜಾವನ್ತಂ ಪಿಪ್ಪಲಾದಮ್ ಆಚಾರ್ಯಮ್ ಉಪಸನ್ನಾಃ ಉಪಜಗ್ಮುಃ ॥

(ಶಾಂಕರ್ಭಾಷ್ಯ)

('ಸುಕೇಶಭಾರದ್ವಾಜನು' ಎಂಬಲ್ಲಿ) ಸುಕೇಶನೆಂಬುದು ಹೆಸರು, ಭರದ್ವಾಜನ ಮಗನಾದ್ದರಿಂದ ಭಾರದ್ವಾಜನು (ಎಂದು ಕರೆದಿದೆ).[2] (ಹೀಗೆಯೇ) ಶೈಬ್ಯ (ಸತ್ಯಕಾಮ)ನೂ ಎಂಬಲ್ಲಿ ಶಿಬಿಯ ಮಗನಾದ್ದರಿಂದ ಶೈಬ್ಯನು; ಸತ್ಯಕಾಮನೆಂಬುದು ಹೆಸರು. ಸೌರ್ಯಾಯಣಿ (ಗಾರ್ಗ್ಯನೂ ಎಂಬಲ್ಲಿ ಸೂರ್ಯನ ಮಗನು ಸೌರ್ಯನು; ಅವನ ಮಗನು ಸೌರ್ಯಾಯಣಿಯು; ('ಸೌರ್ಯಾಯಣಿ' ಎಂಬುದಕ್ಕೆ ಬದಲು) ಸೌರ್ಯಾಯಣೀ ಎಂದು (ಉಪನಿಷತ್ತಿನಲ್ಲಿ ಪ್ರಯೋಗಿಸಿರುವದು) ವೈದಿಕರೂಪವು. ಗಾರ್ಗ್ಯನು ಎಂದರೆ ಗರ್ಗಗೋತ್ರದಲ್ಲಿ ಹುಟ್ಟಿದವನು. (ಕೌಸಲ್ಯ ಆಶ್ವಲಾಯನನೂ ಎಂಬಲ್ಲಿ) ಕೌಸಲ್ಯನೆಂಬುದು ಹೆಸರು; (ಇವನು) ಆಶ್ವಲಾಯನನು ಎಂದರೆ ಅಶ್ವಲನ ಮಗನು. ('ಭಾರ್ಗವ ವೈದರ್ಭಿಯು' ಎಂಬಲ್ಲಿ) ಭಾರ್ಗವನು ಎಂದರೆ ಭೃಗುವಿನ ಗೋತ್ರದಲ್ಲಿ ಹುಟ್ಟಿದವನು; (ಇವನು) ವೈದರ್ಭಿಯು ಎಂದರೆ ವಿದರ್ಭದೇಶದಲ್ಲಿರುವವನು. ('ಕಬಂಧಿಕಾತ್ಯಾಯನನೂ' ಎಂಬಲ್ಲಿ) ಕಬಂಧಿ ಎಂಬುದು ಹೆಸರು; (ಇವನು) ಕಾತ್ಯನ ಮಗನಾದ್ದರಿಂದ ಕಾತ್ಯಾಯನನು. (ಇವನೆ) ಮುಕ್ತಜ್ಞನು ಬದುಕಿ

1. "ಭಾನ್ವಸಮ್" ವಾ॥ ಬಾತೆ.

2. 'ಭಾರದ್ವಾಜ' ಮುಂತಾದ ಶಬ್ದಗಳಲ್ಲಿ ಸೇರಿಕೊಂಡಿರುವ ಅಪತ್ಯ (ಮಗ ಎಂಬರ್ಥದ) ತದ್ಧಿತಪ್ರತ್ಯಯಗಳನ್ನು ಇಲ್ಲಿ ವ್ಯಾಕರಣರೀತಿಯಿಂದ ವಿವರಿಸಿದೆ.

(ದ್ದಾನೆಂಬುದನ್ನು ಸೂಚಿಸುವದಕ್ಕೆ) ಯುವಪ್ರತ್ಯಯವು[1] ಬಂದಿರುತ್ತದೆ.

ಆ ಇವರು (ಆರು ಜನವೂ) ಬ್ರಹ್ಮಪರರಾಗಿ ಎಂದರೆ ಅಪರಬ್ರಹ್ಮವು (ಎಲ್ಲಕ್ಕೂ) ಹೆಚ್ಚಿನದೆಂಬ (ಬುದ್ಧಿಯುಳ್ಳ)ವರಾಗಿ, ಬ್ರಹ್ಮನಿಷ್ಠರಾಗಿದ್ದರು ಎಂದರೆ ಅದರ ಅನುಷ್ಠಾನದಲ್ಲಿಯೇ[2] ತಾತ್ಪರ್ಯವುಳ್ಳವರಾಗಿದ್ದರು. ಪರಬ್ರಹ್ಮವನ್ನು ಹುಡುಕಿಕೊಂಡು ಯಾವದು ನಿತ್ಯವೂ ವಿಜ್ಞೇಯವಾಗಿರುವದೋ[3] ಅದು ಯಾವದು? ಎಂದು ಅದನ್ನು ಪಡೆದುಕೊಳ್ಳುವದಕ್ಕೋಸ್ಕರ ತಮ್ಮತಮ್ಮ ಕೈಯ್ಯಲ್ಲಾದಷ್ಟುನುಟ್ಟಿಗೆ ಪ್ರಯತ್ನಮಾಡೋಣ ಎಂದೀ ಪರಿಯಲ್ಲಿ ಅದನ್ನು ಆರಿಸಿಕೊಂಡು ಅದನ್ನು ತಿಳಿಯುವದಕ್ಕೋಸ್ಕರ 'ಈತನೇ ಅದೆಲ್ಲವನ್ನೂ ಹೇಳುವನು' ಎಂದು ಆಚಾರ್ಯನಬಳಿಗೆ ಬಂದರು.[4] ಹೇಗೆ (ಬಂದರು)? ಎಂದರೆ ಅವರು ಸಮಿತ್ಪಾಣಿಗಳಾಗಿ ಕೈಯ್ಯಲ್ಲಿ ಸಮಿತ್ತಿನ ಕಟ್ಟನ್ನು ಹಿಡಿದುಕೊಂಡು ಭಗವಂತನಾದ ಗೌರವಕ್ಕೆ ಯೋಗ್ಯನಾದ ಪಿಪ್ಪಲಾದನೆಂಬ ಆಚಾರ್ಯನ ಬಳಿಗೆ ಬಂದರು. (ಅತನ ಶಿಷ್ಯರಾಗಿ) ಬಳಿಸಾರಿದರು.

ತಾನ್ ಹ ಸ ಋಷಿರುವಾಚ ಭೂಯ ಏವ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ಸಂವತ್ಸರಂ ಸಂವತ್ಸ್ಯಥ ಯಥಾಕಾಮಂ ಪ್ರಶ್ನಾನ್ ಪೃಚ್ಛತ ಯದಿ ವಿಜ್ಞಾಸ್ಯಾಮಃ ಸರ್ವಂ ಹ ವೋ ವಕ್ಷ್ಯಾಮಿ ಇತಿ ॥೨॥

೨. ಆ ಋಷಿಯು ಅವರನ್ನು ಕುರಿತು 'ಮತ್ತೂ ಒಂದು ವರ್ಷ ತಪಸ್ಸಿನಿಂದ, ಬ್ರಹ್ಮಚರ್ಯೆಯಿಂದ, ಶ್ರದ್ಧೆಯಿಂದ ಕೂಡಿ ಸಂವಾಸ ಮಾಡಿಕೊಂಡಿರಿ. (ಆಮೇಲೆ ನಿಮಗೆ) ಇಚ್ಛೆಯಿರುವಂತೆ ಪ್ರಶ್ನೆಗಳನ್ನು ಕೇಳಿರಿ. (ನಮಗೆ) ತಿಳಿಯುವದಾದರೆ ಎಲ್ಲವನ್ನೂ ನಿಮಗೆ ಹೇಳುವೆವು' ಎಂದು ನುಡಿದನು.

---

1. ಕಶ್ಯನಗೋತ್ರದಲ್ಲಿ ಹುಟ್ಟಿದವನು ಕಾತ್ಯನು, ಅವನ ಮಗನು ಕಾತ್ಯಾಯನನು. ತಂದೆ ಮುಂತಾದವರು ಬದುಕಿರುವ 'ಮರಿಮಗ' ಮೊದಲಾದ ಅರ್ಥವನ್ನು ಸೂಚಿಸುವ ಪ್ರತ್ಯಯಕ್ಕೆ ಯುವಪ್ರತ್ಯಯವೆಂದು ಹೆಸರು. 'ಕಶ್ಯ' ಎಂಬುದು "ಕಾತ್ಯ" ಎಂಬುದರ ಬದಲು ಲೇಖಕರ ಕೈತಪ್ಪಿನಿಂದ ಬಿದ್ದಿರಬಹುದೆಂದು ತೋರುತ್ತದೆ.

2. ಉಪಾಸನೆಯಲ್ಲಿಯೇ ನಿರತರಾಗಿದ್ದರು.

3. ಪರಮಾತ್ಮತತ್ತ್ವವು ಯಾವಾಗಲೂ ಜ್ಞೇಯವು; ಏಕೆಂದರೆ ಅದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತುಕೊಂಡಂತೆ ಆಗುವದು. ಮುಂ. ಭಾ. ೧–೧–೩ ಶ್ವೇ. ೧–೧೩.

4. ಗುರುವಿನ ಬಳಿಗೇ ಶಿಷ್ಯನಾಗಿ ಬಂದು ತತ್ತ್ವವನ್ನು ತಿಳಿದುಕೊಳ್ಳಬೇಕೆಂಬ ಮುಂಡಕದ ಸೂಚನೆ. ಮುಂ. ಭಾ. ೧–೧–೩, ೧–೨–೧೨ನ್ನು ನೋಡಿ.

(ಭಾಷ್ಯ)

೩. ತಾನ್ ಏವಮುಪಗತಾನ್ ಹ ಸ ಕೇಲ ಋಷಿಃ ಉವಾಚ | ಭೂಯಃ ಪ್ರನೇವ ಯದ್ಯಪಿ ಯೂಯಂ ಪೂರ್ವಂ ತಪಸ್ವಿನ ಏವ ತಥಾಪಿ ಇಹ ತಪಸಾ ಇನ್ದ್ರಿಯಸಂಯಮೇನ[1] ವಿಶೇಷತಃ ಬ್ರಹ್ಮಚರ್ಯೇಣ ಶ್ರದ್ಧಯಾ ಚ ಆಸ್ತಿಕ್ಯ ಬುದ್ಧ್ಯಾ ಚ ಆದರವನ್ತಃ ಸಂವತ್ಸರಂ ಕಾಲಂ ಸಂವತ್ಸ್ಯತ ಸಮ್ಯಗ್ ಗುರು ಶುಶ್ರೂಷಾ ಪರಾಃ ಸನ್ತಃ ವತ್ಸ್ಯತ | ತತಃ ಯಥಾಕಾಮಂ ಯೋ ಯಸ್ಯ ಕಾಮಃ ತಮ್ ಅನತಿಕ್ರಮ್ಯ ಯದ್ವಿಷಯೇ ಯಸ್ಯ ಜಿಜ್ಞಾಸಾ ತದ್ವಿಷಯಾನ್ ಪ್ರಶ್ನಾನ್ ಪೃಚ್ಛತ | ಯದಿ ಯುಷ್ಮತ್ಪೃಷ್ಟಂ ವಿಜ್ಞಾಸ್ಯಾಮಃ | ಅನುದ್ಧತತ್ವ ಪ್ರದರ್ಶನಾರ್ಥೋ ಯದಿ ಶಬ್ದಃ ನಾಜ್ಞಾನಸಂಶಯಾರ್ಥಃ (ಇತಿ) ಪ್ರಶ್ನನಿರ್ಣಯಾತ್ ಆಪಸೀಯತೇ | ಸರ್ವಂ ಹ ವಃ, ವಃ ಪೃಷ್ಟಂ ವಕ್ಷ್ಯಾಮಃ ||

(ಭಾಷ್ಯಾರ್ಥ)

ಈ ರೀತಿಯಲ್ಲಿ (ತನ್ನ) ಬಳಿಗೆ ಬಂದ ಅವರನ್ನು ಕುರಿತು ಆ ಋಷಿಯು ನುಡಿದದ್ದೇನೆಂದರೆ : ನೀವು ಮೊದಲೇ ತಪಸ್ವಿಗಳೇ ಆಗಿದ್ದವರು ; ಆ ದರೂ ಮತ್ತೊಮ್ಮೆ[2] ಇನ್ನೂ ಒಂದುಸಲ ಇದಕ್ಕಾಗಿ ಇಂದ್ರಿಯಗಳನ್ನು ತಡೆದುಕೊಳ್ಳುವದೆಂಬ ತಪಸ್ಸಿನಿಂದಲೂ ವಿಶೇಷವಾಗಿ[3] ಬ್ರಹ್ಮಚರ್ಯದಿಂದಲೂ ಶ್ರದ್ಧೆಯಿಂದಲೂ ಎಂದರೆ ಆಸ್ತಿಕ್ಯಬುದ್ಧಿಯಿಂದಲೂ ಕೂಡಿ ಆದರವುಳ್ಳವರಾಗಿ, (ಒಂದು) ವರ್ಷಕಾಲದವರೆಗೆ ಸಂವಾಸಮಾಡಿಕೊಂಡಿರಿ, ('ಸಂ') ಚೆನ್ನಾಗಿ ಗುರುಶುಷ್ರೂಷೆಯಲ್ಲಿಯೇ ತತ್ಪರರಾಗಿ ಇದ್ದುಕೊಂಡಿರಿ. ಆಮೇಲೆ ಇಚ್ಛೆಯಿರುವಂತೆ, ಯಾವನಿಗೆ ಯಾವ ಇಚ್ಛೆಯಿದೆಯೋ ಅದಕ್ಕೆ ತಕ್ಕಂತೆ, ಯಾವನಿಗೆ ಯಾವ ವಿಷಯದಲ್ಲಿ ತಿಳಿಯಬೇಕೆಂಬ ಇಚ್ಛೆಯುಂಟಾಗುವದೋ ಆಯಾ ವಿಷಯದ ಪ್ರಶ್ನೆಗಳನ್ನು ಕೇಳಿರಿ[4]. ಆ ನೀವು ಕೇಳಿದ್ದು ನಮಗೆ ತಿಳಿಯುವದಾದರೆ ; (ಇಲ್ಲಿ ತಿಳಿಯುವ

1. "ತಪಸಾ ಇನ್ದ್ರಿಯಸಂಯಮೇನ" ಎಂಬ ಮಾತುಗಳನ್ನು "ತಥಾಪಿ" ಎಂಬ ಮಾತಿನ ಹಿಂದೆ ಇಟ್ಟರುವ ಆ॥ ಪಾಠಕ್ಕಿಂತ ಈಗ ನಾವು ಒಪ್ಪಿರುವ ವಾ॥ ಪಾಠವೇ ಉತ್ತಮ.

2. ಮುತ್ತೊಮ್ಮೆ ತಪಸ್ಸುಮಾಡಬೇಕೆಂದಿರುವವರಿಂದ ಹಿಂದೆ ಮಾಡಿರುವ ನಿರಾಹಾರವೇ ಮುಂತಾದ ತಪಸ್ಸಲ್ಲದೆ ಇಂದ್ರಿಯಗಳ ಮತ್ತು ಮನಸ್ಸಿನ ಏಕಾಗ್ರತೆಯೆಂಬ ತಪಸ್ಸೂ ಈ ಜ್ಞಾನಕ್ಕೆ ಅವಶ್ಯವೆಂದು ಸೂಚಿಸಿದಂತೆ ಆಯಿತೆಂದು ಭಾವ.

3. ಇಂದ್ರಿಯಜಯವು ಸಾಮಾನ್ಯರೂಪವಾಗಿ ಹೇಳಿದ್ದು, ಬ್ರಹ್ಮಚರ್ಯವು ವಿಶೇಷರೂಪವಾಗಿ ಹೇಳಿದ್ದು.

4. ಮುಂ. ಭಾ. ೧–೩–೧೨, ಗೀ. ಭಾ. ೪–೩೪, ೪–೩೯. ಗುರುವಿನ ಬಳಿಯಲ್ಲಿ ಬ್ರಹ್ಮಚರ್ಯಯಿಂದ ದೀರ್ಘಕಾಲ ಆದರದಿಂದ ಸೇವೆಮಾಡುತ್ತಿದ್ದು ಬಳಿಕ ಕೇಳುವ ಪ್ರಶ್ನೆಗಳಿಗೆ ಬೆಲೆ ಹೆಚ್ಚು.

ನಾದರೆ) ಎಂದು ಯದಿ (ರೆ) ಎಂಬ ಶಬ್ದವನ್ನು(ಪಯೋಗಿಸಿರುವದು) ತನಗೆ ಗರ್ವವಿಲ್ಲವೆಂಬುದನ್ನು ತೋರಿಸುವದಕ್ಕೇ ಹೊರತು (ತನಗೆ ವಿಷಯವು) ತಿಳಿಯದೆಂದಾಗಲಿ (ಆ ವಿಷಯದಲ್ಲಿ ತನಗೆ) ಸಂಶಯವುಂಟೆಂದಾಗಲಿ ತಿಳಿಸುವದಕ್ಕಲ್ಲ[1]— ಎಂಬುದು ಪ್ರಶ್ನೆಗಳಿಗೆ ಉತ್ತರವನ್ನು ಗೊತ್ತಾಗಿ ಹೇಳಿರುವದರಿಂದ[2] ನಿಶ್ಚಯವಾಗುತ್ತದೆ. (ತಿಳಿಯುವದಾದರೆ) ನೀವು ಕೇಳುವದೆಲ್ಲವನ್ನೂ ನಿಮಗೆ ಹೇಳುವೆವು.

ಕಬಂಧಿಯ ಪ್ರಶ್ನೆ : ಪ್ರಜೆಗಳು ಏತರಿಂದ ಹುಟ್ಟುತ್ತಾರೆ ?

ಅಥ ಕಬನ್ಧೀ ಕಾತ್ಯಾಯನಃ ಉಪೇತ್ಯ ಪಪ್ರಚ್ಛ ।
ಭಗವನ್ ಕುತೋ ಹ ವಾ ಇಮಾಃ ಪ್ರಜಾಃ ಪ್ರಜಾಯನ್ತೇ ಇತಿ ॥೩॥

೩. ಆಮೇಲೆ ಕಬಂಧಿಕಾತ್ಯಾಯನನು ಸಮೀಪಕ್ಕೆ ಬಂದು ಕೇಳಿದನೇನೆಂದರೆ : ಭಗವತಂನೆ, ಈ ಪ್ರಜೆಗಳು ಎಲ್ಲಿಂದ ಹುಟ್ಟುತ್ತಾರೆ ?

(ಭಾಷ್ಯ)

೪. ಅಥ ಸಂವತ್ಸರಾದೂರ್ಧ್ವಂ ಕಬನ್ಧೀ ಕಾತ್ಯಾಯನಃ ಉಪೇತ್ಯ ಉಪಗಮ್ಯ ಪಪ್ರಚ್ಛ ಪೃಷ್ಟವಾನ್ । ಹೇ ಭಗವನ್ ಕುತಃ ಕಸ್ಮಾತ್ ಹ ವೈ ಇಮಾಃ ಬ್ರಾಹ್ಮಣಾದ್ಯಾಃ ಪ್ರಜಾಃ ಪ್ರಜಾಯನ್ತೇ ಉತ್ಪದ್ಯನ್ತೇ ಇತಿ[3] । ಅಪರವಿದ್ಯಾ ಕರ್ಮಣೋಃ ಸಮುಚ್ಚಿತಯೋಃ ಯತ್ಕಾರ್ಯಂ ಯಾ ಗತಿಃ ತದ್ ವಕ್ತವ್ಯಮಿತಿ ತದರ್ಥೋಽಯಂ ಪ್ರಶ್ನಃ ॥

(ಭಾಷ್ಯಾರ್ಥ)

ಆಮೇಲೆ (ಒಂದೆ) ವರ್ಷವಾದ ಬಳಿಕ ಕಬಂಧಿಕಾತ್ಯಾಯನನು ಸಮೀಪಕ್ಕೆ ಬಂದು (ಗುರುವಿನ) ಬಳಿಗೆ ಬಂದು ಕೇಳಿದನು, (ಹೀಗೆ) ಪ್ರಶ್ನೆಮಾಡಿದನು- ಎಲೈ ಭಗವಂತನೆ, ಎಲ್ಲಿಂದ, ಯಾವಲ್ಲಿಂದ ಈ ಬ್ರಾಹ್ಮಣರೇ ಮುಂತಾದ ಪ್ರಜೆಗಳು[4] ಹುಟ್ಟುತ್ತಾರೆ, ಉಂಟಾಗುತ್ತಾರೆ ?

---

1. ತಾನೇ ತಿಳಿಯದವನು ಅಥವಾ ಸಂಶಯವಿರುವವನು ಮತ್ತೊಬ್ಬರಿಗೆ ವಿಷಯವನ್ನು ತಿಳಿಸಲಾರನು.

2. ಪಿಪ್ಪಲಾದನು ಶಿಷ್ಯರ ಪ್ರಶ್ನೆಗಳಿಗೆಲ್ಲ ಉತ್ತರವನ್ನು ಹೇಳಿ "ಇದಕ್ಕಿಂತ ಹೆಚ್ಚಿನದು ಯಾವದೂ ಇಲ್ಲ" (೬-೭) ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಆದ್ದರಿಂದ 'ತಿಳಿಯುವದಾದರೆ' ಎಂಬುದು ಅನಹಂಕಾರವನ್ನು ಸೂಚಿಸುತ್ತದೆಯೇ ಹೊರತು ಅಜ್ಞಾನವನ್ನಲ್ಲ.

3. ಇತಿ ಎಂಬ ಮಾತು ಆ॥ ಪಾಠದಲ್ಲಿಲ್ಲ, ವಾ॥ ಪಾಠದಲ್ಲಿದೆ.

4. ಕರ್ಮದ ಫಲವನ್ನು ವಿಚಾರಮಾಡುವದಕ್ಕೆ ಹೊರಟಿರುವದರಿಂದ 'ಈ ಪ್ರಜೆಗಳು' ಎಂಬ ಸಾಮಾನ್ಯವಾಚಕಶಬ್ದಕ್ಕೆ ಈ ಬ್ರಾಹ್ಮಣಾದಿಗಳು ಎಂದು ವಿಶೇಷಾರ್ಥವನ್ನು ಮಾಡಿರುತ್ತದೆ.

ಅಪರವಿದ್ಯೆ ಮತ್ತು ಕರ್ಮ– ಇವೆರಡರ ಸಮುಚ್ಚಯದಿಂದ ಆಗುವ ಕಾರ್ಯವು ಯಾವದು, ಗತಿಯು ಯಾವದು –ಎಂಬುದನ್ನು ಹೇಳಬೇಕು ಎಂದು ಈ ಪ್ರಶ್ನೆಯು[1] (ಪ್ರಾರಂಭವಾಗಿರುತ್ತದೆ).

ಪ್ರಜಾಪತಿಯಿಂದ ರಯಿಪ್ರಾಣರ ಸೃಷ್ಟಿ

ತಸ್ಮೈ ಸ ಹೋವಾಚ ಪ್ರಜಾಕಾಮೋ ವೈ ಪ್ರಜಾಪತಿಃ ಸ ತಪೋಽತಪ್ಯತ ಸ ತಪಸ್ತಪ್ತ್ವಾ ಸ ಮಿಥುನಮುತ್ಪಾದಯತೇ | ರಯಿಂ ಚ ಪ್ರಾಣಂ ಚೇತ್ಯೇತೌ ಮೇ ಬಹುಧಾ ಪ್ರಜಾಃ ಕರಿಷ್ಯತ ಇತಿ ॥ ೪ ॥

೪. ಅವನಿಗೆ ಅತನು ಹೇಳಿದನೇನೆಂದರೆ : ಪ್ರಜಾಕಾಮನಾದ ಪ್ರಜಾಪತಿಯು ತಪಸ್ಸು ಮಾಡಿದನು. ಅವನು ತಪಸ್ಸುಮಾಡಿ(ದ ಬಳಿಕ) ರಯಿ, ಪ್ರಾಣ– ಎಂಬ (ಒಂದು) ಮಿಥುನವನ್ನು "ಇವು ನನಗೆ ಬಹುವಾಗಿ ಪ್ರಜೆಗಳನ್ನು ಮಾಡುವವು" ಎಂದು ಉಂಟು ಮಾಡಿದನು.

(ಭಾಷ್ಯ)

೫. ತಸ್ಮೈ ಏವಂ ಪೈಪ್ಪಲಾದೇ ಸ ಹ ಉವಾಚ ತದಪಾಕರಣಾಯ ಅಹ | ಪ್ರಜಾಕಾಮಃ ಪ್ರಜಾಃ ಆತ್ಮನಃ ಸಿಸೃಕ್ಷುಃ ವೈ ಪ್ರಜಾಪತಿಃ ಸರ್ವಾತ್ಮಾ ಸನ್ ಜಗತ್ ಸ್ರಕ್ಷ್ಯಾಮಿ ಇತಿ ಏವಂ ವಿಜ್ಞಾನವಾನ್ ಯಥೋಕ್ತಕಾರೀ ತದ್ಭಾವಭಾವಿತಃ ಕಲ್ಪಾದೌ ನಿರ್ವರ್ತ್ತೋ ಹಿರಣ್ಯಗರ್ಭಃ ಸೃಜ್ಯಮಾನಾನಾಂ ಪ್ರಜಾನಾಂ ಸ್ಥಾವರಜಙ್ಗಮಾನಾಂ ಪತಿಃ ಸನ್ ಜನ್ಮಾನ್ತರಭಾವಿತಂ ಜ್ಞಾನಂ ಶ್ರುತಿಪ್ರಕಾಶಿತಾರ್ಥವಿಷಯಂ ತಪಃ ಅನ್ವಾಲೋಚಯತ್ ಅತಪ್ಯತ | ಅಥ ತು ಸಃ ಏವಂ ತಪಃ ತಪ್ತ್ವಾ ಶ್ರೌತಂ ಜ್ಞಾನಮ್ ಅನ್ವಾಲೋಚ್ಯ ಸೃಷ್ಟಿಸಾಧನಭೂತಂ ಮಿಥುನಮ್ ಉತ್ಪಾದಯತೇ ಮಿಥುನಂ ದ್ವನ್ದ್ವಮ್ ಉತ್ಪಾದಿತವಾನ್ ರಯಿಂ ಚ ಸೋಮಮ್ ಅನ್ನಮ್, ಪ್ರಾಣಂ ಚ ಅಗ್ನಿಮ್ ಅತ್ತಾರಮ್

---

1. ಕರ್ಮವನ್ನೂ ಉಪಾಸನೆಯನ್ನೂ ಸೇರಿಸಿ ಅನುಷ್ಠಾನಮಾಡುವವರಿಂದ. ಇದು ಬ್ರಹ್ಮನಿಷ್ಠನಾದ ಕಬಂಧಿಗೆ ತಿಳಿದೇ ಇರುವ ವಿಷಯವಾದರೂ ತನಗೆ ತಿಳಿದಿರುವದಕ್ಕಿಂತ ಹೆಚ್ಚಿನ ಫಲವೇನಾದರೂ ಇದೆಯೋ ಎಂದು ತಿಳಿದುಕೊಳ್ಳುವದಕ್ಕಾಗಿ ಕೇಳಿರುತ್ತಾನೆ. ಮುಂಡಕದಲ್ಲಿ ಪರವಿದ್ಯೆಯ ಪ್ರಶ್ನೆಗೆ ಉತ್ತರವನ್ನು ಹೇಳುವ ಪ್ರಸಂಗದಲ್ಲಿ ಅಪರವಿದ್ಯೆಯನ್ನು ಹೇಳಿರುವಂತೆ ಇಲ್ಲಿಯೂ ಹೇಳಿದೆ. ಅಪರವಿದ್ಯೆಯ ಫಲದಲ್ಲಿ ವಿರಕ್ತನಾದವನಿಗೇ ಪರವಿದ್ಯೆಯಲ್ಲಿ ಅಧಿಕಾರವೆಂಬುದನ್ನು ತಿಳಿಸುವದಕ್ಕೆ ಹೀಗೆ ಮಾಡಿದೆ.

2. ಪ್ರಶ್ನೋತ್ತರಗಳಿಂದ ಕೂಡಿದ ಅಧ್ಯಾಯವನ್ನು ಇಲ್ಲಿ " ಪ್ರಶ್ನೆ " ಎಂದು ಕರೆದಿದೆ.

ಇತಿ[1] | ಏತೌ ಅಗ್ನಿಸೋಮೌ ಅತ್ಯನ್ನಧೂತೌ ಮೇ ಮಮ ಬಹುಧಾ ಅನೇಕಧಾ ಪ್ರಜಾಃ ಕರಿಷ್ಯತ ಇತಿ ಏವಂ ಸಂಚಿಸ್ಯ ಅನ್ನೋತ್ಪತ್ತಿಕ್ರಮೇಣ ಸೂಯ್ಯಾಚನ್ದ್ರಮಸೌ ಅಕಲ್ಪಯತ್ ॥

(ಭಾಷ್ಯಾರ್ಥ)

ಹೀಗೆ ಕೇಳಿದ ಆವನಿಗೆ ಆ (ಪಿಪ್ಪಲಾದನು) ಆ (ಪ್ರಶ್ನೆಗೆ) ಉತ್ತರವನ್ನು ಹೇಳುವದಕ್ಕೆಂದು ಹೇಳದನೇನೆಂದರೆ; ಪ್ರಜಾಕಾಮನಾದ, ತನ್ನಿಂದ ಪ್ರಜೆಗಳನ್ನು ಸೃಷ್ಟಿಮಾಡಬೇಕೆಂಬ ಇಚ್ಛೆಯುಳ್ಳ ಪ್ರಜಾಪತಿಯು "ಸರ್ವಾತ್ಮನಾಗಿ ಜಗತ್ತನ್ನು ಸೃಷ್ಟಿಮಾಡುವೆನು" ಎಂಬ ಭಾವನೆಯಿಂದ (ಶಾಸ್ತ್ರದಲ್ಲಿ) ಹೇಳಿದಂತೆ (ಕರ್ಮವನ್ನು ಮಾಡಿ) ಆದೇ ಭಾವನೆಯೀಂದ ಕೂಡಿದವನಾಗಿ ಕಲ್ಪಾದಿಯಲ್ಲಿ ಆಗಿರುವ ಹಿರಣ್ಯಗರ್ಭನೆ.[2] (ಅವನು) ಮುಂದೆ ಸೃಷ್ಟಿಯಾಗಬೇಕಾಗಿರುವ ಪ್ರಜೆಗಳ, ಎಂದರೆ ಸ್ಥಾವರಜಂಗಮಗಳ ಪತಿಯಾಗಿ ಶ್ರುತಿಯಲ್ಲಿ ತಿಳಿಸಿದ ವಿಷಯವಾಗಿ (ತಾನು) ಜನ್ಮಾಂತರದಲ್ಲಿ ಭಾವಿಸಿಕೊಂಡ ಜ್ಞಾನವೆಂಬ ತಪಸ್ಸನ್ನು ಮಾಡಿದನು, ಎಂದರೆ (ಅದನ್ನು) ಆಲೋಚನೆಗೆ ತಂದುಕೊಂಡನು.[3]

ಬಳಿಕ ಅವನು ಹೀಗೆ ತಪಸ್ಸನ್ನು ಮಾಡಿ ಎಂದರೆ ಶ್ರೌತವಿಜ್ಞಾನವನ್ನು ಆಲೋಚನೆಗೆ ತಂದುಕೊಂಡು[4] ಸೃಷ್ಟಿಗೆ ಸಾಧನವಾದ ಒಂದು ಮಿಥುನವನ್ನು ಎಂದರೆ ಜೋಡಿಯನ್ನು ಉಂಟುಮಾಡಿದನು. ರಯಿಯೆನ್ನು ಎಂದರೆ ಅನ್ನರೂಪವಾಗಿರುವ ಸೋಮವನ್ನೂ ಮತ್ತು ಪ್ರಾಣವನ್ನೂ ಎಂದರೆ (ಆ ಅನ್ನವನ್ನು ಉಣ್ಣುವ ಅಗ್ನಿಯನ್ನೂ ಎಂದು ಹೀಗೆ ಒಂದು ಜೋಡಿಯನ್ನೂ ಸೃಷ್ಟಿಸಿದನು). ಅನ್ನಾದ, ಅನ್ನ- ಎಂಬ ರೂಪದಲ್ಲಿರುವ ಈ ಅಗ್ನಿಯೂ ಸೋಮವೂ ನನಗೆ ಬಹುವಿಧವಾಗಿ ಅನೇಕವಿಧವಾಗಿ ಪ್ರಜೆಗಳನ್ನು ಉಂಟು

1. ಈ ಮಾತು ಆ॥ ಪಾಠದಲ್ಲಿಲ್ಲ.

೨. ಹಿಂದಿನ ಕಲ್ಪದಲ್ಲಿ ಯಾವನಿಗೆ ನಾನು ಪ್ರಜಾಪತಿಯಾಗಬೇಕು ಎಂಬ ಉತ್ಕಟೇಚ್ಛೆಯಿದ್ದಿತೋ ಅವನು ಮಾಡಿದ ಕರ್ಮೋಪಾಸನೆಗಳ ಫಲವಾಗಿ ಹಿರಣ್ಯಗರ್ಭಭಾವನೆಯಿಂದ ಶರೀರವನ್ನು ಬಿಟ್ಟು ಈ ಕಲ್ಪದಲ್ಲಿ ಹಿರಣ್ಯಗರ್ಭನಾಗಿರುವನು. (ಗೀ. ೮-೯). ಈ ಕಲ್ಪದಲ್ಲಿ ಸೃಷ್ಟಿಯಾಗುವ ಪ್ರಜೆಗಳ ಒಡೆಯನಾದ್ದರಿಂದ ಅವನಿಗೆ ಪ್ರಜಾಪತಿ ಎಂದುಹೆಸರು

3. ಈಗ ನಾನು ಸೃಷ್ಟಿಸಬೇಕು ಎಂದು ಸಂಕಲ್ಪಿಸಿದನು. ಹಿಂದಿನ ಜನ್ಮದ ಅನುಷ್ಠಾನದ ಫಲವೇ ಈ ಸಂಕಲ್ಪವು.

4. ಶ್ರುತಿಯುಲ್ಲಿ ಹೇಳಿದಂತೆ ಸೃಷ್ಟಿಸಬೇಕೆಂದು ಸಂಕಲ್ಪಿಸಿ. " ಸ ತಪಸ್ತಪ್ತ್ವಾ " ಎಂಬ ಮಾತು ಉಪನಿಷತ್ತಿಗೆ ಸೇರಿದ್ದಲ್ಲವೆಂಬಂತೆ ಶಂಕರಾನಂದರೇ ಮುಂತಾದವರು ವ್ಯಾಖ್ಯಾನಮಾಡಿದ್ದಾರೆ. ಭಾಷ್ಯದ ಪ್ರಕಾರ ಇದೂ ಸೇರಿದೆ.

ಮಾಡುವವು ಎಂದು ಆಲೋಚಿಸಿಕೊಂಡು ಅಂಡೋತ್ಪತ್ತಿಕ್ರಮದಿಂದ[1] ಸೂರ್ಯನನ್ನೂ ಚಂದ್ರನನ್ನೂ ಸೃಷ್ಟಿಸಿದನು[2].

ರಯಿ ಮತ್ತು ಪ್ರಾಣ ಎಂದರೆ ಯಾರು ?

ಆದಿತ್ಯೋ ಹ ವೈ ಪ್ರಾಣೋ ರಯಿರೇವ ಚನ್ದ್ರಮಾ ರಯಿರ್ವಾ ಏಕತ್ ಸರ್ವಂ ಯೆನ್ಮೂರ್ತಂ ಚಾಮೂರ್ತಂ ಚ ತಸ್ಮಾನ್ಮೂರ್ತಿ ರೇವ ರಯಿಃ ॥೫॥

೫. ಆದಿತ್ಯನೇ ಪ್ರಾಣವು, ಚಂದ್ರನೇ ರಯಿಯು. ಮೂರ್ತ, ಅಮೂರ್ತ–ಇದೆಲ್ಲವೂ ರಯಿಯೇ, ಅದಕ್ಕಿಂತ (ಬೇರೆಯಾಗಿರುವ) ಮೂರ್ತಿಯೇ ರಯಿ.

(ಭಾಷ್ಯ)

೬. ತತ್ರ ಆದಿತ್ಯೋ ಹ ವೈ ಪ್ರಾಣಃ ಅತ್ತಾ ಅಗ್ನಿಃ | ರಯಿರೇವ ಚನ್ದ್ರಮಾಃ | ರಯಿರೇವ ಅನ್ನಂ ಸೋಮ ಏವ | ತದೇತತ್ ಏಕಮ್ ಅತ್ತಾ ಚಾನ್ನಂ ಚ ಪ್ರಜಾಪತಿಃ ಏಕಂ ತು ಮಿಥುನಮ್ | ಗುಣಪ್ರಧಾನಕೃತೋ ಭೇದಃ | ಕಥಮ್ ? ರಯಿರ್ವಾ ಅನ್ನಂ ವಾ ಏತತ್ ಸರ್ವಮ್ | ಕಿಂ ತತ್ ? ಯತ್ ಮೂರ್ತಂ ಚ ಸ್ಥೂಲಂ ಚ ಅಮೂರ್ತಂ ಚ ಸೂಕ್ಷ್ಮಂ ಚ | ಮೂರ್ತಾ ಮೂರ್ತೇ ಅತ್ರನ್ನರೂಪೇ ಅಪಿ[3] ರಯಿರೇವ | ತಸ್ಮಾತ್ ಪ್ರವಿಭಕ್ತಾತ್ ಅಮೂರ್ತಾತ್ ಯದನ್ಯತ್ ಮೂರ್ತರೂಪಂ ಮೂರ್ತಿಃ ಸೈವ ರಯಿಃ ಅನ್ನಮ್[4] | ಅಮೂರ್ತೇನ ಅತ್ತ್ರಾ[5] ಅದ್ಯಮಾನತ್ವಾತ್ ॥

1. ಬ್ರಹ್ಮಾಂಡನನ್ನು ಸೃಷ್ಟಿಸಿದ ಬಳಿಕ. ಮುಂ. ಭಾ. ೧–೧–೫, ಛಾಂ. ಭಾ. ೩–೧೯–೧.

2. ಪ್ರಾಣ, ಅಗ್ನಿ, ಸೂರ್ಯ ; ರಯಿ, ಸೋಮ, ಚಂದ್ರ– ಹೀಗೆ ಮೂರು ಮೂರೂ ಒಂದೊಂದಕ್ಕೇ ಹೆಸರು. ಅಗ್ನಿಯೆಂಬಾಗಿ ಪರಮಾತ್ಮನು ಎಲ್ಲವನ್ನೂ ಪ್ರಾಣಾಪಾನಗಳಿಂದ ತಿನ್ನುತ್ತಾನೆಂದು ಗೀತೆಯಲ್ಲಿ (೧೫–೧೪) ಹೇಳಿರುವುದನ್ನು ನೋಡಿರಿ. ಮುಂದೆ ಹೇಳಿರುವಂತೆ ಸೂರ್ಯಚಂದ್ರರೇ ಸೃಷ್ಟಿಗೆ ಕಾರಣರಾಗುವರು. ರಯಿ ಎಂದರೆ ಧನವೆಂದು ಅರ್ಥವಾದರೂ ಈ ಪ್ರಕರಣದಲ್ಲಿ ಭೋಜ್ಯವೆಂಬರ್ಥದಲ್ಲಿ ಆ ಶಬ್ದವು ಪ್ರಯೋಗಿಸಲ್ಪಟ್ಟಿರುವುದೆ.

3. "ಅಪಿ" ಎಂಬುದು ವಾ॥ ಪಾಠದಲ್ಲಿಲ್ಲ.

4. "ಅನ್ನಮ್" ಎಂಬ ಮೂಕು ವಾ॥ ಪಾಠದಲ್ಲಿ ಹೆಚ್ಚಾಗಿದೆ.

5. 'ಅತ್ತ್ರಾ' ಎಂಬುದು ವಾ॥ ಪಾಠದಲ್ಲಿ ಮಾತ್ರ ಇದೆ.

(ಭಾಷ್ಯಾರ್ಥ)

ಇವುಗಳಲ್ಲಿ ಆದಿತ್ಯನೇ ಪ್ರಾಣನು, ಎಂದರೆ ಅನ್ನಾದನಾದ ಅಗ್ನಿಯು. ರಯಿಯೇ ಚಂದ್ರನು, ರಯಿಯೇ ಅನ್ನವು, ಸೋಮನೇ[1]. ಹೀಗೆ ಅತ್ತೃ, ಅನ್ನ –ಎಂಬೆರಡೂ ಒಂದೇ, ಪ್ರಜಾಪತಿಯೇ, ಒಂದೇ ಈ ಜೋಡಿಯಾಗಿರುವದು. (ಇವೆರಡಕ್ಕೂ ಇರುವ) ಭೇದವು ಗುಣಪ್ರಧಾನದೃಷ್ಟಿಯಿಂದ.[2]

ಹೇಗೆಂದರೆ, ಇದೆಲ್ಲವೂ ರಯಿಯೇ, ಅನ್ನವೇ. (ಇದೆಲ್ಲವೂ ಎಂದರೆ) ಯಾವದು? ಎಂದರೆ ಯಾವದು ಮೂರ್ತವಾಗಿರುವದೋ ಸ್ಥೂಲವಾಗಿರುವದೋ ಮತ್ತು (ಯಾವದು) ಅಮೂರ್ತವಾಗಿ, ಸೂಕ್ಷ್ಮವಾಗಿ.[3] ಇರುವದೋ (ಆ) ಅತ್ತೃ, ಅನ್ನ– ಈ ರೂಪವಾಗಿರುವ ಮೂರ್ತ, ಅಮೂರ್ತ–(ಇವು) ಎರಡೂ ರಯಿಯೇ.[4] ಅದಕ್ಕಿಂತ ಎಂದರೆ (ಆ) ಬೇರೆಯಾಗಿರುವ ಅಮೂರ್ತಕ್ಕಿಂತ ಬೇರೆಯಾದ ಮೂರ್ತರೂಪವಿದೆಯಲ್ಲ, ಆ ಮೂರ್ತಿಯೇ ರಯಿಯು, ಅನ್ನವು. ಏಕೆಂದರೆ ಅದು ಅಮೂರ್ತದಿಂದ ತಿನ್ನಲ್ಪಡುತ್ತದೆ.

(ಭಾಷ್ಯ)

೭. ತಥಾ ಅಮೂರ್ತೋऽಪಿ ಪ್ರಾಣೋऽತ್ತಾ ಸರ್ವಮೇವ | ಯಚ್ಚಾದ್ಯಮ್ | ಕಥಮ್ ?

(ಭಾಷ್ಯಾರ್ಥ)

ಹೀಗೆಯೇ ಅಮೂರ್ತವಾದ ಅತ್ತೃವಾದ ಪ್ರಾಣನುಕೂಡ ಎಲ್ಲವೂ ಆಗಿರುತ್ತಾನೆ. ಯಾವದು ತಿನ್ನಲ್ಪಡತಕ್ಕದ್ದೋ (ಅದು ಕೂಡ ಪ್ರಾಣವೇ). ಹೇಗೆಂದರೆ :–

ಅಥಾದಿತ್ಯ ಉದಯನ್ ಯತ್ ಪ್ರಾಚೀಂ ದಿಶಂ ಪ್ರವಿಶತಿ ತೇನ ಪ್ರಾಚ್ಯಾನ್ ಪ್ರಾಣಾನ್ ರಶ್ಮಿಷು ಸಂನಿಧತ್ತೇ | ಯದ್ ದಕ್ಷಿಣಾಂ ಯತ್ ಪ್ರತೀಚೀಂ ಯದುದೀಚೀಂ ಯದಧೋ ಯದೂರ್ಧ್ವಂ

---

1. 'ರಯಿಯೇ ಚಂದ್ರನು' ಎಂಬ ವಾಕ್ಯವನ್ನು ಚಂದ್ರನೇ ರಯಿಯಲು ಎಂದು ತಿರುಗಿಸಿಕೊಳ್ಳಬೇಕು ಎಂದು ಭಾವ.

2. ಒಂದನ್ನು ಮುಖ್ಯವೆಂದು ಎಣಿಸಿ ಮತ್ತೊಂದನ್ನು ಅದರ ಅಧೀನವೆಂದು ಎಣಿಸುವದರಿಂದ ರಯಿಯು ಅಧೀನವಾದದ್ದು, ಪ್ರಾಣವು ಮುಖ್ಯವಾದದ್ದು –ಎಂಬ ಭೇದ ಪಾಗುತ್ತದೆ. ಇವೆರಡರಲ್ಲಿ ಒಂದೊಂದೂ ಪ್ರಜಾಪತಿಯೇ.

3. ಪೃಥ್ವಿ, ಅಪ್ಪು, ತೇಜಸ್ಸು– ಇವು ಮೂರ್ತ, ಸ್ಥೂಲ; ವಾಯು, ಆಕಾಶ –ಇವು ಅಮೂರ್ತ, ಸೂಕ್ಷ್ಮ,, ಬೃ. ೨-೩-೩.

4. ಬೇರೆಬೇರೆಯ ದೃಷ್ಟಿಯಿಂದ ಎರಡೂ ಭೋಜ್ಯವೇ ಆಗಬಹುದು; ಆದ್ದರಿಂದ ಎರಡೂ ರಯಿಯೇ.

ಯದನ್ತರಾ ದಿಶೋ ಯತ್ ಸರ್ವಂ ಪ್ರಕಾಶಯತಿ ತೇನ
ಸರ್ವಾನ್ ಪ್ರಾಣಾನ್ ರಶ್ಮಿಷು ಸಂನಿಧತ್ತೇ ॥ ೬ ॥

೬. ಇನ್ನು ಆದಿತ್ಯನು ಉದಯಿಸುವಾಗ ಪೂರ್ವದಿಕ್ಕನ್ನು ಯಾವಾಗ ಪ್ರವೇಶಿಸುತ್ತಾನೋ (ಆಗ) ಅದರಿಂದ ಪೂರ್ವದ ಪ್ರಾಣಗಳನ್ನು ರಶ್ಮಿಗಳಲ್ಲಿ ಸೇರಿಸಿಕೊಳ್ಳುತ್ತಾನೆ. ಯಾವಾಗ ದಕ್ಷಿಣವನ್ನು, ಯಾವಾಗ ಪಶ್ಚಿಮವನ್ನು, ಯಾವಾಗ ಉತ್ತರವನ್ನು ಯಾವಾಗ ಕೆಳಗಡೆಯನ್ನು, ಯಾವಾಗ ಮೇಲುಗಡೆಯನ್ನು, ಯಾವಾಗ ನಡುವೆಯ ದಿಕ್ಕುಗಳನ್ನು, ಯಾವಾಗ ಎಲ್ಲವನ್ನೂ ಪ್ರಕಾಶಿಸುತ್ತಾನೋ (ಆಗ) ಆದರಿಂದ ಸರ್ವಪ್ರಾಣಗಳನ್ನೂ ರಶ್ಮಿಗಳಲ್ಲಿ ಸೇರಿಸಿಕೊಳ್ಳುತ್ತಾನೆ.

(ಭಾಷ್ಯ)

೮. ಅಥ ಆದಿತ್ಯಃ ಉದಿಯನ್ ಉದ್ಗಚ್ಛನ್ ಪ್ರಾಣಿನಾಂ ಚಕ್ಷುರ್ಗೋಚರ ಮಾಗಚ್ಛನ್ ಯತ್ ಪ್ರಾಚೀಂ ದಿಶಂ ಸ್ವಪ್ರಕಾಶೇನ ಪ್ರವಿಶತಿ ವ್ಯಾಪ್ನೋತಿ ತೇನ ಸ್ವಾತ್ಮವ್ಯಾಪ್ತ್ಯಾ ಸರ್ವಾನ್ ತತ್ರಸ್ಥಾನ್ ಪ್ರಾಣಾನ್ ಪ್ರಾಚ್ಯಾನ್ ಅನ್ತರ್ಭೂತಾನ್[1] ರಶ್ಮಿಷು ಸ್ವಾತ್ಮಾವಭಾಸರೂಪೇಷು ವ್ಯಾಪ್ತಿಮತ್ಸು ವ್ಯಾಪ್ತ ತ್ವಾತ್ ಪ್ರಾಣಿನಃ ಸಂನಿಧತ್ತೇ ಸಂನಿವೇಶಯತಿ | ಆತ್ಮಭೂತಾನ್ ಕರೋತಿ ಇತ್ಯರ್ಥಃ | ತಥೈವ ಯತ್ ಪ್ರವಿಶತಿ ದಕ್ಷಿಣಾಂ ಯತ್ ಪ್ರತೀಚೀಂ ಯತ್ ಉದೀಚೀಮ್ ಅಧಃ ಊರ್ಧ್ವಂ ಯತ್ ಪ್ರವಿಶತಿ ಯಚ್ಚ ಅನ್ತರಾ ದಿಶಃ ಕೋಣದಿಶಃ ಅವಾನ್ತರದಿಶಃ ಯಚ್ಚ ಅನ್ಯತ್ ಸರ್ವಂ ಪ್ರಕಾಶಯತಿ ತೇನ ಸ್ವಪ್ರಕಾಶವ್ಯಾಪ್ತ್ಯಾ ಸರ್ವಾನ್ ಸರ್ವದಿಕ್ಸ್ಥಾನ್ ಪ್ರಾಣಾನ್ ರಶ್ಮಿಷು ಸಂನಿಧತ್ತೇ ॥

(ಭಾಷ್ಯಾರ್ಥ)

ಇನ್ನು ಆದಿತ್ಯನು ಉದಯಿಸುವಾಗ ಮೇಲಕ್ಕೆ ಬರುವಾಗ, ಪ್ರಾಣಿಗಳ ಕಣ್ಣಿಗೆ ಗೋಚರನಾಗುವಾಗ, ಪೂರ್ವದಿಕ್ಕನ್ನು ಯಾವಾಗ ತನ್ನ ಬೆಳಕಿನಿಂದ ಪ್ರವೇಶಿಸುತ್ತಾನೋ ಎಂದರೆ ವ್ಯಾಪಿಸಿಕೊಳ್ಳುತ್ತಾನೋ, ಆಗ ಆದರಿಂದ, (ಅ) ತನ್ನ ವ್ಯಾಪ್ತಿಯಿಂದ, ಅಲ್ಲಿರುವ ಎಲ್ಲಾ ಪ್ರಾಣಗಳನ್ನೂ ಪೂರ್ವದಿಕ್ಕಿನಲ್ಲಿರುವ (ಎಲ್ಲಾ ಪ್ರಾಣಗಳನ್ನೂ) ತನ್ನ ಸ್ವರೂಪದ ಪ್ರಭೆಯ ರೂಪವಾಗಿರುವ ಹಬ್ಬಿಕೊಂಡಿರುವ ಕಿರಣಗಳಲ್ಲಿ ವ್ಯಾಪ್ತವಾಗಿರುವದರಿಂದ ಪ್ರಾಣಗಳನ್ನು ಸೇರಿಸಿ

1. "ಅನ್ನಭೂತಾನ್" ಎಂದು ವಾ॥ ಪಾಠ.

ಕೊಳ್ಳುತ್ತಾನೆ, ತನ್ನೊಳಗೆ ಹಾಕಿಕೊಳ್ಳುತ್ತಾನೆ : ತನ್ನ (ಸ್ವರೂಪ)ವನ್ನಾಗಿಯೇ ಮಾಡಿಕೊಳ್ಳುತ್ತಾನೆ ಎಂದರ್ಥ. ಹಾಗೆಯೇ ಯಾವಾಗ ದಕ್ಷಿಣವನ್ನು, ಯಾವಾಗ ಪಶ್ಚಿಮವನ್ನು, ಯಾವಾಗ ಉತ್ತರವನ್ನು, ಯಾವಾಗ ಕೆಳಗಡೆಯನ್ನು, ಯಾವಾಗ ಮೇಲುಗಡೆಯನ್ನು, ಸೇರುತ್ತಾನೋ, ಯಾವಾಗ ನಡುವಣದಿಕ್ಕನ್ನು ಮೂಲೆಯ ದಿಕ್ಕುಗಳಾದ ಒಳದಿಕ್ಕುಗಳನ್ನು[1] ಯಾವಾಗ ಸೇರುವನೋ ಮತ್ತು ಯಾವಾಗ ವಿಕ್ಕದ್ದೆಲ್ಲವನ್ನೂ ಬೆಳಗುವನೋ (ಆಗ) ಅದರಿಂದ (ಆ) ತನ್ನ ಬೆಳಕಿನ ವ್ಯಾಪ್ತಿಯಿಂದ, ಎಲ್ಲಾ ದಿಕ್ಕುಗಳಲ್ಲಿರುವ ಎಲ್ಲಾ ಪ್ರಾಣಗಳನ್ನೂ (ತನ್ನ) ರಶ್ಮಿಗಳಲ್ಲಿ ಸೇರಿಸಿಕೊಳ್ಳುತ್ತಾನೆ.[2]

ಸ ಏಷ ವೈಶ್ವಾನರೋ ವಿಶ್ವರೂಪಃ ಪ್ರಾಣೋಽಗ್ನಿರುದಯತೇ ।
ತದೇತದೃಚಾಭ್ಯುಕ್ತಮ್ ॥ ೭ ॥

೭. ಆ ಈ ವೈಶ್ವಾನರನು ವಿಶ್ವರೂಪನಾಗಿರುವ ಪ್ರಾಣನು, ಅಗ್ನಿಯು, ಉದಯಿಸುತ್ತಾನೆ. ಆ ಇದು ಋಕ್ಕಿನಿಂದ ಹೇಳಲ್ಪಟ್ಟಿರುತ್ತದೆ.

(ಭಾಷ್ಯ)

೯. ಸ ಏಷೋಽತ್ತಾ ಪ್ರಾಣೋ ವೈಶ್ವಾನರಃ ಸರ್ವಾತ್ಮಾ ವಿಶ್ವರೂಪಃ ವಿಶ್ವಾತ್ಮತ್ವಾಚ್ಚ ಪ್ರಾಣಃ । ಅಗ್ನಿಶ್ಚ ಸ ಏವ ಅತ್ತಾ । ಉದಯತೇ ಉದ್ಗಚ್ಛತಿ ಪ್ರತ್ಯಹಂ ಸರ್ವಾ ದಿಶಃ ಆತ್ಮಸಾತ್ ಕುರ್ವನ್ ॥

(ಭಾಷ್ಯಾರ್ಥ)

ಆ ಈ ಅತ್ತೃವಾದ ಪ್ರಾಣನು, ವೈಶ್ವಾನರನು ಎಂದರೆ ಸರ್ವಾತ್ಮನು. ವಿಶ್ವರೂಪನು (ಎಲ್ಲಾ ರೂಪಗಳಿಂದ ಕೂಡಿರುವವನು) ಎಲ್ಲಕ್ಕೂ ಆತ್ಮನಾಗಿರುವದರಿಂದ ಪ್ರಾಣನು. ಅತ್ತೃವಾದ ಅಗ್ನಿಯಾಗಿರುವವನೂ ಅವನೇ. (ಇವನು) ಪ್ರತಿದಿನವೂ ದಿಕ್ಕುಗಳಿಲ್ಲವನ್ನೂ ತನ್ನ ವಶಗೊಳಿಸಿಕೊಳ್ಳುತ್ತಾ ಉದಯಿಸುತ್ತಿರುತ್ತಾನೆ, ಮೇಲಕ್ಕೆ ಬರುತ್ತಿರುತ್ತಾನೆ.

(ಭಾಷ್ಯ)

೧೦. ತದೇತತ್ ಉಕ್ತಂ ವಸ್ತು ಋಚಾ ಮನ್ತ್ರೇಣಾಪಿ ಅಭ್ಯುಕ್ತಮ್–

(ಭಾಷ್ಯಾರ್ಥ)

ಆ ಈ (ಮೇಲೆ) ಹೇಳಿರುವ ವಿಷಯವು ಋಕ್ಕಿನಿಂದ ಎಂದರೆ (ಮುಂದಿನ) ಮಂತ್ರದಿಂದಲೂ ಹೇಳಲ್ಪಟ್ಟಿರುತ್ತದೆ :—

---

1. ಆಗ್ನೇಯ ಮುಂತಾದವುಗಳನ್ನು.

2. ಸೂರ್ಯನ ರಶ್ಮಿಯು ಸನ್ನಿಧಿಯಿಂದಲೇ ಪ್ರಾಣಗಳು ಕಾಣಿಸಿಕೊಳ್ಳುವವು ಎಂದು ಭಾವ.

ವಿಶ್ವರೂಪಂ ಹರಿಣಂ ಜಾತವೇದಸಂ
ಪರಾಯಣಂ ಜ್ಯೋತಿರೇಕಂ ತಪನ್ತಮ್ ।
ಸಹಸ್ರರಶ್ಮಿಃ ಶತಧಾ ವರ್ತಮಾನಃ
ಪ್ರಾಣಃ ಪ್ರಜಾನಾಮುದಯತ್ಯೇಷ ಸೂರ್ಯಃ ॥೯॥

೯. ವಿಶ್ವರೂಪನಾದ ಹರಿಣನಾದ ಜಾತವೇದಸನಾದ ಪರಾಯಣನಾದ ತಪಿಸುತ್ತಿರುವ ಏಕಜ್ಯೋತಿಯನ್ನು (ಜ್ಞಾನಿಗಳು ಅರಿತಿರುವರು). ಸಹಸ್ರರಶ್ಮಿಯಾಗಿ ನೂರುಬಗೆಯಲ್ಲಿರುವ ಪ್ರಜೆಗಳ ಪ್ರಾಣನಾದ ಈ ಸೂರ್ಯನು ಉದಯಿಸುತ್ತಾನೆ.

(ಭಾಷ್ಯ)

೧೧. ವಿಶ್ವರೂಪಂ ಸರ್ವರೂಪಂ ಹರಿಣಂ ರಶ್ಮಿವನ್ತಂ ಜಾತವೇದಸಂ ಜಾತಪ್ರಜ್ಞಾನಂ ಪರಾಯಣಂ ಸರ್ವಪ್ರಾಣಾಶ್ರಯಂ ಜ್ಯೋತಿರೇಕಂ ಸರ್ವಪ್ರಾಣಿನಾಂ ಚಕ್ಷುರ್ಭೂತಮ್ ಅದ್ವಿತೀಯಮ್[1] ತಪನ್ತಂ ತಾಪಕ್ರಿಯಾಂ ಕುರ್ವಾಣಂ ಸ್ವಾತ್ಮಾನಂ ಸೂರ್ಯಂ[2] ವಿಜ್ಞಾತವನ್ತೋ ಬ್ರಹ್ಮವಿದಃ । ಕೋಽಸೌ ಯಂ ವಿಜ್ಞಾತವನ್ತಃ ?[3] ಸಹಸ್ರರಶ್ಮಿಃ ಅನೇಕರಶ್ಮಿಃ ಶತಧಾ ಅನೇಕಧಾ ಪ್ರಾಣಭೇದೇನ ವರ್ತಮಾನಃ ಪ್ರಾಣಃ ಪ್ರಜಾನಾಮ್ ಉದಯತಿ ಏಷಃ ಸೂರ್ಯಃ ॥

(ಭಾಷ್ಯಾರ್ಥ)

ವಿಶ್ವರೂಪನಾದ ಎಲ್ಲದರ ರೂಪವುಳ್ಳವನಾದ, ಹರಿಣನಾದ ಎಂದರೆ ರಶ್ಮಿಗಳುಳ್ಳ ಜಾತವೇದಸನಾದ ಎಂದರೆ ಏನೇನು ಆಗುವದೋ ಅದನ್ನೆಲ್ಲ ಅರಿಯುವವನಾದ, ಪರಾಯಣನಾದ ಎಂದರೆ ಎಲ್ಲಾ ಪ್ರಾಣಿಗಳಿಗೂ ಆಶ್ರಯನಾಗಿರುವ ಏಕಜ್ಯೋತಿಯನ್ನು ಎಲ್ಲಾ ಪ್ರಾಣಿಗಳಿಗೂ ಕಣ್ಣಾಗಿ ತನಗೆ ಎರಡನೆಯದಿಲ್ಲದೆ ತಪಿಸುತ್ತಿರುವ ತಾಪ (ಸುಡುವದು) ಎಂಬ ಕ್ರಿಯೆಯನ್ನು ಮಾಡುತ್ತಿರುವ ತಮ್ಮ ಆತ್ಮನಾದ ಸೂರ್ಯನನ್ನು ಬ್ರಹ್ಮವಿದರು ಅರಿತುಕೊಂಡಿರುವರು. [4]ಅವರು (ಹೀಗೆ) ಅರಿತುಕೊಂಡಿರುವ ಆತನು ಯಾರು ? ಎಂದರೆ ಸಹಸ್ರರಶ್ಮಿಯಾಗಿ ಅನೇಕರಶ್ಮಿಗಳುಳ್ಳವನಾಗಿ ನೂರುಬಗೆಯಲ್ಲಿರುವ ಅನೇಕಬಗೆಯಲ್ಲಿರುವ ಪ್ರಾಣಿ

1. "ಜ್ಯೋತಿಃ ಸರ್ವಪ್ರಾಣಿನಾಂ ಚಕ್ಷುರ್ಭೂತಮ್ ಏಕಮ್ ಅದ್ವಿತೀಯಮ್"
2. "ಸೂರಯಃ" ಎಂದು ಆ॥ ಪಾಠದಲ್ಲಿ ಹೆಚ್ಚಾಗಿದೆ.
3. "ವಿಜ್ಞಾನವನ್ತಃ" ಎಂಬ ಆ॥ ಪಾಠವು ಅಚ್ಚಿನ ತಪ್ಪಿರಬಹುದೆಂದು ತೋರುತ್ತದೆ.
4. ಈ ಮಂತ್ರದ ಮೊದಲನೆಯ ಅರ್ಧದಲ್ಲಿರುವ ಪದಗಳು ದ್ವಿತೀಯಾವಿಭಕ್ತಿಯಲ್ಲಿವೆ. ಎರಡನೆಯ ಅರ್ಧದಲ್ಲಿರುವ ಪದಗಳು ಪ್ರಥಮಾವಿಭಕ್ತಿಯಲ್ಲಿವೆ. ಆದ್ದರಿಂದ ಬ್ರಹ್ಮಜ್ಞಾನಿಗಳು ತಿಳಿದಿರುವರು ಎಂದು ಅಧ್ಯಾಹಾರಮಾಡಿಕೊಂಡಿದೆ.

ಗಳು ಬೇರೆಬೇರೆಯಾಗಿರುವದರಿಂದ (ಅಯಾ ಬಗೆಯ)ಲ್ಲಿರುವ ಪ್ರಜೆಗಳ ಪ್ರಾಣನಾದ ಈ ಸೂರ್ಯನು[1] ಉದಯಿಸುತ್ತಿರುವನು.

ಸಂವತ್ಸರರೂಪಿಯಾದ ಪ್ರಜಾಪತಿ

(ಭಾಷ್ಯ)

೧೩. ಯೇಷ್ವಾಸೌ ಚನ್ದ್ರಮಾಃ ಮೂರ್ತಿರನ್ನಮ್ ಅಮೂರ್ತಶ್ಚ ಪ್ರಾಣಃ ಆದಿತ್ಯಃ, ತದೇಕಮೇತನ್ಮಿಥುನಂ ಸರ್ವಮ್। ಕಥಂ ಪ್ರಜಾಃ ಕರಿಷ್ಯತೇಃ ಇತಿ ? ಉಚ್ಯತೇ—

(ಭಾಷ್ಯಾರ್ಥ)

ಈ ಮೂರ್ತಿಯೂ ಅನ್ನವೂ ಆದ ಚಂದ್ರನು, ಮತ್ತು ಅಮೂರ್ತರೂಪನಾದ ಅಶ್ವ್ಯ, ಪ್ರಾಣನಾದ ಆದಿತ್ಯನು– ಇವೆರಡೂ ಒಂದೇ (ಆಗಿ), ಈ ಜೋಡಿಯು ಎಲ್ಲವೂ ಆಗಿರುತ್ತದೆ. (ಇವು) ಪ್ರಜೆಗಳನ್ನು ಮಾಡುವದೆಂಬುದು ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ :—

ಸಂವತ್ಸರೋ ವೈ ಪ್ರಜಾಪತಿಸ್ತಸ್ಯಾಯನೇ ದಕ್ಷಿಣಂ ಚೋತ್ತರಂ ಚ। ತದ್ಯೇ ಹ ವೈ ತದಿಷ್ಟಾಪೂರ್ತೇ ಕೃತಮಿತ್ಯುಪಾಸತೇ ತೇ ಚಾನ್ದ್ರಮಸಮೇವ ಲೋಕಮಭಿಜಯನ್ತೇ। ತ ಏವ ಪುನರಾವರ್ತನ್ತೇ ತಸ್ಮಾದೇತ ಋಷಯಃ ಪ್ರಜಾಕಾಮಾ ದಕ್ಷಿಣಂ ಪ್ರತಿ ಪದ್ಯನ್ತೇ। ಏಷ ಹ ವೈ ರಯಿರ್ಯಃ ಪಿತೃಯಾಣಃ ॥೯॥

೯. ಸಂವತ್ಸರವೇ ಪ್ರಜಾಪತಿಯು. ಅದಕ್ಕೆ ದಕ್ಷಿಣವೆಂದೂ ಉತ್ತರವೆಂದೂ ಎರಡು ಅಯನಗಳು. ಯಾರಾದರೆ ಹಾಗೆ ಇಷ್ಟಾಪೂರ್ತಗಳೆಂಬ ಕೃತವನ್ನೇ ಉಪಾಸನೆಮಾಡುತ್ತಿರುವರೋ ಅವರು ಚಂದ್ರನ ಲೋಕವನ್ನೇ ಗೆದ್ದುಕೊಳ್ಳುವರು; ಅವರೇ ಮತ್ತೆ ಹಿಂತಿರುಗುವರು. ಅದ್ದರಿಂದಲೇ ಪ್ರಜಾಕಾಮರಾದ ಈ ಋಷಿಗಳು ದಕ್ಷಿಣವನ್ನು ಹೊಂದುವರು. ಈ ಪಿತೃಯಾಣವೇ ರಯಿಯು.

(ಭಾಷ್ಯ)

೧೩. ತದೇವ ಕಾಲಃ ಸಂವತ್ಸರಃ ವೈ ಪ್ರಜಾಪತಿಃ। ತನ್ನಿರ್ವರ್ತ್ಯತ್ವಾತ್ ಸಂವತ್ಸರಸ್ಯ। ಚನ್ದ್ರಾದಿತ್ಯನಿರ್ವರ್ತ್ಯತಿಥ್ಯಹೋರಾತ್ರಸಮುದಾಯೋ ಹಿ ಸಂವತ್ಸರಃ। ತದನನ್ಯತ್ವಾತ್ ರಯಿಪ್ರಾಣಮಿಥುನಾತ್ಮಕ ಏವ ಇತ್ಯುಚ್ಯತೇ।

---

1. ಸೂರ್ಯನೇ ಬೇರೆಬೇರೆಯ ಪ್ರಾಣಿಗಳಿಗೆ ಪ್ರಾಣಗಳನ್ನು ಕೊಟ್ಟರುವವನು ಎಂದು ಭಾವ. ಚಂದ್ರ ಅಥವಾ ರಯಿಯು ಎಲ್ಲವೂ ಆಗಿರುವಂತೆ ಸೂರ್ಯ ಅಥವಾ ಪ್ರಾಣನು ಎಲ್ಲವೂ ಆಗಿರುತ್ತಾನೆಂಬುದನ್ನು ಈವರೆಗೆ ತಿಳಿಸಿದಂತೆ ಆಯಿತು.

2. 'ರಯಿಪ್ರಾಣ್ಯೈತನ್ಮಿಥುನಾತ್ಮಕ' ಎಂದು ವಾ॥ ಪಾಠ.

ತತ್ ಕಥಮ್ ? ತಸ್ಯ ಸಂವತ್ಸರಸ್ಯ ಪ್ರಜಾಪತೇಃ ಅಯನೇ ಮಾರ್ಗೌ ದ್ವೌ ದಕ್ಷಿಣಂ ಚೋತ್ತರಂ ಚ | ಪ್ರಸಿದ್ಧೇ[1] ಹ್ಯಯನೇ ಷಣ್ಮಾಸಲಕ್ಷಣೇ ಯಾಭ್ಯಾಂ ದಕ್ಷಿಣೇನೋತ್ತರೇಣ ಚ ಯಾತಿ ಸವಿತಾ ಕೇವಲಕರ್ಮಿಣಾಂ ಜ್ಞಾನಸಂಯುಕ್ತ ಕರ್ಮವತಾಂ ಚ ಲೋಕಾನ್ ವಿದಧತ್ | ಕಥಮ್ ? ತತ್ ತತ್ರ ಚ ಬ್ರಾಹ್ಮಣಾದಿಷು ಯೇ ಹ ವೈ ಋಷಯಃ[2] ತತ್ ಉಪಾಸತೇ ಇತಿ ಕ್ರಿಯಾ ವಿಶೇಷಣೋ ದ್ವಿತೀಯಃ ತಚ್ಛಬ್ದಃ | ಇಷ್ಟಂ ಚ ಪೂರ್ತಂ ಚ ಇಷ್ಟಾಪೂರ್ತೇ ಇತ್ಯಾದಿ ಕೃತಮೇವ ಉಪಾಸತೇ ನಾಕೃತಂ ನಿತ್ಯಂ, ತೇ ಚಾನ್ದ್ರಮಸಮೇವ ಚನ್ದ್ರಮಸಿ ಭಂ ಪ್ರಜಾಪತೇರ್ಮಿಥುನಾತ್ಮಕಸ್ಯ ಅಂಶಂ ರಯಿಂ ಅನ್ನಭೂತಂ ಲೋಕಮ್ ಅಭಿಜಯನ್ತೇ | ಕೃತರೂಪತ್ವಾತ್ ಚಾನ್ದ್ರಮಸಸ್ಯ | ತೇ[3] ಏವ ಚ ಕೃತಕ್ಷಯಾತ್ ಪುನರಾವರ್ತನ್ತೇ 'ಇಮಂ ಲೋಕಂ ಹೀನತರಂ ವಾ ವಿಶನ್ತಿ' (ಮುಂ. ೧–೨–೧೦) ಇತಿ ಹಿ ಉಕ್ತಮ್ | ಯಸ್ಮಾದೇವಂ ಪ್ರಜಾಪತಿಮ್ ಅನ್ನಾತ್ಮಕಂ ಫಲತ್ವೇನ ಅಭಿನಿರ್ವರ್ತಯನ್ತಿ ಚನ್ದ್ರಮಂ ಇಷ್ಟಾಪೂರ್ತ ಕರ್ಮಣಾ ಏತೇ ಋಷಯಃ ಸ್ವರ್ಗದ್ರಷ್ಟಾರಃ ಪ್ರಜಾಕಾಮಾಃ ಪ್ರಜಾರ್ಥಿನಃ ಗೃಹಸ್ಥಾಃ, ತಸ್ಮಾತ್ ಸ್ವಕೃತಮೇವ ದಕ್ಷಿಣಂ ದಕ್ಷಿಣಾಯನೋಪಲಕ್ಷಿತಂ ಚನ್ದ್ರಂ ಪ್ರತಿಪದ್ಯನ್ತೇ ಏಷ ಹ ವೈ ರಯಿಃ ಅನ್ನಂ ಯಃ ಪಿತೃಯಾಣಃ ಪಿತೃಯಾಣೋಪಲಕ್ಷಿತಶ್ಚನ್ದ್ರಃ ॥

(ಭಾಷ್ಯಾರ್ಥ)

ಆ (ಜೋಡಿಯೇ) ಕಾಲ(ರೂಪವಾದ) ಸಂವತ್ಸರವು; (ಅದೇ) ಪ್ರಜಾಪತಿಯು. ಏಕೆಂದರೆ ಆ ದ ರಿಂ ದ[4] (ಈ) ಸಂವತ್ಸರವಾಗಿರುತ್ತದೆ. ಚಂದ್ರ, ಸೂರ್ಯ–ಇವರಿಂದಾಗಿರುವ ತಿಥಿ, ಹಗಲುರಾತ್ರಿಗಳು ಇವುಗಳ ಒಟ್ಟೇ ಆಲ್ಲವೆ, ಸಂವತ್ಸರವೆಂಬುದು ?[5] ಅದಕ್ಕಿಂತ ಬೇರೆಯಲ್ಲವಾದ್ದರಿಂದ[6] (ಇದು) ರಯಿಪ್ರಾಣ(ವೆಂಬೀ) ಮಿಥುನಸ್ವರೂಪವೇ ಎಂದು ಹೇಳಿರುತ್ತದೆ, ಅದು ಹೇಗೆ ಎಂದರೆ : ಈ ಸಂವತ್ಸರರೂಪನಾದ ಪ್ರ ಜಾ ಪ ತಿ ಗೆ ಆಯನಗಳು ಎಂದರೆ ಮಾರ್ಗಗಳು, ದಕ್ಷಿಣ, ಉತ್ತರ–ಎಂದು ಎರಡು. ಷಣ್ಮಾಸರೂಪವಾದ

---

1. 'ದ್ವೌ ಪ್ರಸಿದ್ಧೌ' ಆ॥ ಪಾಠ.
2. ಈ ಮಾತು ಅ॥ ಮೈ॥ ಪಾಠಗಳಲ್ಲಿಲ್ಲ- ಇಲ್ಲದಿದ್ದರೂ ಸಾಗುತ್ತದೆ.
3. 'ತಶ್ಚ' ಎಂದು ಆ॥ ಪಾಠದಲ್ಲಿ ಹೆಚ್ಚು.
4. ಆ ಚಂದ್ರಸೂರ್ಯರೆಂಬ ಜೋಡಿಯಿಂದ ಆಗಿರುತ್ತದೆ.
5. ಚಂದ್ರನಿಂದ ತಿಥ್ಯಾತ್ಮಕಕಾಲವೂ ಸೂರ್ಯನಿಂದ ಹಗಲುರಾತ್ರಿಗಳೆಂಬ ಕಾಲವೂ ಆಗುತ್ತದೆ.
6. ಕಾರ್ಯವು ಕಾರಣಕ್ಕಿಂತ ಬೇರೆಯಲ್ಲವಾದ್ದರಿಂದ ಸಂವತ್ಸರವೂ ಸೂರ್ಯ ಚಂದ್ರಾತ್ಮಕವೇ ಆಗಿರುತ್ತದೆ ಎಂದು ಹೇಳಿದೆ ಎಂದರ್ಥ.

ಅಯನಗಳು (ಎರಡೂ) ಪ್ರಸಿದ್ಧವಾಗಿಯೇ ಇರುತ್ತವೆ; ಇವುಗಳಿಂದ ಸೂರ್ಯನು ಕೇವಲ ಕರ್ಮಿಗಳಿಗೂ ಜ್ಞಾನದೊಡಗೂಡಿದ ಕರ್ಮ(ವನ್ನು ಮಾಡಿ)ದವರಿಗೂ[1] ಲೋಕಗಳನ್ನು ಗೊತ್ತುಮಾಡಿಕೊಡುತ್ತಾ ದಕ್ಷಿಣಕ್ಕೂ ಉತ್ತರಕ್ಕೂ ಹೋಗುತ್ತಿರುವನು. ಹೇಗೆ? ಎಂದರೆ, ಅಲ್ಲಿ ಎಂದರೆ ಆ ಬ್ರಾಹ್ಮಣಾದಿಗಳಲ್ಲಿ[2] ಯಾರಾದರೆ (ಯಾವ) ಋಷಿಗಳು 'ಹಾಗೆ ಉಪಾಸನೆಮಾಡುತ್ತಿರುವರೋ' ಎಂದು ಎರಡನೆಯ ತತ್ ಎಂಬ ಶಬ್ದವನ್ನು[3] ಕ್ರಿಯಾವಿಶೇಷಣ(ವಾಗಿ ತಿಳಿಯಬೇಕು). ಇಷ್ಟಾಪೂರ್ತಗಳೆಂಬ ಎಂದರೆ ಇಷ್ಟ,ಪೂರ್ತ[4] ಮುಂತಾದ ಕೃತವನ್ನೇ ಅನುಸರಿಸುತ್ತಿರುವರೋ ಅಕೃತವಾದ ನಿತ್ಯವನ್ನು[5] (ಉಪಾಸನೆಮಾಡುವದಿಲ್ಲವೋ) ಅವರು ಚಾಂದ್ರಮಸವನ್ನೇ ಜೋಡಿಯ ರೂಪದಲ್ಲಿರುವ ವ್ರಜಾಪತಿಯ ಅಂಶವಾದ, ಚಂದ್ರನಲ್ಲಿರುವ ರಯಿಯನ್ನೇ ಅನ್ನವಾಗಿರುವ ಲೋಕವನ್ನೇ ಗೆದ್ದುಕೊಳ್ಳುವರು. ಏಕೆಂದರೆ ಚಂದ್ರಲೋಕವೂ ಕೃತವಾಗಿರುತ್ತದೆ.[6] (ಆ) ಕೃತವು ಸವೆಯಲು ಅವರೇ ಮತ್ತೆ ಹಿಂತಿರುಗುವರು. 'ಈ ಲೋಕವನ್ನೋ ಇನ್ನೂ ಕೀಳುತೆರದ (ಲೋಕ)ವನ್ನೋ ಹೊಗುವರು' (ಮುಂ. ೧-೨-೧೦) ಎಂದಲ್ಲವೆ, ಹಿಂದೆ ಹೇಳಿದೆ?

ಹೀಗೆ ಈ ಪ್ರಜಾಕಾಮರಾದ ಪ್ರಜೆಗಳನ್ನು ಬಯಸುವ ಗೃಹಸ್ಥರಾದ ಋಷಿಗಳು ಎಂದರೆ ಸ್ವರ್ಗವನ್ನು ಕಂಡುಕೊಂಡವರು.[7] ಅನ್ನಾತ್ಮಕನಾದ ಪ್ರಜಾಪತಿಯನ್ನು, ಎಂದರೆ ಚಂದ್ರನನ್ನು ಇಷ್ಟಾಪೂರ್ತಗಳೆಂಬ ಕರ್ಮದ ಫಲವಾಗಿ ಉಂಟುಮಾಡಿಕೊಳ್ಳುತ್ತಿರುವದರಿಂದ; ತಮ್ಮಿಂದ ಮಾಡಲ್ಪಟ್ಟಿರುವ

---

1. ಕರ್ಮಿಗಳಿಗೆ ದಕ್ಷಿಣಮಾರ್ಗ, ಉಪಾಸನೆಯಿಂದ ಕೂಡಿದ ಕರ್ಮಿಗಳಿಗೆ ಉತ್ತರಮಾರ್ಗ, (ಗೀ, ೮-೨೪, ೨೫).

2. ಅಲ್ಲಿ ಎಂದರೆ ಸಾಧಕರೊಳಗೆ, ವೈದಿಕಧರ್ಮಕ್ಕೆ ಅಧಿಕಾರಿಗಳಾದ ಬ್ರಾಹ್ಮಣಾದಿ ದ್ವಿಜರೊಳಗೆ.

3. ಉಪನಿಷತ್ತಿನಲ್ಲಿ ತತ್ ಯೇ ತತ್ ಇಷ್ಟಾಪೂರ್ತೇ-ಎಂದು ಎರಡು ತತ್ ಶಬ್ದಗಳಿವೆ.

4. ವ್ಯಾಖ್ಯಾನದಲ್ಲಿ ಹೀಗೆಂದು ಬರೆದಿದೆ ಇಷ್ಟವೆಂದರೆ ಅಗ್ನಿಹೋತ್ರ, ತಪಸ್ಸು, ಸತ್ಯ, ವೇದಾಧ್ಯಯನ, ಅಧ್ಯಾಪನ, ಅತಿಥ್ಯ, ವೈಶ್ವದೇವ-ಇವು; ಪೂರ್ತವೆಂದರೆ ಭಾವಿ, ಕೆರೆಕಟ್ಟೆ, ದೇವಾಲಯ, ಕೋಪು-ಮುಂತಾದವನ್ನು ಕಟ್ಟಿಸುವದು, ಅನ್ನದಾನಮಾಡುವದು-ಮುಂತಾದದ್ದು. "ಕೃತಮಿತ್ಯುಪಾಸತೇ" ಎಂಬಲ್ಲಿರುವ ಇತಿ ಶಬ್ದವನ್ನು 'ಇಷ್ಟಾಪೂರ್ತೇ ಇತಿ' ಎಂದು ಸೇರಿಸಿಕೊಂಡು ಮುಂತಾಗಿ ಎಂದು ಅರ್ಥಮಾಡಿದೆ.

5. ಕೃತ, ಅಕೃತ-ಎಂಬ ಶಬ್ದಗಳನ್ನು ಮುಂ. ೨-೧-೧೩ರಲ್ಲಿ ಉಪಯೋಗಿಸಿರುವ ಬಗೆಯನ್ನು ನೋಡಿರಿ. 6. ಕರ್ಮದ ಕಾರ್ಯವಾಗಿರುತ್ತದೆ.

7. ಋಷಿಗಳೆಂದರೆ ತತ್ತ್ವವನ್ನು ಬಲ್ಲವರು; ಇಲ್ಲಿ ಸ್ವರ್ಗತತ್ತ್ವವನ್ನು ಬಲ್ಲವರು ಎಂದರ್ಥ.

ದಕ್ಷಿಣನನ್ನೇ, ಎಂದರೆ ದಕ್ಷಿಣಾಯನವೆಂಬ ಉಪಲಕ್ಷಣವುಳ್ಳ ಚಂದ್ರನನ್ನೇ ಪಡೆದುಕೊಳ್ಳುತ್ತಾರೆ. ಈ ಪಿತೃಯಾಣವೇ[1] ಎಂದರೆ ಪಿತೃಯಾಣವೆಂಬ ಉಪಲಕ್ಷಣವುಳ್ಳ ಚಂದ್ರನೇ ರಯಿಯು, ಅನ್ನವು.

ಅಥೋತ್ತರೇಣ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ವಿದ್ಯಯಾ ಆತ್ಮಾನಮನ್ವಿಷ್ಯಾದಿತ್ಯಮಭಿಜಯಂತ್ಯೇ। ಏತದ್ವೈ ಪ್ರಾಣಾನಾಮಾಯತನಮೇತದಮೃತಮಭಯಮೇತತ್ ಪರಾಯಣಮೇತಸ್ಮಾನ್ನ ಪುನರಾವರ್ತಂತ್ತೇ ಇತ್ಯೇಷ ನಿರೋಧಸ್ತದೇಷ ಶ್ಲೋಕಃ ॥ ೧೦ ॥

೧೦. ಇನ್ನು ಉತ್ತರ(ಮಾರ್ಗ)ದಿಂದ (ಹೋಗುವವರು ತಪಸ್ಸಿನಿಂದಲೂ ಬ್ರಹ್ಮಚರ್ಯೆಯಿಂದಲೂ ಶ್ರದ್ಧೆಯಿಂದಲೂ ವಿದ್ಯೆಯಿಂದಲೂ ಆತ್ಮನನ್ನು ಹುಡುಕುವವರಾಗಿ ಆದಿತ್ಯನನ್ನು ಗೆದ್ದುಕೊಳ್ಳುವರು. ಇದೇ ಪ್ರಾಣಗಳಿಗೆ ನೆಲೆ; ಇದು ಅಮೃತವು, ಅಭಯವು; ಇದು ಪರಾಯಣವು. ಇದರಿಂದ ಮತ್ತೆ ಹಿಂದಿರುಗುವದಿಲ್ಲ. ಇದು ತಡೆ. ಅಲ್ಲಿ ಈ ಶ್ಲೋಕ(ವಿರುತ್ತದೆ) :

(ಭಾಷ್ಯ)

೧೪ ಅಥ ಉತ್ತರೇಣ ಅಯನೇನ ಪ್ರಜಾಪತೇರಂಶಂ ಪ್ರಾಣಮ್ ಆತ್ಮಾರಮ್ ಆದಿತ್ಯಮ್ ಅಭಿಜಯಂತ್ಯೇ। ಕೇನ? ತಪಸಾ ಇನ್ದ್ರಿಯಜಯೇನ। ವಿಶೇಷತೋ ಬ್ರಹ್ಮಚರ್ಯೇಣ, ಶ್ರದ್ಧಯಾ ವಿದ್ಯಯಾ ಚ ಪ್ರಜಾಪತ್ಯಾತ್ಮವಿಷಯಯಾ ಆತ್ಮಾನಂ ಪ್ರಾಣಂ ಸೂರ್ಯಂ ಜಗತಸ್ತುಷ್ಟುಷಶ್ಚ ಅನ್ವಿಷ್ಯ "ಅಹಮಸ್ಮಿ" ಇತಿ ವಿದಿತ್ವಾ ಆದಿತ್ಯಮ್ ಅಭಿಜಯಂತ್ಯೇ ಅಭಿಪ್ರಾಪ್ನುವನ್ತಿ। ಏತದ್ವೈ ಆಯತನಂ ಸರ್ವಪ್ರಾಣಾನಾಂ ಸಾಮಾನ್ಯಮ್ ಆಯತನಂ ಆಶ್ರಯಃ। ಏತತ್ ಅಮೃತಮ್ ಅವಿನಾಶಿ ಅಭಯಮ್ ಅತ ಏವ ಭಯವರ್ಜಿತಮ್ ನ ಚನ್ದ್ರವತ್ ಕ್ಷಯವೃದ್ಧಿಭಯವತ್। ಏತತ್ ಪರಾಯಣಮ್ ಪರಾ ಗತಿಃ ವಿದ್ವಾಂಸಃ ಕರ್ಮಿಣಾಂ ಚ ಜ್ಞಾನವತಾಮ್। ಏತಸ್ಮಾತ್ ನ ಪುನರಾವ

1. ದಕ್ಷಿಣಾಯನಮಾರ್ಗವನ್ನು ಪಡೆದರೆ ಚಂದ್ರನನ್ನೇ ಮುಟ್ಟುತ್ತಾರೆ. ಚಂದ್ರನೇ ಫಲವಾಗಿರುವದರಿಂದ ಅದನ್ನು ತಿಳಿಸುವದಕ್ಕೆ "ದಕ್ಷಿಣಾಯನ" ಎಂಬ ಶಬ್ದವನ್ನು ಉಪಲಕ್ಷಣವಾಗಿ ಉಪಯೋಗಿಸಿದೆ ಎಂದು ತಿಳಿಯಬೇಕು.

2. ದಕ್ಷಿಣಮಾರ್ಗಕ್ಕೆ ಪಿತೃಗಳ ಮಹಿಮೆಯನ್ನು ಪಡಿದುಕೊಳ್ಳುವದೇ ಫಲವೆಂದು ಕೈತ್ತಿರೀಯದ ನಾರಾಯಣಪನ್ನದ ಕೊನೆಯಲ್ಲಿ ಹೇಳಿರುವದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

ರ್ತನ್ತೇ ಯಥಾ ಇತರೇ ಕೇವಲಕರ್ಮಿಣ ಇತಿ | ಯಸ್ಮಾತ್ ಏಷಃ ಅವಿದುಷಾಂ ನಿರೋಧಃ | ಅದಿತ್ಯಾದ್ ಹಿ ನಿರುದ್ಧಾಃ ಅವಿದ್ವಾಂಸಃ | ನೈತೇ ಸಂವತ್ಸರಮ್ ಆದಿತ್ಯಮಾತ್ಮಾನಂ ಪ್ರಾಣಮ್ ಅಭಿಪ್ರಾಪ್ನುವನ್ತಿ ॥

(ಭೇಷ್ಯಾರ್ಥ)

ಇನ್ನು ಉತ್ತರಮಾರ್ಗದಿಂದ ಪ್ರಜಾಪತಿಯ ಅಂಶವಾದ ಆತ್ಮವಾದ ಪ್ರಾಣನನ್ನು, ಆದಿತ್ಯನನ್ನು, ಗೆದ್ದುಕೊಳ್ಳುವರು. ಏತರಿಂದ? ತಪಸ್ಸಿನಿಂದಲೂ ಎಂದರೆ ಇಂದ್ರಿಯಜಯದಿಂದಲೂ ವಿಶೇಷವಾಗಿ ಬ್ರಹ್ಮಚರ್ಯದಿಂದಲೂ; ಶ್ರದ್ಧೆಯಿಂದಲೂ; ವಿದ್ಯೆಯಿಂದಲೂ ಎಂದರೆ ಪ್ರಜಾಪತ್ಯಾತ್ಮನ ವಿಷಯವಾದ (ಉಪಾಸನೆಯಿಂದಲೂ) ಆತ್ಮಾನ್ನು ಎಂದರೆ ಪ್ರಾಣನನ್ನು ಸ್ಥಾವರಕ್ಕೂ ಜಂಗಮಕ್ಕೂ (ಆತ್ಮನಾಗಿರುವ) ಸೂರ್ಯನನ್ನು[1] ಹುಡುಕಿಕೊಂಡು ನಾನೇ ಆತನು ಎಂದು (ಸಾಕ್ಷಾತ್ತಾಗಿ) ಅರಿತುಕೊಂಡು[2] ಆದಿತ್ಯನನ್ನು ಗೆದ್ದುಕೊಳ್ಳುವರು, ಎಂದರೆ ಪಡೆದುಕೊಳ್ಳುವರು. ಇದೇ ಆಯತನವು, ಎಲ್ಲಾ ಪ್ರಾಣಗಳಿಗೂ ಸಮಾನವಾಗಿರುವ ಆಯತನವು.[3] ಇದು ಅಮೃತವು, ನಾಶವಾಗುವ ನಾಶವಾಗುವ (ಸ್ವಭಾವ)ದ್ದಲ್ಲ; ಆದ್ದರಿಂದಲೇ (ಇದು) ಅಭಯವು, ಅಂಜಿಕೆಯಿಲ್ಲದ್ದು, ಚಂದ್ರನಂತೆ ಕ್ಷಯವೃದ್ಧಿಗಳೆಂಬ ಅಂಜಿಕೆಯಿರುವದಿಲ್ಲ.[4] ಇದು ಪರಾಯಣವು, ಉಪಾಸಕರಿಗೂ, ಉಪಾಸನೆಯೊಡನೆ ಕರ್ಮವನ್ನೂ ಮಾಡುವವರಿಗೂ[5] ಹೆಚ್ಚಿನ ಗತಿಯು. ಇದರಿಂದ ಮತ್ತೆ ಹಿಂತಿರುಗುವದಿಲ್ಲ, ಉಳಿದವರು ಎಂದರೆ ಬರಿಯ ಕರ್ಮವನ್ನು ಮಾಡಿದವರು ಹೇಗೆ (ಮತ್ತೆ ಹಿಂತಿರುವರೊ) ಹಾಗೆ (ಇದನ್ನು

4. ಅ.ವೇ. ೩೦-೪-೧೦೭ "ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ" ಎಂಬ ವಾಕ್ಯದ ಆಧಾರದಿಂದ ಇಲ್ಲಿ ಸೂರ್ಯನನ್ನು ಆತ್ಮನೆಂದಿದೆ ಎಂದು ಭಾವ.

2. ಆತ್ಮಾನ್ವೇಷಣೆ ಎಂದರೆ ಗುರುಶಾಸ್ತ್ರೋಪದೇಶಗಳಿಂದ ತಿಳಿದುಕೊಳ್ಳುವದು; ಇಲ್ಲಿ ಹಾಗೆ ತಿಳಿದುಕೊಂಡು ಉಪಾಸನೆಯಿಂದ ಸಾಕ್ಷಾತ್ಕಾರಮಾಡಿಕೊಳ್ಳುವದು ಎಂದರ್ಥ. ಛಾಂ. ಭಾ. ೮-೧-೧. ೮-೧.೫ ನೋಡಿ.

3. ಸೂರ್ಯನು ಎಲ್ಲಾ ಪ್ರಾಣಗಳನ್ನೂ ತನ್ನೊಳಗೆ ಸೇರಿಸಿಕೊಳ್ಳುತ್ತಾನೆಂದೇ ೬ನೆಯ ಮಂತ್ರದಲ್ಲಿ ಹೇಳಿರುವದನ್ನು ನೆನಪಿಗೆ ತಂದುಕೊಳ್ಳಬೇಕು.

4. ಅಮೃತ, ಅಭಯ, ಪರಾಯಣ-ಇವು ಸಗುಣಬ್ರಹ್ಮಕ್ಕೆ ಅಪೇಕ್ಷಿಕವಾಗಿ ಹೊಂದುವ ವಿಶೇಷಣಗಳು; ಎಂದರೆ ಇತರಫಲಗಳಿಗೆ ಹೋಲಿಸಿದರೆ ಇದು ಅಮೃತಾದಿ ಗುಣಗಳುಳ್ಳದ್ದಾಗಿರುತ್ತದೆ. ಛಾಂ. ಭಾ. ೪-೧೦-೧ ಭಾಷ್ಯದಲ್ಲಿ "ಅಮೃತ"ಶಬ್ದದ ವಿವರಣೆಯನ್ನು ನೋಡಿ.

5. ಕರ್ಮೋಪಾಸನೆಗಳನ್ನು ಕೂಡಿಸಿ ಅನುಷ್ಠಾನಮಾಡುವವರಿಗೆ ಆಗುವ ಹೆಚ್ಚಿನ ಫಲ. ಮುಂ. ಭಾ. ೧-೨-೧೧.

ಪಡೆದವರು) ಹಿಂತಿರುಗುವದಿಲ್ಲ. ಏಕೆಂದರೆ ಅಜ್ಞಾನಿಗಳಿಗೇ ಇದು ತಡೆ. ಆದಿತ್ಯನಿಂದ ಅಜ್ಞಾನಿಗಳು ತಡೆಯಲ್ಪಟ್ಟಿರುತ್ತಾರಲ್ಲವೆ? ಅವರು ಸಂವತ್ಸರ ರೂಪಿಯಾದ ಆದಿತ್ಯನೆಂಬ ಆತ್ಮನನ್ನು, ಪ್ರಾಣನನ್ನು ಪಡೆಯುವದಿಲ್ಲ.

(ಭಾಷ್ಯ)

೧೫ ಸ ಹಿ ಸಂವತ್ಸರಃ ಕಾಲಾತ್ಮಾ ಅವಿದುಷಾಂ ನಿರೋಢಃ | ತತ್ ತಸ್ಮಿನ್ ಅರ್ಥೇ ಏಷಃ ಶ್ಲೋಕಃ ಮನ್ತ್ರಃ ||

(ಭಾಷ್ಯಾರ್ಥ)

ಏಕೆಂದರೆ ಆ ಸಂವತ್ಸರರೂಪಿಯಾದ ಕಾಲಾತ್ಮನು ಅಜ್ಞಾನಿಗಳಿಗೆ ತಡೆಯಾಗಿರುತ್ತಾನೆ. ಅಲ್ಲಿ ಎಂದರೆ ಆ ವಿಷಯದಲ್ಲಿ ಈ (ಮುಂದಿನ) ಶ್ಲೋಕವು ಎಂದರೆ ಮಂತ್ರವು (ಇರುತ್ತದೆ) :—

ಪಞ್ಚಪಾದಂ ಪಿತರಂ ದ್ವಾದಶಾಕೃತಿಂ
ದಿವ ಆಹುಃ ಪರೇ ಅರ್ಧೇ ಪುರೀಷಿಣಮ್ ।
ಅಥೇಮೇ ಅನ್ಯ ಉ ಪರೇ ವಿಚಕ್ಷಣಂ
ಸಪ್ತಚಕ್ರೇ ಷಡರ ಆಹುರರ್ಪಿತಮಿತಿ ॥೧೦॥

೧೦. ಐದುಪಾದಗಳುಳ್ಳ (ಈ) ಪಿತೃವು ಹನ್ನೆರಡು ಆಕೃತಿಗಳುಳ್ಳವನಾಗಿ ದ್ಯುಲೋಕಕ್ಕಿಂತ ಮೇಲಿನ ಸ್ಥಾನದಲ್ಲಿ ಪುರೀಷಿಯಾಗಿರುವನೆಂದು ಹೇಳುವರು. ಇನ್ನು ಈ ಜೀವಿಯವನೋ ಎಂದರೆ (ಈ ಜಗತ್ತು) ವಿಚಕ್ಷಣನಾಗಿ ಏಳು ಚಕ್ರವಾಗಿ ಆರು ಹಾರಿಕೋಲುಗಳುಳ್ಳ (ಈತನಲ್ಲಿ) ಅರ್ಪಿತವಾಗಿರುವದೆನ್ನುವರು.

(ಭಾಷ್ಯ)

೧೬. ಪಞ್ಚಪಾದಂ ಪಞ್ಚ ಋತವಃ ಪಾದಾ ಇವ ಅಸ್ಯ ಸಂವತ್ಸರಾತ್ಮನಃ ಆದಿತ್ಯಸ್ಯ ತೈಃ ಅಸೌ ಪಾದ್ಯೈರಿವ ಋತುಭಿಃ ಅವರ್ತತೇ | ಹೇಮನ್ತಶಿಶಿರೌ ಏಕೀಕೃತ್ಯ ಏವಂ ಕಲ್ಪನಾ | ಪಿತರಂ ಸರ್ವಸ್ಯ ಜನಯಿತೃತ್ವಾತ್ ಪಿತೃತ್ವಂ ತಸ್ಯ | ದ್ವಾದಶಾಕೃತಿಃ ದ್ವಾದಶಮಾಸಾ ಅಕೃತಯಃ ಅವಯವಾಃ ಅಕರಣಾ

1. ಈ ಕಲ್ಪವು ಕೊನೆಯಾಗುವವರೆಗೂ ಬ್ರಹ್ಮಲೋಕದಲ್ಲಿಯೇ ಇರುತ್ತಾರೆ. ಛಾಂ. ಭಾ. ೫–೧೦–೧, ೪–೧೪–೫ ; ಬೃ. ಭಾ. ೬–೨–೧೫ ನೋಡಿ ; ಅಥವಾ ಅಲ್ಲಿ ಜ್ಞಾನವಾದರೆ ಹಿಂತಿರುಗುವದೇ ಇಲ್ಲ. ಸೂ. ಭಾ. ೪–೩–೧೦, ೪–೪–೨೨.

2. ಉಪಾಸಕರಲ್ಲದವರಿಗೆ.

3. ಇದು ಅ. ವೇ. ೯–೯–೪೫,೨ರಲ್ಲಿದೆ ; ಅಲ್ಲಿ "ವಿಚಕ್ಷಣೇ" ಎಂದು ಪಾಠ. ಋ. ವೇ. ೨–೭–೧೭ರಲ್ಲಿಯೂ ಇದೆ ; ಅಲ್ಲಿ "ಷಳರ" ಎಂದು ಪಾಠ.

ವಾ ಅವಯವಿಕರಣಮ್ ಅಸ್ಯ ದ್ವಾದಶಮಾಸೈಃ ತು ದ್ವಾದಶಾಕೃತಿಮ್ | ದಿವಃ ದ್ಯುಲೋಕಾತ್ ಪರೇ ಊರ್ಧ್ವೇ ಅರ್ಧೇ ಸ್ಥಾನೇ ತೃತೀಯಸ್ಯಾಂ ದಿವಿ ಇತ್ಯರ್ಥಃ | ಪುರೀಷಿಣಂ ಪುರೀಷವನ್ತಮ್ ಉದಕವನ್ತಮ್ ಆಹುಃ ಕಾಲ ವಿದಃ | ಅಥ ತಮೇವ ಅನ್ಯೇ ಇಮೇ ಉ ಪರೇ ಕಾಲವಿದಃ ವಿಚಕ್ಷಣಂ ನಿಪುಣಂ ಸರ್ವಜ್ಞಂ ಸಪ್ತಚಕ್ರೇ ಸಪ್ತಹಯರೂಪೇಣ[1] ಚಕ್ರೇ ಸತತಂ ಗತಿಮತಿ ಕಾಲಾ ತ್ಮನಿ ಪರೇ ಪರ್ತೃಕಮಿತಿ ಆಹುಃ ಸರ್ವಮಿದಂ ಜಗತ್ ಕಥಯನ್ತಿ ಅರ್ಪಿತಮ್ ಆರಾ ಇವ ರಥನಾಭೌ ನಿವಿಷ್ಟಮ್ ಇತಿ| ಯದಿ ಪಞ್ಚಪಾದೋ ದ್ವಾದಶಾಕೃತಿಃ ಯದಿ ವಾ ಸಪ್ತಚಕ್ರಃ ಪರಃ, ಸರ್ವಥಾಪಿ ಸಂವತ್ಸರಃ ಕಾಲಾತ್ಮಾ ಪ್ರಜಾಪತಿ ರ್ಬ್ರಹ್ಮಾದಿತ್ಯಲಕ್ಷಣೋಽಃ ಜಗತಃ ಕಾರಣಮ್ ||

(ಭಾಷ್ಯಾರ್ಥ)

ಐದು ಪಾದಗಳುಳ್ಳವನು ; ಈ ಸಂವತ್ಸರರೂಪಿಯಾದ ಆದಿತ್ಯನಿಗೆ ಐದು ಋತುಗಳು ಪಾದದಂತಿರುವವು, ಆ ಋತುಗಳಿಂದ ಇವನು ಐದು ಕಾಲುಗಳಿಂ ದಲೋ ಎಂಬಂತೆ ಸುತ್ತುತ್ತಿರುತ್ತಾನೆ. ಹೇಮಂತ, ಶಿಶಿರ– ಎಂಬ ಎರಡು (ಋತು)ಗಳನ್ನು ಒಂದಾಗಿ ಭಾವಿಸಿ ಹೀಗೆ ಕಲ್ಪನೆಮಾಡಿರುತ್ತದೆ. ಪಿತೃವು : ಈತನು ಎಲ್ಲವನ್ನೂ ಸೃಷ್ಟಿಮಾಡುತ್ತಿರುವದರಿಂದ ಇವನಿಗೆ ತಂದೆಯ ಸ್ಥಾನವಿರು ತ್ತದೆ. ಹ ನ್ನೆ ರ ಡು ಆಕೃತಿಗಳುಳ್ಳವನು ; ಹನ್ನೆರಡು ತಿಂಗಳು ಇವನಿಗೆ ಆಕೃತಿಗಳು ಎಂದರೆ ಅವಯವಗಳು : ಅಥವಾ ಹನ್ನೆರಡು ತಿಂಗಳುಗಳಿಂದ (ಆಕೃತಿಯು) ಆಕರಣವು[3] ಎಂದರೆ ಇವನನ್ನು ಅವಯವಿಯನ್ನಾಗಿ ಮಾಡು ವಿಕೆಯು (ಏರ್ಪಟ್ಟಿರುತ್ತದೆ)ಯಾದ್ದರಿಂದ (ಇವನು) ಹನ್ನೆರಡು ಆಕೃತಿಗಳುಳ ವನು. ದ್ಯುಲೋಕಕ್ಕಿಂತ[4] ಮೇಲಿರುವ ಅರ್ಧದಲ್ಲಿ ಎಂದರೆ ಸ್ಥಾನದಲ್ಲಿ, ಮೂರನೆಯ ದ್ಯುಲೋಕದಲ್ಲಿ[5] ಎಂದರ್ಥ ; ಪುರೀಷಿಯಾಗಿರುವನು, ಪುರೀಷ ವುಳ್ಳವನು, ನೀರಿನಿಂದ ಕೂಡಿರುವವನು[6] ಎಂದು ಕಾಲಜ್ಞಾನಿಗಳು ಹೇಳುವರು. ಇನ್ನು ಈತನನ್ನೇ ಬೇರೆಯ ಕಾಲಜ್ಞರು ವಿಚಕ್ಷಣನಾಗಿ, ಎಂದರೆ ನಿಪುಣನಾಗಿ, ಸರ್ವಜ್ಞನಾಗಿ, ಏಳು ಚಕ್ರವಾಗಿ ಏಳು ಕುದುರೆಗಳ ರೂಪದಿಂದ ಚಕ್ರರೂಪ

1. "ಸಪ್ತಹಯರೂಪೇ ಚಕ್ರೇ" ಎಂದು ವಾ|| ಪಾಠ.
2. "ಜನ್ಮಾದಿತ್ಯಲಕ್ಷಣೋಽಪಿ" ಎಂಬ ಆ|| ಪಾಠದಲ್ಲಿ "ಆಪಿ" ಹೆಚ್ಚು.
3. ಆಕೃತಿ ಎಂದರೆ ಆಕಾರವೆಂದು ಮೊದಲನೆಯ ವ್ಯಾಖ್ಯಾನ ; ಆಕರಣ, ಮಾಡು ವಿಕೆ ಎಂದು ಎರಡನೆಯ ವ್ಯಾಖ್ಯಾನ. ತಾತ್ಪರ್ಯವು ಎರಡು ಕಡೆಯಲ್ಲಿಯೂ ಒಂದೇ.
4. ಆಂತರಿಕ್ಷಲೋಕಕ್ಕಿಂತ.
5. ಸ್ವರ್ಗದಲ್ಲಿ.
6. ಸೂರ್ಯನಿಂದಲೇ ಮಳೆ. ಮನು. ೩–೭೬.

ನಾಗಿ ಎಂದರೆ ಎಡೆಬಿಡದೆ ನಡೆಯುತ್ತಿರುವ ಆರು ಹಾರೆಕೋಲುಗಳುಳ್ಳ ಎಂದರೆ ಆರು ಋತುಗಳಿಂದ ಕೂಡಿರುವ (ಈ) ಕಾಲಾತ್ಮನಲ್ಲಿ ಅರ್ಪಿತವಾಗಿರುವದು, ಬಂಡಿಯ ಚಕ್ರದ ಗುಂಪಿನಲ್ಲಿ ಹಾರೆಕೋಲುಗಳಂತೆ ಸೇರಿಕೊಂಡಿದೆ– ಎಂದು (ಹೇಳುವರು).

ಐದು ಪಾದಗಳುಳ್ಳವನು, ಹನ್ನೆರಡು ಆಕೃತಿಯುಳ್ಳವನು–ಎಂದೇ ಆಗಲಿ, ಏಳು ಚಕ್ರವಾಗಿರುವವನು ಆರು ಹಾರೆಕೋಲುಗಳುಳ್ಳವನು– ಎಂದೇ ಆಗಲಿ, ಹೇಗೇ ಆದರೂ ಚಂದ್ರ, ಆದಿತ್ಯ– ಎಂಬ ರೂಪದಲ್ಲಿರುವ ಸಂವತ್ಸರನೆಂಬ ಕಾಲಾತ್ಮನು ಜಗತ್ತಿಗೆ ಕಾರಣನಾಗಿರುತ್ತಾನೆ.

ಮಾಸರೂಪಿಯಾದ ಪ್ರಜಾಪತಿ

ಮಾಸೋ ವೈ ಪ್ರಜಾಪತಿಸ್ತಸ್ಯ ಕೃಷ್ಣಪಕ್ಷ ಏವ ರಯಿಃ ಶುಕ್ಲಃ ಪ್ರಾಣಸ್ತಸ್ಮಾದೇತೇ ಋಷಯಃ ಶುಕ್ಲ ಇಷ್ಟಂ ಕುರ್ವನ್ತ್ಯೇತರ ಇತರಸ್ಮಿನ್ ॥೧೨॥

೧೨. ತಿಂಗಳೇ ಪ್ರಜಾಪತಿಯು. ಅವನಿಗೆ ಕೃಷ್ಣಪಕ್ಷವೇ ರಯಿ, ಶುಕ್ಲ(ಪಕ್ಷ)ವು ಪ್ರಾಣವು. ಆದ್ದರಿಂದ ಈ ಋಷಿಗಳು ಶುಕ್ಲದಲ್ಲಿ ಇಷ್ಟವನ್ನು ಮಾಡುತ್ತಾರೆ, ಮಿಕ್ಕವರು ಇನ್ನೊಂದರಲ್ಲಿ (ಮಾಡುತ್ತಾರೆ).

(ಭಾಷ್ಯ)

೧೨. ಯಸ್ಮಿನ್ ಇದಂ ಶ್ರಿತಂ[2] ವಿಶ್ವಂ ಸ ಏವ ಪ್ರಜಾಪತಿಃ ಸಂವತ್ಸರಾಖ್ಯಃ ಸ್ವಾವಯವೇ ಮಾಸೇ ಕೃತ್ಸ್ನಃ ಪರಿಸಮಾಪ್ಯತೇ | ಮಾಸೋ ವೈ ಪ್ರಜಾಪತಿಃ | ಯಥೋಕ್ತಲಕ್ಷಣ ಏವ ಮಿಥುನಾತ್ಮಕಃ | ತಸ್ಯ ಮಾಸಾತ್ಮನಃ ಪ್ರಜಾಪತೇಃ ಏಕೋ ಭಾಗಃ ಕೃಷ್ಣಪಕ್ಷ ಏವ[3] ರಯಿಃ ಅನ್ನಂ ಚನ್ದ್ರಮಾಃ | ಅಪರೋ ಭಾಗಃ ಶುಕ್ಲಃ ಶುಕ್ಲಪಕ್ಷಃ ಪ್ರಾಣಃ ಆದಿತ್ಯಃ ಅತ್ತಾ ಅಗ್ನಿಃ | ಯಸ್ಮಾತ್ ಶುಕ್ಲಪಕ್ಷಾತ್ಮಾನಂ ಪ್ರಾಣಂ ಸರ್ವಮೇವ ಪಶ್ಯನ್ತಿ ತಸ್ಮಾತ್ ಪ್ರಾಣದರ್ಶಿನಃ ಏತೇ ಋಷಯಃ ಕೃಷ್ಣಪಕ್ಷೇಽಪಿ ಇಷ್ಟಂ ಯಾಗಂ ಕುರ್ವನ್ತಃ

---

2. ಚಕ್ರದಂತೆ ಮತ್ತೆ ಮತ್ತೆ ಸುತ್ತುತ್ತಿರುವದರಿಂದ ಚಕ್ರರೂಪನಾಗಿ ಎಂದಿದೆ. ಏಳು ಕುದುರೆಗಳಿಂದ ಏಳು ಕಿರಣಗಳು ; ಅಂದರೆ ಜಗತ್ತೆಲ್ಲಕ್ಕೂ ರಸವೀರ್ಯಾದಿಗಳನ್ನು ಕೊಟ್ಟು ಅನುಗ್ರಹಿಸುವ ರಶ್ಮಿಯೊಂದು, ಆಧಕ್ಕೆ ಅಂಗವಾಗಿರುವ ಋತ್ವಾತ್ಮಕವಾದ ರಶ್ಮಿಗಳು ಆರು- ತೈ. ಆ. ಭಾ. ೧–೩–೧ ನೋಡಿ. ಆ. ವೇ. ೯–೪–೪೩, ಋ. ವೇ. ೨–೩–೧೭ರಲ್ಲಿ ಏಳು ಕುದುರೆಗಳನ್ನು ತಿಳಿಸುವ ಮಂತ್ರವಿದೆ.

2. "ಪ್ರೋತಂ" ಎಂದು ವಾ॥ ಪಾಠ.

3. "ಏವ" ಎಂಬ ಮಾತು ಆ॥ ಪಾಠದಲ್ಲಿಲ್ಲ.

ಶುಕ್ಲಪಕ್ಷೇ ಏವ ಕುರ್ವನ್ತಿ | ಪ್ರಾಣವ್ಯತಿರೇಕೇಣ ಕೃಷ್ಣಪಕ್ಷಸ್ತೈರ್ನ ದೃಶ್ಯತೇ ಯಸ್ಮಾತ್ | ಇತರೇ ತು ಪ್ರಾಣಂ ನ ಪಶ್ಯನ್ತಿ ಇತಿ ಅದರ್ಶನಲಕ್ಷಣಂ ಕೃಷ್ಣಾತ್ಮಾನಮೇವ ಪಶ್ಯನ್ತಿ ಇತರೇ ಇತರಸ್ಮಿನ್, ಕೃಷ್ಣಪಕ್ಷೇ ಏವ ಕುರ್ವನ್ತಿ ಶುಕ್ಲೇ ಕುರ್ವನ್ತ್ಯೋಽಪಿ ॥

(ಭಾಷ್ಯಾರ್ಥ)

ಯಾವನಲ್ಲಿ ಈ (ಜಗತ್ತು) ಆಶ್ರಯಿಸಿಕೊಂಡಿರುವನೋ ಸಂವತ್ಸರನೆಂಬ ಹೆಸರಿನ ಆ ಪ್ರಜಾಪತಿಯೇ ತನ್ನ ಅವಯವವಾದ ಮಾಸದಲ್ಲಿ ಪೂರ್ಣವಾಗಿ[1] ಪರಿಸಮಾಪ್ತನಾಗಿರುತ್ತಾನೆ. ಮಾಸವೇ ಪ್ರಜಾಪತಿಯು, ಹಿಂದೆ ಹೇಳಿದ ರೂಪದ ಜೋಡಿಯಾಗಿರುವವನು.[2] ಆ ತಿಂಗಳ ರೂಪವಾಗಿರುವ ಪ್ರಜಾಪತಿಯ ಒಂದು ಭಾಗವಾಗಿರುವ ಕೃಷ್ಣಪಕ್ಷವೇ ರಯಿಯು, ಅನ್ನವು, ಚಂದ್ರನು. ಇನ್ನೊಂದು ಭಾಗವಾದ ಶುಕ್ಲವೇ ಶುಕ್ಲಪಕ್ಷವು, ಪ್ರಾಣವು, ಆದಿತ್ಯನು, ಅತ್ತೃವು, ಅಗ್ನಿ.[3] (ಹೀಗೆ) ಶುಕ್ಲಪಕ್ಷರೂಪವಾಗಿರುವ ಪ್ರಾಣನನ್ನು ಎಲ್ಲರೂ[4] ಆಗಿರುವನೆಂದು ನೋಡುತ್ತಾರಾದ್ದರಿಂದ[5] ಪ್ರಾಣ(ಸ್ವರೂಪವನ್ನು) ಬಲ್ಲ[6] ಈ ಋಷಿಗಳು ಕೃಷ್ಣಪಕ್ಷದಲ್ಲೂ ಯಾಗವನ್ನು ಮಾಡಿದ(ರೂ) ಶುಕ್ಲಪಕ್ಷದಲ್ಲಿಯೇ ಮಾಡಿದವರಾಗುತ್ತಾರೆ.[7] ಏಕೆಂದರೆ ಪ್ರಾಣನಿಗಿಂತ ಬೇರೆಯಾಗಿ ಕೃಷ್ಣಪಕ್ಷವು ಅವರಿಗೆ ಕಾಣಿಸುವದಿಲ್ಲ.[8] ಉಳಿದವರಾದರೋ ಪ್ರಾಣನನ್ನು ಅರಿಯರಾದ್ದರಿಂದ (ಯಾವದನ್ನೂ) ಕಾಣದಿರುವ ರೂಪದ ಕೃಷ್ಣಸ್ವರೂಪವನ್ನೇ ಕಾಣುತ್ತಾರೆ.

1. ಪ್ರಜಾಪತಿಯು ಸೂರ್ಯ, ಚಂದ್ರ– ಈ ಒಂದೊಂದು ರೂಪದಲ್ಲಿಯೂ ಪೂರ್ಣನಾಗಿರುತ್ತಾನೆ. ಸೂರ್ಯಚಂದ್ರರಿಂದಾಗಿರುವ ಸಂವತ್ಸರದಲ್ಲಿಯೂ ಪೂರ್ಣನಾಗಿರುತ್ತಾನೆ. ಇಪ್ಪರಂತೆಯೇ ಸಂವತ್ಸರದ ಅವಯವವಾದ ಮಾಸದಲ್ಲಿಯೂ ಪೂರ್ಣನಾಗಿರುತ್ತಾನೆಂದು ಭಾವಿಸಬೇಕು.

2. ರಯಿಪ್ರಾಣಾತ್ಮಕನಾಗಿರುವ ಎಂದರ್ಥ. ಎಲ್ಲೆಲ್ಲಿ ಪ್ರಜಾಪತಿದೃಷ್ಟಿಯನ್ನು ಮಾಡಬೇಕೆಂದು ಹೇಳಿದೆಯೋ ಅಲ್ಲೆಲ್ಲ ರಯಿಪ್ರಾಣಗಳೆಂಬ ಅವಯವಗಳನ್ನು ಭಾವಿಸಬೇಕೆಂದು ಹೇಳಿದೆ.

3. ಏಕೆಂದರೆ ಶುಕ್ಲಪಕ್ಷಕ್ಕೇ ಪ್ರಾಧಾನ್ಯ; ಕೃಷ್ಣಪಕ್ಷಕ್ಕಲ್ಲ.

4. ಎಲ್ಲವೂ ಪ್ರಾಣನೇ, ದೃಷ್ಟಿಭೇದದಿಂದ ಎಲ್ಲವೂ ರಯಿಯೇ.

5. ಭಾವಿಸುತ್ತಾರಾದ್ದರಿಂದ.

6. ಸಾಕ್ಷಾತ್ಕಾರಮಾಡಿಕೊಂಡಿರುವ.

7. ಪ್ರಾಜ್ಞಾತ್ಮೋಪಾಸಕರು ಯಾವ ಪಕ್ಷದಲ್ಲಿ ಮಾಡಿದರೂ ಶುಕ್ಲಪಕ್ಷದಲ್ಲಿಯೆ ಮಾಡಿದಂತೆ ಎಂದಿರುವದು ಆ ಉಪಾಸನೆಯನ್ನು ಹೊಗಳುವದಕ್ಕಾಗಿ.

8. ಅದೂ ಅವರ ದೃಷ್ಟಿಯಲ್ಲಿ ಶುಕ್ಲಪಕ್ಷವೇ ಆಗಿರುತ್ತದೆ. ಆದ್ದರಿಂದ ಎಲ್ಲವನ್ನೂ ಪ್ರಾಣವೆಂದು ತಿಳಿಯುವದು ಉತ್ತಮಭಾವನೆ.

(ಆದ್ದರಿಂದ ೮) ಉಳಿದವನು ಶುಕ್ಲ(ಪಕ್ಷದಲ್ಲಿ ಇಷ್ಟಿಯನ್ನು) ಮಾಡಿದರೂ ಇನ್ನೊಂದರಲ್ಲಿ ಎಂದರೆ ಕೃಷ್ಣಪಕ್ಷದಲ್ಲಿಯೇ ಮಾಡಿದವರಾಗುತ್ತಾರೆ.

ಅಹೋರಾತ್ರರೂಪನಾದ ಪ್ರಜಾಪತಿ

ಅಹೋರಾತ್ರೋ ವೈ ಪ್ರಜಾಪತಿಸ್ತಸ್ಯಾಹರೇವ ಪ್ರಾಣೋ ರಾತ್ರಿ ರೇವ ರಯಿಃ ಪ್ರಾಣಂ ವಾ ಏತೇ ಪ್ರಸ್ಕನ್ದನ್ತಿ ಯೇ ದಿವಾ ರತ್ಯಾ ಸಂಯುಜ್ಯನ್ತೇ ಬ್ರಹ್ಮಚರ್ಯಮೇವ ತದ್ ಯದ್ ರಾತ್ರೌ ರತ್ಯಾ ಸಂಯುಜ್ಯನ್ತೇ ॥ ೧೩ ॥

೧೩. ಹಗಲು ರಾತ್ರಿಯೇ ಪ್ರಜಾಪತಿಯು. ಅವನಿಗೆ ಹಗಲೇ ಪ್ರಾಣ, ರಾತ್ರಿಯೇ ರಯಿ. ಯಾರು ಹಗಲು ರತಿಯೊಡನೆ ಸಂಯೋಗಮಾಡುವರೋ ಅವರು ಪ್ರಾಣವನ್ನೇ ಚೆಲ್ಲುವರು. ರಾತ್ರಿಯಲ್ಲಿ ರತಿಯೊಡನೆ ಸಂಯೋಗವಾಗುವದುಂಟಲ್ಲ, ಅದು ಬ್ರಹ್ಮಚರ್ಯವೇ.

(ಭಾಷ್ಯಾರ್ಥ)

೧೩. ಸೋಽಪಿ ಮಾಸಾತ್ಮಾ ಪ್ರಜಾಪತಿಃ ಸ್ವಾವಯವೇ ಅಹೋರಾತ್ರೇ ಪರಿಸಮಾಪ್ಯತೇ "ಅಹೋರಾತ್ರೋ ವೈ ಪ್ರಜಾಪತಿಃ" ಪೂರ್ವವತ್[1] | ತಸ್ಯ[2] ಅಹರೇವ ಪ್ರಾಣಃ, ಅತ್ತಾ, ಅಗ್ನಿಃ | ರಾತ್ರಿ ರೇವ ರಯಿಃ ಪೂರ್ವವದೇವ[3] | ಪ್ರಾಣಮ್ ಅಹರಾತ್ಮಾನಂ ವಾ ಏತೇ ಪ್ರಸ್ಕನ್ದನ್ತಿ ನಿರ್ಗಮಯನ್ತಿ ಕ್ಷೀಣಯನ್ತಿ ವಾ ಸ್ವಾತ್ಮನೋ ವಿಚ್ಛಿದ್ಯ ಅಪನಯನ್ತಿ | ಕೇ ? ಯೇ ದಿವಾ ಅಹನಿ ರತ್ಯಾ ರತಿಕಾರಣಭೂತಯಾ ಸಹ ಸ್ತ್ರಿಯಾ ಸಂಯುಜ್ಯನ್ತೇ[4] ಮೈಥುನಮಾಚರನ್ತಿ ಮೂಢಾಃ | ಯತ ಏವಂ ತಸ್ಮಾತ್ ತನ್ನ ಕರ್ತವ್ಯಮ್ ಇತಿ ಪ್ರತಿಷೇಧಃ ಪ್ರಾಸಜ್ಯಿಕಃ | ಯತ್ ರಾತ್ರೌ ಸಂಯುಜ್ಯನ್ತೇ ರತ್ಯಾ ಋತೌ ಬ್ರಹ್ಮಚರ್ಯಮೇವ ತತ್ ಇತಿ ಪ್ರಶಸ್ತತ್ವಾತ್ ರಾತ್ರೌ[5] ಭಾರ್ಯಾಗಮನಂ ಕರ್ತವ್ಯಂ ಇತ್ಯಯಮಪಿ ಪ್ರಾಸಜ್ಯಿಕೋ ವಿಧಿಃ ॥

---

1. "ಪರಿಸಮಾಪ್ಯತೇ ಪೂರ್ವವತ್" ಎಂದು ಆ॥ ಪಾಠ : ಆ ಪಾಠದಲ್ಲಿ "ಅಹೋರಾತ್ರೋ ವೈ ಪ್ರಜಾಪತಿಃ" ಎಂಬ ವಾಕ್ಯವು ಕೈಬಿಟ್ಟುಹೋಗಿರುತ್ತದೆ.
2. "ತಸ್ಯಾಪಿ" ಎಂದು ಆ॥ ಪಾಠ.
3. "ಪೂರ್ವವತ್" ಎಂದಿಷ್ಟೇ ಆ॥ ಪಾಠ.
4. "ಸಂಯುಜ್ಯನ್ತೇ ಮಿಥುನವತ್" ಎಂದು ಆ॥ ಪಾಠ.
5. "ರಾತ್ರೌ" ಎಂಬುದಕ್ಕೆ "ಋತೌ" ಎಂದು ಆ॥ ಪಾಠ. "ರಾತ್ರೌ" ಎಂಬ ವಾ॥ ಪಾಠವು ಉತ್ತಮ.

(ಭಾಷ್ಯಾರ್ಥ)

ಆ ತಿಂಗಳರೂಪದಲ್ಲಿರುವ ಪ್ರಜಾಪತಿಯೂ ತನ್ನ ಅವಯವವಾದ ಅಹೋರಾತ್ರ(ರೂಪವಾದ ದಿವಸದಲ್ಲಿ) ಪರಿಸಮಾಪ್ತನಾಗಿರುತ್ತಾನೆ[1] 'ಅಹೋರಾತ್ರವೇ ಪ್ರಜಾಪತಿಯು' ಎಂದಿರುವ (ವಾಕ್ಯಕ್ಕೆ) ಹಿಂದಿನಂತೆ (ಅರ್ಥವನ್ನು ಮಾಡಬೇಕು).[2] ಅವನಿಗೆ ಹಗಲೇ ಪ್ರಾಣ ಎಂದರೆ ಅತ್ತ್ರಿ, ಅಗ್ನಿ ; ರಾತ್ರಿಯೇ ರಯಿ ಎಂಬುದು ಹಿಂದಿನಂತೆಯೇ.[3] ಅವರು ಹಗಲಿನ ರೂಪದಲ್ಲಿರುವ ಪ್ರಾಣವನ್ನೇ ಚಲ್ಲಿದವರಾಗುತ್ತಾರೆ, ಹೊರಹೊರಡಿಸಿದವರಾಗುತ್ತಾರೆ ; ಅಥವಾ ಒಣಗಿಸಿದವರಾಗುತ್ತಾರೆ.[4] ತಮ್ಮಿಂದ ಬೇರ್ಪಡಿಸಿ ಹೊರಕ್ಕೆ ಹಾಕಿದವರಾಗುತ್ತಾರೆ (ಎಂದೂ 'ಪ್ರಸ್ಕನ್ದನ್ತಿ' ಎಂಬ ಮಾತಿಗೆ ಅರ್ಥವನ್ನು ಮಾಡಬಹುದು. ಹೀಗೆ ಮಾಡುವವರು) ಯಾರು ? ಎಂದರೆ ಯಾರು ಹಗಲುಹೊತ್ತಿನಲ್ಲಿ ರತಿಯೊಡನೆ ಎಂದರೆ ರತಿಗೆ ಕಾರಣಭೂತವಾಗಿರುವ ಹೆಂಗಸಿನೊಡನೆ ಕೂಡುವರೋ ಮೈಥುನಕರ್ಮವನ್ನಾಚರಿಸುವರೋ (ಅ) ಮೂಢರು. ಹೀಗಿರುವದರಿಂದ ಅದನ್ನು ಮಾಡಬಾರದು ಎಂದು ಪ್ರಸಂಗದಿಂದ[5] ನಿಷೇಧಮಾಡಿರುತ್ತದೆ. ರಾತ್ರಿಯಲ್ಲಿ ರತಿಯೊಡನೆ ಋತುಕಾಲದಲ್ಲಿ ಕೂಡುವದೆಂಬುದು ಬ್ರಹ್ಮಚರ್ಯವೇ. ಹೀಗೆಂದು (ಅದನ್ನು) ಹೊಗಳಿರುವದರಿಂದ ರಾತ್ರಿಯಲ್ಲಿ[6] ಭಾರ್ಯಾಗಮನವನ್ನು ಮಾಡಬೇಕು ಎಂಬಿದೂ ಪ್ರಾಸಂಗಿಕವಾದ ವಿಧಿಯು.

ಅನ್ನರೂಪವಾದ ಪ್ರಜಾಪತಿ

(ಭಾಷ್ಯ)

೧೯. ಪ್ರಕೃತಂ ತು ಉಚ್ಯತೇ ಸಃ ಅಹೋರಾತ್ರಾತ್ಮಕಃ ಪ್ರಜಾಪತಿಃ ವ್ರೀಹಿಯವಾದ್ಯನ್ನಾತ್ಮನಾ ವ್ಯವಸ್ಥಿತಃ ; ಏವಂಕ್ರಮೇಣ ಪರಿಣಮ್ಯ—

---

1. "ಪರಿಸಮಾಪ್ಯತೇ ಪೂರ್ವವತ್" ಎಂಬ ಆಶ್ವಲಾಯನ ಶಾಖೆಯಲ್ಲಿ ಪೂರ್ಣವಾಗಿ ಪರಿಸಮಾಪ್ತನಾಗಿರುತ್ತಾನೆ ಎಂಬರ್ಥವನ್ನು ಹೇಳಬಹುದು. ಒಂದೊಂದು ಅಹೋರಾತ್ರವನ್ನೂ ಪೂರ್ಣವಾಗಿ ಪ್ರಜಾಪತಿಯೇ ಎಂದು ಭಾವಿಸಬೇಕು ; ಪ್ರಜಾಪತಿಯ ಒಂದಂಶವೆಂದು ಭಾವಿಸಬೇಕಾಪದ್ದಿಲ್ಲ ಎಂದು ಆಭಿಪ್ರಾಯ.

2. ಹಿಂದೆ ಹೇಳಿದಂತೆ ರಯಿಪ್ರಾಣಗಳೆಂಬ ಮಿಥುನರೂಪವಾಗಿರುವ ಪ್ರಜಾಪತಿಯೆಂದು ತಿಳಿಯಬೇಕು ಎಂಬು ಅಭಿಪ್ರಾಯ.

3. ರಯಿಯು ಎಂಬದೆ ಅನ್ನವು, ಹಂದ್ಯನು—ಎಂದರ್ಥ.

4. "ಸ್ಕನ್ದಿರ್ ಗತಿಶೋಷಣಯೋಃ" ಎಂದು ಸ್ಕನ್ದ್ ಧಾತುವಿಗೆ ಗಮನ, ಶೋಷಣ —ಎಂಬ ಎರಡು ಅರ್ಥಗಳನ್ನೂ ಇಲ್ಲಿ ತೆಗೆದುಕೊಳ್ಳಬಹುದು ಎಂಬು ಭಾವ.

5. ಹಗಲು ಸ್ತ್ರೀಸಂಬಂಧವನ್ನು ಮಾಡಬಾರದೆಂಬುದಾಗಲಿ ಮಾಡಬೇಕೆಂಬುದಾಗಲಿ ಪ್ರಕೃತವಲ್ಲ; ಈ ವಿಧಿನಿಷೇಧಗಳು ಪ್ರಾಸಂಗಿಕವು. ಪ್ರಜಾಪತಿಯು ಅನ್ನರೇತಸ್ಸಿನ ಕ್ರಮದಿಂದ ಪ್ರಜೆಗಳನ್ನು ಉತ್ಪತ್ತಿಮಾಡುತ್ತಾನೆ ಎಂಬುದು ಪ್ರಕೃತವು.

6. ಋತುಕಾಲದಲ್ಲಿ ಎಂಬುದನ್ನು ಇಲ್ಲಿ ಸೇರಿಸಿಕೊಳ್ಳಬೇಕು.

(ಭಾಷ್ಯಾರ್ಥ)

ಆದರೆ ಪ್ರಕೃತವಾದದ್ದೇನೆಂದರೆ ಹೇಳುತ್ತೇವೆ. ಈ ಹಗಲುರಾತ್ರಿಯ ರೂಪದ ಪ್ರಜಾಪತಿಯು ಬತ್ತ, ಜನೆಗೋಧಿ-ಮುಂತಾವ ಅನ್ನದ ರೂಪದಿಂದ (ಪರಿಣಾಮವಾಗಿ) ನಿಲ್ಲುತ್ತಾನೆ. ಈ ಕ್ರಮದಲ್ಲಿ ಪರಿಣಾಮವಾಗಿರುವ—

ಅನ್ನಂ ವೈ ಪ್ರಜಾಪತಿಸ್ತತೋ ಹ ವೈ ತದ್ರೇತಸ್ತಸ್ಮಾದಿಮಾಃ
ಪ್ರಜಾಃ ಪ್ರಜಾಯನ್ತ ಇತಿ ॥ ೧೪ ॥

೧೪. ಅನ್ನವೇ ಪ್ರಜಾಪತಿಯು. ಅದರಿಂದಲೇ ಆ ರೇತಸ್ಸು. ಅದರಿಂದಲೇ ಈ ಪ್ರಜೆಗಳು ಉಂಟಾಗುವರು.

(ಭಾಷ್ಯ)

೨೦. ತತ್ ಅನ್ನಂ ವೈ ಪ್ರಜಾಪತಿಃ | ಕಥಮ್? ತತಃ ತಸ್ಮಾತ್ ಹ ವೈ ರೇತಃ ನೃಬೀಜಂ ತತ್ ಪ್ರಜಾಕಾರಣಮ್ | ತಸ್ಮಾತ್ ಯೋಷಿತಿ ಸಿಕ್ತಾತ್ ಇಮಾಃ ಮನುಷ್ಯಾದಿಲಕ್ಷಣಾಃ ಪ್ರಜಾಃ ಪ್ರಜಾಯನ್ತೇ | ಯತ್ ಪೃಷ್ಟಂ ಕುತೋ ಹ ವೈ ಪ್ರಜಾಃ ಪ್ರಜಾಯನ್ತೇ ಇತಿ ತದೇವಂ ಚನ್ದ್ರಾದಿತ್ಯಮಿಥುನಾದಿಕ್ರಮೇಣ ಅಹೋರಾತ್ರಾನ್ತೇನ ಅನ್ನರೇತೋದ್ವಾರೇಣ[1] ಪ್ರಜಾಃ ಪ್ರಜಾಯನ್ತೇ ಇತಿ ನಿರ್ಧೃತಮ್ ॥

(ಭಾಷ್ಯಾರ್ಥ)

ಆ ಅನ್ನವೇ ಪ್ರಜಾಪತಿಯು. ಹೇಗೆಂದರೆ ಅದರಿಂದಲೇ ಆ (ಅನ್ನದಿಂದ)ಲೇ ಅಲ್ಲವೆ, ಪ್ರಜಾಕಾರಣವಾದ ರೇತಸ್ಸು ಎಂದರೆ ಮನುಷ್ಯನಲ್ಲಿರುವ ಬೀಜವು? ಸ್ತ್ರೀಯಲ್ಲಿ ಚಿಮುಕಿಸಿದ ಆ (ರೇತಸ್ಸಿ)ನಿಂದ ಈ ಮನುಷ್ಯನೇ ಮುಂತಾದ ಪ್ರಜೆಗಳು ಹುಟ್ಟುತ್ತಾರೆ.

"ಪ್ರಜೆಗಳು ಎಲ್ಲಿಂದ ಹುಟ್ಟುತ್ತಾರೆ" ಎಂದು (ಕಬಂಧಿಯು) ಕೇಳಿದನಷ್ಟೆ, ಅದಕ್ಕೆ ಹೀಗೆ ಚಂದ್ರ, ಆದಿತ್ಯ-ಎಂಬ ಮಿಥುನವೇ ಮುಂತಾಗಿರುವ ಅಹೋರಾತ್ರದವರೆಗಿರುವ (ಮಿಥುನಗಳ) ಕ್ರಮದಿಂದ ಅನ್ನ, ರೇತಸ್ಸು-ಈ ಮೂಲಕವಾಗಿ ಪ್ರಜೆಗಳು ಹುಟ್ಟುತ್ತಾರೆ ಎಂದು ನಿರ್ಣಯಮಾಡಿ (ಉತ್ತರ) ಹೇಳಿದಂತೆ ಆಯಿತು.

1. "ಆನ್ನಾಸ್ಯಗ್ರೇತೋದ್ವಾರೇಣ" ಎಂದು ಆ॥ ಪಾಠದಲ್ಲಿ "ಅಸ್ಯಕ್" ಎಂಬ ಮಾತು ಹೆಚ್ಚಾಗಿದೆ.

ಕರ್ಮಿಗಳಿಗೂ ಸಮುಚ್ಚಯಾನುಷ್ಠಾನವನ್ನು ಮಾಡುವವರಿಗೂ ದೊರಕುವ ಫಲಗಳು

ತದ್ ಯೇ ಹ ವೈ ತತ್ ಪ್ರಜಾಪತಿವ್ರತಂ ಚರನ್ತಿ ತೇ ಮಿಥುನ ಮುತ್ಪಾದಯನ್ತೇ। ತೇಷಾಮೇವೈಷ ಬ್ರಹ್ಮಲೋಕೋ ಯೇಷಾಂ ತಪೋ ಬ್ರಹ್ಮಚರ್ಯಂ ಯೇಷು ಸತ್ಯಂ ಪ್ರತಿಷ್ಠಿತಮ್ ॥೧೫॥

೧೫. ಆದ್ದರಿಂದ ಯಾರಾವರೆ ಆ ಪ್ರಜಾಪತಿವ್ರತವನ್ನು ಮಾಡುವರೋ ಅವರು ಮಿಥುನವನ್ನು ಉಂಟುಮಾಡುತ್ತಾರೆ. ತಪಸ್ಸು, ಬ್ರಹ್ಮಚರ್ಯವೂ ಯಾರವೋ ಯಾರಲ್ಲಿ ಸತ್ಯವು ಪ್ರತಿಷ್ಠಿತವಾಗಿರುತ್ತದೆಯೋ ಅವರಿಗೇ ಈ ಬ್ರಹ್ಮಲೋಕವು.

(ಭಾಷ್ಯ)

೧೫. ತತ್ ತತ್ರ ಏವಂ ಸತಿ ಯೇ ಗೃಹಸ್ಥಾಃ | ಹ ವೈ ಇತಿ ಪ್ರಸಿದ್ಧ ಸ್ಮರಣಾರ್ಥೌ ನಿಪಾತೌ | ತತ್ ಪ್ರಜಾಪತೇಃ ವ್ರತಮ್ ಋತೌ ಭಾರ್ಯಾ ಗಮನಂ ಚರನ್ತಿ ಕುರ್ವನ್ತಿ ತೇಷಾಂ ದೃಷ್ಟಫಲಮ್ ಇದಮ್ | ಕಿಮ್ ? ತೇ ಮಿಥುನೇನ ಪುತ್ರಂ ದುಹಿತರಂ ಚ ಉತ್ಪಾದಯನ್ತೇ | ಅದೃಷ್ಟಂ ಚ ಫಲಮ್ ಇಷ್ಟಾಪೂರ್ತದತ್ತಕಾರಿಣಾಂ ತೇಷಾಮೇವ ಏಷ ಯಶ್ಚಾನ್ದ್ರಮಸೋ ಬ್ರಹ್ಮಲೋಕಃ, ಪಿತೃಯಾಣಲಕ್ಷಣಃ | ಯೇಷಾಂ ತಪಃ ಸ್ನಾತಕವ್ರತಾದಿ[1] ಬ್ರಹ್ಮಚರ್ಯಮ್ ಋತೋರನ್ಯತ್ರ[2] ವೈಥುನಾಸಮಾಚರಣಮ್[3] | ಯೇಷು ಚ ಸತ್ಯಮ್ ಅನೃತವರ್ಜನಮ್ ಪ್ರತಿಷ್ಠಿತಮ್ ಅವ್ಯಭಿಚಾರಿತಯಾ ವರ್ತತೇ ನಿತ್ಯಮೇವ ||

(ಭಾಷ್ಯಾರ್ಥ)

ಆದ್ದರಿಂದ ಇದು ಹೀಗಿರುವದರಿಂದ[4] ಯಾವ ಗೃಹಸ್ಥರು 'ಹ' 'ವೈ' ಎಂಬ ನಿಪಾತಗಳೆರಡೂ (ಇದು) ಪ್ರಸಿದ್ಧವಾದದ್ದೆಂದು ನೆನಪುಕೊಡುವದಕ್ಕೆ (ಬಂದಿವೆ). ಪ್ರಜಾಪತಿಯ ವ್ರತವನ್ನು ಎಂದರೆ ಋತುಕಾಲದಲ್ಲಿ ಭಾರ್ಯಾ

---

1. "ವ್ರತಾದೀನಾ" ಎಂದು ಆ॥ ಪಾಠ.
2. 'ಋತಾವನ್ಯತ್ರ' ಎಂಬ ಆ॥ ಪಾಠಕ್ಕಿಂತ ಈ ವಾ॥ ಪಾಠವು ಉತ್ತಮ.
3. ಈ ಮಾತಿನ ಮುಂದೆ 'ಬ್ರಹ್ಮಚರ್ಯಮಿತಿ' ಎಂದು ಆ॥ ಪಾಠದಲ್ಲಿ ಹೆಚ್ಚಾಗಿದೆ.
4. ಪ್ರಜಾಪತಿಯಿಂದಲೇ ಪ್ರಜೆಗಳು ಹುಟ್ಟುವರಾದ್ದರಿಂದ.
5. ಮುಂದೆ ಮಕ್ಕಳನ್ನು ಪಡೆಯುವರೆಂದು ಹೇಳಿರುವದರಿಂದ ಇಷ್ಟು ವಿಷಯ ಆಶ್ರಮಿಗಳಿಗೆ ಹೊಂದುವಹಾಗಿಲ್ಲ. ಕರ್ಮಕ್ಕೆ ಆಗುವ ಗತಿಯನ್ನು ಈ ಮಂತ್ರದಲ್ಲಿ ಕೇಳಿದೆಯೆಂಬುದಕ್ಕೆ ಇದೊಂದು ಗುರುತು.

ಗಮನವನ್ನು[1] ಮಾಡುತ್ತಾರೋ ಅವುಗೆ ಇದು ದೃಷ್ಟಫಲವು.[2] ಯಾವದು? ಎಂದರೆ ಅವರು ಮಿಥುನವನ್ನು ಎಂದರೆ ಮಗ, ಮಗಳು–(ಹೀಗೆ ಅವಳಿ ಮಕ್ಕಳನ್ನು) ಉಂಟುಮಾಡುತ್ತಾರೆ.[3] ಅದೃಷ್ಟವಾದ ಫಲವೂ (ಉಂಟು). ಇಷ್ಟ, ಪೂರ್ತ, ದತ್ತ[4]–ಇವುಗಳನ್ನು ಮಾಡುವ ಅವರಿಗೇ ಈ ಚಂದ್ರನ ಸಂಬಂಧವಾದ ಪಿತೃಯಾಣರೂಪವಾದ ಬ್ರಹ್ಮಲೋಕವು,[5] ಯಾರಿಗೆ ಸ್ನಾತಕವ್ರತವೇ[6] ಮುಂತಾದ ತಪಸ್ಸು; ಬ್ರಹ್ಮಚರ್ಯವು ಎಂದರೆ ಋತುಃ(ಕಾಲದಲ್ಲಿ) ಹೊರತು ಮಿಕ್ಕ (ಕಾಲ)ದಲ್ಲಿ ಮೈಥುನವನ್ನು ಮಾಡದಿರುವದು[7]–(ಇವು ಇರುವವೋ) ಮತ್ತು ಯಾರಲ್ಲಿ ಸತ್ಯವು ಎಂದರೆ ಸುಳ್ಳನ್ನು ಹೇಳದೆ ಇರುವದು ಪ್ರತಿಷ್ಠಿತವಾಗಿರುವದೋ ತಪ್ಪದೆ ಯಾವಾಗಲೂ ನೆಲೆನಿಂತಿರುವದೋ[8] ಅವರಿಗೇ ಈ ಬ್ರಹ್ಮಲೋಕವು ಸಿಕ್ಕುವದು.

ತೇಷಾಮಸೌ ವಿರಜೋ ಬ್ರಹ್ಮಲೋಕೋ
ನ ಯೇಷು ಜಿಹ್ಮಮನೃತಂ ನ ಮಾಯಾ ಚೇತಿ ॥೧೬॥

೧೬. ಯಾರಲ್ಲಿ ಜಿಹ್ಮವಾಗಲಿ ಅನೃತವಾಗಲಿ ಮಾಯೆಯಾಗಲಿ –ಇಂಥವು ಇಲ್ಲವೋ ಅವರಿಗೆ ಆ ವಿರಜವಾದ ಬ್ರಹ್ಮಲೋಕವು.

(ಭಾಷ್ಯ)

೨೨. ಯಸ್ತು ಪುನಃ ಆದಿತ್ಯೋಽಪಲಕ್ಷಿತಃ ಉತ್ತರಾಯಣಃ ಪ್ರಾಣಾತ್ಮಭಾವಃ ವಿರಜಃ ಶುದ್ಧಃ ನ ಜನ್ದ್ರಬ್ರಹ್ಮಲೋಕವತ್ ರಜಸ್ವಲಃ ವೃದ್ಧಿಕ್ಷಯಾದಿ

---

1. ಋತುಕಾಲದಲ್ಲಿಯೇ ರಾತ್ರಿಯೇ ಭಾರ್ಯಾಗಮನವನ್ನು ಮಾಡುವರೋ ಎಂದರ್ಥ. ಋತುಕಾಲದಲ್ಲಿಯೇ ಮಾಡಬೇಕು, ರಾತ್ರಿಯಲ್ಲಿಯೇ ಮಾಡಬೇಕು, ಭಾರ್ಯಾಗಮನವನ್ನೇ ಮಾಡಬೇಕು ಎಂಬ ಅವಧಾರಣೆಗಳನ್ನು ಒಟ್ಟುಗೂಡಿಸಿ ಪ್ರಜಾಪತಿವ್ರತ ಎಂದು ಕರೆದಿದೆ.

2. ಈ ಲೋಕದಲ್ಲಿ ಕಾಣಬರುವ ಫಲವು.

3. ಇಂಥ ಅವಳಿಮಕ್ಕಳು ಅವಶ್ಯವಾಗಿ ಉಂಟಾಗುತ್ತಾರೆ.

4. ಯಜ್ಞದಲ್ಲಲ್ಲದೆ ಮಿಕ್ಕೆಡೆಗಳಲ್ಲಿ ದೇಶಕಾಲಪಾತ್ರವನ್ನರಿತು ಮಾಡುವ ದಾನ.

5. ಬ್ರಹ್ಮಲೋಕವೆಂದರೆ ಹೆಚ್ಚಿನ ಲೋಕವು. ಬ್ರಹ್ಮಲೋಕವೆಂದರೆ ಇಲ್ಲಿ ಚಂದ್ರನ ಲೋಕವು; ಸ್ವರ್ಗವು. ಮುಂ. ಭಾ. ೧–೨–೬ ನೋಡಿ.

6. ಬ್ರಹ್ಮಚರ್ಯವನ್ನು ಮುಗಿಸಿ ಗೃಹಸ್ಥನಾಗುವವನು ಅನುಸರಿಸಬೇಕಾದ ನಿಯಮಗಳು.

7. ಪೂರ್ಣಬ್ರಹ್ಮಚರ್ಯವು ಗೃಹಸ್ಥರಿಗೆ ಇಲ್ಲವಾದದ್ದರಿಂದ ಹೀಗೆ ಅರ್ಥವನ್ನು ಮಾಡಿದೆ. ತಪಸ್ಸು, ಸತ್ಯ–ಇವುಗಳನ್ನೂ ಹೀಗೆಯೇ ತಿಳಿಯಬೇಕು. ಯಾ. ಸ್ಮೃ. ೧–೧೨ನ್ನು ನೋಡಿ.

8. ಅವರ್ಜನೀಯವಾದ ಸಂದರ್ಭದಲ್ಲಿ ಹೊರತು ನ್ಹಂದು ಭಾವ. ಮುಂದಿನ ಮಂತ್ರದ ಭಾಷ್ಯದಲ್ಲಿ ಇದು ಸ್ಪಷ್ಟವಾಗಿದೆ.

ಯುಕ್ತಃ ಅಸೌ ತೇಷಾಮ್ | ಕೇಷಾಮಿತಿ ?[1] ಉಚ್ಯತೇ | ಯಥಾ ಗೃಹಸ್ಥಾನಾಮ್ ಅನೇಕವಿರುದ್ಧಸಂವ್ಯವಹಾರಪ್ರಯೋಜನವತ್ತ್ವಾತ್ ಜಿಹ್ಮಂ ಕೌಟಿಲ್ಯಮ್ ವಕ್ರಭಾವಃ ಅವಶ್ಯಂಭಾವಿ ತಥಾ ನ ಯೇಷು ಜಿಹ್ಮಮ್ | ಯಥಾ ಚ ಗೃಹಸ್ಥಾನಾಂ ಕ್ರೀಡಾದಿನಿರ್ಮಾನಿಮಿತ್ತಮ್[2] ಅನೃತಮ್ ಅವರ್ಜನೀಯಮ್ ತಥಾ ನ ಯೇಷು ತತ್ | ತಥಾ ಮಾಯಾ ಗೃಹಸ್ಥಾನಾಮಿವ ನ ಯೇಷು ವಿದ್ಯತೇ | ಮಾಯಾ ನಾಮ ಬಹಿರನ್ಯಥಾ ಆತ್ಮಾನಂ ಪ್ರಕಾಶ್ಯ ಅನ್ಯಥೈವ ಕಾರ್ಯಂ ಕರೋತಿ ಸಾ ಮಾಯಾ ಮಿಥ್ಯಾಚಾರರೂಪಾ | (ಮಾಯಾ) ಇತಿ ಏವಮಾದಯೋ ದೋಷಾಃ ಯೇಷು ಏಕಾಕಿಷು[3] ಬ್ರಹ್ಮಚಾರಿವಾನಪ್ರಸ್ಥ ಭಿಕ್ಷುಷು ನಿಮಿತ್ತಾಭಾವಾತ್ ನ ವಿದ್ಯನ್ತೇ ತತ್ಸಾಧನಾನುರೂಪ್ಯೇಣೈವ[4] ತೇಷಾಮ್ ಅಸೌ ವಿರಜೋ ಬ್ರಹ್ಮಲೋಕಃ[5] ಇತ್ಯೇಷಾ ಜ್ಞಾನಯುಕ್ತಕರ್ಮವತಾಂ ಗತಿಃ | ಪೂರ್ವೋಕ್ತಸ್ತು ಬ್ರಹ್ಮಲೋಕಃ ಕೇವಲಕರ್ಮಿಣಾಂ ಚನ್ದ್ರಲಕ್ಷಣಃ ಇತಿ ||[6]

(ಭಾಷಾರ್ಥ)

ಇನ್ನು ಆದಿತ್ಯನೆಂಬ ಉಪಲಕ್ಷಣವುಳ್ಳ[5] ಉತ್ತರಾಯಣದ ಪ್ರಾಣನೇ ತಾನಾಗುವ, ವಿರಜವಾದ ಶುದ್ಧವಾದ– ಕಶ್ಮಲದಿಂದ ಕೂಡಿರುವ ಚಂದ್ರ ಬ್ರಹ್ಮಲೋಕದಂತೆ ವೃದ್ಧಿಕ್ಷಯಾದಿಗಳಿಂದೊಡಗೂಡಿರುವದಲ್ಲದ (ಬ್ರಹ್ಮಲೋಕ ವಿದೆಯಲ್ಲ), ಆದು[6] ಅವರಿಗೆ. ಯಾರಿಗೆ? ಎಂದರೆ (ಶ್ರುತಿ) ಹೇಳುತ್ತದೆ : ಹೇಗೆ ಗೃಹಸ್ಥರಿಗೆ ಅನೇಕವಾದ (ಒಂದಕ್ಕೊಂದು) ವಿರುದ್ಧವಾದ ವ್ಯವಹಾರಗಳನ್ನು (ಅಯಾ) ಪ್ರಯೋಜನಕ್ಕಾಗಿ ಮಾಡಬೇಕಾಗಿರುವದರಿಂದ ಜಿಹ್ಮವು, ಎಂದರೆ ಕುಟಿಲಭಾವವು, ಕೊಂಕಿನ ನಡತೆಯು ಇದ್ದೇ ತೀರುವದೋ ಹಾಗೆ ಯಾರಲ್ಲಿ ಜಿಹ್ಮವು (ಇರುವ)ದಿಲ್ಲವೋ (ಅವರಿಗೆ), ಮತ್ತು ಹೇಗೆ ಗೃಹಸ್ಥರಿಗೆ ಆಟ, ಹಾಸ್ಯ– ಮುಂತಾದ ನಿಮಿತ್ತಗಳಿಂದ ಅನೃತವು ಬಿಡುವದಕ್ಕೆ ಆಗದೆ ಇರು

1. 'ಕೇಷಾಂ ತೇಷಾಂ' ಎಂಬ ಆ॥ ಪಾಕ್ಕಿಂತ ವಾ॥ ಪಾಠವೇ ಮೇಲು.

2. 'ಕ್ರೀಡಾದಿನಿಮಿತ್ತಮ್' ಎಂದು ವಾ॥ ಪಾಠ.

3. 'ಅಧಿಕಾರಿಷು' ಎಂದು ಆ॥ ಪಾಠ; ಇಲ್ಲಿರುವದು ವಾ॥ ಪಾಠ.

4. 'ತತ್ಸಾಧನಾನುರೂಪೇಣೈವ' ಎಂದು ಆ ಪಾಠ; ಇದು ವಾ॥ ಪಾಠ.

5. ಚಂದ್ರನೆಂಬ ಹೆಸರಿನಿಂದ ಸ್ವರ್ಗವನ್ನು ಗ್ರಹಿಸುವಂತೆ ಆದಿತ್ಯನೆಂಬ ಹೆಸರಿನಿಂದ ಪ್ರಾಣ (ಹಿರಣ್ಯಗರ್ಭ)ನ ಬ್ರಹ್ಮಲೋಕವನ್ನು ಗ್ರಹಿಸಬೇಕು ಎಂದು ಭಾವ.

6. ಬಹುಕಾಲವಿರುವ ಆ ಬ್ರಹ್ಮಲೋಕವು. ಈ ಬ್ರಹ್ಮಲೋಕ, ಆ ಬ್ರಹ್ಮಲೋಕ–ಎಂಬ ವಿಶೇಷಣಗಳಿಂದ ಬೇರೆಬೇರೆಯ ಬ್ರಹ್ಮಲೋಕಗಳನ್ನು ಗ್ರಹಿಸಬೇಕು.

ವದೋ[1] ಹಾಗೆ, ಯಾರಲ್ಲಿ ಆ ಸುಳ್ಳು ಇರುವದಿಲ್ಲವೋ (ಅವರಿಗೆ), ಹಾಗೂ ಗೃಹಸ್ಥರಲ್ಲಿರುವಂತೆ ಯಾರಲ್ಲಿ ಮಾಯೆ ಇರುವದಿಲ್ಲವೋ (ಅವರಿಗೆ). ಮಾಯೆ ಎಂದರೆ ಹೊರಗೆ ಒಂದು ಬಗೆಯಿಂದ ತನ್ನನ್ನು ತೋರಿಸಿಕೊಳ್ಳುತ್ತಾ ಮತ್ತೊಂದು ಬಗೆಯಲ್ಲಿಯೇ ಕೆಲಸವನ್ನು ಮಾಡುತ್ತಾರಲ್ಲ, ಅದು ಮಾಯೆ, ಠಕ್ಕಿನ ನಡತೆಯ ರೂಪವಾಗಿರತಕ್ಕದ್ದು. (ಈ ಮಾಯೆ)[2] ಮುಂತಾದವು, ಇವೇ ಮುಂತಾದ ದೋಷಗಳು ಯಾವ ಒಂಟಿಯಾಗಿರುವ[3] ಬ್ರಹ್ಮಚಾರಿ, ವಾನಪ್ರಸ್ಥ, ಸಂನ್ಯಾಸಿ–ಇವರಲ್ಲಿ ಕಾರಣನಿಲ್ಲದ್ದರಿಂದ[4] ಇರುವದಿಲ್ಲವೋ, ಅವರ ಸಾಧನಕ್ಕೆ ಅನುಗುಣವಾಗಿಯೇ ಅವರಿಗೆ ಆ ವಿರಜವಾದ ಬ್ರಹ್ಮಲೋಕವು (ಸಿಕ್ಕುವದು). ಇಗೋ ಇದು ಉಪಾಸನೆಯಿಂದ ಕೂಡಿದ ಕರ್ಮಗಳಿಗೆ ಆಗುವ ಗತಿಯು. ಹಿಂದೆ ಹೇಳಿದ ಬ್ರಹ್ಮಲೋಕವೆಂಬುದಾದರೋ ಕೇವಲ ಕರ್ಮಿಗಳಿಗೆ ಸಿಕ್ಕುವ ಚಂದ್ರರೂಪವಾದದ್ದು.

1. ಹಾಸ್ಯಕ್ಕಾಗಿ, ಸ್ತ್ರೀಯರೊಡನೆ ಮಾತನಾಡುವಾಗ, ವಿವಾಹದಲ್ಲಿ, ಪ್ರಾಣಕ್ಕೆ ಅಪಾಯವಿರುವಾಗ, ಸರ್ವಾರ್ಥವೂ ಹೋಗುತ್ತಿರುವಾಗ, ಸುಳ್ಳುಹೇಳಿದರೆ ಬಾಧಕವಿಲ್ಲ ವೆಂಬ ಆಪದ್ಧರ್ಮ (ಮಹಾ ಭಾ. ಶಾಂ. ೧೬೫.೫೦) ವಾಕ್ಯವನ್ನು ಇಲ್ಲಿ ನೆನಪಿಗೆ ತಂದು ಕೊಳ್ಳಬೇಕು.

2. ‘‘ಮಾಯಾ’’ ಎಂಬ ಮಾತು ಇಲ್ಲದಿದ್ದರೂ ಸಾಗುತ್ತದೆ. ಇತಿ ಎಂಬುದಕ್ಕೇ ಏವಮಾದಯಃ ಎಂಬುದು ವ್ಯಾಖ್ಯಾನವೆಂದು ಭಾವಿಸುವದಕ್ಕೂ ಆಗುತ್ತದೆ.

3. “ಅಧಿಕಾರಿಷು ” ಎಂಬ ಅ॥ ಕಾ॥ ಪಾಠದಲ್ಲಿ “ಯಾವ ಬ್ರಹ್ಮಚಾರಿ ವಾನಪ್ರಸ್ಥ ಸಂನ್ಯಾಸಿಗಳೆಂಬ ಅಧಿಕಾರಿಗಳಲ್ಲಿ ” ಎಂದು ಕನ್ನಡಿಸಿಕೊಳ್ಳಬೇಕು.

4. ಪರಸ್ಪರವಿರುದ್ಧವಾದ ಅನೇಕ ವ್ಯವಹಾರಗಳಲ್ಲಿ ತೊಡಗಿರುವದೆಂಬ ಕಾರಣ ವಿಲ್ಲವಾದ್ದರಿಂದ.

ಎರಡನೆಯ ಪ್ರಶ್ನೆ

ಈ ಪ್ರಶ್ನೆಯ ಸಂಬಂಧ

(ಭಾಷ್ಯ)

೨೩. ಪ್ರಾಣೋಽತ್ತಾ ಪ್ರಜಾಪತಿಃ ಇತ್ಯುಕ್ತಮ್ | ತಸ್ಯ ಪ್ರಜಾಪತಿತ್ವಮ್ ಅತ್ತೃತ್ವಂ ಚ ಅಸ್ಮಿನ್ ಶರೀರೇ ಅವಧಾರಯಿತವ್ಯಮಿತಿ ಅಯಂ ಪ್ರಶ್ನ ಆರಭ್ಯತೇ—

(ಭಾಷ್ಯಾರ್ಥ)

ಪ್ರಾಣನು ಅತ್ತೃ, ಪ್ರಜಾಪತಿ ಎಂದು (ಹಿಂದೆ) ಹೇಳಲಾಯಿತು[1]. ಅವನು ಪ್ರಜಾಪತಿ ಎಂಬುದನ್ನೂ ಈ ಶರೀರದಲ್ಲಿ ಅತ್ತೃವಾಗಿರುವನೆಂಬುದನ್ನೂ ನಿಶ್ಚಯಿಸಬೇಕೆಂದು[2] ಈ ಪ್ರಶ್ನೆಯನ್ನು ಪ್ರಾರಂಭಿಸಿರುತ್ತದೆ :—

ಭಾರ್ಗವನ ಪ್ರಶ್ನೆ :
ಶರೀರದಲ್ಲಿರುವ ಪ್ರಾಣಗಳು ಯಾವವು ?

ಅಥ ಹೈನಂ ಭಾರ್ಗವೋ ವೈದರ್ಭಿಃ ಪಪ್ರಚ್ಛ
ಭಗವನ್ ಕತ್ಯೇವ ದೇವಾಃ ಪ್ರಜಾಂ ವಿಧಾರಯನ್ತೇ
ಕತರ ಏತತ್ಪ್ರಕಾಶಯನ್ತೇ ಕಃ ಪುನರೇಷಾಂ ವರಿಷ್ಠ ಇತಿ ॥ ೦ ॥

೧. ಆಮೇಲೆ ಭಾರ್ಗವವೈದರ್ಭಿಯು ಈತನನ್ನು ಕೇಳಿದನೇನೆಂದರೆ : ಭಗವಂತನೆ, ಎಷ್ಟು ದೇವತೆಗಳು ಪ್ರಜೆಯನ್ನು ಧರಿಸಿಕೊಂಡಿರುತ್ತಾರೆ ? ಯಾರು ಇದನ್ನು ಪ್ರಕಾಶಗೊಳಿಸುವವರು ? ಮತ್ತು ಇವರಲ್ಲಿ ಶ್ರೇಷ್ಠನು ಯಾರು ?

(ಭಾಷ್ಯ)

೨೪. ಅಥ ಅನನ್ತರಂ ಹ ಕಿಲ ಏನಂ ಭಾರ್ಗವೋ ವೈದರ್ಭಿಃ ಪಪ್ರಚ್ಛ | ಹೇ ಭಗವನ್ ಕತ್ಯೇವ ದೇವಾಃ ಪ್ರಜಾಂ ಶರೀರಲಕ್ಷಣಾಂ ವಿಧಾರಯನ್ತೇ ವಿಶೇಷೇಣ ಧಾರಯನ್ತೇ | ಕತರೇ ಬುದ್ಧೀನ್ದ್ರಿಯಕರ್ಮೇನ್ದ್ರಿಯಪ್ರವಿಭಕ್ತಾ

---

1. ಹಿಂದೆ ಪ್ರಾಣ, ರಯಿ-ಎಂಬ ಮಿಥುನದಿಂದ ಎಲ್ಲವನ್ನೂ ಪ್ರಜಾಪತಿಯು ಸೃಷ್ಟಿಸುತ್ತಾನೆಂದು ಹೇಳಿದೆ. ಆದಿತ್ಯರೂಪನಾದ ಪ್ರಾಣನು ಎಲ್ಲಾ ಪ್ರಾಣಿಗಳನ್ನೂ ತನ್ನೊಳಗೆ ಆಡಕವಾಡಿಕೊಳ್ಳುತ್ತಾನೆಂದೂ ಅವನೇ ಅಗ್ನಿಯೆಂದೂ ಹೇಳಿರುವದರಿಂದ ಪ್ರಾಣನು ಅತ್ತೃವೆಂದು ಹೇಳಿದಂತೆ ಆಯಿತು.

2. ಈ ಪ್ರಶ್ನೆದಲ್ಲಿರುವ ಮಿಕ್ಕ ವಿಷಯಗಳು ಅಷ್ಟು ಮುಖ್ಯವಾಗಿ ವಿವಕ್ಷಿತವಲ್ಲವೆಂದು ಭಾವ.

ನಾಮ್ ಏತತ್ ಪ್ರಕಾಶನಂ ಸ್ವಮಾಹಾತ್ಮ್ಯಪ್ರತ್ಯಾಪನಂ ಪ್ರಕಾಶಯನ್ತೀ | ಕೋಽಸೌ ಪುನಃ ಏಷಾಂ ವರಿಷ್ಠಃ ಪ್ರಧಾನಃ ಕಾರ್ಯಕರಣಲಕ್ಷಣಾನಾಮ್?ಇತಿ॥

(ಭಾಷ್ಯಾರ್ಥ)

ಆಮೇಲೆ (ಕಬಂಧಿಯ ಪ್ರಶ್ನೆಗೆ ಉತ್ತರವನ್ನು ಹೇಳಿದ) ಬಳಿಕ, ಹ= ಆಂತೆ (ಎಂದರ್ಥ). ಈ (ಪಿಪ್ಪಲಾದನನ್ನು) ಭಾರ್ಗವನ್ಯೆದರ್ಭಿಯು ಕೇಳಿದ ನೇನೆಂದರೆ :-ಭಗವಂತನೆ, (ಈ) ಶರೀರರೂಪವಾದ[1] ಪ್ರಜೆಯನ್ನು ಎಷ್ಟು[2] ದೇವತೆಗಳು ವಿಧಾರಣಮಾಡಿಕೊಂಡಿರುವರು, ವಿಶೇಷವಾಗಿ ಹಿಡಿದೆತ್ತಿಕೊಂಡಿರುವರು?[3] ಬುದ್ಧೀನ್ದ್ರಿಯಗಳು, ಕರ್ಮೇನ್ದ್ರಿಯಗಳು–ಎಂದು (ಎರಡೆಬಗೆಯಾಗಿ (ವಿಂಗಡವಾಗಿರುವ ಇವುಗಳಲ್ಲಿ ಇದನ್ನು ಎಂದರೆ ಈ ದೆಳಗುವಿಕೆಯನ್ನು ಎಂದರೆ ತಮ್ಮ ಮಹಿಮೆಯನ್ನು ತೋರ್ಪಡಿಸಿಕೊಳ್ಳುವಿಕೆಯನ್ನು ಯಾವ ಯಾವವು ಬೆಳಗುತ್ತಿರುವವು ?[4] ಕಾರ್ಯಕರಣರೂಪವಾಗಿರುವ[5] ಇವುಗಳಲ್ಲಿ ಶ್ರೇಷ್ಠನಾದವನು, ಮುಖ್ಯನಾದವನು, ಯಾವನು ?

ಪ್ರಾಣಸಂವಾದ

ತಸ್ಮೈ ಸ ಹೋವಾಚ। ಆಕಾಶೋ ಹ ವಾ ಏಷ ದೇವೋ ವಾಯುರಗ್ನಿರಾಪಃ ಪೃಥಿವೀ ವಾಙ್ಮನಶ್ಚಕ್ಷುಃ ಶ್ರೋತ್ರಂ ಚ। ತೇ ಪ್ರಕಾಶ್ಯಾಭಿವದನ್ತಿ ವಯಮೇತತ್ ಬಾಣಮವಷ್ಟಭ್ಯ ವಿಧಾರಯಾಮಃ ॥ ೨ ॥

೨. ಅವನಿಗೆ ಆತನು ಹೇಳಿದನೇನೆಂದರೆ:– ಈ ದೇವನಾದ ಆಕಾಶ, ವಾಯು, ಅಗ್ನಿ, ಅಪ್ಪು, ಪೃಥಿವಿ, ವಾಕ್ಕು, ಮನಸ್ಸು, ಚಕ್ಷುಸ್ಸು, ಮತ್ತು ಶ್ರೋತ್ರ–ಇವರು ಬೆಳಗಿ "ನಾವು ಈ ಬಾಣವನ್ನು ಎತ್ತಿ ನಿಲ್ಲಿಸಿಕೊಂಡು ವಿಧಾರಣೆಮಾಡಿಕೊಂಡಿರುವೆವು" ಎಂದು ಹೇಳಿಕೊಳುತ್ತಿದ್ದವು.

---

1. ಹಿಂದಿನ ಪ್ರಶ್ನೆಯಲ್ಲಿ ಹೇಳಿರುವ ಪ್ರಜೆಗಳು ಎಂದರೆ ಸ್ಥೂಲಶರೀರಗಳು ಎಂಬು ಭಾವ.

2. 'ಕತ್ಯೇವ' ಎಂದರೆ ಎಷ್ಟೇ ಎಂದು ಕನ್ನಡಿಸಬೇಕಾಗುವದು. ಇಂತಿಷ್ಟೇ ಎಂದು ಗೊತ್ತಾಗಿ ಹೇಳಿರಿ ಎಂದು ಪ್ರಶ್ನೆ.

3. ಮುಖ್ಯವಾಗಿ ಯಾವ ಆಶ್ರಯದಿಂದ ಈ ಶರೀರವು ನಿಂತಿರುವದು ?

4. "ಬೆಳಗುವಿಕೆಯನ್ನು ಬೆಳಗುತ್ತಿರುವವು" ಎಂಬುದು ಕನ್ನಡಕ್ಕೆ ಒಪ್ಪುವ ರೀತಿಯಲ್ಲ. "ಆಟವನ್ನು ಆಡುತ್ತಾರೆ" ಎಂಬ ಪ್ರಯೋಗವನ್ನು ಇದಕ್ಕೆ ಹೋಲಿಸಿರಿ. ಇದನ್ನು ಬೆಳಗುವವು, ಎಂದರೆ ಬೆಳಗುವವು, ತೋರಿಕೊಳ್ಳುವವು ಎಂದೇ ಅರ್ಥ.

5. ಶರೀರೇಂದ್ರಿಯರೂಪವಾದ.

(ಭಾಷ್ಯ)

೫. ಏವಂ ಪೈಪ್ಪಲಾದೇ ತಸ್ಮೈ ಸ ಹ ಉವಾಚ | ಆಕಾಶೋ ಹ ವೈ ಏಷಃ ದೇವಃ[1] ವಾಯುಃ, ಅಗ್ನಿಃ, ಆಪಃ, ಪೃಥಿವೀ ಇತ್ಯೇತಾನಿ ಪಞ್ಚ ಮಹಾ ಭೂತಾನಿ ಶರೀರಾರಮ್ಭಕಾಣಿ | ವಾಕ್, ಮನಃ, ಚಕ್ಷುಃ ; ಶ್ರೋತ್ರಮ್ ಇತ್ಯಾದೀನಿ | ಕರ್ಮೇನ್ದ್ರಿಯಬುದ್ಧೀನ್ದ್ರಿಯಾಣಿ ಚ | ಕಾರ್ಯಲಕ್ಷಣಾಃ ಕರಣಲಕ್ಷಣಾಶ್ಚ ತೇ ದೇವಾ ಆತ್ಮನಃ ಮಾಹಾತ್ಮ್ಯೈ ಪ್ರಕಾಶ್ಯಂ[2] ಪ್ರಕಾಶ್ಯ ಅಭಿವದನ್ತಿ ಸ್ಪರ್ಧಮಾನಾ ಅಹಂಶ್ರೇಷ್ಠತಾಯೈ | ಕಥಂ ವದನ್ತಿ ? ವಯಮ್ ಏತತ್ ಬಾಣಂ ಕಾರ್ಯಕರಣಸಙ್ಘಾತಮ್ ಆವಷ್ಟಭ್ಯ ಪ್ರಾಸಾದಮಿವ ಸ್ತಮ್ಭಾಃ ದಯಃ ಅವಿಶಿಥಿಲೀಕೃತ್ಯ ವಿಧಾರಯಾಮಃ ವಿಸ್ಪಷ್ಟಂ ಧಾರಯಾಮಃ | ಮಯೈವ ಏಕೇನ ಅಯಂ ಸಙ್ಘಾತೋ ಧ್ರಿಯತೇ ಇತಿ ಏಕೈಕಸ್ಯ ಅಭಿಪ್ರಾಯಃ ||

(ಭಾಷ್ಯಾರ್ಥ)

ಹೀಗೆ ಕೇಳಿದ ಅವನಿಗೆ ಆ (ಪಿಪ್ಪಲಾದನು) ಹೇಳಿದನೇನೆಂದರೆ : ಈ ದೇವನಾದ[1] ಆಕಾಶ, ವಾಯು, ಅಗ್ನಿ, ಅಪ್ಪು, ಪೃಥಿವಿ–ಈ ಐದು ಶರೀರಕ್ಕೆ ಕಾರಣವಾಗಿರುವ ಮಹಾಭೂತಗಳು ಮತ್ತು ವಾಕ್ಕು, ಮನಸ್ಸು, ಚಕ್ಷುಸ್ಸು, ಶ್ರೋತ್ರ—ಇವೇ ಮುಂತಾದ[2] ಕರ್ಮೇಂದ್ರಿಯಬುದ್ಧೀಂದ್ರಿಯಗಳು ಕಾರ್ಯರೂಪವಾಗಿಯೂ ಕರಣರೂಪವಾಗಿಯೂ ಇರುವ ಆ ದೇವತೆಗಳು ತಮ್ಮ ಹೆಚ್ಚಿಗೆಯನ್ನು ತೋರಿಸಿಕೊಳ್ಳಬೇಕಾದ (ಹೆಚ್ಚುಗಾರಿಕೆಯನ್ನು,[3] ತೋರ್ಪಡಿಸಿಕೊಂಡು ನಾನು ಮೇಲು, ತಾನು ಮೇಲು–ಎಂದು ಮೇಲಾಟದಿಂದ[4] (ಹೊಡೆದಾಡುತ್ತಾ ಹೀಗೆಂದು) ಹೇಳಿಕೊಳ್ಳುತ್ತಿದ್ದವು. ಏನೆಂತ ಹೇಳಿಕೊಳ್ಳುತ್ತಿದ್ದವು ? ಎಂದರೆ "ನಾವು ಈ ಬಾಣವನ್ನು ಎಂದರೆ ಕಾರ್ಯಕರಣಗಳ (ಒಟ್ಟು) ಗುಂಪನ್ನು ಎತ್ತಿ ನಿಲ್ಲಿಸಿಕೊಂಡು ಕಂಬವೇ ಮುಂತಾದವು ಉಪ್ಪರಿಗೆಯ ಮನೆಯನ್ನು ಶಿಥಿಲವಾಗದಂತೆ (ಹಿಡಿದುಕೊಂಡಿರುವ) ಹಾಗೆ ವಿಧಾರಣೆಮಾಡಿಕೊಂಡಿರುವೆವು. ವಿಸ್ಪಷ್ಟವಾಗಿ ಎತ್ತಿ ಹಿಡಿದುಕೊಂಡಿರುವೆವು." ನಾನೊಬ್ಬನೇ ಈ

1. ಈ ಮಾತು ಆ॥ ಪಾಠದಲ್ಲಿಲ್ಲ.

2. ಅಭಿಮಾನಿದೇವತೆಗಳನ್ನು ಲಕ್ಷ್ಯದಲ್ಲಿಟ್ಟು, ಆಕಾಶ, ವಾಯು–ಮುಂತಾಗಿ ನನ್ನು ದೇವನೆಂದು ಕರೆದಿದೆ.

3. ನಿಕ್ಕ ಕರ್ಮೇಂದ್ರಿಯಗಳನ್ನೂ ಜ್ಞಾನೇಂದ್ರಿಯಗಳನ್ನೂ ಸೇರಿಸಿಕೊಳ್ಳಬೇಕು ಎಂದು ಭಾವ.

4. ನಾನು ಮಾತಾಡುವೆನು, ನಾನು ನೋಡುವೆನು–ಎಂದು ಮುಂತಾಗಿ ವಾಗಾದಿಗಳ ಹೆಮ್ಮೆ; ನಾನು ಸುಡುವೆನು, ನಾನು ಬೀಸುವೆನು ಎಂದು ಮುಂತಾಗಿ ಆದಿತ್ಯ ಆಗ್ನ್ಯಾದಿಗಳ ಹೆಮ್ಮೆ. ಬೃ. ೧–೫–೨೧, ೨೨

5. ಛಾಂ. ೩-೧೩-೬ ; ಕೌ. ೨-೧೪ ; ಬೃ. ೬-೧-೭ ನೋಡಿ.

ಸಂಘವನ್ನು ಎತ್ತಿಹಿಡಿದುಕೊಂಡಿದೇನೆ ಎಂದು ಒಂದೊಂದಕ್ಕೂ (ಇದ್ದ) ಅಭಿಪ್ರಾಯವು.

ತಾನ್ ವರಿಷ್ಠಃ ಪ್ರಾಣ ಉವಾಚ ಮಾ ಮೋಹಮಾಪದ್ಯಥಾಹ
ಮೇವೈತತ್ ಪಞ್ಚಧಾತ್ಮಾನಂ ಪ್ರವಿಭಜ್ಯೈತದ್ ಬಾಣಮವ
ಷ್ಟಭ್ಯ ವಿಧಾರಯೆಾಮೀತಿ ತೇಽಶ್ರದ್ದಧಾನಾ ಬಭೂವುಃ ॥ ೩ ॥

೩. ಅವರನ್ನು (ಕುರಿತು) ಶ್ರೇಷ್ಠನಾದ ಪ್ರಾಣನು ಹೇಳಿದನೇನೆಂದರೆ : "ಮೋಹವನ್ನು ಹೊಂದದಿರಿ. ನಾನೇ ಹೀಗೆ ನನ್ನನ್ನು ಐದು ಬಗೆಯಾಗಿ ವಿಂಗಡಿಸಿಕೊಂಡು ಈ ಬಾಣವನ್ನು ಎತ್ತಿ ನಿಲ್ಲಿಸಿಕೊಂಡು ವಿಧಾರಣೆಮಾಡಿರುವೆನು." ಅವರು ಶ್ರದ್ಧೆಯನ್ನು ಮಾಡದವರಾದರು.

(ಭಾಷ್ಯ)

೩೬. ತಾನ್ ಏವಮ್ ಅಭಿಮಾನವತಃ ವರಿಷ್ಠಃ ಮುಖ್ಯಃ ಪ್ರಾಣಃ ಉವಾಚ ಉಕ್ತವಾನ್ ಮಾ ಮೈವಂ ಮೋಹಮ್ ಆಪದ್ಯಧ್ವ ಅವಿವೇಕಿತಯಾ[1] ಅಭಿಮಾನಂ ಮಾ ಕುರುತ | ಯಸ್ಮಾತ್ ಅಹಮೇವ ಏತತ್ ಬಾಣಮ್ ಅವಷ್ಟಭ್ಯ ವಿಧಾರಯಾಮಿ ಪಞ್ಚಧಾ ಆತ್ಮಾನಂ ಪ್ರವಿಭಜ್ಯ ಪ್ರಾಣಾದಿವೃತ್ತಿಭೇದಂ ಸ್ವಸ್ಯ ಕೃತ್ವಾ ವಿಧಾರಯಾಮಿ | ಇತಿ ಉಕ್ತವತಿ ಚ ತಸ್ಮಿನ್ ತೇ ಅಶ್ರದ್ದಧಾನಾ ಅಪ್ರತ್ಯಯವನ್ತಃ ಬಭೂವುಃ ಕಥಮೇತದೇವಮ್ ಇತಿ ॥

(ಭಾಷ್ಯಾರ್ಥ)

ಹೀಗೆ ಅಭಿಮಾನವುಳ್ಳ ಅವರನ್ನು ಕುರಿತು ಶ್ರೇಷ್ಠನಾದ ಪ್ರಾಣನು ಇಂತೆಂದನು ; ಹೇಳಿದವನಾದನು. ಹೀಗೆ ಮೋಹವನ್ನು ಹೊಂದದಿರಿ ; ಅವಿವೇಕಿಗಳಾಗಿ ಅಭಿಮಾನವನ್ನು ಮಾಡಬೇಡಿರಿ. ಏಕೆಂದರೆ, ನಾನೇ (ಹೀಗೆ)[2] ಈ ಬಾಣವನ್ನು ಎತ್ತಿ ನಿಲ್ಲಿಸಿಕೊಂಡು ವಿಧಾರಣೆಮಾಡಿರುವೆನು. ನನ್ನನ್ನು ಐದು ಬಗೆಯಾಗಿ ವಿಂಗಡಿಸಿಕೊಂಡು ನನ್ನಲ್ಲಿ ಪ್ರಾಣವೇ ಮುಂತಾದ ಬೇರೆಬೇರೆಯ ವೃತ್ತಿಗಳನ್ನು ಮಾಡಿಕೊಂಡು (ಶರೀರವನ್ನು) ವಿಧಾರಣೆಮಾಡಿಕೊಂಡಿರುತ್ತೇನೆ. ಹೀಗೆಂದು (ಅವನು) ಹೇಳಲು ಅವನಲ್ಲಿ ಅವರು ಶ್ರದ್ಧೆಯನ್ನು ಮಾಡದವರಾದರು. "ಇದು ಹೀಗೆ ಹೇಗಾದೀತು ?" ಎಂದುಕೊಂಡು ನಂಬಿಕೆಯಿಲ್ಲದವರಾದರು.

---

1. " ಅವಿವೇಕತಯಾ " ಎಂದು ಆ॥ ಪಾಠ.

2. ಏತತ್ ಎಂಬ ಶಬ್ದಗಳು ಎರಡಿವೆ. ಒಂದನೆಯ ಶಬ್ದಕ್ಕೆ ಇರಬೇಕಾಗಿದ್ದ ಭಾಷ್ಯವು ಬರೆದಿರುವವರ ಕೈತಪ್ಪಿನಿಂದ ಬಿಟ್ಟುಹೋಗಿರಬೇಕೆಂದು ಕಾಣುತ್ತದೆ.

ಮುಖ್ಯಪ್ರಾಣನ ಹೆಚ್ಚುಗಾರಿಕೆ

ಸೋಽಭಿಮಾನಾದೂರ್ಧ್ವಮುತ್ಕ್ರಮತ ಇವ ತಸ್ಮಿನ್ನುತ್ಕ್ರಮತ್ಯ
ಥೇತರೇ ಸರ್ವ ಏವೋತ್ಕ್ರಮನ್ತೇ ತಸ್ಮಿಗ್ಂಶ್ಚ ಪ್ರತಿಷ್ಠಮಾನೇ
ಸರ್ವ ಏವ ಪ್ರತಿಷ್ಠನ್ತೇ। ತದ್ಯಥಾ ಮಕ್ಷಿಕಾ ಮಧುಕರರಾಜಾನ
ಮುತ್ಕ್ರಮನ್ತಂ ಸರ್ವಾ ಏವೋತ್ಕ್ರಮನ್ತೇ ತಸ್ಮಿಗ್ಂಶ್ಚ
ಪ್ರತಿಷ್ಠಮಾನೇ ಸರ್ವಾ ಏವ ಪ್ರತಿಷ್ಠನ್ತ ಏವಂ ವಾಙ್ಮನಶ್ಚಕ್ಷುಃ
ಶ್ರೋತ್ರಂ ಚ ತೇ ಪ್ರೀತಾಃ ಪ್ರಾಣಂ ಸ್ತುನ್ವನ್ತಿ ॥ ೪ ॥

೪. ಅತನು ಅಭಿಮಾನದಿಂದ ಮೇಲಕ್ಕೆದ್ದಂತೆ ಮಾಡಿದನು. ಅವನು ಮೇಲಕ್ಕೆ ಎದ್ದನೋ ಇಲ್ಲವೋ, ಕೂಡಲೆ ಮಿಕ್ಕವರೆಲ್ಲರೂ ಎದ್ದರು; ಮತ್ತು ಅವನು ನಿಲ್ಲುತ್ತಲೂ ಎಲ್ಲರೂ ನಿಂತರು. ಜೇನು ನೊಣಗಳು ತಮ್ಮ ರಾಜನು ಮೇಲಕ್ಕೇಳುತ್ತಲೂ ಎಲ್ಲವೂ ಹೇಗೆ ಏಳುವವೋ, ಮತ್ತು ಅದು ನಿಲ್ಲುತ್ತಲೂ ಎಲ್ಲವೂ ಹೇಗೆ ನಿಲ್ಲುವವೋ, ಹಾಗೇ ವಾಕ್ಕು, ಮನಸ್ಸು, ಚಕ್ಷುಸ್ಸು, ಶ್ರೋತ್ರ–ಇವರು (ಮಾಡಿದರು). ಇವರು ಪ್ರೀತರಾಗಿ ಪ್ರಾಣನನ್ನು (ಹೀಗೆ) ಸ್ತೋತ್ರಮಾಡಿದರು.

(ಭಾಷ್ಯ)

೨೭. ಸ ಚ ಪ್ರಾಣಃ ತೇಷಾಮ್ ಅಶ್ರದ್ದಧಾನತಾಮ್ ಅಲಕ್ಷ್ಯಞ್ಚ ಅಭಿಮಾನಾತ್ ಊರ್ಧ್ವಮ್ ಉತ್ಕ್ರಮತೇ[1] ಇವ ಇದಮ್ ಉತ್ಕ್ರನ್ತವಾನಿವ[2] ಸ ರೋಷಾತ್ ನಿರಪೇಕ್ಷಃ। ತಸ್ಮಿನ್ ಉತ್ಕ್ರಮತಿ ಯದ್ ವೃತ್ತಂ ತದ್ ದೃಷ್ಟಾನ್ತೇನ ಪ್ರತ್ಯಕ್ಷೀಕರೋತಿ। ತಸ್ಮಿನ್ ಉತ್ಕ್ರಮತಿ ಸತಿ ಅಥ ಅನನ್ತರಮೇವ ಇತರೇ ಸರ್ವೇ ಏವ ಪ್ರಾಣಾಃ ಚಕ್ಷುರಾದಯಃ ಉತ್ಕ್ರಮನ್ತೇ ಉತ್ಕ್ರಮನ್ತಿ ಉಚ್ಚೈಕ್ರಮುಃ[3]। ತಸ್ಮಿಂಶ್ಚ ಪ್ರಾಣೇ ಪ್ರತಿಷ್ಠಮಾನೇ ತೂಷ್ಣೀಂ ಭವತಿ ಅನುತ್ಕ್ರಮತಿ ಸತಿ ಸರ್ವೇ ಏವ ಪ್ರತಿಷ್ಠನ್ತೇ ತೂಷ್ಣೀಂ ವ್ಯವಸ್ಥಿತಾ ಅಭೂವನ್[4]। ತತ್[5] ಯಥಾ ಲೋಕೇ ಮಕ್ಷಿಕಾಃ ಮಧುಕರಾಃ ಸ್ವರಾಜಾನಂ ಮಧುಕರ

---

1. "ಉತ್ಕ್ರಮತೇ" ಎಂದು ಉಪನಿಷತ್ತಿನಲ್ಲಿಯೂ ಭಾಷ್ಯದಲ್ಲಿಯೂ ಆ॥ ಪಾಠ. ಆದರೆ ಮುಂದೆ ಉಪನಿಷತ್ತಿನಲ್ಲಿ ಉತ್ಕ್ರಮನ್ತೇ ಎಂಬ ಪ್ರಯೋಗವಿದೆ.

2. ಇದು ಆ॥ ಪಾಠ; ವಾ॥ ಪಾಠದಲ್ಲಿ 'ಉತ್ಕ್ರಮತೀವ ಉತ್ಕ್ರನ್ತವಾನಿವ' ಎಂದಿದೆ.

3. ಇದು ವಾ॥ ಮೈ॥ ಪಾಠ; ಆ ಪಾಠದಲ್ಲಿ 'ಉತ್ಕ್ರಮನ್ತೇ ಉಚ್ಚೈಕ್ರಮೀರೇ'ಎಂ ದಿದೆ.

4. "ಬಭೂವುಃ" ವಾ॥ ಪಾಠ. 5. "ತತ್ ತತ್ರ" ಎಂದು ಆ॥ ಪಾಠ.

ರಾಜಾನಮ್ ಉತ್ಕ್ರಾಮನ್ತಂ ಪ್ರತಿ ಸರ್ವಾ ಏವ ಉತ್ಕ್ರಾಮನ್ತೇ ತಸ್ಮಿಂಶ್ಚ ಪ್ರತಿಷ್ಠಮಾನೇ ಸರ್ವಾ ಏವ ಪ್ರತಿಷ್ಠನ್ತೇ ಪ್ರತಿತಿಷ್ಠನ್ತಿ | ಯಥಾ ಕಯಂ ದೃಷ್ಟ್ವನ್ತಃ ಏವಂ ವಾಕ್ ಮನಃ ಚಕ್ಷುಃ ಶ್ರೋತಂ ಚ ಇತ್ಯಾದಯಃ | ತೇ ಉತ್ಸೃಜ್ಯ ಅಶ್ರದ್ದಧಾನಕಾಂ ಬುದ್ಧಿಂ ಚ ಪ್ರಾಣಮಾಹಾತ್ಮ್ಯಂ ಪ್ರೀತಾಃ ಪ್ರಾಣಂ ಸ್ತುನ್ವನ್ತಿ ಸ್ತುವನ್ತಿ ||

(ಭಾಷ್ಯಾರ್ಥ)

ಆ ಪ್ರಾಣನುಕೂಡ ಆವರು ನಂಬುವದಿಲ್ಲವೆಂಬುದನ್ನು ಕಂಡು ಅಭಿಮಾನದಿಂದ ಎಂದರೆ ಸಿಟ್ಟಿನಿಂದ[1] ಮೇಲಕ್ಕೆ ಈ (ಶರೀರವನ್ನು) ಬಿಟ್ಟು ತಾನೊಬ್ಬನೇ ಮೇಲಕ್ಕಿದ್ದಂತೆ (ಉತ್ಕ್ರಮತೇ=ಉತ್ಕ್ರಾನ್ತವಾನ್) ಮಾಡಿದನು. ಅವನು ಮೇಲಕ್ಕೆ ಎದ್ದನೋ ಇಲ್ಲವೋ ; (ಆಗ) ಏನಾಯಿತೋ ಅದನ್ನು ದೃಷ್ಟಾಂತದಿಂದ ಪ್ರತ್ಯಕ್ಷಗೊಳಿಸಿಕೊಡುತ್ತಾರೆ. ಅವನು ಮೇಲಕ್ಕೇಳುತ್ತಲೂ ('ಆಥ') ಕೂಡಲೆ ಮಿಕ್ಕ ಎಲ್ಲಾ ಪ್ರಾಣಗಳೂ ಎಂದರೆ ಚಕ್ಷುರಾದಿಗಳು (ಎಲ್ಲವೂ) ಮೇಲಕ್ಕೆ ಎದ್ದರು. (ಉತ್ಕ್ರಾಮನ್ತೇ=ಉತ್ಕ್ರಾಮನ್ತಿ). ಮತ್ತು ಆ ಪ್ರಾಣನು ನಿಲ್ಲುತ್ತಲೂ ಎಂದರೆ ಸುಮ್ಮನಾಗುತ್ತಲೂ, ಮೇಲಕ್ಕೇಳದೆ ಇರಲು, ಎಲ್ಲರೂ ನಿಂತರು–ಎಂದರೆ ಸುಮ್ಮನೆ ಇದ್ದುಕೊಳ್ಳುವರಾದರು. ಅದು ಹೇಗೆಂದರೆ, ಲೋಕದಲ್ಲಿ ಜೇನುನೊಣಗಳು ಜೇನನ್ನು ಮಾಡುವ ನೊಣಗಳು ತಮ್ಮ ದೊರೆಯಾವ ಆರಸು ಜೇನುಹುಳುವನ್ನು ಅನುಸರಿಸಿ ಅದು ಮೇಲಕ್ಕೆದ್ದರೆ ಎಲ್ಲವೂ ಏಳುವವು, ಮತ್ತು ಅದು ನಿಂತರೆ ಎಲ್ಲವೂ ನಿಲ್ಲುವವು, ಇದ್ದುಬಿಡುವವು. ಈ ದೃಷ್ಟಾಂತವು ಹೇಗೋ ಹಾಗೆ ವಾಕ್ಕು, ಮನಸ್ಸು, ಚಕ್ಷುಸ್ಸು, ಶ್ರೋತ್ರ, ಇವೇ ಮುಂತಾದವರು (ಮಾಡಿದರು).[2] ಇವರು ಶ್ರದ್ಧೆಯಿಲ್ಲದಿರುವಿಕೆಯನ್ನು ಬಿಟ್ಟು ಪ್ರಾಣನ ಹೆಚ್ಚುಗಾರಿಕೆಯನ್ನು ಅರಿತುಕೊಂಡು ತೃಪ್ತರಾಗಿ ಪ್ರಾಣನನ್ನು ಹೀಗೆಂದು (ಸ್ತುನ್ವನ್ತಿ=ಸ್ತುವನ್ತಿ) ಸ್ತೋತ್ರಮಾಡಿದರು.

ಮುಖ್ಯಪ್ರಾಣನ ಸ್ತುತಿ

ಏಷೋಽಗ್ನಿಸ್ತಪತ್ಯೇಷ ಸೂರ್ಯ
ಏಷ ಪರ್ಜನ್ಯೋ ಮಘವಾನೇಷ ವಾಯುಃ |
ಏಷ ಪೃಥಿವೀ ರಯಿರ್ದೇವಃ
ಸದಸಚ್ಚಾಮೃತಂ ಚ ಯತ್ ॥೫॥

1. ಸಃ ರೋಷಾತ್ ಎಂಬಲ್ಲಿ ಸಃ ಎಂಬ ಮಾತನ್ನು ಇಸ್ಕೊಂಡು ಸಲ ಅನ್ವಯಕ್ಕಾಗಿ ಭಾಷ್ಯಕಾರರು ಹಾಕಿಕೊಂಡಿರುತ್ತಾರೆ.

2. ಇಲ್ಲಿ ವಾಗಾದಿಗಳನ್ನು ಅಗ್ನ್ಯಾದಿದೇವತೆಗಳು ಆಳುವದರಿಂದ ವಾಗಾದಿಗಳನ್ನು ಚೇತನವಂತರಾದ ಪುರುಷರಂತೆ ಭಾವಿಸಿದೆ. ಭಾಂ. ಭಾ. ೫–೧–೧೫ ನೋಡಿ.

೫. ಈತನು ಅಗ್ನಿರೂಪಿಯಾಗಿ ಸುಡುತ್ತಾನೆ, ಈತನು ಸೂರ್ಯನು, ಈತನು ಪರ್ಜನ್ಯನು, ಇಂದ್ರನು, ಈತನು ವಾಯು, ಈತನು ಪೃಥಿವಿ, ರಯಿ, ದೇವ, ಸತ್ತು, ಅಸತ್ತು, ಮತ್ತು ಅಮೃತವೆಂಬುದು ಯಾವದೋ (ಅದೂ ಈತನು).

(ಭಾಷ್ಯ)

೫ಜ. ಕಥಮ್ ? ಏಷ ಪ್ರಾಣಃ ಅಗ್ನಿಃ ಸನ್ ತಪತಿ ಜ್ವಲತಿ | ತಥಾ ಏಷ ಸೂರ್ಯಃ ಸನ್ ಪ್ರಕಾಶತೇ | ತಥಾ ಏಷಃ ಪರ್ಜನ್ಯಃ ಸನ್ ವರ್ಷತಿ | ಕಿಂ ಚ ಮಘವಾನ್ ಇನ್ದ್ರಃ ಸನ್ ಪ್ರಜಾಃ ಪಾಲಯತಿ ಜಿಘಾಂಸತಿ ಅಸುರ ರಕ್ಷಾಂಸಿ | ಏಷಃ ವಾಯುಃ ಆವಹಪ್ರವಹಾದಿಭೇದಃ | ಕಿಂ ಚ ಏಷಃ ಪೃಥಿವೀ ರಯಿಃ ದೇವಃ ಸರ್ವಸ್ಯ ಜಗತಃ ಸತ್ ಮೂರ್ತಮ್ ಅಸತ್ ಅಮೂರ್ತಂ ಚ ಅಮೃತಂ ಚ ಯತ್ ದೇವಾನಾಂ ಸ್ಥಿತಿಕಾರಣಮ್ ||

(ಭಾಷ್ಯಾರ್ಥ)

ಹೇಗೆ ಸ್ತೋತ್ರಮಾಡಿದವೆಂದರೆ ; ಈ ಪ್ರಾಣನು ಅಗ್ನಿಯಾಗಿ ಸುಡುತ್ತಾನೆ, ಉರಿಯುತ್ತಾನೆ. ಹಾಗೂ ಇವನು ಸೂರ್ಯನಾಗಿ ಬೆಳಗುತ್ತಿರುತ್ತಾನೆ ಮತ್ತು ಈತನೇ ಪರ್ಜನ್ಯನಾಗಿ ಮಳೆಗರೆಯುತ್ತಾನೆ. ಇದಲ್ಲದೆ ಇಂದ್ರನಾಗಿ ಪ್ರಜೆಗಳನ್ನು ಕಾಪಾಡುತ್ತಾನೆ, ಅಸುರ ಮತ್ತು ರಾಕ್ಷಸರನ್ನು ಕೊಲ್ಲುತ್ತಾನೆ. ಈತನೇ ಆವಹ- ಪ್ರವಹ- ಮುಂತಾದ[2] ಭೇದಗಳಿಂದ ಕೂಡಿರುವ ವಾಯುವು ಈತನೇ ; ಈತನೇ ಪೃಥಿವಿಯೂ, ರಯಿಯೂ, ಸಮಸ್ತ ಜಗತ್ತಿಗೂ ದೇವನಾಗಿರುವನು (ಈತನೇ)[3]. ಇರುವದೂ ಎಂದರೆ ಮೂರ್ತವೂ ಇಲ್ಲದ್ದೂ ಎಂದರೆ ಅಮೂರ್ತವೂ ಮತ್ತು ದೇವತೆಗಳ ಸ್ಥಿತಿಗೆ ಕಾರಣವಾಗಿರುವ ಅಮೃತವೂ (ಈತನೇ).

ಅರಾ ಇವ ರಥನಾಭೌ
ಪ್ರಾಣೇ ಸರ್ವಂ ಪ್ರತಿಷ್ಠಿತಮ್ |
ಋಚೋ ಯಜೂಗ್ಂಷಿ ಸಾಮಾನಿ
ಯಜ್ಞಃ ಕ್ಷತ್ರಂ ಬ್ರಹ್ಮ ಚ ॥ ೬ ॥

1: ಅ. ವೇ. ೧೧-೨-೪ರಲ್ಲಿರುವ ಪ್ರಾಣಸ್ತೋತ್ರವನ್ನು ಇದಕ್ಕೆ ಹೋಲಿಸಿರಿ.

2. ಆವಹ, ಪ್ರವಹ, ಉದ್ವಹ, ಸಂವಹ, ವಿವಹ, ಪರಿವಹ, ಪರಾವಹ- ಎಂದು ಗಾಳಿಯು ಬೀಸುವ ದಿಕ್ಕಿಗೆ ಅನುಗುಣವಾಗಿ ವಾಯುವನ್ನು ವಿಭಾಗಿಸುವರು. ಮೋ. ಧ. ೩೨೮-೩೬ ರಿಂದ ೩೩೨ ವರೆಗಿನ ಶ್ಲೋಕಗಳನ್ನು ನೋಡಿರಿ. (ಕುಂಭಕೋಣ ಪ್ರತಿ) ೩೩೬-೩೦ ರಿಂದ ೬೫೨ ವರೆಗೆ.

3. ಪ್ರಾಣನು (ಅಥವಾ ಸೂತ್ರಾತ್ಮನು) ಸರ್ವದೇವತಾಮಯನು.

೬. ಹಾರೆಕೋಲುಗಳು ಬಂಡಿಯ (ಚಕ್ರದ) ಗುಂಬಜಲ್ಲಿ ಹೇಗೋ ಹಾಗೆ ಎಲ್ಲವೂ ಪ್ರಾಣನಲ್ಲಿಯೇ ಸೇರಿಕೊಂಡಿರುತ್ತವೆ. ಋಕ್ಕುಗಳು, ಯಜುಸ್ಸುಗಳು, ಸಾಮಗಳು, ಯಜ್ಞ, ಕ್ಷತ್ರ ಮತ್ತು ಬ್ರಹ್ಮ (ಎಲ್ಲವೂ ಸೇರಿಕೊಂಡಿವೆ).

(ಭಾಷ್ಯ)

೬. ಕಿಂ ಬಹುನಾ ? ಆರಾ ಇವ ರಥನಾಭೌ ಶ್ರದ್ಧಾದಿ ನಾಮಾನ್ತಂ ಸರ್ವಂ ಸ್ಥಿತಿಕಾಲೇ ಪ್ರಾಣೇ ಏವ ಪ್ರತಿಷ್ಠಿತಮ್ । ತಥಾ ಋಚಃ ಯಜೂಂಷಿ ಸಾಮಾನಿ ಇತಿ ತ್ರಿವಿಧಾ ಮನ್ತ್ರಾಃ ತತ್ಸಾಧ್ಯಶ್ಚ ಯಜ್ಞಃ ಕ್ಷತ್ರಂ ಚ ಸರ್ವಸ್ಯ ಪಾಲಯಿತೃ ಬ್ರಹ್ಮ ಚ ಯಜ್ಞಾದಿ ಕರ್ಮಕರ್ತೃತ್ವೇ ಅಧಿಕೃತಂ ಚ (?) ಏಷ ಏವ[1] ಪ್ರಾಣಃ ಸರ್ವಮ್ ॥

(ಭಾಷ್ಯಾರ್ಥ)

ಹೆಚ್ಚು ಹೇಳಿದ್ದರಿಂದೇನು ? ಹಾರೆಕೋಲುಗಳು ಬಂಡಿಯ (ಗಾಲಿಯ) ಗುಂಬದಲ್ಲಿ ಹೇಗೆ (ಸೇರಿಕೊಂಡಿರುತ್ತವೆ)ಯೋ ಹಾಗೆ ಶ್ರದ್ಧೆಯಿಂದ ನಾಮದ ವರೆಗಿನ[2] ಎಲ್ಲವೂ ಸ್ಥಿತಿಕಾಲದಲ್ಲಿ ಪ್ರಾಣನಲ್ಲಿಯೇ (ಸೇರಿಕೊಂಡು) ನಿಂತಿರುವದು. ಹಾಗೂ ಋಕ್ಕುಗಳು, ಯಜುಸ್ಸುಗಳು, ಸಾಮಗಳು–ಎಂದು ಮೂರು ಬಗೆಯಾಗಿರುವ ಮಂತ್ರಗಳು, ಇವುಗಳಿಂದಾಗುವ ಯಜ್ಞವು, ಎಲ್ಲವನ್ನೂ ಕಾಪಾಡುವ ಕ್ಷತ್ರಜಾತಿ, ಯಜ್ಞವೇ ಮುಂತಾದ ಕರ್ಮವನ್ನು ಮಾಡುವ ಅಧಿಕಾರವುಳ್ಳ ಬ್ರಾಹ್ಮಣಜಾತಿ–ಇದೆಲ್ಲವೂ[3] ಈ ಪ್ರಾಣನೇ.

ಪ್ರಜಾಪತಿಶ್ಚರಸಿ ಗರ್ಭೇ
ತ್ವಮೇವ ಪ್ರತಿಜಾಯಸೇ ।
ತುಭ್ಯಂ ಪ್ರಾಣ ಪ್ರಜಾಸ್ತ್ವಮಾ ಬಲಿಂ ಹರನ್ತಿ
ಯಃ ಪ್ರಾಣೈಃ ಪ್ರತಿತಿಷ್ಠಸಿ ॥ ೭ ॥

೭. ಪ್ರಜಾಪತಿಯಾಗಿ (ನೀನೇ) ಗರ್ಭದಲ್ಲಿ ಸಂಚರಿಸುತ್ತೀಯೆ, ನೀನೇ ಪ್ರತಿಯಾಗಿ ಹುಟ್ಟುತ್ತೀಯೆ. ಪ್ರಾಣನೆ, ಪ್ರಾಣಗಳೊಡನೆ ಇರುವೆಯಲ್ಲ, (ಆ) ನಿನಗೇ ಈ ಪ್ರಜೆಗಳು ಕಾಣಿಕೆಯನ್ನು ತಂದೊಪ್ಪಿಸುತ್ತಿರುವರು.

---

1. 'ಜೈವೈಷ' ಎಂದು ಆ॥ ಪಾಠ. ಈ ಎರಡು ಪಾಠಗಳಲ್ಲಿಯೂ 'ಚ' ಬೇಕೆ? ಎಂಬುದು ವಿಚಾರಣೀಯ.

2. ಮುಂದೆ ೬–೪ರಲ್ಲಿ ಹೇಳಿರುವ ಕಲೆಗಳು.

3. ಸಾಧನಸಾಧ್ಯರೂಪವಾದ ಜಗತ್ತೆಲ್ಲವೂ ಪ್ರಾಣನನ್ನೇ ಆವಲಂಬಿಸಿಕೊಂಡಿರುತ್ತದೆ – ಎಂದಥಿಪ್ರಾಯ.

(ಭಾಷ್ಯ)

೩೦. ಕಿಂ ಚ ಯಃ ಪ್ರಜಾಪತಿರಪಿ ಸನ್ ತ್ವಮೇವ ಗರ್ಭೇ ಚರಸಿ ಪಿತೃ-ಮಾತೃಭ್ಯಾಂ ಪ್ರತಿರೂಪಃ ಸನ್ ಪ್ರತಿ (?) ಜಾಯಸೇ। ಪ್ರಜಾಪತಿತ್ವಾದೇವ ಪ್ರಾಗೇವ ಸಿದ್ಧಂ ತವ ಮುಖ್ಯಪಿತೃತ್ವಮ್। ಸರ್ವದೇಹದೇಹ್ಯಾಕೃತಿಚ್ಛನ್ನಃ[1] ವಿಕಃ ಪ್ರಾಣಃ ಸರ್ವಾತ್ಮಾಸಿ ಇತ್ಯರ್ಥಃ। ತುಭ್ಯಂ ತ್ವದರ್ಥಾಯ[2] ಇಮಾಃ ಮನುಷ್ಯಾದ್ಯಾಃ ಪ್ರಜಾಸ್ತು ಹೇ ಪ್ರಾಣ ಚಕ್ಷುರಾದಿದ್ವಾರೈಃ ಬಲಿಂ ಹರನ್ತಿ। ಯಸ್ಮಾತ್ತ್ವಂ ಪ್ರಾಣೈಃ ಚಕ್ಷುರಾದಿಭಿಃ ಸಹ ಪ್ರತಿತಿಷ್ಠಸಿ ಸರ್ವಶರೀರೇಷು। ಅತಃ ತುಭ್ಯಂ ಹರನ್ತಿ ಇತಿ ಯುಕ್ತಮ್। ಭೋಕ್ತಾಸಿ[3] ಯತಸ್ತ್ವಂ ತಸ್ಯೈವಾನ್ನಾತ್ ಸರ್ವಂ ಭೋಜ್ಯಮಪ್।

(ಭಾಷ್ಯಾರ್ಥ)

ಮತ್ತು ಪ್ರಜಾಪತಿಯಿದಾಗ್ಲೂ, ಆವಗೂ ನೀನೇ (ಆಗಿ) ಗರ್ಭದಲ್ಲಿ ಸಂಚರಿಸುವೆ.[4] ತಂದೆಗೂ ತಾಯಿಗೂ ಪ್ರತಿರೂಪನಾಗಿ[5] ಹುಟ್ಟುತ್ತೀಯೆ. ಪ್ರಜಾಪತಿಯಾಗಿರುವದರಿಂದಲೇ ನೀನು ತಾಯಿಯೂ ತಂದೆಯೂ (ಆಗಿರುವೆ) ಎಂಬುದು ಮೊದಲೇ ಸಿದ್ಧವಾಗಿರುತ್ತದೆ.[6] ಎಲ್ಲಾ ದೇಹಗಳ ಮತ್ತು ದೇಹಿಗಳ ಆಕೃತಿಯಿಂದ ಮರೆಯಾಗಿ ಪ್ರಾಣನಾದ ನೀನೊಬ್ಬನೇ ಸರ್ವರೂಪನಾಗಿರುವೆ ಎಂದರ್ಥ. ಎಲೈ ಪ್ರಾಣನೆ, ನಿನಗೆ ನಿಖಿಲೇಶ್ವರ ಮನುಷ್ಯರೇ ಮುಂತಾದ ಈ ಪ್ರಜೆಗಳು ಚಕ್ಷುರಾದಿಗಳ ಮೂಲಕ ಕಾಣಿಕೆಯನ್ನು ತಂದೊಪ್ಪಿಸುತ್ತಿರುವರು.[7] ಆ ನೀನು ಚಕ್ಷುರಾದಿಪ್ರಾಣಗಳೊಡನೆ ಎಲ್ಲಾ ಶರೀರಗಳಲ್ಲಿಯೂ ಇದ್ದುಕೊಂಡಿರುವೆ; ಅದ್ದರಿಂದ ನಿನಗೆ ಕಾಣಿಕೆಯನ್ನು ತಂದೊಪ್ಪಿಸುವರೆಂಬುದು ಯುಕ್ತವೇ ಆಗಿದೆ. ನೀನು ಭೋಕ್ತನೇ ಆಗಿರುತ್ತೀಯೆ, ನಿನಗೆ ಮಿಕ್ಕದ್ದೆಲ್ಲವೂ ಭೋಜ್ಯವಾಗಿರುತ್ತದೆ.[8]

---

1. 'ಛನ್ನಾ' ಎಂದು ಆ॥ ಪಾಠ.

2. 'ತ್ವದರ್ಥಂ ಯಾ ಇಮಾಃ' ಎಂದು ಆ॥ ಪಾಠ.

3 'ಭೋಕ್ತಾ ಹಿ' ಎಂದು ಆ॥ ಪಾಠ.

4. ಹಿಂದಿನ ಪ್ರಶ್ನೆಯಲ್ಲಿ ಹೇಳಿರುವಂತೆ ರೇತೋರೂಪದಿಂದ ಗರ್ಭದಲ್ಲಿರುವ ಪ್ರಜಾಪತಿಯೂ ಪ್ರಾಣನೇ.

5, ತಾಯಿತಂದೆಗಳ ರೂಪದಿಂದ ಹುಟ್ಟುವ ಮಕ್ಕಳೂ ಪ್ರಜಾಪತಿಯೇ. ಪ್ರಜಾಪತಿಯೇ ಎಲ್ಲವೂ ಆಗಿರುವದರಿಂದ ತಾಯಿತಂದೆಗಳೂ ಮಕ್ಕಳೂ ಆತನೇ. ಸರ್ವವೂ ಪ್ರಾಣನೇ ಎಂಬುದನ್ನು ತಿಳಿಸುವದಕ್ಕೆ ಹೀಗೆ ಹೇಳಿರುತ್ತದೆ,

6, ಪ್ರಜಾಪತಿಯು ಎಲ್ಲಾ ಪ್ರಜೆಗಳಿಗೂ ತಂದೆ, ಆದ್ದರಿಂದ ಆವನು ತಂದೆತಾಯಿಗಳ ರೂಪದಿಂದಲೇ ತಂದೆತಾಯಿಗಳೆನಿಸಿಕೊಳ್ಳಬೇಕಾದದ್ದೇನೂ ಇಲ್ಲ,

7, ಇಂದ್ರಿಯಗಳ ಮೂಲಕ ಪ್ರಾಣನಿಗೆ ವಿಷಯಗಳು ಅರ್ಪಿತವಾಗುತ್ತಿರುವವು.

8, ಪ್ರಾಣನೇ ಇಂದ್ರಿಯಗಳ ಮೂಲಕ ವಿಷಯಗಳನ್ನು ಅನುಭವಿಸುವವನು.

ದೇವಾನಾಮಸಿ ವಹ್ನಿತಮಃ
ಪಿತೃಣಾಂ ಪ್ರಥಮಾ ಸ್ವಧಾ ।
ಋಷೀಣಾಂ ಚರಿತಂ ಸತ್ಯ-
ಮಥರ್ವಾಙ್ಗಿರಸಾಮಸಿ ॥ ೯ ॥

೮. ದೇವತೆಗಳಿಗೆ ಉತ್ತಮ ವಹ್ನಿಯಾಗಿರುವೆ ; ಪಿತೃಗಳಿಗೆ ಮೊದಲನೆಯ ಸ್ವಧಾಕಾರನಾಗಿರುವೆ, ಅಥರ್ವಾಂಗಿರಸರಾಗಿರುವ ಋಷಿಗಳಿಗೆ ಸತ್ಯವಾದ ನಡತೆಯಾಗಿರುವೆ.

(ಭಾಷ್ಯ)

೩೧. ಕಿಂಚ ದೇವಾನಾಮ್ ಇನ್ದ್ರಾದೀನಾಮ್ ಅಸಿ ಭವಸಿ ತ್ವಂ ವಹ್ನಿತಮಃ ಹವಿಷಾಂ ಪ್ರಾಪಯಿತೃತಮಃ ಪಿತೃಣಾಂ ನಾನ್ದೀಮುಖೇ ಶ್ರಾದ್ಧೇ ಯಾ ಪಿತೃಭ್ಯೋ ದೀಯತೇ ಸ್ವಧಾ ಅನ್ನಂ ಸಾ ದೇವಪ್ರದಾನಮಪೇಕ್ಷ್ಯ[1] ಪ್ರಥಮಾ ಭವತಿ । ತಸ್ಯಾ ಅಪಿ ಪಿತೃಭ್ಯಃ ಪ್ರಾಪಯಿತಾ ತ್ವಮೇವ ಇತ್ಯರ್ಥಃ । ಕಿಂ ಚ ಋಷೀಣಾಂ ಚಕ್ಷುರಾದೀನಾಂ ಪ್ರಾಣಾನಾಮ್ ಅಙ್ಗಿರಸಾಮ್[2] ಅಙ್ಗಿರಸಭೂತಾನಾಮ್ ಅಥರ್ವಣಾಂ ತೇಷಾಮೇವ "ಪ್ರಾಣೋ ವಾ ಅಥರ್ವಾ" (?) ಇತಿ ಶ್ರುತೇಃ ಚರಿತಂ ಚೇಷ್ಟಿತಂ ಸತ್ಯಮ್ ಅವಿತಥಂ ದೇಹ ಧಾರಣಾದ್ಯುಪಕಾರಲಕ್ಷಣಂ ತ್ವಮೇವಾಸಿ[3] ॥

(ಭಾಷ್ಯಾರ್ಥ)

ಇದಲ್ಲದೆ ಇಂದ್ರನೇ ಮೊದಲಾದ ದೇವತೆಗಳಿಗೆ ನೀನು ಉತ್ತಮ ವಹ್ನಿ ಎಂದರೆ ಹವಿಸ್ಸನ್ನು (ತೆಗೆದುಕೊಂಡು ಹೋಗಿ) ಕೊಡುವವರಲ್ಲಿ ಉತ್ತಮನು. ಪಿತೃಗಳಿಗೆ ನಾಂದೀಮುಖಶ್ರಾದ್ಧದಲ್ಲಿ ಸ್ವಧೆ ಎಂಬ ಅನ್ನವು ಕೊಡಲ್ಪಡುತ್ತದೆಯಷ್ಟೆ. ಅದು ದೇವತೆಗಳಿಗೆ ಕೊಡುವ (ಹೋಮಕ್ಕೆ) ಹೋಲಿಸಿದರೆ ಮೊದಲನೆಯದಾಗುವದು. ಅದನ್ನೂ ಪಿತೃಗಳಿಗೆ (ತೆಗೆದುಕೊಂಡುಹೋಗಿ) ಕೊಡುವವನೂ ನೀನೇ ಎಂದರ್ಥ. ಮತ್ತು ಅಂಗಿರಸರಾಗಿರುವ[4] ಅಥರ್ವಋಷಿಗಳಿಗೆ ಎಂದರೆ ಚಕ್ಷುರಾದಿಪ್ರಾಣಗಳಿಗೆ 'ಪ್ರಾಣನೇ ಅಥರ್ವನು' (?) ಎಂಬ ಶ್ರುತಿ

1, 'ಪ್ರಧಾನಮಪೇಕ್ಷ್ಯ' ಎಂಬ ಆ॥ ಪಾಠಕ್ಕಿಂತ ಈ ವಾ॥ ಪಾಠವೇ ಉತ್ತಮ ವಾಪದ್ದು,

2, 'ಅಥರ್ವಾಙ್ಗಿರಸಾಮ್' ಎಂದು ವಾ॥ ಪಾಠ,

3, ಪ್ರಾಣನು ಅಂಗಗಳ ರಸನಾದ್ದರಿಂದ ಅಂಗಿರಸನು ಬೃ, ೧-೩-೧೯ ; ಇದನ್ನು ಇಂದ್ರಿಯಗಳಿಗೂ ಇಲ್ಲಿ ಅನ್ವಯಿಸಿದೆ,

4, ತಮ್ಮತಮ್ಮ ವಿಷಯಗಳನ್ನು ತಿಳಿಯುವದರಿಂದ ಇಂದ್ರಿಯಗಳು ಋಷಿಗಳು,

ಪ್ರಮಾಣವು. ಸಕ್ಕವಾಗಿರುವ ದೇಹಧಾರಣೆಯನ್ನೆ ಮಾಡುವದೇ ಮುಂತಾದ ರೂಪದ ಸಡಕೆಯು ಎಂದರೆ ವ್ಯಾಪಾರವೂ ನೀನೇ ಆಗಿರುವೆ.

ಇನ್ದ್ರಸ್ತ್ವಂ ಪ್ರಾಣ ತೇಜಸಾ
ರುದ್ರೋಽಸಿ ಪರಿರಕ್ಷಿತಾ ।
ತ್ವಮನ್ತರಿಕ್ಷೇ ಚರಸಿ
ಸೂರ್ಯಸ್ತ್ವಂ ಜ್ಯೋತಿಷಾಂ ಪತಿಃ ॥ ೯ ॥

೯. ಪ್ರಾಣನೆ. ನೀನು ಇಂದ್ರನು, ತೇಜಸ್ಸಿನಿಂದ ರುದ್ರನಾಗಿರುವೆ. (ನೀನೇ) ಕಾಪಾಡುವವನು. ನೀನು ಸೂರ್ಯನಾಗಿ ಅಂತರಿಕ್ಷದಲ್ಲಿ ಸಂಚರಿಸುತ್ತಿರುವೆ. ಜ್ಯೋತಿಗಳಿಗೆಲ್ಲ ಒಡೆಯನು ನೀನೇ.

(ಭಾಷ್ಯ)

೯. ಕಂಚ ಇನ್ದ್ರಃ, ಪರಮೇಶ್ವರಃ ತ್ವಂ ಹೇ ಪ್ರಾಣ ತೇಜಸಾ ವೀರ್ಯೇಣ ರುದ್ರೋಽಸಿ ಸಂಹರನ್ ಜಗತ್ । ಸ್ಥಿತೌ ಚ ಪರಿ ಸಮನ್ತಾತ್ ರಕ್ಷಿತಾ ಪಾಲಯಿತಾ ಪರಿರಕ್ಷಿತಾ ತ್ವಮೇವ ಜಗತಃ ಸೌಮ್ಯೇನ ರೂಪೇಣ । ತ್ವಮ್ ಅನ್ತರಿಕ್ಷೇ ಅಜಸ್ರಂ ಚರಸಿ ಉದಯಾಸ್ತಮಯಾಭ್ಯಾಮ್ ಸೂರ್ಯಃ ತ್ವಮೇವ ಚ ಸರ್ವೇಷಾಂ ಜ್ಯೋತಿಷಾಂ ಪತಿಃ ॥

(ಭಾಷ್ಯಾರ್ಥ)

ಮತ್ತು ಎಲೈ ಪ್ರಾಣನೆ, ನೀನು ಇಂದ್ರನು ಎಂದರೆ ಪರಮೇಶ್ವರನು[1]. ತೇಜಸ್ಸಿನಿಂದ ಎಂದರೆ ಪರಾಕ್ರಮದಿಂದ ಜಗತ್ತನ್ನು ಸಂಹರಿಸುವ ರುದ್ರನಾಗಿರುವೆ ; ಮತ್ತು ಸ್ಥಿತಿಕಾಲದಲ್ಲಿ ಸೌಮ್ಯರೂಪದಿಂದ[2] ಜಗತ್ತಿನ ಪರಿರಕ್ಷಕನಾಗಿರುವವನು–ಪರಿ ಎಲ್ಲಾ ಬಗೆಯಿಂದಲೂ ರಕ್ಷಿಸುವವನು, ಕಾಪಾಡುವವನು ನೀನೇ. ನೀನು ಅಂತರಿಕ್ಷದಲ್ಲಿ ಸೂರ್ಯನಾಗಿ ಒಂದೇ ಸಮನೆ ಉದಯಾಸ್ತಮಯಗಳನ್ನು ಹೊಂದುತ್ತಾ ನಿತ್ಯವೂ ಸಂಚರಿಸುತ್ತಿರುವೆ. ಮತ್ತು ಜ್ಯೋತಿಗಳೆಗೆಲ್ಲ ಒಡೆಯನಾಗಿರುವವನೂ ನೀನೇ.[3]

ಯದಾ ತ್ವಮಭಿವರ್ಷ–
ಸ್ಯಥೇಮಾಃ ಪ್ರಾಣತೇ ಪ್ರಜಾಃ ।

1, ಇಂದ್ರಿಯಗಳ ವ್ಯಾಪಾರವೆಲ್ಲವೂ ಪ್ರಾಣನ ಅಧೀನ.

2, 'ಇದಿ ಪರಮೈಶ್ವರ್ಯೇ' ಎಂಬ ಧಾತುವಿನ ಅರ್ಥವಿದು, ಸೃಷ್ಟಿಕರ್ತನು ಎಂದು ಅರ್ಥ.

3, ಸತ್ತ್ವಪ್ರಧಾನವಾದ ವಿಷ್ಣುರೂಪದಿಂದ.

3, ಜ್ಯೋತಿಗಳೆಗೆಲ್ಲ ಒಡೆಯನಾದ ಸೂರ್ಯನು ಎಂದಾಗಲಿ ಚಂದ್ರನು ಎಂದಾಗಲಿ ಅರ್ಥಮಾಡಬಹುದು.

ಆನನ್ದರೂಪಾಸ್ತಿಷ್ಠನ್ತಿ
ಕಾಮಾವಯೋನ್ನಂ ಭವಿಷ್ಯತೀತಿ ॥ ೧೦ ॥

೧೦. ಯಾವಾಗ ನೀನು ಮಳೆಗರೆಯುವೆಯೋ ಆಗ ಈ ಪ್ರಜೆಗಳು ಬದುಕಿರುವರು. ಬೇಕಾದಷ್ಟು ಅನ್ನವಾಗುವೆಂದು ಆನಂದರೂಪರಾಗಿ ಇರುತ್ತಾರೆ.

(ಭಾಷ್ಯ)

೩೩. ಯದಾ ಪರ್ಜನ್ಯೋ ಭೂತ್ವಾ ಅಭಿವರ್ಷಸಿ ತ್ವಮ್ ಅಥ ತದಾ ಅನ್ನಂ ಪ್ರಾಪ್ಯ ಇಮಾಃ ಪ್ರಜಾಃ ಪ್ರಾಣತೇ ಪ್ರಾಣಜೇಷ್ಟಾಂ ಕುರ್ವನ್ತಿ ಇತ್ಯರ್ಥಃ | ಅಥವಾ ಪ್ರಾಣ[1] ತೇ ತವ ಇಮಾಃ ಪ್ರಜಾಃ ಸ್ವಾತ್ಮಭೂತಾಃ ತ್ವದನ್ನಸಂವರ್ಧಿತಾಃ ತ್ವದಭಿವರ್ಷಣದರ್ಶನಮಾತ್ರೇಣ ಆನನ್ದರೂಪಾಃ ಸುಖಂ ಪ್ರಾಪ್ತಾ ಇವ ಸತ್ಯಃ ತಿಷ್ಠನ್ತಿ[2] | ಕಾಮಾಯ ಇಚ್ಛಾಕಃ ಅನ್ನಂ ಭವಿಷ್ಯತಿ ಇತಿ ಏವಮಭಿಪ್ರಾಯಾಃ[3] ॥

(ಭಾಷ್ಯಾರ್ಥ)

ಯಾವಾಗ ಪರ್ಜನ್ಯನಾಗಿ ನೀನು ಮಳೆಯನ್ನು ಸುರಿಯುವೆಯೋ ಆಗ ಅಗ್ಗೆ ಅನ್ನವನ್ನು ಹೊಂದಿದ ಈ ಪ್ರಜೆಗಳು "ಪ್ರಾಣತೇ" ಬದುಕಿರುವ ವ್ಯಾಪಾರವನ್ನು ಮಾಡುತ್ತಾರೆ[4] ಎಂದರ್ಥ. ಅಥವಾ (ಎಲ್ಲೆ) ಪ್ರಾಣನೆ, 'ತೇ' ನಿನ್ನ[5] ಸ್ವರೂಪರೇ ಆಗಿರುವ[6] ಈ ಪ್ರಜೆಗಳು, ನಿನ್ನ ಅನ್ನದಿಂದ ಬೆಳೆದಿರುವ[7] (ಈ ಪ್ರಜೆಗಳು) ನೀನು ಮಳೆಗರೆಯುವದನ್ನು ಕಂಡ ಮಾತ್ರದಿಂದಲೇ ಆನಂದರೂಪರಾಗಿ ಸುಖವನ್ನು ಹೊಂದಿದವರಂತೆ[7] ಆದವರಾಗಿ ಇರುತ್ತಾರೆ. ಬೇಕಾದಷ್ಟು

1. "ಹೇ ಪ್ರಾಣ" ಎಂದು ವಾ॥ ಪಾಠ.

2. ಅಚ್ಚಿನ ಪುಸ್ತಕಗಳಲ್ಲೆಲ್ಲ "ಇತ್ಯೇವಮಭಿಪ್ರಾಯಃ" ಎಂದೇ ಇದೆ. ಆದರೂ "ಇತಿ ಏವಮಭಿಪ್ರಾಯಾಃ" ಎಂದು ಪಾಣಗಳಿಗೆ ವಿಶೇಷಣವಾಗಿ ತೆಗೆದುಕೊಳ್ಳುವದರಲ್ಲಿ ಸ್ವಾರಸ್ಯವು ಹೆಚ್ಚು. ಆಗ "ಏವಮಭಿಪ್ರಾಯಾಃ" ಎಂಬುದು ಇತಿ ಎಂಬುದರ ವಿವರಣೆಯಾಗುತ್ತದೆ.

3. ಬದುಕಿರುತ್ತಾರೆ. ಮಳೆಯೇ ಪ್ರಜೆಗಳ ಜೀವನ ಎಂದರ್ಥ.

4. "ಪ್ರಾಣತೇ" ಎಂದು ಒಂದೇ ಕ್ರಿಯಾಪದವಾಗಿ ತೆಗೆದುಕೊಂಡು ಮೊದಲನೆಯ ಅರ್ಥವನ್ನು ಕೊಟ್ಟಿತ್ತು ; ಪ್ರಾಣ, ತೇ- ಎಂದು ಎರಡು ಪದಗಳಾಗಿ ಬಿಡಿಸಿ ಈ ಅರ್ಥವನ್ನು ಹೇಳಿದೆ.

5. ನಿನ್ನ ಪ್ರಜೆಗಳು ಎಂದರೆ ನಿನ್ನಿಂದ ಉಂಟಾಗಿರುವ, ನಿನ್ನ ಸ್ವರೂಪರಾದ ಎಂದರ್ಥ.

6. "ನಿನ್ನ ಪ್ರಜೆಗಳು" ಎಂಬುದಕ್ಕೆ ಇದೂ ಅರ್ಥ. ನಿನ್ನಿಂದ ಬಂದು ನಿನ್ನಿಂದಲೇ ಕಳೆದಿರುವರಾದ್ದರಿಂದ ನೀನೇ ಪೋಷಕನೆಂದು ಹೇಗೋ ಅರಿತಿರುತ್ತಾರೆ ಎಂದು ಭಾವ.

7. ಮುಂದೆ ಬರುವ ಸುಖವನ್ನು ಈಗಲೇ ಹೊಂದಿದವರಂತೆ, ನಿರೀಕ್ಷಣೆಯಿಂದಲೇ.

ತಾವು ಬಯಸಿದಷ್ಟು ಅನ್ನವನ್ನು ಆಗುವದು ಎಂದು ಹೀಗೆಂಬ ಅಭಿಪ್ರಾಯವುಳ್ಳವರಾಗಿ (ಆನಂದದೂಡುವಾಗಿರುತ್ತಾರೆ)[1].

ವ್ರಾತ್ಯಸ್ತ್ವಂ ಪ್ರಾಣೈಕರ್ಷಿ-
ರತ್ತಾ ವಿಶ್ವಸ್ಯ ಸತ್ಪತಿಃ।
ವಯಮನಾದ್ಯಸ್ಯ ದಾತಾರಃ
ಪಿತಾ ತ್ವಂ ಮಾತರಿಶ್ವ ನಃ ॥ ೧೦ ॥

೧೦. ಪ್ರಾಣನೇ, ನೀನು ವ್ರಾತ್ಯನು, ಏಕರ್ಷಿಯಾದ ಅತ್ತೃ, ವಿಶ್ವಕ್ಕೆ ಸತ್ಪತಿಯು, ನಾವು ಆಹಾರವನ್ನು ಕೊಡುವವರು. ಮಾತರಿಶ್ವನೆ, ನೀನು ನಮ್ಮ ತಂದೆ.

(ಭಾಷ್ಯ)

೧೪. ಕಿಂಚ ಪ್ರಥಮಜತ್ವಾತ್ ಅಸ್ಯಸ್ಯ ಸಂಸ್ಕರ್ತುರಭಾವಾತ್ ಅಸಂಸ್ಕೃತೋ ವ್ರಾತ್ಯಃ ತ್ವಮ್ | ಸ್ವಭಾವತ ಏವ ಏವ ಶುದ್ಧಃ ಇತ್ಯಭಿಪ್ರಾಯಃ | ಹೇ ಪ್ರಾಣ, ಏಕರ್ಷಿಸ್ತ್ವಮ್ ಅಥರ್ವಣಾನಾಂ ಪ್ರಸಿದ್ಧಃ ಏಕರ್ಷಿನಾಮಾ ಅಗ್ನಿಃ ಸನ್ ಅತ್ತಾ ಸರ್ವಹವಿಷಾಮ್ | ತ್ವಮೇವ ವಿಶ್ವಸ್ಯ[2] ಸತಃ ವಿದ್ಯಮಾನಸ್ಯ ಪತಿಃ ಸತ್ಪತಿಃ | ಸಾಧುರ್ವಾ ಪತಿಃ ಸತ್ಪತಿಃ | ವಯಂ ಪುನಃ ಅದ್ಯಸ್ಯ ತವ ಅದನೀಯಸ್ಯ ಹವಿಷಃ ದಾತಾರಃ | ತ್ವಂ ಪಿತಾ ಮಾತರಿಶ್ವ ಹೇ ಮಾತರಿಶ್ವನ್ ನಃ ಅಸ್ಮಾಕಮ್ | ಅಥವಾ ಮಾತರಿಶ್ವನಃ ವಾಯೋಃ ಪಿತಾ[3] ತ್ವಮ್ | ಅತಶ್ಚ ಸರ್ವಸ್ಯೈವ ಜಗತಃ ಪಿತೃತ್ವಂ ಸಿದ್ಧಮ್ ||

(ಭಾಷ್ಯಾರ್ಥ)

ಮತ್ತು ನೀನೇ ಮೊದಲು ಹುಟ್ಟಿದವನಾಗಿರುವದರಿಂದ ನಿನಗೆ ಸಂಸ್ಕಾರವನ್ನುಂಟುಮಾಡುವವರು ಬೇರೆ ಯಾರೂ ಇಲ್ಲದ್ದರಿಂದ ನೀನು ಸಂಸ್ಕಾರವಾಗಿಲ್ಲದ ವ್ರಾತ್ಯನು,[4] ಸ್ವಭಾವದಿಂದಲೇ ಶುದ್ಧನಾದವನು ಎಂದು ಅಭಿಪ್ರಾಯ. ಎಲೈ ಪ್ರಾಣನೆ, ನೀನು ಏಕರ್ಷಿಯು ; ಅಥರ್ವಣರಲ್ಲಿ ಪ್ರಸಿದ್ಧನಾಗಿರುವ ಏಕರ್ಷಿ ಎಂಬ ಹೆಸರಿನ ಅಗ್ನಿಯಾಗಿ[5] ಎಲ್ಲಾ ಹವಿಸ್ಸುಗಳನ್ನೂ (ಭಕ್ಷಿಸುವ) ಅತ್ತೃವು,

---

1. "ಇತ್ಯೇವಮಭಿಪ್ರಾಯಾಃ" ಎಂದೇ ಪಾಠವೆಂದು ಇಟ್ಟುಕೊಂಡರೆ ಹೀಗೆ ಕನ್ನಡಿಸಬೇಕು. "ಅಭಿಪ್ರಾಯಃ" ಎಂಬ ಪಾಠಕ್ಕೆ "ಹೀಗೆಂದು (ಅವರ) ಅಭಿಪ್ರಾಯವು" ಎಂದು ಅಧ್ಯಾಹಾರಮಾಡಿಕೊಂಡು ಕನ್ನಡಿಸಬೇಕಾಗುವದು.

2. 'ಸರ್ವಸ್ಯ' ಎಂದು ಪೆಡ್ಡಾಗಿ ವಾ।.

3. ಈ ಮೂರು ವಾ। ಪಾಠದಲ್ಲಿ ಮಾತ್ರ ಇದೆ.

4. ಸಂಸ್ಕಾರವನ್ನು ಬಯಸಿದವನು. ಈ ಅರ್ಥದಲ್ಲಿ ವ್ರಾತ್ಯಶಬ್ದವನ್ನು ಹೇದದಲ್ಲಿ ಉಪದೇಶಿಸಿರುವದಕ್ಕೆ ಅ. ವೇ. ಉಪನಿಷತ್ತಿನ ಕಾಂಡವನ್ನು ನೋಡಿ.

5. ಮುಂ. ಭಾ. ೩-೩-೧೧.

ನೀನು. ನೀನೇ ಇರುವ ಎಲ್ಲಾ (ಜಗತ್ತಿಗೂ) ಪತಿಯು, (ಆದ್ದರಿಂದ) ಸತ್ಪತಿಯು ; ಅಥವಾ ಒಳ್ಳೆಯ (ಯೋಗ್ಯನಾದ) ಪತಿಯು, (ಆದ್ದರಿಂದ) ಸತ್ಪತಿಯು.[1] ನಾವಾದರೋ ಅದ್ಯನನ್ನು ಎಂದರೆ ನಿನಗೆ ಆಹಾರವಾಗಿರುವ ಹವಿಸ್ಸನ್ನು ಕೊಡುವವರು. ಎಲೈ ಮಾತರಿಶ್ವನೆ, ನೀನು 'ನಃ' ನಮ್ಮಗಳಿಗೆ ತಂದೆ ; ಅಥವಾ 'ಮಾತರಿಶ್ವನಃ' ಎಂದರೆ ಮಾತರಿಶ್ವನಿಗೆ ವಾಯುವಿಗೆ ನೀನು ತಂದೆ. ಆದ್ದರಿಂದಲೂ[2] ಎಲ್ಲಾ ಜಗತ್ತಿಗೂ (ನೀನು) ತಂದೆಯೆಂದು ಸಿದ್ಧವಾಯಿತು.

ಯಾ ತೇ ತನೂರ್ವಾಚಿ ಪ್ರತಿಷ್ಠಿತಾ
ಯಾ ಶ್ರೋತ್ರೇ ಯಾ ಚ ಚಕ್ಷುಷಿ ।
ಯಾ ಚ ಮನಸಿ ಸನ್ತತಾ
ಶಿವಾಂ ತಾಂ ಕುರು ಮೋತ್ಕ್ರಮೀಃ ॥ ೧೨ ॥

೧೨. ನಿನ್ನ ಯಾವ ಶರೀರವು ವಾಕ್ಕಿನಲ್ಲಿ ಇಪ್ಪ ಕೊಂಡಿರುವದೋ, ಯಾವದು ಶ್ರೋತ್ರದಲ್ಲಿ (ಇದ್ದು ಕೊಂಡಿರುವದೋ), ಯಾವದು ಚಕ್ಷುಸ್ಸಿನಲ್ಲಿ (ಇದ್ದು ಕೊಂಡಿರುವದೋ), ಯಾವದು ಮನಸ್ಸಿನಲ್ಲಿ ಸಂತತವಾಗಿ(ರುವದೋ), ಅದನ್ನು ಮಂಗಲಕರವಾಗಿ ಮಾಡು, ಮೇಲಕ್ಕೆ (ಎದ್ದು) ಹೋಗಬೇಡ.

(ಭಾಷ್ಯ)

೩೫. (ಕಿಂ ಬಹುನಾ ?) ಯಾ ತೇ ತ್ವದೀಯಾ ತನೂಃ ವಾಚಿ ಪ್ರತಿಷ್ಠಿತಾ ವಕ್ತೃತ್ವೇನ ವದನೇಚೇಷ್ಟಾಂ ಕುರ್ವತೀ ಯಾ ಶ್ರೋತ್ರೇ ಯಾ ಚ ಚಕ್ಷುಷಿ ಯಾ ಚ ಮನಸಿ ಸಂಕಲ್ಪಾದಿವ್ಯಾಪಾರೇಣ ಸನ್ತತಾ ಸಮನುಗತಾ ತನೂಃ ತಾಂ ಶಿವಾಂ ಶಾನ್ತಾಂ ಕುರು ಮೋತ್ಕ್ರಮೀಃ ಉತ್ಕ್ರಮಣೇನ ಅಶಿವಾಂ ಮಾ ಕಾರ್ಷೀಃ ಇತ್ಯರ್ಥಃ ॥

1. "ಸತ್ಪತಿ" ಎಂಬ ಮಾತಿನಲ್ಲಿ ಸತ್ ಎಂಬುದಕ್ಕೆ ಇರುವ ಎಂದರ್ಥವನ್ನು ಕೊಟ್ಟು ಮೊದಲನೆಯ ವ್ಯಾಖ್ಯಾನವನ್ನು ಮಾಡಿದೆ ; ಒಳ್ಳೆಯ ಎಂಬರ್ಥವನ್ನು ಕೊಟ್ಟು ಎರಡನೆಯ ಅರ್ಥವನ್ನು ಮಾಡಿದೆ.

2. "ಮಾತರಿಶ್ವ ನಃ" ಎಂದು ಎರಡು ಪದವಾಗಿಟ್ಟುಕೊಂಡು ಒಂದನೆಯ ವ್ಯಾಖ್ಯಾನವನ್ನು ಮಾಡಿದೆ. ಮಾತರಿಶ್ವನಃ ಎಂದು ಷಷ್ಠೀವಿಭಕ್ತ್ಯಂತವಾದ ಒಂದೆ ಪದವಾಗಿಟ್ಟುಕೊಂಡು ಎರಡನೆಯ ವ್ಯಾಖ್ಯಾನ.

3. ತಂದೆತಾಯಿಗಳ ಆಕಾರದಿಂದ ಹುಟ್ಟುವದರಿಂದ ಮಾತ್ರವಲ್ಲ.

(ಘಾಷ್ಯಾರ್ಥ)

(ಹೆಚ್ಚೇಕೆ?)[1] ಯಾವ ನಿನ್ನೆ ನಿನ್ನೆದಾದ ತನುವು[2] ವಾಕ್ಕಿನಲ್ಲಿ ಮಾತನಾಡುವ ಕೆಲಸವನ್ನು ಮಾಡುತ್ತಾ ವಕ್ತೃವಾಗಿ ಇದ್ದುಕೊಂಡಿರುವದೋ (ಇದರಂತೆ) ಯಾವದು ಶ್ರೋತ್ರದಲ್ಲಿ (ಇದ್ದುಕೊಂಡಿರುವದೋ)[3] ಮತ್ತು ಯಾವದು ಚಕ್ಷುಸ್ಸಿನಲ್ಲಿ (ಇದ್ದುಕೊಂಡಿರುವದೋ) ಮತ್ತು ಯಾವ ತನುವು ಮನಸ್ಸಿನಲ್ಲಿ ಸಂಕಲ್ಪವೇ ಮುಂತಾದ ವ್ಯಾಪಾರದಿಂದ (ಕೂಡಿ) ಸಂತತವಾಗಿರುವದೋ ಬೆಂಬಿಡದೆ ಹೊಂದಿಕೊಂಡೇ ಇರುವದೋ[4], ಆ (ತನುವನ್ನು) ಮಂಗಲಕರವಾಗಿ ಶಾಂತವಾಗಿ ಮಾಡು : ಮೇಲಕ್ಕೆದ್ದು ಹೋಗಬೇಡ, (ಅವುಗಳನ್ನು) ಬಿಟ್ಟು ಹೋಗಿ ಅಮಂಗಲವಾಗಿ ಮಾಡಬೇಡ[5] ಎಂದರ್ಥ.

ಪ್ರಾಣಸ್ಯೇದಂ ವಶೇ ಸರ್ವಂ
ತ್ರಿದಿವೇ ಯತ್ಪ್ರತಿಷ್ಠಿತಮ್ ।
ಮಾತೇವ ಪುತ್ರಾನ್ ರಕ್ಷಸ್ವ
ಶ್ರೀಶ್ಚ ಪ್ರಜ್ಞಾಂ ಚ ವಿಧೇಹಿ ನ ಇತಿ ॥ ೧೩ ॥

೧೩. ಇದೆಲ್ಲವೂ ಪ್ರಾಣನ ವಶದಲ್ಲಿಯೇ ಇರುವದು. ತ್ರಿದಿವದಲ್ಲಿ ಯಾವದು ಇರುವದೋ ಅದೂ (ಪ್ರಾಣನ ವಶದಲ್ಲಿಯೇ ಇರುವದು). ತಾಯಿ ಮಕ್ಕಳನ್ನು ಹೇಗೋ ಹಾಗೆ ರಕ್ಷಿಸು. ಶ್ರೀಗಳನ್ನೂ ಪ್ರಜ್ಞೆಯನ್ನೂ ನಮಗೆ ಕೊಡು.

(ಭಾಷ್ಯ)

೧೩. ಕಿಂ ಬಹುನಾ ? ಅಸ್ಮಿನ್ ಲೋಕೇ ಪ್ರಾಣಸ್ಯೈವ ವಶೇ ಸರ್ವಮಿದಂ ಮತ್ಕಿಂಚಿದುಪಭೋಗಜಾತಮ್ । ತ್ರಿದಿವೇ ತೃತೀಯಸ್ಯಾಂ ದಿವಿ ಚ ಯತ್ ಪ್ರತಿಷ್ಠಿತಂ ದೇವಾದ್ಯುಪಭೋಗಲಕ್ಷಣಂ ತಸ್ಯಾಪಿ ಪ್ರಾಣ ಏವ ಈಶಿತಾ ರಕ್ಷಿತಾ । ಅತಃ ಮಾತೇವ ಪುತ್ರಾನ್ ಅಸ್ಮಾನ್ ರಕ್ಷಸ್ವ ಪಾಲಯಸ್ವ । ತ್ವ

---

1. "ಕಿಂ ಬಹುನಾ ?" ಎಂಬ ಮಾತು ಬರಹಗಾರರ ಕೈತಪ್ಪಿನಿಂದ ಬಿದ್ದಿದೆ ಎಂದ ತೋರುವದು.

2. ರೂಪವು.

3. ಶ್ರೋತ್ರದಲ್ಲಿ ಶ್ರೋತೃರೂಪದಿಂದ ; ಚಕ್ಷುಸ್ಸಿನಲ್ಲಿ ದ್ರಷ್ಟೃರೂಪದಿಂದ ಎಂದರ್ಥ.

4. ಸಂಕಲ್ಪ, ವಿಕಲ್ಪ, ಸಂಶಯ, ನಿಶ್ಚಯ-ಮುಂತಾದವುಗಳನ್ನು ಮಾಡುವದಕ್ಕೆ ತಕ್ಕ ರೂಪವನ್ನು ಧರಿಸಿಕೊಂಡು ಅವಿದಿತವಾಗಿ ಕೆಲಸಮಾಡುತ್ತಿರುವದೋ.

5. ಛಾ. ೫-೧-೭ರ ಸೂಚನೆ. ಮಿಕ್ಕ ಯಾವ ಇಂದ್ರಿಯಗಳು ಇಲ್ಲವಾದರೂ ಶರೀರವು ಅಮಂಗಲವಾಗಿ ತೋರುವದಿಲ್ಲ ; ಪ್ರಾಣವು ಹೋದಮಾತ್ರದಿಂದ ಅಮಂಗಲವಾಗುತ್ತದೆ.

ನ್ನಿಮಿತ್ತಾ ಹಿ ಬ್ರಾಹ್ಮ್ಯಃ ಕ್ಷಾತ್ರ್ಯಶ್ಚ[1] ಶ್ರಿಯಃ | ತಾಃ ತ್ವಂ ಶ್ರೇಶ್ಚ ಶ್ರಿಯಶ್ಚ ಪ್ರಜ್ಞಾಂ ಚ ತ್ವತ್ಸ್ಥಿತಿನಿಮಿತ್ತಾಂ ವಿಧೇಹಿ ನಃ ವಿಧತ್ಸ್ವ ಇತ್ಯರ್ಥಃ ಇತಿ | ಏವಂ ಸರ್ವಾತ್ಮತಯಾ ವಾಗಾದಿಭಿಃ ಪ್ರಾಣೈಃ ಸ್ತುತ್ಯಾ ಗಮಿತಮಹಿಮಾ ಪ್ರಾಣಃ ಪ್ರಜಾಪತಿಃ ಆತ್ತಾ ಇತ್ಯವಧೃತಮ್ ||

(ಭಾಷ್ಯಾರ್ಥ)

ಹೆಚ್ಚು (ಹೇಳಿದ್ದರಿಂ)ನೀನು ? ಈ ಲೋಕದಲ್ಲಿ ಯಾವ ಭೋಗಸಮೂಹವೇ ಇರಲಿ, ಅದೆಲ್ಲವೂ ಪ್ರಾಣನ ವಶದಲ್ಲಿಯೇ ಇರುವದು. ಶ್ರಿದಿವದಲ್ಲಿ ಎಂದರೆ ಮೂರನೆಯ ದ್ಯುಲೋಕದಲ್ಲಿ[2] ದೇವತೆಗಳೇ ಮೊದಲಾದವರ ಉಪ ಭೋಗರೂಪವಾಗಿ (ಏನೇನಿರುವದೋ) ಅದಕ್ಕೂ ಪ್ರಾಣನೇ ಒಡೆಯನು, (ಅದನ್ನು) ಕಾಪಾಡುವವನು.[3] ಅದ್ದರಿಂದ (ಎಲ್ಲೆ ಪ್ರಾಣನೆ,) ಮಕ್ಕಳನ್ನು ತಾಯಿಯು (ಕಾಪಾಡುವ) ಹಾಗೆ ನಮ್ಮನ್ನು ರಕ್ಷಿಸು, ಕಾಪಾಡು. ಬ್ರಾಹ್ಮಣ ಸಂಬಂಧವಾದ ಮತ್ತು ಕ್ಷತ್ರಿಯರ ಸಂಬಂಧವಾದ ಶ್ರೀಗಳು ನಿನ್ನ ಕಾರಣದಿಂದಲೇ (ಆಗುವ)ವಲ್ಲವೆ ? ನೀನು ಆ ಶ್ರೀಗಳನ್ನೂ (ಶ್ರೇಶ್ಚ=ಶ್ರಿಯಶ್ಚ) ಮತ್ತು ನಿನ್ನ ಇರುವಿಕೆಯ ನಿಮಿತ್ತದಿಂದಲೇ (ತೋರಬೇಕಾಗಿರುವ) ಪ್ರಜ್ಞೆಯನ್ನೂ[4] ನಮಗೆ ಉಂಟುಮಾಡು, ಇರುವಂತೆ ಮಾಡು ಎಂದರ್ಥ. ಹೀಗೆಂದು ಪ್ರಾಣಗಳು ಸ್ತೋತ್ರಮಾಡಿದರು.

ಹೀಗೆ ಸರ್ವರೂಪನಾಗಿರುವನೆಂದು ವಾಕ್ಕೇ ಮುಂತಾದ ಪ್ರಾಣಗಳಿಂದ ಸ್ತೋತ್ರದಿಂದ ಸಿದ್ಧವಾದ ಮಹಿಮೆಯುಳ್ಳ ಪ್ರಾಣನು ಪ್ರಜಾಪತಿಯು ಆತ್ತೃವು[5] ಎಂದು ನಿಶ್ಚಯಿಸಿದಂತಾಯಿತು.



---

1. "ಕ್ಷಾತ್ರಿಯೊಶ್ಚ" ಎಂದು ಆ॥ ಪಾಠ. ಇಲ್ಲಿ ಕೊಟ್ಟಿರುವದು ವಾ॥ ಪಾಠ.
2. ಸ್ವರ್ಗದಲ್ಲಿ.
3. ಈ ಲೋಕದ ಮತ್ತು ಪರಲೋಕದ ಭೋಗಗಳು ಪ್ರಾಣನ ಅನುಗ್ರಹದಿಂದ ಪಕ್ಕುವವು.
4. ಪ್ರಾಣವಿರುವವರೆಗೆ ಪ್ರಜ್ಞೆಯಿರುತ್ತದೆ. ಕೌ. ೩–೪.
5. ಪ್ರಜಾಪತಿಯು ಶರೀರದಲ್ಲಿ ಪ್ರಾಣನಾಗಿ ಆತ್ತೃವಾಗಿರುತ್ತಾನೆ.

ಮೂರನೆಯ ಪ್ರಶ್ನೆ

ಕೌಸಲ್ಯನ ಪ್ರಶ್ನೆಗಳು :

ಪ್ರಾಣನ ಉತ್ಪತ್ತ್ಯಾದಿಗಳು ಹೇಗೆ ಆಗುತ್ತವೆ ?

ಅಥ ಹೈನಂ ಕೌಸಲ್ಯಶ್ಚಾಶ್ವಲಾಯನಃ ಪಪ್ರಚ್ಛ । ಭಗವನ್ ಕುತ ಏಷ ಪ್ರಾಣೋ ಜಾಯತೇ ಕಥಮಾಯಾತ್ಯಸ್ಮಿನ್ಶರೀರ ಆತ್ಮಾನಂ ವಾ ಪ್ರವಿಭಜ್ಯ ಕಥಂ ಪ್ರತಿಷ್ಠತೇ ಕೇನೋತ್ಕ್ರಮತೇ ಕಥಂ ಬಾಹ್ಯಮಭಿಧತ್ತೇ ಕಥಮಧ್ಯಾತ್ಮಮಿತಿ ॥ ೧ ॥

೧. ಆಮೇಲೆ ಈತನನ್ನು ಕೌಸಲ್ಯ ಆಶ್ವಲಾಯನನು ಹೀಗೆಂದು ಕೇಳಿದನು. ಭಗವಂತನೆ, ಈ ಪ್ರಾಣನು ಎತರಿಂದ ಹುಟ್ಟುವನು ? ಈ ಶರೀರದೊಳಕ್ಕೆ ಹೇಗೆ ಬರುವನು? ತನ್ನನ್ನು ವಿಭಾಗಿಸಿಕೊಂಡು ಹೇಗೆ ಇದುತ್ತಿರುವನು? ಯಾವುದರಿಂದ ಮೇಲಕ್ಕೆದ್ದು ಹೋಗುವನು ? ಹೊರಗಿನದನ್ನು ಹೇಗೆ ತಡೆದುಕೊಂಡಿರುವನು? ಒಳಗಿನದನ್ನು ಹೇಗೆ (ತಡೆದುಕೊಂಡಿರುವನು) ?

(ಭಾಷ್ಯ)

೩೭. ಅಥ ಹೈನಂ ಕೌಸಲ್ಯಶ್ಚಾಶ್ವಲಾಯನಃ ಪಪ್ರಚ್ಛ । ಪ್ರಾಣೋ ಹ್ಯೇವಂ ಪ್ರಾಗ್ಭೇರ್ಧಾರಿತತತ್ತ್ವೈರುಪಲಬ್ಧಮಹಿಮಾಪಿ ಸಂಹತತ್ವಾತ್ ಸ್ಯಾತ್ ಅಸ್ಯ ಕಾರ್ಯತ್ವಮ್ । ಅತಃ ಪೃಚ್ಛಾಮಿ । ಭಗವನ್ ಕುತಃ ಕಸ್ಮಾತ್ ಕಾರಣಾತ್ ಏಷಃ ಯಥಾವಧೃತಃ ಪ್ರಾಣಃ ಜಾಯತೇ ? ಜಾತಶ್ಚ ಕಥಂ ಕೇನ ವೃತ್ತಿವಿಶೇಷೇಣ ಆಯಾತಿ ಅಸ್ಮಿನ್ ಶರೀರೇ ? ಕಿಂ ನಿಮಿತ್ತಕಮಸ್ಯ ಶರೀರಗ್ರಹಣಮ್ ? ಇತ್ಯರ್ಥಃ । ಪ್ರವಿಷ್ಟಶ್ಚ ಶರೀರೇ ಆತ್ಮಾನಂ ವಾ ಪ್ರವಿಭಜ್ಯ ಪ್ರವಿಭಾಗಂ ಕೃತ್ವಾ ಕಥಂ ಕೇನ ಪ್ರಕಾರೇಣ ಪ್ರತಿಷ್ಠತೇ ಪ್ರತಿತಿಷ್ಠತಿ ? ಕೇನ ವಾ ವೃತ್ತಿವಿಶೇಷೇಣ ಅಸ್ಮಾತ್ ಶರೀರಾತ್ ಉತ್ಕ್ರಮತೇ ಉತ್ಕ್ರಮತಿ ? ಕಥಂ ಬಾಹ್ಯಮ್ ಅಧಿಭೂತಮ್ ಅಧಿದೈವತಂ ಚ ಅಭಿಧತ್ತೇ ಧಾರಯತಿ ? ಕಥಮ್ ಅಧ್ಯಾತ್ಮಮ್ ? ಇತಿ[1] ॥

(ಭಾಷ್ಯಾರ್ಥ)

'ಆಮೇಲೆ ಈತನನ್ನು ಕೌಸಲ್ಯ ಆಶ್ವಲಾಯನನೂ (ಹೀಗೆಂದು) ಕೇಳಿದನು'. ಈ ರೀತಿಯಲ್ಲಿ ಪ್ರಾಣಗಳು ಪ್ರಾಣನ ತತ್ತ್ವವನ್ನು[2] ನಿಶ್ಚಯಿಸಿ ಇವನ ಮಹಿಮೆಯನ್ನು ಕಂಡುಕೊಂಡವಾದರೂ (ಈ ಪ್ರಾಣನೂ ಮಿಕ್ಕವುಗಳೊ

1, "ಧಾರಯತೀತಿ ಶೇಷಃ" ಎಂದು ವಾ॥ ಪಾಠದಲ್ಲಿ ಹೆಚ್ಚಾಗಿದೆ.

2. ಪ್ರಾಣನು ಸರ್ವಾತ್ಮಕನು, ಸರ್ವಕರಣಗಳ ಸಾರಭೂತನು–ಎಂದು.

ಡನೆ) ಒಟ್ಟುಗೂಡಿರುವನಾದ್ದರಿಂದ ಇವನು ಕಾರ್ಯನಾಗಿರಬೇಕು. ಆದ್ದರಿಂದ (ಎಲೈ) ಭಗವಂತನೆ, (ಹೀಗೆಂದು) ಕೇಳುತ್ತಿದ್ದೇನೆ. ಈಗ ಈ ನಿಶ್ಚಯವಾಡಿದ ಸ್ವರೂಪದ ಪ್ರಾಣನು ಎತರಿಂದ ? ಯಾವ ಕಾರಣದಿಂದ ಹುಟ್ಟುವನು? ಹುಟ್ಟಿದ ಮೇಲೆ ಹೇಗೆ, ಯಾವ ವೃತ್ತಿವಿಶೇಷದಿಂದ ಈ ಶರೀರದೊಳಗೆ ಬರುವನು ? ಇವನು ಶರೀರವನ್ನು ತೆಗೆದುಕೊಳ್ಳುವದಕ್ಕೆ ಕಾರಣವೇನು ? ಎಂದರ್ಥ. ಶರೀರವನ್ನು ಹೊಕ್ಕಮೇಲೆ ತನ್ನನ್ನು ವಿಭಾಗಿಸಿಕೊಂಡು ತನ್ನಲ್ಲಿ ಒಳಭಾಗಗಳನ್ನು ಮಾಡಿಕೊಂಡು ಹೇಗೆ, ಯಾವ ಪ್ರಕಾರದಿಂದ 'ಪ್ರಾತಿಷ್ಠತೇ' ಇದ್ದುಕೊಂಡಿರುವನು ? ಅಥವಾ ಯಾವ ವೃತ್ತಿವಿಶೇಷದಿಂದ ಈ ಶರೀರವನ್ನು (ಬಿಟ್ಟು) ಮೇಲಕ್ಕೆದ್ದು ಹೋಗುವನು ? ಹೊರಗಿನದನ್ನು ಎಂದರೆ ಅಧಿಭೂತವನ್ನು ಮತ್ತು ಅಧಿದೈವತವನ್ನು[1] ಹೇಗೆ ತಡೆದುಕೊಂಡಿರುವನು, ಹಿಡಿದಿಟ್ಟುಕೊಂಡಿರುವನು ? ಒಳಗಿನದನ್ನು ಹೇಗೆ (ತಡೆದುಕೊಂಡಿರುವನು) ?

ಪಿಪ್ಪಲಾದನು ಕೌಸಲ್ಯನನ್ನು ಮೆಚ್ಚಿದ್ದು

ತಸ್ಮೈ ಸ ಹೋವಾಚಾತಿಪ್ರಶ್ನಾನ್ ಪೃಚ್ಛಸಿ
ಬ್ರಹ್ಮಿಷ್ಠೋಽಸೀತಿ ತಸ್ಮಾತ್ ತೇಽಹಂ ಬ್ರವೀಮಿ ॥ ೨ ॥

೨. ಆವನಿಗೆ ಆತನು ಹೇಳಿದನೆಂದರೆ : ಅತಿಪ್ರಶ್ನೆಗಳನು ಕೇಳುತ್ತಿದ್ದೀಯೆ : ಬ್ರಹ್ಮಿಷ್ಠನಾಗಿರುವೆ. ಆದ್ದರಿಂದ ನಿನಗೆ ನಾನ್ನು (ಉತ್ತರವನ್ನು ಹೇಳುವೆನು).

(ಭಾಷ್ಯ)

೩೮. ಏವಂ ಪೃಷ್ಟಃ ತಸ್ಮೈ ಸ ಹ ಉವಾಚ ಆಚಾರ್ಯಃ | ಪ್ರಾಣ ಏವ ತಾವತ್ ದುರ್ವಿಜ್ಞೇಯತ್ವಾತ್ ವಿಷಮಪ್ರಶ್ನಾರ್ಹಃ | ತಸ್ಯಾಪಿ ಜನ್ಮಾದಿತ್ವಂ ಪೃಚ್ಛಸಿ ಅತಃ ಅತಿಪ್ರಶ್ನಾನ್ ಪೃಚ್ಛಸಿ | ಬ್ರಹ್ಮಿಷ್ಠೋಽಸೀತಿ ಅತಿಶಯೇನ ತ್ವಂ ಬ್ರಹ್ಮವಿತ್ | ಅತಃ ತುಷ್ಟೋಽಹಮ್ | ತಸ್ಮಾತ್ ತೇ ತುಭ್ಯಮ್ ಅಹಂ ಬ್ರವೀಮಿ ಯತ್ಪೃಷ್ಟವಾನ್ | ಶೃಣು ||

(ಭಾಷ್ಯಾರ್ಥ)

ಹೀಗೆಂದು ಕೇಳಲು, ಅವನಿಗೆ ಆ ಆಚಾರ್ಯನು ಹೇಳಿದನೆಂದರೆ : ಪ್ರಾಣನನ್ನು ತಿಳಿಯುವದೇ ಮೊದಲು ಕಷ್ಟವಾದ್ದರಿಂದ ಅವನನ್ನು ಕುರಿತು

---

1. ಇಂದ್ರಿಯಕ್ಕೆ ಹೊರಗಿನ ವಿಷಯವು ಅಧಿಭೂತ. ಅದನ್ನು ಅರಿಯುವದಕ್ಕೆ ಸಹಾಯವಾಗಿರುವ ಸೂರ್ಯಾದಿಗಳು ಅಧಿದೈವ. ಹೊರಗಿನ ಪ್ರಪಂಚವು ಅಧಿಭೂತ ಅಧಿದೈವ—ಎಂದು ಎರಡು ವಿಧ.

2. ಈ ಮಾತು ಆ॥ಪಾಠದಲ್ಲಿಲ್ಲ.

ಕೇಳುವುದೇನೂ ಸುಲಭವಲ್ಲ.[1] ಅವನಿಗೂ ಜನ್ಮಾದಿಗಳನ್ನು ನೀನು ಕೇಳುತ್ತಿರುವೆಯಲ್ಲ! ಅದ್ದರಿಂದ ನೀನು (ಎಲ್ಲವನ್ನೂ) ವಿಚಾರದ ಪ್ರಶ್ನೆಗಳನ್ನು ಕೇಳಿರುತ್ತೀಯೆ. (ನೀನು) ಬ್ರಹ್ಮಿಷ್ಠನಾಗಿರುವೆ, ನೀನು ಅತಿಶಯವಾಗಿ ಬ್ರಹ್ಮವನ್ನು ಬಲ್ಲವನಾಗಿರುವೆ[2]; ಆದ್ದರಿಂದ ನನಗೆ ಸಂತೋಷವಾಗಿರುತ್ತದೆ.[3] ಆದ್ದರಿಂದ ನಿನಗೆ ನಾನು (ನೀನು) ಕೇಳಿದೆಯಲ್ಲ, ಅದನ್ನು ಹೇಳುವೆನು, ಕೇಳು.

ಪ್ರಾಣದ ಉತ್ಪತ್ತಿ; ಅದು ಶರೀರಕ್ಕೆ ಒರುವ ಬಗೆ

ಆತ್ಮನ ಏಷ ಪ್ರಾಣೋ ಜಾಯತೇ। ಯಥೈಷಾ ಪುರುಷೇ ಛಾಯೈ-
ತಸ್ಮಿನ್ನೇತದಾತತಂ ಮನೋಕೃತೇನಾಯಾತ್ಯಸ್ಮಿ ಞ್ಶರೀರೇ ॥ ೩ ॥

೩. ಆತ್ಮನಿಂದ ಈ ಪ್ರಾಣನು ಹುಟ್ಟುತ್ತಾನೆ. ಹೇಗೆ ಪುರುಷನಲ್ಲಿ ಈ ನೆರಳು ಉಂಟಾಗುವುದೋ ಹಾಗೆ ಈತನಲ್ಲಿ ಇದು ಸೇರಿಕೊಂಡಿರುತ್ತದೆ. ಮನಸ್ಸಿನ ಕಾರ್ಯದಿಂದ ಈ ಶರೀರದೊಳಕ್ಕೆ ಬರುತ್ತದೆ.

(ಭಾಷ್ಯ)

೩ಗ. ಆತ್ಮನಃ ಪರಸ್ಮಾತ್ ಪುರುಷಾತ್ ಅಕ್ಷರಾತ್ ಸತ್ಯಾತ್ ಏಷಃ ಉಕ್ತಃ ಪ್ರಾಣಃ ಜಾಯತೇ, ಕಥಮಿತಿ? ಅತ್ರ ದೃಷ್ಟಾನ್ತಃ। ಯಥಾ ಲೋಕೇ ಏಷಾ ಪುರುಷೇ ಶಿರಃಪಾಣ್ಯಾದಿಲಕ್ಷಣೇ ನಿಮಿತ್ತೇ ಛಾಯಾ ನೈಮಿತ್ತಿಕೀ ಜಾಯತೇ, ತದ್ವತ್ ಏತಸ್ಮಿನ್ ಬ್ರಹ್ಮಣಿ ವಿತತ್ ಪ್ರಾಣಾಖ್ಯಂ ಛಾಯಾಸ್ಥಾನೀಯಮ್ ಅನ್ಯತರೂಪಮ್ ತತ್ತ್ವಂ ಸತ್ಯೇ ಪುರುಷೇ ಆತತಂ ಸಮರ್ಪಿತಮ್। ಇತ್ಯೇತತ್। ಛಾಯೇವ ದೇಹೇ ಮನೋಕೃತೇನ ಮನಸ್ಸಂಕಲ್ಪೇಚ್ಛಾದಿನಿಷ್ಪನ್ನಕರ್ಮನಿಮಿತ್ತೇನ ಇತ್ಯೇತತ್। ವಕ್ಷ್ಯತಿ ಹ "ಪುಣ್ಯೇನ ಪುಣ್ಯಮ್" (೩-೭) ಇತ್ಯಾದಿ। "ತದೇವ ಸಕ್ತಃ ಸಹ ಕರ್ಮಣೈತಿ" (ಬೃ. ೪-೪-೬) ಇತಿ ಚ ಶ್ರುತ್ಯನ್ತರಾತ್। ಆಯಾತಿ ಆಗಚ್ಛತಿ ಅಸ್ಮಿನ್ ಶರೀರೇ ॥

(ಭಾಷ್ಯಾರ್ಥ)

ಆತ್ಮನಿಂದ ಎಂದರೆ ಅಕ್ಷರನೂ ಸತ್ಯಸ್ವರೂಪನೂ[4] ಆದ ಪರಮಪುರುಷನಿಂದ ಈ ಹಿಂದೆ ಹೇಳಿದ ಪ್ರಾಣನು ಹುಟ್ಟುತ್ತಾನೆ. ಹೇಗೆ? ಎಂದರೆ ಇದಕ್ಕೆ ದೃಷ್ಟಾಂತವನ್ನು (ಹೇಳುತ್ತೇನೆ). ಹೇಗೆ ಲೋಕದಲ್ಲಿ ತಲೆ, ಕೈ- ಮುಂತಾದ

1. ಕರಣಗಳಿಗೆಲ್ಲ ಆಧಾರನಾಗಿರುವ ಮುಖ್ಯಪ್ರಾಣನ ಇರವನ್ನು ತಿಳಿಯುವದೇ ಕಷ್ಟ; ಅವನ ಹುಟ್ಟು ಮುಂತಾದದ್ದನ್ನು ಕುರಿತ ವಿಚಾರವು ಇನ್ನೂ ಕಷ್ಟ.

2. ಏಕೆಂದರೆ ಅಪರಬ್ರಹ್ಮಕ್ಕೂ ಕಾರಣವನ್ನು ಕೇಳುತ್ತಿರುವೆ.

3. ಉತ್ತಮವಾದ ಪ್ರಶ್ನೆಗಳನ್ನು ಕೇಳುವ ಶಿಷ್ಯನಿಗೆ ಗುರುಗಳ ಅನುಗ್ರಹವಾಗುತ್ತದೆ. ಗೀ. ೪-೩೪.

4. ಅಕ್ಷರನೆಂಬ ಪರಮಾರ್ಥಸತ್ಯನಾದ ಪುರುಷನಿಂದ ಅನೃತವಾದ ಪ್ರಾಣಾದಿಗಳು ಹುಟ್ಟುತ್ತವೆ ಎಂದು ಹಿಂದೆ ಹೇಳಿರುವ ಮುಂ. ಭಾ. ೩-೧-೩ನ್ನು ಇಲ್ಲಿ ಸೂಚಿಸಿದೆ.

ರೂಪದ ಪುರುಷನೆಂಬ[1] ನಿಮಿತ್ತದಿಂದ ಈ ನೈಮಿತ್ತಿಕವಾದ ನೆರಳು ಬಂದಾಗೆ ವದೋ, ಅದರಂತೆ ಈ ಬ್ರಹ್ಮ(ವೆಂಬ ನಿಮಿತ್ತ)ದಿಂದ ಈ ಪ್ರಾಣನೆಂಬ ನೆರಳಿನಂತಿರುವ ಸುಳ್ಳುತೋರಿಕೆಯಾದ[2] ತತ್ತ್ವವು ಸತ್ಯನಾದ ಪುರುಷನಲ್ಲಿ ಆಕತವಾಗಿರುವದು, ಎಂದರೆ ಸೇರಿಕೊಂಡಿರುವದು ಎಂದರ್ಥ. ನೆರಳಿನಂತೆ ದೇಹದಲ್ಲಿ 'ಮನೋಕೃತದಿಂದ' ಎಂದರೆ ಮನಸ್ಸಿನ ಸಂಕಲ್ಪ, ಇಚ್ಛೆ-ಮುಂತಾದ ಕರ್ಮದ ನಿಮಿತ್ತದಿಂದ ಎಂದಭಿಪ್ರಾಯ. ಏಕೆಂದರೆ ಮುಂದೆ (೭ನೆಯ ಮಂತ್ರದಲ್ಲಿ) 'ಪುಣ್ಯದಿಂದ ಪುಣ್ಯ(ಲೋಕಕ್ಕೆ ಒಯ್ಯುತ್ತದೆ)[3]' ಎಂದು ಮುಂತಾಗಿ ಹೇಳಿರುತ್ತದೆ. "ಆಸಕ್ತನಾಗಿ ಕರ್ಮದೊಡನೆ ಅದನ್ನೇ ಹೊಂದುವನು" (ಬೃ. ೪-೪-೬) ಎಂದು ಬೇರೊಂದು ಶ್ರುತಿಯಲ್ಲಿಯೂ ಹೇಳಿರುತ್ತದೆ. (ಹೀಗೆ ಮನಸ್ಸಿನ ಸಂಕಲ್ಪಾದಿಕರ್ಮದಿಂದ) ಈ ಶರೀರಕ್ಕೆ ಬಂದು ಸೇರುತ್ತದೆ.[4]

ಪ್ರಾಣದ ವಿಭಾಗಕ್ರಮ

ಯಥಾ ಸಮ್ರಾಜೇವಾಧಿಕೃತಾನ್ ವಿನಿಯುಂಜ್ಕ್ತೇ | ಏತಾನ್ ಗ್ರಾಮಾನೇತಾನ್ ಗ್ರಾಮಾನಧಿತಿಷ್ಠಸ್ವೇತ್ಯೇವಮೇವೈಷ ಪ್ರಾಣ ಇತರಾನ್ ಪ್ರಾಣಾನ್ ಪೃಥಕ್ಪೃಥಗೇವ ಸಂನಿಧತ್ತೇ ॥ ೪ ॥

೪. ಹೇಗೆ ಸಮ್ರಾಜನಾದವನೇ ಅಧಿಕಾರಿಗಳನ್ನು "ಈ ಹಳ್ಳಿಗಳನ್ನು ನೋಡಿಕೊಂಡಿರು, ಈ ಹಳ್ಳಿಗಳನ್ನು ನೋಡಿಕೊಂಡಿರು" ಎಂದು ನಿಯೋಗಿಸುತ್ತಾನೋ, ಇದರಂತೆಯೇ ಈ ಪ್ರಾಣನು ಉಳಿದ ಪ್ರಾಣಗಳನ್ನು ಬೇರೆಬೇರೆಯಾಗಿ ಇಡುತ್ತಾನೆ.

(ಭಾಷ್ಯ)

೪೦. ಯಥಾ ಯೇನ ಪ್ರಕಾರೇಣ ಲೋಕೇ ರಾಜಾ ಸಮ್ರಾಡೇವ ಗ್ರಾಮಾದಿಷು ಅಧಿಕೃತಾನ್ ವಿನಿಯುಂಜ್ಕ್ತೇ | ಕಥಂ ? ಏತಾನ್ ಗ್ರಾಮಾನ್ ಏತಾನ್ ಗ್ರಾಮಾನ್ ಅಧಿತಿಷ್ಠಸ್ವ ಇತಿ ಏವಮೇವ ಯಥಾ ಅಯಂ ದೃಷ್ಟಾನ್ತಃ ಏಷಃ ಮುಖ್ಯಃ ಪ್ರಾಣಃ ಇತರಾನ್ ಪ್ರಾಣಾನ್ ಚಕ್ಷುರಾದೀನ್ ಆತ್ಮಭೇದಾಂಶ್ಚ ಪೃಥಕ್ ಪೃಥಗೇವ ಯಥಾಸ್ಥಾನಂ ಸಂನಿಧತ್ತೇ ವಿನಿಯುಂಜ್ಕ್ತೇ ॥

---

1. ದೇಹಕ್ಕೇ ನೆರಳಿರುತ್ತದೆಯಾದ್ದರಿಂದ ಇಲ್ಲಿ ಪುರುಷನೆಂದರೆ ದೇಹವೇ.
2. ನೆರಳಿನ ದೃಷ್ಟಾಂತದಿಂದ (೧) ಪ್ರಾಣವು ಬರಿಯ ತೋರಿಕೆ, (೨) ಕನ್ನ ಆಧಾರದಲ್ಲಿ ಕಲ್ಪಿತವಾಗಿದೆ-ಎಂಬ ಎರಡು ಹೋಲಿಕೆಗಳನ್ನೂ ಗ್ರಹಿಸಬೇಕು.
3. ಪೂರ್ವಜನ್ಮದ ಪುಣ್ಯಾಪುಣ್ಯಗಳೇ ಈ ಶರೀರಕ್ಕೆ ಕಾರಣವೆಂದು ಅಭಿಪ್ರಾಯ.
4. ಈ ಶರೀರವನ್ನು ಧರಿಸುವದಕ್ಕೆ ಹಿಂದಿನ ಸಂಕಲ್ಪಾದಿಗಳು ಕಾರಣವೆಂದು ಹೇಳಿದಂತೆ ಆಯಿತು.

(ಭಾಷ್ಯಾರ್ಥ)

ಹೇಗೆ ಯಾವ ಪ್ರಕಾರದಿಂದ ಲೋಕದಲ್ಲಿ ಸಮ್ರಾಜನಾಗಿರುವ ಅರಸನೇ ಹಳ್ಳಿಯೇ ಮುಂತಾದವುಗಳಲ್ಲಿ[1] ಅಧಿಕಾರಿಗಳನ್ನು ನಿಯೋಗಿಸುತ್ತಾನೋ, ಹೇಗೆಂದರೆ "ಈ ಹಳ್ಳಿಗಳನ್ನು (ನೀನು ನೋಡಿಕೊಂಡಿರು), ಈ ಹಳ್ಳಿಗಳನ್ನು ನೀನು ನೋಡಿಕೊಂಡಿರು"–ಎಂದು (ಹೇಗೆ ನಿಂಗಡಿಸಿ ಕಟ್ಟುಮಾಡಿರುತ್ತಾನೋ) ಹೀಗೆಯೇ, ಈ ದೃಷ್ಟಾಂತದಂತೆಯೇ, ಈ ಮುಖ್ಯಪ್ರಾಣನು ಉಳಿದ ಪ್ರಾಣಗಳನ್ನು ಎಂದರೆ ಚಕ್ಷುರಾದಿಗಳನ್ನು ತನ್ನ ಭೇದಗಳಾದ (ವೃತ್ತಿಗಳನ್ನು)[2] ಬೇರೆಬೇರೆಯಾಗಿಯೇ ಅವರವರ ಸ್ಥಾನಕ್ಕೆ ತಕ್ಕಂತೆ ನಿಯೋಗಿಸಿರುತ್ತಾನೆ.

(ಭಾಷ್ಯ)

೪ಗ. ತತ್ರ ವಿಭಾಗಃ—

(ಭಾಷ್ಯಾರ್ಥ)

ಇಲ್ಲಿ ವಿಭಾಗಮಾಡಿರುವದು (ಹೇಗೆಂದರೆ) :—

ಪಾಯೂಪಸ್ಥೇಽಪಾನಂ ಚಕ್ಷುಃಶ್ರೋತ್ರೇ ಮುಖನಾಸಿಕಾಭ್ಯಾಂ ಪ್ರಾಣಃ ಸ್ವಯಂ ಪ್ರಾತಿಷ್ಠತೇ ಮಧ್ಯೇ ತು ಸಮಾನಃ । ಏಷ ಹ್ಯೇತದ್ಹುತಮನ್ನಂ ಸಮಂ ನಯತಿ ತಸ್ಮಾದೇತಾಃ ಸಪ್ತಾರ್ಚಿಷೋ ಭವನ್ತಿ ॥ ೪ ॥

೪. ಪಾಯೂಪಸ್ಥದಲ್ಲಿ ಅಪಾನವು ; ಚಕ್ಷುಃಶ್ರೋತ್ರದಲ್ಲಿ(ಯೂ) ಮುಖನಾಸಿಕಗಳಿಂದಲೂ (ಹೊರಕ್ಕೆ ಬರುತ್ತಾ) ಪ್ರಾಣನು ತಾನೇ ಇಮ್ಮಡಿಕೊಂಡಿರುವನು. ಮಧ್ಯದಲ್ಲಿಯಾದರೆ ಸಮಾನನು ; ಇವನೇ ಅಲ್ಲವೆ, ಹೋಮಮಾಡಿದ ಈ ಅನ್ನವನ್ನು ಸಮವಾಗಿ ನಯನಮಾಡುವನು ? ಆದರಿಂದ ಈ ಏಳು ಉರಿಗಳು ಆಗುತ್ತಿರುವವು.

(ಭಾಷ್ಯ)

೪ಎ. ಪಾಯೂಪಸ್ಥೇ ಪಾಯುಶ್ಚ ಉಪಸ್ಥಶ್ಚ ಪಾಯೂಪಸ್ಥಂ ತಸ್ಮಿನ್ । ಅಪಾನಮ್ ಆತ್ಮಭೇದಂ ಮೂತ್ರಪುರೀಷಾದ್ಯಪನಯನಂ ಕುರ್ವನ್ ತಿಷ್ಠತಿ ಸನ್ನಿಧತ್ತೇ । ತಥಾ ಚಕ್ಷುಃಶ್ರೋತ್ರೇ ಚಕ್ಷುಶ್ಚ ಶ್ರೋತ್ರಂ ಚ ಚಕ್ಷುಃಶ್ರೋತ್ರಂ ತಸ್ಮಿನ್ ಚಕ್ಷುಃಶ್ರೋತ್ರೇ ಮುಖನಾಸಿಕಾಭ್ಯಾಂ ಚ ಮುಖಂ ಚ ನಾಸಿಕಾ ಚ

---

1. ಹಳ್ಳಿಗಳು ಸೇರಿ ಆಗಿರುವ ತಾಲ್ಲೂಕು ಮುಂತಾದ ವಿಭಾಗಗಳಿಗೂ ಇದನ್ನು ಅನ್ವಯಿಸಿಕೊಳ್ಳಬೇಕು.

2 ಪ್ರಾಣಾಪಾನಾದಿಗಳನ್ನು ಪಾಯ್ವಾದಿಸ್ಥಾನಗಳಿಗೆ ತಕ್ಕಂತೆ ನಿಯೋಗಿಸುತ್ತಾನೆ ಎಂದರ್ಥ. ಚಕ್ಷುರಾದಿಗಳನ್ನು ಆಯಾ ಸ್ಥಾನಗಳಲ್ಲಿ ನಿಯೋಗಿಸುತ್ತಾನೆ–ಎಂಬುದು ಶ್ರೌತವಾಗಿರುವದರಿಂದ ಶ್ರುತಿಯು ಹೇಳಲಿಲ್ಲ ಎಂದು ಆ॥ ವ್ಯಾಖ್ಯಾನದಲ್ಲಿದೆ. ಆದರೆ ಇದು ಹಿಂದಿನ ಪ್ರಶ್ನೆಯಲ್ಲಿಯೇ ಹೇಳಿದೆಯಾದ್ದರಿಂದ ಇಲ್ಲಿ ಬೇಕಿಲ್ಲವೆಂಬುದು ನ್ಯಾಯವಾಗಿದೆ,

ಮುಖನಾಸಿಕೇ ತಾಭ್ಯಾಂ ಮುಖನಾಸಿಕಾಭ್ಯಾಂ ಚ ನಿರ್ಗಚ್ಛನ್ ಪ್ರಾಣಃ ಸ್ವಯಂ ಸಮ್ರಾಟ್ ಸ್ಥಾನೀಯಃ ಪ್ರತಿಷ್ಠತೇ ಪ್ರತಿತಿಷ್ಠತಿ[1] | ಮಧ್ಯೇ ತು ಪ್ರಾಣಾಪಾನಯೋಃ ಸ್ಥಾನೇಯೋಃ ನಾಭ್ಯಾಂ ಸಮಾನಃ | ಅಶಿತಂ ಪೀತಂ ಚ ಸಮಂ ನಯತಿ ಇತಿ ಸಮಾನಃ | ಏಷ ಹಿ ಯಸ್ಮಾತ್ ಯದೇತತ್ ಹುತಂ ಭುಕ್ತಂ ಪೀತಂ ಚ ಆತ್ಮಾಗ್ನೌ ಪ್ರಕ್ಷಿಪ್ತಂ ಅನ್ನಂ ಸಮಂ ನಯತಿ | ತಸ್ಮಾತ್ ಅಶಿತಪೀತೇನ್ಧನಾತ್ ಅಗ್ನೇಃ ಔದರ್ಯಾತ್ ಹೃದಯದೇಶಂ ಪ್ರಾಪ್ತಾತ್ ಏತಾಃ ಸಪ್ತಸಂಖ್ಯಾಕಾಃ ಅರ್ಚಿಷಃ ದೀಪ್ತಯಃ ನಿರ್ಗಚ್ಛನ್ತ್ಯಃ ಭವನ್ತಿ ಶೀರ್ಷಣ್ಯಪ್ರಾಣದ್ವಾರಾ ದರ್ಶನಶ್ರವಣಾದಿಲಕ್ಷಣರೂಪಾದಿವಿಷಯಪ್ರಕಾಶಾ ಇತ್ಯಭಿಪ್ರಾಯಃ ||

(ಭಾಷ್ಯಾರ್ಥ)

ಪಾಯೂಪಸ್ಥದಲ್ಲಿ; ಪಾಯು, ಉಪಸ್ಥ– ಇವುಗಳು ಸೇರಿದ್ದು ಪಾಯೂಪಸ್ಥವು ; ಆದರಲ್ಲಿ ತನ್ನ (ಒಂದು) ಭೇದವಾದ ಅಪಾನವನ್ನು ಮೂತ್ರ, ಮೆಲ –ಮುಂತಾದವನ್ನು ಹೊರಕ್ಕೆಹಾಕುತ್ತಾ ಇರುವದಲ್ಲ, (ಅದನ್ನು) ಇಟ್ಟುಕೊಳ್ಳುತ್ತಾನೆ[2] ಇದರಂತೆ ಚಕ್ಷುಃಶ್ರೋತ್ರದಲ್ಲಿ ಚಕ್ಷುಸ್ಸು, ಶ್ರೋತ್ರ–ಇವುಗಳು ಸೇರಿದ್ದು ಚಕ್ಷುಃಶ್ರೋತ್ರವು ; ಆದರಲ್ಲಿಯೂ, ಮುಖನಾಸಿಕಗಳಿಂದ– ಮುಖವೂ ನಾಸಿಕೆಯೂ ಮುಖನಾಸಿಕೆಗಳು ; ಅವುಗಳಿಂದ– (ಅ) ಬಾಯಿಮೂಗುಗಳಿಂದಲೂ, ಹೊರಕ್ಕೆ ಬರುತ್ತಿರುವ ಸಮ್ರಾಜನಂತಿರುವ ಪ್ರಾಣನು ತಾನೇ ಇದ್ದುಕೊಂಡಿರುವನು (ಪ್ರತಿಷ್ಠತೇ=ಪ್ರತಿತಿಷ್ಠತಿ)[3]. ಆದರೆ ಪ್ರಾಣಾಪಾನಗಳ ಮಧ್ಯದಲ್ಲಿ, ಅಂದರೆ ಹೊಕ್ಕುಳಲ್ಲಿ ಸಮಾನ(ವಿರುತ್ತದೆ). ತಿಂದದ್ದನ್ನೂ ಕುಡಿದದ್ದನ್ನೂ ಸಮನಾಗಿ ತೆಗೆದುಕೊಂಡೊಯ್ಯುವದರಿಂದ (ಇದಕ್ಕೆ) ಸಮಾನ(ವೆಂದು ಹೆಸರು) ; (ಹಿ) ಏಕೆಂದರೆ ಈ ಹೋಮಮಾಡಿದ್ದುಂಟಲ್ಲ, ಎಂದರೆ ತಿಂದದ್ದು, ಕುಡಿದದ್ದು–ಎಂಬ ಆತ್ಮಾಗ್ನಿಯಲ್ಲಿ[4] ಹಾಕಿದ್ದಿದೆಯಲ್ಲ, ಆ ಅನ್ನವನ್ನು ಈ (ಸಮಾನನೇ) ಸಮವಾಗಿ

1. ಈ ಮಾತು ವಾ॥ ಪಾಠದಲ್ಲಿದೆ. ಇಲ್ಲದಿದ್ದರೂ ಸಾಗುತ್ತದೆ.

2. "ಶೀರ್ಷಣ್ಯಃ" ಎಂಬ ಆ॥ ಪಾಠಕ್ಕಿಂತ ಈ ವಾ॥ ಪಾಠವೇ ಮೇಲು.

3. "ಪ್ರಕಾಶಃ" ಎಂದು ವಾ॥ ಪಾಠ.

4. "ಯಃ ತಿಷ್ಠತಿ ತಂ ಸನ್ನಿಧತ್ತೇ" ಎಂದು ಅಧ್ಯಾಹಾರಮಾಡಿಕೊಂಡು ಅನ್ವಯಮಾಡಿದೆ. (ಆ॥ ವ್ಯಾಖ್ಯಾನ). 'ಸನ್ನಿಧತ್ತೇ ತಿಷ್ಠತಿ' ಎಂಬ ವಾ॥ ಪಾಠಕ್ಕಿಂತ ಈ ಆ॥ ಪಾಠವೇ ಮೇಲು.

5. ಇಂದ್ರಿಯಗಳಲ್ಲಿ ಸಾಮಾನ್ಯವ್ಯಷ್ಟಿರೂಪದಿಂದ ಪ್ರಾಣವಿದೆ– ಎಂಬರ್ಥವನ್ನು ಮಾಡಬೇಕೆಂದು ತೋರುತ್ತದೆ.

6. ಶರೀರದಲ್ಲಿರುವ ಜಠರಾಗ್ನಿಯಲ್ಲಿ ತಿಂದದ್ದೂ ಕುಡಿದದ್ದೂ ಹೋಮವಾಗುವವು ಎಂದು ಭಾವಿಸುವದೂ ಒಂದು ಅಗ್ನಿಹೋತ್ರಕ್ಕೆ ಸಮಾನವು. ಮುಂ. ೩–೧–೮ ನೋಡಿ. ಇದು ಪ್ರಾಸಂಗಿಕವಾದ ಉಪದೇಶ-

ಕೊಂಡೊಯ್ದು (ಕೊಡುತ್ತಿರುವದು), ಆ ತಿಂದದ್ದು, ಕುಡಿದದ್ದು—ಎಂಬ ಕಟ್ಟಿಗೆ ಯಂಳ್ಳ, ಹೊಟ್ಟೆಯೊಳಗಿನ ಅಗ್ನಿಯು ಹೃದಯಸ್ಥವನ್ನು ಸೇರಲು ಅದರಿಂದ ಈ ಏಳು ಸಂಖ್ಯೆಯ ಅರ್ಚಿಗಳು[1] ಬೆಳಕುಗಳು, ತಲೆಯಲ್ಲಿರುವ ಪ್ರಾಣಗಳ ಮೂಲಕವಾಗಿ ನೋಡುವದು, ಕೇಳುವದು— ಮುಂತಾದ ರೂಪಾದಿವಿಷಯಗಳ ಅರಿವುಗಳು ಹೊರಹೊರಡುತ್ತಿರುವವು.[2] ಎಂದು ಅಭಿಪ್ರಾಯ.

ಹೃದಿ ಹ್ಯೇಷ ಆತ್ಮಾ[3] ಅತ್ರೈತದೇಕಶತಂ ನಾಡೀನಾಂ ತಾಸಾಂ ಶತಂ ಶತಮೇಕೈಕಸ್ಯಾ ದ್ವಾಸಪ್ತತಿರ್ದ್ವಾಸಪ್ತತಿಃ ಪ್ರತಿಶಾಖಾನಾಡೀಸಹಸ್ರಾಣಿ ಭವನ್ತ್ಯಾಸು ವ್ಯಾನಶ್ಚರತಿ ॥ ೬ ॥

೬. ಆ ಆತ್ಮವು ಹೃದಯದಲ್ಲಿಯೇ ಇರುತ್ತದೆ. ಇಲ್ಲಿ ನೂರ ಒಂದು ನಾಡಿಗಳು. (ಇವುಗಳಲ್ಲಿ) ಒಂದೊಂದಕ್ಕೆ ನೂರುನೂರು, ಒಂದೊಂದು ಶಾಖೆಗೆ ಎಪ್ಪತ್ತೆರಡುಎಪ್ಪತ್ತೆರಡು ಸಾವಿರ ಪ್ರತಿಶಾಖಾನಾಡಿಗಳು ಇರುವವು. ಇವುಗಳಲ್ಲಿ ವ್ಯಾನವು ಸಂಚರಿಸುತ್ತಿರುವದು.

(ಭಾಷ್ಯ)

೬. ಹೃದಿ ಹಿ ಏಷಃ ಪುಣ್ಡರೀಕಾಕಾರಮಾಂಸಪಿಣ್ಡಪರಿಚ್ಛಿನ್ನೋ ಹೃದಯಾಕಾಶೇ ಏಷಃ ಆತ್ಮಾ ಆತ್ಮಸಂಯುಕ್ತೋ ಲಿಙ್ಗಾತ್ಮಾ[3] । ಅತ್ರ ಅಸ್ಮಿನ್ ಹೃದಯೇ ಏತತ್ ಏಕಶತಮ್ ಏಕೋತ್ತರಶತಂ ಸಂಖ್ಯಯಾ ಪ್ರಧಾನನಾಡೀನಾಂ ಭವತಿ । ತಾಸಾಂ ಶತಂ ಶತಮ್ ಏಕೈಕಸ್ಯಾಃ ಪ್ರಧಾನನಾಡ್ಯಾ ಭೇದಾಃ । ಪುನರಪಿ ದ್ವಾಸಪ್ತತಿರ್ದ್ವಾಸಪ್ತತಿಃ ದ್ವೇ ದ್ವೇ ಸಹಸ್ರೇ ಅಧಿಕೇ ಸಪ್ತತಿಶ್ಚ ಸಹಸ್ರಾಣಿ ಸಹಸ್ರಾಣಾಂ ದ್ವಾಸಪ್ತತಿಃ ಪ್ರತಿಶಾಖಾನಾಡೀಸಹಸ್ರಾಣಿ ಪ್ರತಿಪ್ರತಿನಾಡೀಶತಂ ಸಂಖ್ಯಯಾ ಪ್ರಧಾನನಾಡೀನಾಂ ಸಹಸ್ರಾಣಿ ಭವನ್ತಿ । ಅಸು ನಾಡೀಷು ವ್ಯಾನೋ ವಾಯುಶ್ಚರತಿ । ವ್ಯಾನಃ ವ್ಯಾಪನಾತ್ । ಆದಿತ್ಯಾದಿವ ರಶ್ಮಯೋ ಹೃದಯಾತ್ ಸರ್ವತೋಗಾಮಿನೀಭಿಃ ಸರ್ವದೇಹಂ ಸಂವ್ಯಾಪ್ಯ ವ್ಯಾನೋ ವರ್ತತೇ । ಸನ್ಧಿಸ್ಕನ್ಧಮರ್ಮದೇಶೇಷು ವಿಶೇಷೇಣ ಪ್ರಾಣಾಪಾನವೃತ್ತ್ಯೋಶ್ಚ ಮಧ್ಯೇ ಉಚ್ಚೈಃವೃತ್ತಿವೀರ್ಯವತ್ಕರ್ಮಕರ್ತಾ ಭವತಿ ॥

---

1. ಮೂ- ೩-೧-೮ ನೋಡಿ. ವ್ಯಾನದ ಕಾರ್ಯದ ಫಲವಾಗಿ ಈ ಇಂದ್ರಿಯಗಳ ಅರಿವುಗಳು ಹೊರಹೊಮ್ಮುತ್ತಿರುವವು ಎಂದಭಿಪ್ರಾಯ.

2. 'ಪ್ರಕಾಶ' ಎಂಬ ವಾ॥ ಪಾಠದಲ್ಲಿ 'ಪ್ರಕಾಶಗಳು ಹೊರಹೊರಡುತ್ತಿರುವವು ತಲೆಯಲ್ಲಿರುವ.....ಅರಿವು (ಜ್ಞಾಪಿಸುವದು) ಎಂದು ಅಭಿಪ್ರಾಯ' ಎಂದು ಕನ್ನಡಿಸಬೇಕು.

3. ಇದಾದ ಬಳಿಕ 'ಜೀವಾತ್ಮಾ ಇತ್ಯರ್ಥಃ' ಎಂದು ವಾ॥ ಪಾಠ.

(ಭಾಷ್ಯಾರ್ಥ)

ಹೃದಯದಲ್ಲಿಯೇ ಕಮಲದ ಆಕಾರದ ಮಾಂಸದ ಮುದ್ದೆಯ ಅಳತೆಗೆ ಸಿಕ್ಕಿರುವ ಹೃದಯಾಕಾಶದಲ್ಲಿಯೇ ಈ ಆತ್ಮವು ಎಂದರೆ ಆತ್ಮನೊಡನೆ ಸೇರಿಕೊಂಡಿರುವ ಲಿಂಗಾತ್ಮವು[1] (ಇರುವದು). ಇಲ್ಲಿ ಎಂದರೆ ಈ ಹೃದಯದಲ್ಲಿ ಈ ನೂರೊಂದು ನೂರರ ಮೇಲೊಂದು ಸಂಖ್ಯೆಯ ಮುಖ್ಯನಾಡಿಗಳು ಇರುವವು. ಅವುಗಳಲ್ಲಿ ಒಂದೊಂದು ಮುಖ್ಯನಾಡಿಗೂ ನೂರು ನೂರು ಭೇದಗಳಿರುವವು; ಮತ್ತು (ಒಂದೊಂದಕ್ಕೆ) ಎಪ್ಪತ್ತೆರಡು ಎಪ್ಪತ್ತೆರಡು (ಸಾವಿರ), ಎರಡೆರಡು ಸಾವಿರ ಹೆಚ್ಚಾಗಿ ಎಪ್ಪತ್ತುಸಾವಿರ– ಹೀಗೆ ಎಪ್ಪತ್ತೆರಡು ಸಾವಿರ ಪ್ರತಿ ಶಾಖಾನಾಡೀಸಹಸ್ರಗಳು ಎಂದರೆ ಮುಖ್ಯ ನಾಡಿಗಳಿರುವ ಒಂದೊಂದು ನೂರು ಭೇದಗಳಲ್ಲಿ (ಪ್ರತಿಯೊಂದಕ್ಕೂ) ಎಪ್ಪತ್ತೆರಡು) ಸಾವಿರ[2] ಪ್ರತಿ ಶಾಖಾನಾಡಿಗಳು ಇರುವವು. ಈ ನಾಡಿಗಳಲ್ಲಿ ವ್ಯಾನವೆಂಬ ವಾಯು ಸಂಚರಿಸುತ್ತಿರುವದು. ವ್ಯಾಪಿಸಿಕೊಂಡಿರುವದರಿಂದ ಇದಕ್ಕೆ ವ್ಯಾನವೆಂದು ಹೆಸರು. ಸೂರ್ಯನಿಂದ ಹೊರಡುವ ರಶ್ಮಿಗಳಂತೆ ಹೃದಯದಿಂದ ಎಲ್ಲಾ ಕಡೆಗೂ ಹೋಗಿರುವ ನಾಡಿಗಳಿಂದ ದೇಹವೆಲ್ಲವನ್ನೂ ಡೆನ್ನಾಗಿ ವ್ಯಾಪಿಸಿಕೊಂಡು ವ್ಯಾನವು (ಕೆಲಸ) ಮಾಡುತ್ತಿರುತ್ತದೆ. (ಅದರಲ್ಲಿಯೂ) ಸಂದುಗಳು, ಹೆಗಲುಗಳು, ಮರ್ಮಸ್ಥಳಗಳು– ಇವುಗಳಲ್ಲಿ ವಿಶೇಷವಾಗಿ[3] ಪ್ರಾಣಾಪಾನವೃತ್ತಿಗಳ ನಡುವೆ[4] ಹೊರ ತೋರುವ ವೃತ್ತಿಯುಳ್ಳದ್ದಾಗಿ ವೀರ್ಯವಂತವಾದ ಕೆಲಸಗಳನ್ನೂ[5] ಮಾಡುತ್ತಾ ಇರುತ್ತದೆ.

ಅಥೈಕಯೋರ್ಧ್ವ ಉದಾನಃ ಪುಣ್ಯೇನ ಪುಣ್ಯಂ ಲೋಕಂ ನಯತಿ
ಪಾಪೇನ ಪಾಪಮುಭಾಭ್ಯಾಮೇವ ಮನುಷ್ಯಲೋಕಮ್ ॥ ೭ ॥

---

1. ಲಿಂಗಶರೀರವು ಆತ್ಮನಿಗೆ ಉಪಾಧಿಯಾಗಿರುವದರಿಂದ ಇದನ್ನು ಆತ್ಮನೆಂದು ಕರೆದಿದೆ. ಹೃದಯವು ಮನಸ್ಸಿಗೆ ಸ್ಥಾನವೆಂಬ ಅಭಿಪ್ರಾಯವನ್ನನುಸರಿಸಿ ಹೇಳಿದ್ದಿದು.

2. ಈ ಲೆಕ್ಕದಂತೆ ೧೦೧ ಪ್ರಧಾನ ನಾಡಿಗಳು ; ೧೦೧×೧೦೦= ೧೦೧೦೦ ಶಾಖಾನಾಡಿಗಳು ಮತ್ತು ೧೦೧೦೦×೭೨೦೦= ೭೨ ಕೋಟಿ ೭೨ ಲಕ್ಷ ಪ್ರಶಿಶಾಖಾನಾಡಿಗಳು. ಹೀಗೆ ಒಟ್ಟು ೭೨ ಕೋಟಿ ೭೨ ಲಕ್ಷದ ಮೇಲೆ ೧೦ ಸಾವಿರದ ೨೦೧ ನಾಡಿಗಳಾಗುವವು. ಆದರೆ ಅನೇಕ ಮುಖ್ಯನಾಡಿಗಳಲ್ಲಿ ಸುಷುಮ್ನೆ ಎಂಬ ಮತ್ತೊಂದು ಮುಖ್ಯನಾಡಿ ಇದೆ ; ಶಾಖೋಪಶಾಖೆಗಳಾಗಿರುವ ನಾಡಿಗಳಲ್ಲಿ ವ್ಯಾನವು ಕೆಲಸಮಾಡುತ್ತಿರುತ್ತದೆ–ಎಂಬುದಿಷ್ಟ ರಲ್ಲಿಯೇ ವಾಕ್ಯಕ್ಕೆ ತಾತ್ಪರ್ಯವನ್ನು ಕಲ್ಪಿಸಬೇಕು.

3. ಮಿಕ್ಕ ಕಡೆಗಳಲ್ಲಿ ಸಾಮಾನ್ಯವಾಗಿ ಕೆಲಸಮಾಡುತ್ತದೆ.

4. ಪ್ರಾಣಾಪಾನಗಳು ಕೆಲಸಮಾಡದೆ ಇರುವಾಗ.

5. ಛಾಂ. ಛಾ. ೦-೩-೩ ; ೦-೩-೫ನ್ನು ನೋಡಿರಿ.

೭. ಇನ್ನು ಒಂದು (ನಾಡಿಯಿಂದ) ಮೇಲಕ್ಕೆ ಉದಾನವು ಪುಣ್ಯದಿಂದ ಪುಣ್ಯಲೋಕಕ್ಕೂ ಪಾಪದಿಂದ ಪಾಪಲೋಕಕ್ಕೂ ಎರಡೂ ಸೇರಿದ್ದರಿಂದ ಮನುಷ್ಯಲೋಕಕ್ಕೂ ಒಯ್ಯುತ್ತಿರುವದು.

(ಭಾಷ್ಯ)

೪೪. ಅಥ ಯಾ ತು ತಸ್ಯ ಏಕಶತಾನಾಂ ನಾಡೀನಾಂ ಮಧ್ಯೇ ಊರ್ಧ್ವಗಾ ಸುಷುಮ್ನಾಖ್ಯಾ ನಾಡೀ ತಯಾ ಏಕಯಾ ಊರ್ಧ್ವಃ ಸನ್ ಉದಾನೋ ವಾಯುಃ ಅಪಾದತಲಾನುಸ್ಮೃತ್ಯಾದಿಃ ಸಂಚರನ್ ಪುಣ್ಯೇನ ಕರ್ಮಣಾ ಶಾಸ್ತ್ರವಿಹಿತೇನ ಪುಣ್ಯಂ ಲೋಕಂ ದೇವಾದಿಸ್ಥಾನಲಕ್ಷಣಂ ನಯತಿ ಪ್ರಾಪಯತಿ। ಪಾಪೇನ ತದ್ವಿಪರೀತೇನ ಪಾಪಂ ನರಕಂ ತಿರ್ಯಗ್ಯೋನ್ಯಾದಿಲಕ್ಷಣಮ್, ಉಭಾಭ್ಯಾಂ ಸಮಪ್ರಧಾನಾಭ್ಯಾಂ ಪುಣ್ಯಪಾಪಾಭ್ಯಾಮೇವ ಮನುಷ್ಯಲೋಕಂ 'ನಯತಿ' ಇತ್ಯನುವರ್ತತೇ ॥

(ಭಾಷ್ಯಾರ್ಥ)

ಇನ್ನು ಈ ನೂರೊಂದು ನಾಡಿಗಳೊಳಗೆ ಮೇಲಕ್ಕೆ ಹೋಗಿರುವ ಸುಷುಮ್ನೆ ಯೆಂಬ ಹೆಸರಿನ ನಾಡಿ(ಜೊಂದಿವೆ)ಯಷ್ಟೆ, ಆ ಒಂದರಿಂದ ಅಂಗಾಲಿನಿಂದ ನೆತ್ತಿಯವರೆಗೂ ವೃತ್ತಿಯುಳ್ಳದ್ದಾಗಿ ಸಂಚರಿಸುವ ಉದಾನವೆಂಬ ವಾಯುವು ಮೇಲಕ್ಕೆ ಹೊರಟು[1] ಪುಣ್ಯಕರ್ಮದಿಂದ ಎಂದರೆ ಶಾಸ್ತ್ರವಿಹಿತವಾದ ಕರ್ಮದಿಂದ ಪುಣ್ಯಲೋಕಕ್ಕೆ ಎಂದರೆ ದೇವತೆಗಳ ಸ್ಥಾನವೇ ಮುಂತಾದ ರೂಪದ (ಲೋಕಕ್ಕೆ) ಒಯ್ಯುವದು, ಕರೆದುಕೊಂಡು ಹೋಗುವದು. ಪಾಪದಿಂದ ಎಂದರೆ ಅದಕ್ಕೆ ವಿರುದ್ಧವಾಗಿರುವ[2] ಕರ್ಮದಿಂದ ಪಾಪಲೋಕಕ್ಕೆ ಎಂದರೆ ಕೀಳು ಪ್ರಾಣಿಗಳ ಜನ್ಮವೇ ಮುಂತಾದ ನರಕಕ್ಕೆ[3] (ಒಯ್ಯುವದು). ಎರಡರಿಂದಲೂ ಎಂದರೆ ಸಮಪ್ರಧಾನವಾಗಿರುವ[4] ಪುಣ್ಯಪಾಪಗಳಿಂದಲೇ ಮನುಷ್ಯಲೋಕಕ್ಕೆ "ಒಯ್ಯುವದು"-ಎಂಬ (ಮಾತು) ಇಲ್ಲಿಗೂ ಸೇರಿಬಂದಿರುತ್ತದೆ.

---

1. ಸುಷುಮ್ನೆಯಿಂದ ಮೇಲಕ್ಕೆ ಹೊರಟು ಆಯಾ ಲೋಕಕ್ಕೊಯ್ಯುವದು ಎಂದರ್ಥವಲ್ಲ. ಸುಷುಮ್ನೆಯಿಂದ ಬ್ರಹ್ಮಲೋಕಕ್ಕೆ ಮಾತ್ರ ಉದಾನವು ಒಯ್ಯುತ್ತದೆ. ಇತ್ಯಾದಿ ಅಂತಿಯಾಗುವದು ಉದಾನದಿಂದ ಎಂಬುದು ಪ್ರಕೃತ.

2. ಮಾಡಬಾರದೆಂದು ಶಾಸ್ತ್ರದಲ್ಲಿ ಹೇಳಿರುವ.

3. ತಿರ್ಯಕ್ಪ್ರಾಣಿಗಳ ಜನ್ಮ, ಸ್ಥಾವರಪ್ರಾಣಿಗಳ ಜನ್ಮ– ಇವುಗಳಲ್ಲಿ ದುಃಖವು ಹೆಚ್ಚಾಗಿರುವದರಿಂದ ಅವೂ ನರಕವೇ ಎಂದು ಭಾವ.

4. ಪುಣ್ಯವು ಹೆಚ್ಚಾದಾಗ ದೇವಾದಿಸ್ಥಾನವೂ, ಪಾಪವು ಹೆಚ್ಚಾದಾಗ ತಿರ್ಯಗ್ಜಾತಿಗಳೇ ಮುಂತಾದವುಗಳ ಲೋಕವೂ ಇವೆರಡೂ ಸಮಾನವಾದಾಗ ಮನುಷ್ಯಲೋಕವೂ ಬರುವದು. ಸಮವಾದಾಗಲೂ ಪುಣ್ಯಪಾಪಗಳ ಫಲದ ಪ್ರಾಧಾನ್ಯದಂತೆ ತಿಯಾ ಜನ್ಮವು ಬರುತ್ತದೆ–ಎಂದು ಊಹಿಸಬೇಕು.

ಪ್ರಾಣವು ಅಧ್ಯಾತ್ಮಾದಿಭೂತಗಳನ್ನು ಧರಿಸಿರುವ ಬಗೆ

ಆದಿತ್ಯೋ ಹ ವೈ ಬಾಹ್ಯಃ ಪ್ರಾಣ ಉದಯತ್ಯೇಷ ಹ್ಯೇನಂ ಚಾಕ್ಷುಷಂ ಪ್ರಾಣಮನುಗೃಹ್ಣಾನಃ । ಪೃಥಿವ್ಯಾಂ ಯಾ ದೇವತಾ ಸೈಷಾ ಪುರುಷಸ್ಯಾಪಾನಮವಷ್ಟಭ್ಯಾನ್ತರಾ ಯದಾಕಾಶಃ ಸ ಸಮಾನೋ ವಾಯುರ್ವ್ಯಾನಃ ॥ ೪ ॥

೪. ಆದಿತ್ಯನೇ ಹೊರಗಿನ ಪ್ರಾಣವು. ಇವನೇ ಅಲ್ಲವೆ, ಈ ಚಾಕ್ಷುಷಪ್ರಾಣನಿಗೆ ಅನುಗ್ರಹವನ್ನು ಮಾಡುತ್ತಾ ಉದಯಿಸುವನು ? ಪೃಥಿವಿಯಲ್ಲಿರುವ ದೇವತೆಯುಂಟಲ್ಲಿ, ಆ ಇದು ಪುರುಷನ ಅಪಾನವನ್ನು ಆಶ್ರಯಿಸಿ (ಕೆಲಸಮಾಡುತ್ತಿರುತ್ತದೆ). ನಡುವೆ ಇರುವ ಆಕಾಶವಿದೆಯಷ್ಟೆ, (ಅದು) ಸಮಾನವು. ವಾಯುವೇ ವ್ಯಾನವು.

(ಭಾಷ್ಯ)

ಆದಿತ್ಯೋ ಹ ವೈ ಪ್ರಸಿದ್ಧೋ ಹಿ ಆಧಿದೈವತಂ ಬಾಹ್ಯಃ ಪ್ರಾಣಃ। ಸ ಏಷ ಉದಯತಿ ಉದ್ಗಚ್ಛತಿ । ಏಷ ಹಿ ಏನಮ್ ಅಧ್ಯಾತ್ಮಿಕಂ ಚಕ್ಷುಷಿ ಭವಂ ಚಾಕ್ಷುಷಂ ಪ್ರಾಣಂ ಪ್ರಕಾಶೇನ ಅನುಗೃಹ್ಣಾನಃ ರೂಪೋಪಲಬ್ಧೌ ಚಕ್ಷುಷ ಆಲೋಕಂ ಕುರ್ವನ್ ಇತ್ಯರ್ಥಃ । ತಥಾ ಪೃಥಿವ್ಯಾಮ್ ಅಭಿಮಾನಿನೀ ಯಾ ದೇವತಾ ಪ್ರಸಿದ್ಧಾ ಸೈಷಾ ಪುರುಷಸ್ಯ ಅಪಾನಮ್ ಅಪಾನವೃತ್ತಿಮ್ ಅವಷ್ಟಭ್ಯ ಆಕೃಷ್ಯ ವಶೀಕೃತ್ಯ ಅಧ ಏವಾಪಕರ್ಷಣೇನ ಅನುಗ್ರಹಂ ಕುರ್ವತೀ ವರ್ತತೇ ಇತ್ಯರ್ಥಃ । ಅನ್ಯಥಾ ಹಿ ಶರೀರಂ ಗುರುತ್ವಾತ್ ಪತೇತ್ । ಸಾವಕಾಶೇ ವಾ ಉದ್ಗಚ್ಛೇತ್ । ತದೇತತ್ ಅನ್ತರಾ ಮಧ್ಯೇ ದ್ಯಾವಾಪೃಥಿವ್ಯೋಃ ಯ ಆಕಾಶಃ ತತ್ಸ್ಥೋ ವಾಯುಃ ಆಕಾಶ ಉಚ್ಯತೇ। ಮಧ್ಯಸ್ಥವತ್। ಸ ಸಮಾನಃ। ಸ ಸಮಾನಮನುಗೃಹ್ಣಾನೋ ವರ್ತತೇ ಇತ್ಯರ್ಥಃ । ಸಮಾನಸ್ಯ ಅನ್ತರಾಕಾಶ-ಸ್ಥತ್ವಸಾಮಾನ್ಯಾತ್ । ಸಾಮಾನ್ಯೇನ ಚ ಯೋ ಬಾಹ್ಯೋ ವಾಯುಃ ಸಃ ವ್ಯಾಪ್ತಿಸಾಮಾನ್ಯಾತ್ ವ್ಯಾನಃ । ವ್ಯಾನಮ್ ಅನುಗೃಹ್ಣಾನೋ ವರ್ತತೇ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಆದಿತ್ಯನೇ ಪ್ರಸಿದ್ಧನಾದ ಆಧಿದೈವತನಾದ ಹೊರಗಿನ ಪ್ರಾಣನಷ್ಟೆ, ಆ ಈತನು ಉದಯಿಸುವನು, ಮೇಲಕ್ಕೆ ಬರುವನು. ಇವನೇ ಅಲ್ಲವೆ, ಈ

1. ಹೊರಗೆ ಆಧಿದೈವತರೂಪದಿಂದ ಸೂರ್ಯಾದಿಗಳಾಗಿರುವ ಪ್ರಾಣನೇ ಒಳಗೆ ಚಕ್ಷುರಾದಿವ್ಯಾಪಾರಗಳನ್ನು ಮಾಡಿಸುತ್ತಿರುವನು ಎಂಬರ್ಥ. ಭಾಷ್ಯದಲ್ಲಿ 'ಸ ಏಷಃ' ಎಂಬ ಮಾತುಗಳನ್ನು 'ಉದಯತಿ' ಎಂಬಲ್ಲಿ ಅನ್ವಯಕ್ಕಾಗಿ ಇಟ್ಟುಕೊಂಡಿದೆ.

ಅಧ್ಯಾತ್ಮಿಕವಾದ ಚಕ್ಷುಸ್ಸಿನೆಲ್ಲಿರುವನೆಂದು ಚಾಕ್ಷುಷನಾಗಿರುವ ಪ್ರಾಣನನ್ನು ಬೆಳಕಿನಿಂದ ಅನುಗ್ರಹಿಸುತ್ತಾ, ಎಂದರೆ ರೂಪವನ್ನು ಅರಿಯುವದಕ್ಕೆ ಕಣ್ಣಿಗೆ ಬೆಳಕನ್ನುಂಟುಮಾಡುವವನಾಗಿ (ಉಪಯುಕ್ತನು) ಎಂದರ್ಥ. ಇದರಿಂದ ಪೃಥಿವಿಯಲ್ಲಿ ಅಧಿಷ್ಠಾನಿಯಾಗಿರುವ ದೇವತೆಯುಂಟೆಂಬ್ಯೆ, ಪ್ರಸಿದ್ಧವಾದ ಆ ಈ ದೇವತೆಯು[1] ಪುರುಷನ ಅಪಾನವನ್ನು ಎಂದರೆ ಅಪಾನವೃತ್ತಿಯನ್ನು ಆಶ್ರಯಿಸಿ (ಆದನ್ನು ಎಳೆದು ವಶಗೊಳಿಸಿಕೊಂಡು ಕೆಳಕ್ಕೇ ಜಗ್ಗುತ್ತಾ ಅನುಗ್ರಹವನ್ನು ಮಾಡುತ್ತಾ ಇರುತ್ತದೆ ಎಂದರ್ಥ. ಏಕೆಂದರೆ ಹಾಗಿಲ್ಲದಿದ್ದರೆ ಶರೀರವು ಭಾರವಾಗಿರುವದರಿಂದ ಬೀಳಬೇಕಾಗುತ್ತಿತ್ತು. ಅಥವಾ ಅವಕಾಶವಿರುವಲ್ಲಿ ಮೇಲಕ್ಕೇರಬೇಕಾಗುತ್ತಿತ್ತು[2]. (ಇನ್ನು) ದ್ಯುಲೋಕ, ಪೃಥಿವಿ–ಇವೆರಡರ ನಡುವೆ ಇರುವ ಆಕಾಶವಿದೆಯಲ್ಲ, ಅದರಲ್ಲಿರುವ ವಾಯುವನ್ನೇ (ಇಲ್ಲಿ) ಆಕಾಶವೆಂದಿದೆ. ಮಂಚಿಕೆಯಲ್ಲಿ(ರುವವರನ್ನು ಮಂಚಿಕೆಯೆಂದು ಕರೆಯುವಂತೆಯೇ[3] ಇದು. ಈ ಆಕಾಶವೇ ಸಮಾನನೆಂಬ (ಸಮಾನವೃತ್ತಿ)ಯನ್ನು ಅನುಗ್ರಹಿಸುತ್ತಾ ಇರುತ್ತದೆ ಎಂದರ್ಥ; ಏಕೆಂದರೆ ಸಮಾನವು (ನಡುವೆ ಇರುವದರಿಂದ) ನಡುವಿನ ಆಕಾಶದಲ್ಲಿರುವದೆಂಬುದು (ಇವೆರಡಕ್ಕೂ) ಸಮಾನನಾಗಿರುತ್ತದೆ[4]; ಮತ್ತು ಸಾಮಾನ್ಯವಾಗಿ[5] ಹೊರಗಿರುವ ವಾಯುವಿದೆಯಲ್ಲ, ಅದು ವ್ಯಾಪ್ತಿ ಎಂಬ ಹೋಲಿಕೆಯಿಂದ ವ್ಯಾನವು; ಎಂದರೆ ವ್ಯಾನವನ್ನು ಅನುಗ್ರಹಿಸುತ್ತಿರುವದು–ಎಂದಭಿಪ್ರಾಯ.

ತೇಜೋ ಹ ವಾ ಉದಾನಸ್ತಸ್ಯಾದಃಶಾಂತ್ತೇಜಾಃ।
ಪುಣ್ಯಂ ಪಾಪಮಿನ್ದ್ರಿಯೈರ್ಯಮನಸಿ ಸಂಪದ್ಯಮಾನೈಃ ॥ ೯ ॥

---

1. ಪೃಥಿವೀದೇವತೆಯು. ತೈ.ಭಾ.೨-೨ ನೋಡಿ. ಇದು ಅಗ್ನಿದೇವತೆಯೆಂದು ಬ್ರ. ೩-೪-೦೦ರ ಅಧಿಕರಣದಿಂದ ಆ ವ್ಯಾಖ್ಯಾನಕಾರರು ಬರೆದಿದ್ದಾರೆ; ಅದರೆ ಇದಕ್ಕೆ ಭಾಷ್ಯಾಧಾರವಿಲ್ಲ. ಬ್ರ. ಭಾಷ್ಯವನ್ನು ನೋಡಿ.

2. ಮನುಷ್ಯನು ನೆಟ್ಟಗೆ ಕಾಲೂರಿ ನಿಂತುಕೊಳ್ಳುವದಕ್ಕೆ ಅಪಾನವೃತ್ತಿಯನ್ನು ಎಳೆದಿಟ್ಟುಕೊಂಡಿರುವ ಪೃಥಿವೀದೇವತೆಯು ಸಹಾಯವು ಬೇಕು.

3. "ಮಂಚಿಕೆಗಳು ಕೂಗುತ್ತವೆ" ಎಂದರೆ ಮಂಚಿಕೆಯ ಮೇಲೆ ಕೂತಿರುವವರು ಕೂಗುತ್ತಾರೆ ಎಂದರ್ಥ; ಇದರಂತೆ ಆಕಾಶವು ಎಂದರೆ ಆಕಾಶವಲ್ಲಿಕ್ಕುವ ವಾಯು ಎಂದರ್ಥ.

4. ಹೊರಗಿನ (ಆಕಾಶ) ವಾಯುವು ದ್ಯಾವಾಪೃಥಿವಿಗಳ ನಡುವೆ ಇರುತ್ತದೆ. ಸಮಾನವು ದೇಹದ ನಡುಭಾಗವಾದ ಹೊಕ್ಕಳಲ್ಲಿರುತ್ತದೆ.

5. ವಿಶೇಷಸ್ಥಳಗಳಲ್ಲಿ ವಿಶೇಷರೂಪದಿಂದಲ್ಲದೆ ಸಾಮಾನ್ಯವಾಗಿ ವಾಯುವಾಗಿ ಎಲ್ಲೆಲ್ಲಿಯೂ ಇರುವ.

೯. ತೇಜಸ್ಸೇ ಉದಾನವು. ಆದ್ದರಿಂದ ತೇಜಸ್ಸು ಉಪಶಾಂತವಾದವನು ಮರುಹುಟ್ಟನ್ನು ಮನಸ್ಸಿನಲ್ಲಿ ಸೇರಿಕೊಂಡ ಇಂದ್ರಿಯಗಳೊಡನೆ (ಹೊಂದುತ್ತಾನೆ).

(ಭಾಷ್ಯ)

೪೬. ಯದ್ ಬಾಹ್ಯಂ ಹ ವೈ[1] ಪ್ರಸಿದ್ಧಂ ಸಾಮಾನ್ಯಂ[2] ತೇಜಃ ತತ್ ಶರೀರೇ ಉದಾನಃ | ಉದಾನಂ ವಾಯುಮ್ ಅನುಗೃಹ್ಣಾತಿ ಸ್ವೇನ ಪ್ರಕಾಶೇನ ಇತ್ಯಭಿಪ್ರಾಯಃ | ಯಸ್ಮಾತ್ ತೇಜಃಸ್ವಭಾವಃ ಬಾಹ್ಯತೇಜೋಽನುಗೃಹೀತಃ ಉತ್ಕ್ರಾನ್ತಿಕರ್ತಾ, ತಸ್ಮಾದ್ಯದಾ ಲೌಕಿಕಃ ಪುರುಷಃ ಉಪಶಾನ್ತತೇಜಾಃ ಭವತಿ ಉಪಶಾನ್ತಂ ಸ್ವಾಭಾವಿಕಂ ತೇಜಃ ಯಸ್ಯ ಸಃ, ತದಾ ತಂ ಕ್ಷೀಣಾಯುಷಂ ಮುಮೂರ್ಷುಂ ವಿದ್ಯಾತ್ | ಸಃ ಪುನರ್ಭವಂ ಶರೀರಾನ್ತರಂ ಪ್ರತಿಪದ್ಯತೇ | ಕಥಮ್ ? ಸಹ ಇನ್ದ್ರಿಯೈಃ ಮನಸಿ ಸಂಪದ್ಯಮಾನೈಃ ಪ್ರವಿಶದ್ಭಿಃ ವಾಗಾದಿಭಿಃ ||

(ಭಾಷ್ಯಾರ್ಥ)

ಹೊರಗೆ ಪ್ರಸಿದ್ಧವಾದ ಸಾಮಾನ್ಯವಾದ[3] ತೇಜಸ್ಸಿದೆಯಲ್ಲ, ಅದೇ ಶರೀರದಲ್ಲಿ ಉದಾನವು ; ಉದಾನವಾಯುವನ್ನು ತನ್ನ ಪ್ರಕಾಶದಿಂದ ಅನುಗ್ರಹಿಸುತ್ತಿರುವದು ಎಂದರ್ಥ. ಹೀಗೆ ಉತ್ಕ್ರಮಣವನ್ನುಂಟುಮಾಡುವ (ಉದಾನವಾಯುವು) ಹೊರಗಿನ ತೇಜಸ್ಸಿನಿಂದ ಅನುಗೃಹೀತವಾಗಿ ತೇಜಸ್ಸಿನ ಸ್ವಭಾವವುಳ್ಳದ್ದಾಗಿರುವದಲ್ಲ, ಆ ಕಾರಣದಿಂದ ಯಾವಾಗ (ಈ) ಲೋಕದಲ್ಲಿರುವ ಪುರುಷನು ಉಪಶಾಂತತೇಜನಾಗುವನೋ ತನ್ನಲ್ಲಿ ಸ್ವಭಾವದಿಂದಿರುವ ತೇಜಸ್ಸು ಆರಿಹೋದವನಾಗುವನೋ[4] ಆಗ ಅವನನ್ನು ಆಯುಸ್ಸು ಮುಗಿದವನು (ಇನ್ನು) ಸಾಯುವವನು ಎಂದು ತಿಳಿದುಕೊಳ್ಳಬೇಕು. ಅವನು ಮರುಹುಟ್ಟನ್ನು ಎಂದರೆ ಬೇರೊಂದು ಶರೀರವನ್ನು[5] ಪಡೆಯುತ್ತಾನೆ. ಹೇಗೆಂದರೆ ಮನಸ್ಸಿನಲ್ಲಿ

1. "ವಾವ" ಎಂದು ಉಪನಿಷತ್ತಿನಲ್ಲಿಯೂ ಭಾಷ್ಯದಲ್ಲಿಯೂ ವಾ॥ ಪಾಠದಲ್ಲಿದೆ.

2. 'ಸಾಮಾನ್ಯೇಃ' ಎಂಬ ಆ॥ ಪಾಠಕ್ಕಿಂತ ಈ ವಾ॥ಪಾಠವು ಉತ್ತಮ.

3. ಆದಿತ್ಯರೂಪವಾದ ವಿಶೇಷತೇಜಸ್ಸಲ್ಲ, ಬಿಸಿಲುಬೆಳಕುಗಳ ರೂಪದಲ್ಲಿ ಹೊರಗೆಲ್ಲ ಇರುವ ತೇಜಸ್ಸು.

4. ಮೈಬಿಸಿಯೂ ಕಾಂತಿಯೂ ಕಡಿಮೆಯಾದರೆ. ಸೂ. ಭಾ. ೪–೩–೦೧.

5. ಪುನರ್ಭವವೆಂದರೆ ಬೇರೊಂದು ಶರೀರ ಎಂದು ವ್ಯಾಖ್ಯಾನಕಾರರು ಅರ್ಥ ಮಾಡಿರುತ್ತಾರೆ. ಆದರೆ ಅದೇನೂ ಅವಶ್ಯವಿಲ್ಲ. ಮತ್ತೊಂದು ಶರೀರವನ್ನು ಪಡೆಯುವದೇ ಮರುಹುಟ್ಟು ಎಂಬುದು ಭಾಷ್ಯಾಶಯ. ಸೂ. ಭಾ. ೩–೩–೦೬ ನೋಡಿ.

ಸೇರಿಕೊಳ್ಳುವ ವಾಕ್ಯೇ ಮುಂತಾದ ಇಂದ್ರಿಯಗಳೊಡನೆ[1] (ಮರುಹುಟ್ಟನ್ನು ಪಡೆಯುತ್ತಾನೆ).

ಉತ್ಕ್ರಾಂತಿಕ್ರಮ

ಯಚ್ಚಿತ್ತಸ್ತೇನೈಷ ಪ್ರಾಣಮಾಯಾತಿ ಪ್ರಾಣಸ್ತೇಜಸಾ ಯುಕ್ತಃ।
ಸಹಾತ್ಮನಾ ಯಥಾಸಂಕಲ್ಪಿತಂ ಲೋಕಂ ನಯತಿ ॥೧೦॥

೧೦. ಯಾವ ಚಿತ್ತದಿಂದ ಕೂಡಿರುವನೋ ಅದರಿಂದ ಇವನು ಪ್ರಾಣವನ್ನು ಹೊಂದುತ್ತಾನೆ. ಪ್ರಾಣನು ತೇಜಸ್ಸಿನಿಂದ ಕೂಡಿ ಆತ್ಮನೊಡನೆ ಸಂಕಲ್ಪಕ್ಕೆ ತಕ್ಕಂತೆ (ಆಗುವ) ಲೋಕಕ್ಕೆ ಒಯ್ಯುತ್ತಾನೆ.

(ಭಾಷ್ಯ)

೪೭. ಮರಣಕಾಲೇ ಯಚ್ಚಿತ್ತೋ ಭವತಿ ತೇನೈವ ಏಷ ಜೀವಃ[2] ಚಿತ್ತೇನ ಸಂಕಲ್ಪೇನ ಇನ್ದ್ರಿಯೈಃ ಸಹ ಪ್ರಾಣಂ ಮುಖ್ಯಪ್ರಾಣವೃತ್ತಿಮ್ ಆಯಾತಿ। ಮರಣಕಾಲೇ ಕ್ಷೀಣೇನ್ದ್ರಿಯವೃತ್ತಿಃ ಸನ್ ಮುಖ್ಯಯಾ ಪ್ರಾಣವೃತ್ತ್ಯೈವ ಅವತಿಷ್ಠತೇ ಇತ್ಯರ್ಥಃ। ಕದಾ ಹಿ[3] ವದನ್ತಿ ಜ್ಞಾತಯಃ 'ಉಚ್ಛ್ವಸತಿ ಜೀವತಿ' ಇತಿ। ಸ ಚ ಪ್ರಾಣಃ ತೇಜಸಾ ಉದಾನವೃತ್ತ್ಯಾ ಯುಕ್ತಃ ಸನ್ ಸಹಾತ್ಮನಾ ಸ್ವಾಮಿನಾ ಭೋಕ್ತ್ರಾ ಸ ಏವಮ್ ಉದಾನವೃತ್ತ್ಯೈವ[4] ಯುಕ್ತಃ ಪ್ರಾಣಃ ತಂ ಭೋಕ್ತಾರಂ ಪುಣ್ಯಪಾಪಕರ್ಮವಶಾತ್ ಯಥಾಸಂಕಲ್ಪಿತಂ ಯಥಾಭಿಪ್ರೇತಂ ಲೋಕಂ ನಯತಿ ಪ್ರಾಪಯತಿ ॥

(ಭಾಷ್ಯಾರ್ಥ)

ಸಾಯುವ ಕಾಲದಲ್ಲಿ ಯಾವ ಚಿತ್ತವುಳ್ಳವನಾಗಿರುವನೋ ಆ ಚಿತ್ತ (ದಿಂದಲೇ) (ಅದೇ) ಸಂಕಲ್ಪದಿಂದಲೇ[5] ಈ ಜೀವನು ಇಂದ್ರಿಯಗಳೊಡನೆ ಮುಖ್ಯಪ್ರಾಣವೃತ್ತಿಯನ್ನು ಸೇರಿಕೊಳ್ಳುತ್ತಾನೆ. ಸಾಯುವ ಕಾಲದಲ್ಲಿ ಇಂದ್ರಿಯವೃತ್ತಿಗಳೆಲ್ಲ ಹೋಗಿ ಮುಖ್ಯಪ್ರಾಣವೃತ್ತಿಯೊಂದರೊಡನೆಯೇ ಇದ್ದು

---

2. ಛಾಂ. ೬–೮–೬ರಲ್ಲಿ ಹೇಳಿರುವ ಉತ್ಕ್ರಾಂತಿಕ್ರಮದ ಸೂಚನೆ. ಇಲ್ಲಿ ವೃತ್ತಿಯು ಲಯವನ್ನು ಮಾತ್ರ ಹೇಳಿದೆಯೇ ಹೊರತು ತತ್ತ್ವಪ್ರಲಯವನ್ನಲ್ಲ. ಸೂ. ಛಾ. ೪–೩–೩.

2. ಇಮು ವಾ॥ ಪಾಠ; ಅ॥ ಪಾಠದಲ್ಲಿ "ತೇನೈವ" ಎಂದಿಷ್ಟೇ ಇದೆ.

3. ವಾ॥ ಪಾಠ; "ತದಾಽಭಿವದನ್ತಿ" ಎಂದು ಅ॥ ಪಾಠ.

4. "ಉದಾನಃ ಉದಾನವೃತ್ತ್ಯಾ" ಎಂಬ ವಾ॥ ಪಾಠದಲ್ಲಿ "ಉದಾನಃ" ಎಂಬ ಮಾತು ಹೆಚ್ಚಾಗಿದೆ.

5. ಗಿಃ. ೮–೬; ಛಾಂ. ೫–೧೪–೧.

ಕೊಂಡಿರುತ್ತಾನೆ ಎಂದರ್ಥ.[1] ಆಗಲೇ (ಸುತ್ತಲಿರುವ) ಜ್ಞಾತಿಗಳು '(ಇನ್ನೂ) ಉಸಿರಾಡುತ್ತಿದ್ದಾನೆ, ಬದುಕಿದ್ದಾನೆ' ಎಂದುಕೊಳ್ಳುತ್ತಿರುವರು. ಆ ಪ್ರಾಣನೂ ತೇಜಸ್ಸಿನಿಂದ ಎಂದರೆ ಉದಾನವೃತ್ತಿಯಿಂದ ಕೂಡಿದವನಾಗಿ ಒಡೆಯನಾದ ಭೋಕ್ತೃವಾದ ಆತ್ಮನೊಡನೆ[2], ಹೀಗೆ ಉದಾನವೃತ್ತಿಯಿಂದಲೇ ಕೂಡಿರುವ ಪ್ರಾಣನು ಆ ಭೋಕ್ತೃವನ್ನು ಪುಣ್ಯಪಾಪಕರ್ಮಗಳ ವಶದಿಂದ ಸಂಕಲ್ಪಕ್ಕೆ ತಕ್ಕಂತೆ ಅವನ ಅಭಿಪ್ರಾಯಕ್ಕೆ ತಕ್ಕಂತೆ (ಆಯಾ) ಲೋಕಕ್ಕೆ ಒಯ್ಯುತ್ತಾನೆ, ಕರೆದುಕೊಂಡು ಹೋಗಿ (ಆಯಾ ಲೋಕವನ್ನು) ಸೇರಿಸುತ್ತಾನೆ.

ಪ್ರಾಣೋಪಾಸನೆಯ ಫಲ

ಯ ಏವಂ ವಿದ್ವಾನ್ ಪ್ರಾಣಂ ವೇದ । ನ ಹಾಸ್ಯ ಪ್ರಜಾ
ಹೀಯತೇಽಮೃತೋ ಭವತಿ ತದೇಷ ಶ್ಲೋಕಃ ॥೧೧॥

೧೧. ಯಾವನು ಹೀಗೆಂದು ತಿಳಿದುಕೊಂಡು ಪ್ರಾಣನನ್ನು ಅರಿಯುವನೋ ಅವನ ಪ್ರಜೆ ನಾಶವಾಗುವದಿಲ್ಲ. ಅವನು ಅಮೃತನಾಗುವನು. ಅಲ್ಲಿ ಈ ಶ್ಲೋಕ(ವಿರುತ್ತದೆ) :—

(ಭಾಷ್ಯ)

೪೪. ಯಃ ಕಶ್ಚಿದೇವಂ ವಿದ್ವಾನ್ ಯಥೋಕ್ತವಿಶೇಷಣೈರ್ವಿಶಿಷ್ಟಮ್ ಉತ್ಪತ್ತ್ಯಾದಿಭಿಃ ಪ್ರಾಣಂ ವೇದ ಜಾನಾತಿ ತಸ್ಯ ಇದಂ ಫಲಮ್ ಐಹಿಕಂ ಆಮುಷ್ಮಿಕಂ ಚ ಉಚ್ಯತೇ । ನ ಹ ಅಸ್ಯ ನೈವಾಸ್ಯ ವಿದುಷಃ ಪ್ರಜಾಃ ಪುತ್ರ ಪೌತ್ರಾದಿಲಕ್ಷಣಾ ಹೀಯತೇ ವಿಚ್ಛಿದ್ಯತೇ । ಪತಿತೇ ಚ ಶರೀರೇ ಪ್ರಾಣ ಸಾಯುಜ್ಯತಯಾ ಅಮೃತಃ ಅಮರಣಧರ್ಮಾ ಭವತಿ ॥

(ಭಾಷ್ಯಾರ್ಥ)

ಯಾವನೇ ಆಗಲಿ, ಹೀಗೆಂದು ತಿಳಿದುಕೊಂಡು, ಎಂದರೆ ಹಿಂದೆ ಹೇಳಿದ ಉತ್ಪತ್ತಿಯೇ ಮುಂತಾದ (ಈವರೆಗೆ) ಹೇಳಿರುವ ವಿಶೇಷಣಗಳಿಂದ

---

1. ಇಂದ್ರಿಯಗಳ ಮತ್ತು ಮನಸ್ಸಿನ ವೃತ್ತಿಯು ಪ್ರಾಣದಲ್ಲಿ ಲಯವಾಗುತ್ತದೆ. ಸೂ. ಭಾ. ೪–೨–೩. ಇದುವರೆಗಿನ ಉತ್ಕ್ರಾಂತಿಕ್ರಮವನ್ನು ಹೇಳಿರುವದು ಪ್ರಾಣನು ಹೇಗೆ ಉತ್ಕ್ರಾಂತಿಗೆ ಕಾರಣನಾಗುತ್ತಾನೆ ? ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುವದಕ್ಕೆ ವಿಸ್ತಾರವಾದ ಉತ್ಕ್ರಾಂತಿಕ್ರಮವನ್ನು ಛಾಂ. ೬–೮ ; ಬೃ. ೪–೪ ಇವುಗಳಲ್ಲಿ ಕಾಣಬಹುದು.

2. ಪ್ರಾಣವು ತೇಜಸ್ಸಿನೊಡನೆಯೂ ಜೀವದೊಡನೆಯೂ ಕೂಡಿಕೊಳ್ಳುವದೆಂಬುದರ ವಿವರವನ್ನು ಸೂ. ಭಾ. ೪–೨–೪, ಹರಲ್ಲಿ ಕೊಟ್ಟಿರುವದರೊಡನೆ ಹೋಲಿಸಿ ನೋಡಿ.

ಕೂಡಿದೆ ಪ್ರಾಣವನ್ನು ಅರಿಯುವನೋ[1] ಅವನಿಗೆ ಇಹಲೋಕದ ಮತ್ತು ಪರಲೋಕದ ಫಲವು (ಆಗುವದೆಂದು ಶ್ರುತಿ) ಹೇಳುತ್ತಿದೆ. ಅವನ, ಹೀಗೆಂದು ತಿಳಿದು ಉಪಾಸನೆಮಾಡಿದವನ ಮಕ್ಕಳು ಮೊಮ್ಮಕ್ಕಳು ಮುಂತಾದ ರೂಪದ ಪ್ರಜೆಯು (ನ ಹ=ನ್ಯೈನ) ಹಾಳಾಗುವದಿಲ್ಲ; (ಪ್ರಜಾಸಂತತಿಯು) ವಿಚ್ಛೇದವಾಗುವದೇ ಇಲ್ಲ ಮತ್ತು ಶರೀರವು ಬಿದ್ದಬಳಿಕ ಪ್ರಾಣಸಾಯುಜ್ಯವನ್ನು ಹೊಂದಿ[2] ಅಮೃತನಾಗುತ್ತಾನೆ. ಸಾವಿಲ್ಲದ ಸ್ವಭಾವದವನು[3] ಆಗುತ್ತಾನೆ.

(ಭಾಷ್ಯ)

೪೯. ತತ್ ಏತಸ್ಮಿನ್ ಅರ್ಥೇ ಸಂಕ್ಷೇಪಾಭಿಧಾಯಕಃ ಏಷಃ ಶ್ಲೋಕಃ ಪುನ್ರಃ ಭವತಿ—

(ಭಾಷ್ಯಾರ್ಥ)

ಅಲ್ಲಿ ಎಂದರೆ ಈ ವಿಷಯದಲ್ಲಿ ಸಂಗ್ರಹವಾಗಿ (ಎಲ್ಲವನ್ನೂ) ತಿಳಿಸುವ ಈ ಶ್ಲೋಕವು ಎಂದರೆ ಮಂತ್ರವು ಇರುತ್ತದೆ :—

ಉತ್ಪತ್ತಿಮಾಯತಿಂ ಸ್ಥಾನಂ
ವಿಭುತ್ವಂ ಚೈವ ಪಞ್ಚಧಾ ।
ಅಧ್ಯಾತ್ಮಂ ಚೈವ ಪ್ರಾಣಸ್ಯ
ವಿಜ್ಞಾಯಾಮೃತಮಶ್ನುತೇ ॥
ವಿಜ್ಞಾಯಾಮೃತಮಶ್ನುತ ಇತಿ ॥೧೨॥

೧೨. ಪ್ರಾಣನ ಹುಟ್ಟು, ಬರವು, ಸ್ಥಾನವು, ವಿಭುತ್ವ, ಐದು ಒಗೆಯ ಅಧ್ಯಾತ್ಮ– (ಇವುಗಳನ್ನು) ಅರಿತುಕೊಂಡರೆ ಅಮೃತವನ್ನು ಪಡೆದುಕೊಳ್ಳುತ್ತಾನೆ. ಅರಿತುಕೊಂಡರೆ ಅಮೃತವನ್ನು ಪಡೆದುಕೊಳ್ಳುತ್ತಾನೆ.

1. ಆತ್ಮನಿಂದ ಹುಟ್ಟುವದು, ಕರ್ಮವಾಸನೆಯಿಂದ ಶರೀರಧಾರಣೆಮಾಡುವದು, ಪ್ರಾಣಾಪಾನಾದಿವೃತ್ತಿಗಳನ್ನು ಮಾಡುತ್ತಾ ಶರೀರದಲ್ಲಿದ್ದು ಉದಾನವೃತ್ತಿಯಿಂದ ಉತ್ಕ್ರಾಂತಿಯನ್ನು ಹೊಂದುವದು, ಆದಿತ್ಯಾದಿರೂಪಗಳಿಂದ ಹೊರಗೂ ಪ್ರಾಣಾದಿರೂಪಗಳಿಂದ ಒಳಗೂ ಇರುವದು, ಭೋಕ್ತೃವಿನೊಡಗೂಡಿ ಲೋಕಾಂತರಕ್ಕೆ ಹೋಗುವದು–ಎಂದು ವಿಶೇಷಣಗಳಿಂದ ಕೂಡಿದ.

2. ಉಪಾಸನೆಮಾಡುವನೋ, ಜ್ಞಾನವೇ ಮುಖ್ಯವಾದರೂ ಇಲ್ಲಿ ಅಪರವಿದ್ಯೆಯ ಫಲವನ್ನೂ ಉಪಸಂಹಾರಮಾಡಿರುತ್ತದೆ. ಮುಂ. ೧–೩–೧೧ನ್ನು ನೋಡಿ. ಇಲ್ಲಿಯವರೆಗೂ ಅಪರವಿದ್ಯೆಯ ಸ್ವರೂಪನನ್ನು ಅನುವಾದಮಾಡಿದಂತೆ ಆಯಿತು.

3. ಉಪಾಸನೆಯನ್ನು ಮಾಡಿ ಸಾಕ್ಷಾತ್ಕಾರಮಾಡಿಕೊಂಡವರಿಗೆ ಶರೀರವು ಬಿದ್ದ ಬಳಿಕ ಆಯಾ ದೇವತೆಯ ಸಾಯುಜ್ಯವಾಗುತ್ತದೆ.

4. ಇದು ಉಪಾಸನೆಯಿಂದ ಪಡೆಯುವ ಅಪೇಕ್ಷಿಕಮುಕ್ತಿ.

(ಭಾಷ್ಯ)

೫೦. ಉತ್ಪತ್ತಿಂ ಪರಮಾತ್ಮನಃ ಪ್ರಾಣಸ್ಯ| ಆಯತಿಮ್ ಆಗಮನಮ್ ಮನೋಕೃತೇನ ಅಸ್ಮಿನ್ ಶರೀರೇ | ಸ್ಥಾನಂ ಸ್ಥಿತಿಂ ಚ ಪಾಯೂಪಸ್ಥಾದಿ ಸ್ಥಾನೇಷು | ವಿಭುತ್ವಂ ಚ ಸ್ವಾನ್ಯುಪೇವ ಸಮ್ರಾಡಿವ ಪ್ರಾಣವೃತ್ತಿ ಭೇದಾನಾಂ ಪಞ್ಚಧಾ ಸ್ಥಾಪನಮ್ | ಬಾಹ್ಯಮ್ ಆದಿತ್ಯಾದಿರೂಪೇಣ ಆಧ್ಯಾತ್ಮಂ ಚೈವ ಚಕ್ಷುರಾದ್ಯಾಕಾರೇಣ ಅವಸ್ಥಾನಂ ವಿಜ್ಞಾಯ ಏವಂ ಪ್ರಾಣಮ್ ಅಮೃತಮ್, ಅಶ್ನುತೇ ಇತಿ | "ವಿಜ್ಞಾಯಾಮೃತಮಶ್ನುತೇ' ಇತಿ ದ್ವಿರ್ವಚನಂ ಪ್ರಶ್ನ[1] ಪರಿಸಮಾಪ್ತ್ಯರ್ಥಮ್ ॥

(ಭಾಷ್ಯಾರ್ಥ)

ಪ್ರಾಣನಿಗೆ ಪರಮಾತ್ಮನಿಂದ (ಆಗುವ) ಹುಟ್ಟು ; ಮನಸ್ಸಿನ ಕರ್ಮದಿಂದ ಈ ಶರೀರಕ್ಕೆ ಬರುವಿಕೆ, ಬಂದುಸೇರುವದು ; ಸ್ಥಾನ ಎಂದರೆ ಪಾಯು, ಉಪಸ್ಥ–ಮುಂತಾದ ಸ್ಥಾನಗಳಲ್ಲಿ ಇರುವಿಕೆ ; ವಿಭುತ್ವ ಎಂದರೆ ಸಮ್ರಾಜನಿಗೆ ಬೇರೆಬೇರೆಯಾಗಿರುವ (ಐದು ಬಗೆಯ) ಪ್ರಾಣವೃತ್ತಿಗಳನ್ನು ಐದು ಜಗೆಯಲ್ಲಿ ವಿನಿಯೋಗಿಸಿಟ್ಟಿರುವದು, ಹೊರಗೆ ಆದಿತ್ಯನೇ ಮೊದಲಾದವುಗಳ ರೂಪದಿಂದಲೂ ಒಳಗೆ ಚಕ್ಷುರಾದಿಗಳ ರೂಪದಿಂದಲೂ ಇದ್ದುಕೊಂಡಿರುವಿಕೆ–ಹೀಗೆ ಪ್ರಾಣನನ್ನು[2] ಅರಿತುಕೊಂಡರೆ ಅಮೃತವನ್ನು ಪಡೆದುಕೊಳ್ಳುತ್ತಾನೆ. 'ಅರಿತು ಕೊಂಡರೆ ಅಮೃತವನ್ನು ಪಡೆದುಕೊಳ್ಳುತ್ತಾನೆ' ಎಂದು ಎರಡು ಸಲ ಹೇಳಿರುವದು ಪ್ರಶ್ನೆಯು ಮುಗಿಯಿತೆಂದು ತಿಳಿಸುವದಕ್ಕೆ.

1. 'ಪ್ರಶ್ನಾರ್ಥಪರಿಸಮಾಪ್ತ್ಯರ್ಥಮ್' ಎಂದೇ ಆಚ್ಯುತ ಪುಸ್ತಕಗಳಲ್ಲಿ ಪಾಠವಿದೆ. ಆದು ಪ್ರಶ್ನೆಯು ಎಂದರೆ ಈ ಉಪನಿಷತ್ತಿನಲ್ಲಿ ಮೂರನೆಯ ಭಾಗವು ಮುಗಿಯಿತು ಎಂಬುದನ್ನು ಸೂಚಿಸುವದಕ್ಕೆ ದ್ವಿರುಕ್ತಿ ಬಂದಿದೆ ಎಂದು ಹೇಳಿದರೆ ಸಾಕಾಗಿರುವದರಿಂದ 'ಪ್ರಶ್ನ ಪರಿಸಮಾಪ್ತ್ಯರ್ಥಮ್' ಎಂದೇ ಪಾಠವನ್ನು ಇಟ್ಟುಕೊಂಡಿದೆ.

2. ಇಲ್ಲಿ ಪ್ರಾಣನೆ ಉತ್ಪತ್ತ್ಯಾದಿಗಳನ್ನು ಮಾತ್ರ ತಿಳಿದರೆ ಸಾಲದು, ಉತ್ಪತ್ತಿಯೇ ಮುಂತಾದ ವಿಶೇಷಣಗಳಿಂದ ಕೂಡಿದ ಪ್ರಾಣನನ್ನೇ ಉಪಾಸನೆಮಾಡಬೇಕು– ಎಂಬುದನ್ನು ತಿಳಿಸುವದಕ್ಕೆ ಹಿಂದಿನ ಮಂತ್ರದಲ್ಲಿ ಹೇಳಿರುವ "ಪ್ರಾಣಮ್" ಎಂಬ ಮಾತನ್ನು ಭಾಷ್ಯಕಾರರು ಸೇರಿಸಿಕೊಂಡಿರುತ್ತಾರೆ.

ನಾಲ್ಕನೆಯ ಪ್ರಶ್ನೆ

ಮುಂದಿನ ಗ್ರಂಥದ ಸಂಬಂಧ

(ಭಾಷ್ಯ)

೫೧. "ಅಥ ಹೈನಂ ಸೌರ್ಯಾಯಣೀ ಗಾರ್ಗ್ಯಃ ಪಪ್ರಚ್ಛ" | ಪ್ರಶ್ನತ್ರಯೇಣ ಅಪರವಿದ್ಯಾಗೋಚರಂ ಸರ್ವಂ ಪರಿಸಮಾಪ್ಯ ಸಂಸಾರಂ ವ್ಯಾಕೃತವಿಷಯಂ ಸಾಧ್ಯಸಾಧನಲಕ್ಷಣಮ್ ಅನಿತ್ಯಮ್ ಅಥೇದಾನೀಮ್ ಅಸಾಧ್ಯಸಾಧನಲಕ್ಷಣಮ್[1] ಅಸ್ರಾಣಮ್, ಅಮನಃ ಅಗೋಚರಮ್, ಅತೀನ್ದ್ರಿಯವಿಷಯಮ್[2] ಶಿವಂ ಶಾಶ್ವತಮ್ ಅವಿಕೃತಮ್, ಅಕ್ಷರಂ ಸಕ್ಯಂ ಪರವಿದ್ಯಾಗಮ್ಯಂ ಪುರುಷಾಖ್ಯಂ ಸಬಾಹ್ಯಾಭ್ಯನ್ತರಮ್ ಅಜಂ ವಕ್ತವ್ಯಮ್ ಇತಿ ಉತ್ತರಂ ಪ್ರಶ್ನತ್ರಯಮ್ ಆರಭ್ಯತೇ—

(ಭಾಷ್ಯಾರ್ಥ)

'ಆಮೇಲೆ ಈತನನ್ನು ಸೌರ್ಯಾಯಣಿ ಗಾರ್ಗ್ಯನು ಹೀಗೆಂದು ಪ್ರಶ್ನೆಮಾಡಿದನು' (ಎಂದು ಮೊದಲಾಗಿರುವ ಗ್ರಂಥದ ಸಂಬಂಧವೇನೆಂದರೆ) : (ಹಿಂದೆ) ಮೂರು ಪ್ರಶ್ನೆಗಳಿಂದ ವ್ಯಾಕೃತವಿಷಯವಾಗಿ[3] ಸಾಧ್ಯಸಾಧನರೂಪವಾಗಿ ಅನಿತ್ಯವಾಗಿರುವ ಅಪರವಿದ್ಯೆಯು ವಿಷಯವೆಲ್ಲವನ್ನೂ[4] (ಹೇಳಿ) ಮುಗಿಸಿದ ಬಳಿಕ, ಇನ್ನು ಈಗ ಸಾಧ್ಯಸಾಧನರೂಪವಲ್ಲದ್ದೂ ಪ್ರಾಣನಿಲ್ಲದ, ಮನಸ್ಸಿಲ್ಲದ, ವಿಷಯವಲ್ಲದ[5] ಇಂದ್ರಿಯಗಳನ್ನೂ ವಿಷಯಗಳನ್ನೂ ಮೀರಿರುವ[6] ಶಿವವೂ ಶಾಂತವೂ ಆಗಿರುವ[7] ವಿಕಾರವಿಲ್ಲದ ಪುರುಷನೆಂಬ ಹೆಸರಿನ ಒಳಗೂ ಹೊರಗೂ ಇವು

---

1. ಸಾಧ್ಯಸಾಧನವಿಲಕ್ಷಣಮ್ ಎಂದು ವಾ॥ ಪಾಠ.

2. ಅತೀನ್ದ್ರಿಯಮ್, ಅವಿಷಯಮನ್ ಎಂದು ವಾ॥ ಪಾಠ

3. 'ಕ್ರಿಯಾಕಾರಕಫಲರೂಪವಾಗಿ ವಿಂಗಡವಾಗಿರುವ' ಎಂದರ್ಥ. ಇದರಲ್ಲಿ ಅವ್ಯಾಕೃತವೂ ಒಂದರ್ಥದಲ್ಲಿ ಸೇರಿಯೇಹೋಗಿದೆ. ಮು. ಭಾ. ೧–೨–೧೨ 'ಅವ್ಯಾಕೃತಾದಿಸ್ಥಾವರಾನ್ತಾನ್ ವ್ಯಾಕೃತಾವ್ಯಾಕೃತಲಕ್ಷಣಾನ್' ಎಂಬ ವಾಕ್ಯವನ್ನು ನೋಡಿರಿ.

4. ಪುತ್ರ, ಕರ್ಮ, ಶುಪಾಸನೆ–ಎಂಬ ಸಾಧನಗಳೂ ಅವುಗಳ ಫಲವಾಗಿರುವ ಲೋಕಗಳೂ ಆತ್ಮವೇ. ಮುಂ. ೧–೨–೧೨.

5. ಮುಂ. ೧–೨–೧೨.

6. ಮುಂ.ಭಾ. ೨–೧–೩ರಲ್ಲಿ 'ಅಪ್ರಾಣೋ ಹ್ಯಮನಾಃ' ಎಂಬುದರ ವ್ಯಾಖ್ಯಾನವನ್ನು ನೋಡಿ.

7. ಇಂದ್ರಿಯವಿಷಯಗಳೆ, ವಿಷಯವಿಷಯಿವ್ಯವಹಾರದ, ಕ್ಷೇತ್ರವನ್ನು ಮೀರಿರುವ; ತಾನು ಒಂದನ್ನೂ ವಿಷಯವಾಕರಿಸದೆ, ತಾನೂ ಯಾವದಕ್ಕೂ ವಿಷಯವಾಗದೆ ಇರುವ. ಮುಂ. ಭಾ. ೧–೧–೬.

8. ಆನಂದರೂಪವೂ ಅದ್ವಿತೀಯವೂ ಆಗಿರುವ ಮಾಂ. ೭.

ಗಳೊಡನೆ ಇರುವ ಹುಟ್ಟಿಲ್ಲದ[1] ಪರವಿದ್ಯೆಯಿಂದ ತಿಳಿಯಬೇಕಾಗಿರುವ ಅಕ್ಷರ ವೆಂಬಸತ್ಯವನ್ನು[2] ಹೇಳಬೇಕೆಂದು ಮುಂದಿನ ಮೂರು ಪ್ರಶ್ನೆಗಳ (ಗ್ರಂಥಭಾಗ) ವನ್ನು ಆರಂಭಿಸಿರುತ್ತದೆ.

ಈ ಪ್ರಶ್ನೆಯ ವಿಷಯ

(ಭಾಷ್ಯ)

೫. ತತ್ರ ಸುದೀಪ್ತಾದಿವ ಅಗ್ನೇಃ ಯಸ್ಮಾತ್ ಪರಾತ್ ಅಕ್ಷರಾತ್ ಸರ್ವೇ ಭಾವಾಃ ವಿಸ್ಫುಲಿಙ್ಗಾ ಇವ ಜಾಯನ್ತೇ | ತತ್ರ ಜೈವಾಪಿಯನ್ತಿ ಇತ್ಯುಕ್ತಂ ದ್ವಿತೀಯೇ ಮುಣ್ಡಕೇ | ಕೇ ತೇ ಸರ್ವೇ ಭಾವಾ ಅಕ್ಷರಾದ್ವಿಸ್ಫುಲಿಙ್ಗಾ ಇವ[3] ವಿಭಜ್ಯನ್ತೇ | ಕಥಂ ವಾ ವಿಭಕ್ತಾಃ ಸನ್ತಃ ತತ್ರೈವಾಪಿಯನ್ತಿ ? ಕಿಂ ಲಕ್ಷಣಂ ವಾ ತದಕ್ಷರಮಿತಿ ? ಏತದ್ವಿವಕ್ಷಯಾ ಅಥುನಾ ಪ್ರಶ್ನಾನ್ ಉದ್ಭಾವಯತಿ—

(ಭಾಷ್ಯಾರ್ಥ)

ಇದರಲ್ಲಿ 'ಜೆನ್ನಾಗಿ ಹೆತ್ತಿಕೊಂಡು ಉರಿಯುವ ಜೆಂಕಿಯಿಂದ ಕಿಡಿಗಳು (ಹುಟ್ಟುವಂತೆ) ಯಾವ ಅಕ್ಷರವೆಂಬ ಪರಮಾತ್ಮನಿಂದ ಎಲ್ಲಾ ಭಾವಗಳೂ ಹುಟ್ಟುತ್ತವೆ, ಆದರಲ್ಲಿಯೇ ಲಯವಾಗುತ್ತವೆ' (ಮುಂ. ೨–೧–೧) ಎಂದು ಎರಡನೆಯ ಮುಂಡಕದಲ್ಲಿ ಹೇಳಿತ್ತಷ್ಟೆ. ಕಿಡಿಗಳಂತೆ ಅಕ್ಷರದಿಂದ ವಿಂಗಡವಾಗಿ ಬರುವ ಎಲ್ಲಾ ಭಾವಗಳು ಎಂದರೆ ಯಾವವು ? ಹಾಗೆ ವಿಂಗಡವಾಗಿ (ಬೇರೆಯಾಗಿರುವ) ಅವು ಅದರಲ್ಲಿಯೇ ಲಯವಾಗುತ್ತವೆ ಎಂದರೆ ಹೇಗೆ ? ಆ ಅಕ್ಷರವೆಂಬುದರ ಸ್ವರೂಪವಾದರೂ ಏನು ? ಇದನ್ನು ಹೇಳಬೇಕೆಂದು ಈಗ ಈ ಪ್ರಶ್ನೆಗಳನ್ನು ಎಬ್ಬಿಸಲಾಗಿರುತ್ತದೆ :—

ಅಥ ಹೈನಂ ಸೌರ್ಯಾಯಣೀ ಗಾರ್ಗ್ಯಃ ಪಪ್ರಚ್ಛ | ಭಗವನ್ನೇತಸ್ಮಿನ್ ಪುರುಷೇ ಕಾನಿ ಸ್ವಪನ್ತಿ ಕಾನ್ಯಸ್ಮಿನ್ಜಾಗ್ರತಿ ಕತರ ಏಷ ದೇವಃ ಸ್ವಪ್ನಾನ್ ಪಶ್ಯತಿ ಕಸ್ಯೈತತ್ ಸುಖಂ ಭವತಿ ಕಸ್ಮಿನ್ನು ಸರ್ವೇ ಸಂಪ್ರತಿಷ್ಠಿತಾ ಭವನ್ತೀತಿ ॥೦॥

೧. ಆಮೇಲೆ ಈತನನ್ನು ಸೌರ್ಯಾಯಣೀ ಗಾರ್ಗ್ಯನು ಕೇಳಿದನೇನೆಂದರೆ : ಭಗವಂತನೆ, ಈ ಪುರುಷನಲ್ಲಿ ಯಾವವು ನಿದ್ರಿಸುವವು ? ಇದರಲ್ಲಿ ಯಾವವು ಎಚ್ಚೆತ್ತಿರುವವು ? ಕನಸುಗಳನ್ನು ನೋಡುವ ಈ ದೇವನು ಯಾವನು ? ಈ ಸುಖವು ಯಾರಿಗಾಗುವದು ? ಯಾರಲ್ಲಾದರೆ ಎಲ್ಲರೂ ಸಂಪ್ರತಿಷ್ಠಿತರಾಗುತ್ತಾರೆ ?

---

1. ಮುಂ. ೨–೧–೨. 2. ಮುಂ. ೨–೧–೧.
3. ಇದು ವಾ॥ ಪಾಠ; ಅ॥ ಪಾಠದಲ್ಲಿ 'ವಿಸ್ಫುಲಿಙ್ಗಾ ಇವ' ಎಂಬ ಮಾತುಗಳಿಲ್ಲ

(ಭಾಷ್ಯ)

೫೩. ಭಗವನ್ ಏತಸ್ಮಿನ್ ಪುರುಷೇ ಶಿರಃಪಾಣ್ಯಾದಿಮತಿ ಕಾನಿ ಕರಣಾನಿ ಸ್ವಪಂತಿ ಸ್ವಾಪಂ ಕುರ್ವಂತಿ, ಸ್ವವ್ಯಾಪಾರಾದುಪರಮಂತೇ? ಕಾನಿ ಚ ಅಸ್ಮಿನ್ ಜಾಗ್ರತಿ, ಜಾಗರಣಂ ಅನಿದ್ರಾವಸ್ಥಾಂ[1] ಸ್ವವ್ಯಾಪಾರಂ ಕುರ್ವಂತಿ ? ಕತರಃ ಕಾರ್ಯಕರಣಲಕ್ಷಣಯೋರೇಷಃ ದೇವಃ ಸ್ವಪ್ನಾನ್ ಪಶ್ಯತಿ? ಸ್ವಪ್ನೋ ನಾಮ ಜಾಗ್ರದ್ದರ್ಶನಾತ್ ನಿವೃತ್ತಸ್ಯ ಜಾಗ್ರದ್ವತ್ ಅನ್ತಃಶರೀರೇ ಯದ್ ದರ್ಶನಮ್ | ತತ್ ಕಿಂ ಕಾರ್ಯಲಕ್ಷಣೇನ ದೇವೇನ ನಿರ್ವರ್ತ್ಯತೇ, ಕಿಂ ವಾ ಕರಣಲಕ್ಷಣೇನ ಕೇನಚಿತ್ | ಇತ್ಯಭಿಪ್ರಾಯಃ| ಉಪರತೇ ಚ ಜಾಗ್ರತ್ಸ್ವಪ್ನವ್ಯಾಪಾರೇ ಯತ್ ಪ್ರಸನ್ನಂ ನಿರಾಯಾಸಲಕ್ಷಣಮ್ ಅನಾಬಾಧಂ ಸುಖಂ ಕಸ್ಯ ಏತತ್ ಭವತಿ ? ತಸ್ಮಿನ್ ಕಾಲೇ ಜಾಗ್ರತ್ಸ್ವಪ್ನವ್ಯಾಪಾರಾತ್ ಉಪರತಾಃ ಸನ್ತಃ ಕಸ್ಮಿನ್ ನು ಸಮ್ಪೇ ಸಮ್ಯಗೇಕೀಭೂತಾಃ ಸಂಪ್ರತಿಷ್ಠಿತಾಃ[2] ಮಧುನಿ ರಸವತ್ ಸಮುದ್ರಪ್ರವಿಷ್ಟನದ್ಯಾದಿವಚ್ಚ ವಿವೇಕಾವಧಾರ್ಯಾಃ ಪ್ರತಿಷ್ಠಿತಾ ಭವನ್ತಿ | ಸಂಗತಾಃ ಸುಪ್ರತಿಷ್ಠಿತಾ ಭವನ್ತಿ ಇತ್ಯರ್ಥಃ ||

(ಭಾಷ್ಯಾರ್ಥ)

ಭಗವಂತನೆ, ತಲೆ ಕೈ ಮುಂತಾದವುಗಳೊಡನೆ ಕೂಡಿರುವ ಈ ಪುರುಷನಲ್ಲಿ[3] ಯಾವ ಕರಣಗಳು ನಿದ್ರಿಸುವವು, ನಿದ್ರೆಯನ್ನು ಮಾಡುವವು, ಎಂದರೆ ತಮ್ಮ ಕೆಲಸವನ್ನು ಬಿಟ್ಟಿರುವವು? ಮತ್ತು ಇದರಲ್ಲಿ[4] ಯಾವವು ಎಚ್ಚರಿತ್ತಿರುವವು, ಎಚ್ಚರದೆ ತಮ್ಮ ವ್ಯಾಪಾರವನ್ನು ಮಾಡುತ್ತಿರುವವು ? ಕಾರ್ಯಕರಣರೂಪವಾಗಿರುವ ಈ ಎರಡರಲ್ಲಿ ಸ್ವಪ್ನವನ್ನು ನೋಡುತ್ತಾನಲ್ಲ, ಈ ದೇವನು ಯಾರು ? 'ಸ್ವಪ್ನ' ಎಂದರೆ ಎಚ್ಚರವನ್ನು ಕಾಣುವದನ್ನು ಬಿಟ್ಟು ಶರೀರದೊಳಗಡೆಯಲ್ಲಿ ಎಚ್ಚರದಂತೆಯೇ[5] ಕಾಣುವದಲ್ಲವೆ ಅದು. ಅದನ್ನು ಕಾರ್ಯರೂಪನಾದ ದೇವನು ಮಾಡುವನೋ, ಅಥವಾ ಕರಣರೂಪನಾದ ಯಾವನಾದರೂ (ದೇವನು ಮಾಡುವನೊ?)[6]

1. "ಅನಿದ್ರಾವಸ್ಥಾಂ ಸ್ವವ್ಯಾಪಾರವತ್" ಎಂಬ ಪಾಠಕ್ಕಿಂತ ಇದು ಉತ್ತಮ.

2. "ಸಂಪ್ರತಿಷ್ಠಿತಾ ಸಮ್ಯಕ್ ಏಕೀಭೂತಾಃ"...ಪ್ರತಿಷ್ಠಿತಾ ಭವನ್ತಿ ಇತ್ಯರ್ಥಃ ಎಂದು ಭಾಷ್ಯವು ಇದ್ದು ಬರೆಯುವವರು ಈಗಿರುವಂತೆ ಮಾರ್ಪಡಿಸಿರುವಂತೆ ತೋರುತ್ತದೆ

3. ದೇಹದಲ್ಲಿ. 4. ಈ ಶರೀರದಲ್ಲಿ.

5. ಕನಸು ಶರೀರದೊಳಗಡೆಯಲ್ಲಿ ಎಚ್ಚರದನುಭವದ ವಾಸನೆಯಿಂದ ಆಗುವ ದೆಂಬ ವ್ಯವಹಾರದ ದೃಷ್ಟಿಯಿಂದ ಹಾಕಿದ ಪ್ರಶ್ನೆಯಿದು. ಕನಸೂ ಎಚ್ಚರವಲ್ಲದಿದ್ದರೂ ಆ ಕಾಲಕ್ಕೆ ಎಚ್ಚರದಂತೆಯೇ ಕಾಣುತ್ತಿರುತ್ತದೆ.

6. ಪೃಥ್ವಿಮುಂತಾದವುಗಳು ಶರೀರವೆಂಬ ಕಾರ್ಯರೂಪವಾಗಿರುವವು; ವಾಗಾದಿಗಳು ಕರಣರೂಪವಾಗಿರುವವು–ಎಂದು ಹಿಂದೆ ಹೇಳಿರುವವುಗಳಲ್ಲಿ ಕನಸನ್ನು ಕಾಣುವದು ಯಾವದು ?

– ಎಂದಭಿಪ್ರಾಯ. ಮತ್ತು ಎಚ್ಚರಿಕೆನೆಸುಗಳ ಕೆಲಸವು ನಿಲ್ಲಲು ಪ್ರಸನ್ನವಾಗಿ ಯಾವ ಆಯಾಸವೂ ಇಲ್ಲದೆ,[1] ಯಾವ ಅಡ್ಡಿಯೂ ಇಲ್ಲದೆ ಸುಖವಿದೆಯಲ್ಲ, ಅದು ಯಾರಿಗೆ ಆಗುತ್ತದೆ ?[2] ಆ ಕಾಲದಲ್ಲಿ ಎಚ್ಚರಿಕೆನೆಸುಗಳ ಕೆಲಸವನ್ನು ಕೈಬಿಟ್ಟು, ಯಾರಲ್ಲಿ ಸಂಪ್ರತಿಷ್ಠಿತರಾಗುವರು? (ಸಂ ಎಂದರೆ) ಚೆನ್ನಾಗಿ ಒಂದಾಗಿ ಇದ್ದುಕೊಂಡಿರುವರು? ಜೇನುಹುಪ್ಪದಲ್ಲಿ ರಸಗಳುತೆಯೂ ಸಮುದ್ರವನ್ನು ಹೊಕ್ಕ ನದ್ಯಾದಿಗಳಂತೆಯೂ[3] ಜೀರ್ಪಡಿಸುವದಕ್ಕಾಗದಂತೆ ಇದ್ದುಕೊಂಡಿರುವರು, ಸೇರಿ ಕೊಂಡಿರುವರು ?–ಎಂದರ್ಥ.

(ಭಾಷ್ಯ)

ಜಳ ನನು ನ್ಯಸ್ತದಾತ್ರಾದಿಕರಣವತ್ ಸ್ವವ್ಯಾಪಾರಾದುಪರತಾನಿ ಪೃಥಕ್ ಪೃಥಗೇವ ಸ್ವಾತ್ಮನಿ ಅವತಿಷ್ಠನ್ತೇ ಇತ್ಯೇತದ್ ಯುಕ್ತಮ್ | ಕುತಃ ಪ್ರಾಪ್ತಿಃ ಸುಷುಪ್ತ ಪುರುಷಾಣಾಂ ಕರುಣಾನಾಂ ಕಸ್ಮಿಂಶ್ಚಿತ್ ಏಕೇಭಾವಗಮನಾ ಶಙ್ಕಾಯಾಃ ದ್ರಷ್ಟುಃ ? ಯುಕ್ತೈವ ತು ಆಶಙ್ಕಾ| ಯತಃ ಸಂಹತಾನಿ ಕರುಣಾನಿ ಸ್ವಾಮ್ಯರ್ಥಾನಿ ಪರತಾನ್ತ್ರಾಣಿ ಚ ಜಾಗ್ರದ್ವಿಷಯೇ ತಸ್ಮಾತ್ ಸ್ವಾಪೇಽಪಿ ಸಂಹತಾನಾಂ ಪಾರತನ್ತ್ರ್ಯೇಣೈವ ಕಸ್ಮಿಂಶ್ಚಿತ್ ಸಂಗತಿರ್ನ್ಯಾಯ್ಯಾ ಇತಿ | ತಸ್ಮಾತ್ ಆಶಙ್ಕಾನುರೂಪ ಏವ ಪ್ರಶ್ನೋಽಯಮ್ | ಆಶ್ರಯಶ್ಚ ಕಾರ್ಯಕರಣ ಸಂಘಾತೋ ಯಸ್ಮಿಂಶ್ಚ ಪ್ರಲೀನಃ ಸುಷುಪ್ತ ಪ್ರಲಯಕಾಲಯೋಃ ಶದ್ವಿಶೇಷಂ ಬುಭುತ್ಸೋಃ ಸ ಕೋ ನು ಸ್ಯಾತ್ ? ಇತಿ ಕಸ್ಮಿನ್ ಸರ್ವೇ ಸಂಪ್ರತಿಷ್ಠಿತಾ ಭವನ್ತಿ ಇತಿ ||

(ಭಾಷ್ಯಾರ್ಥ)

(ಆಕ್ಷೇಪ):–ಕೆಳಗಿಟ್ಟ ಕುಡಗೋಲು ಮುಂತಾದ ಸಾಧನಗಳಂತೆ[4] ತಮ್ಮ ತಮ್ಮ ಕೆಲಸವನ್ನು ಬಿಟ್ಟು ಬೇರೆಬೇರೆಯಾಗಿಯೇ (ಕರಣಗಳು) ತಮ್ಮ ಸ್ವರೂಪದಲ್ಲಿದ್ದುಕೊಂಡಿರುವವು, ಎಂಬುದು ಯುಕ್ತ. (ಹೀಗಿರುವಲ್ಲಿ) ನಿದ್ರಿಸಿದ ಪುರುಷನ ಕರಣಗಳು ಯಾವದರಲ್ಲಿಯಾದರೂ ಒಂದಾಗುವವೆಂದು ಪ್ರಶ್ನಕಾರನು ಶಂಕಿಸುವದಕ್ಕೆ ಅವಕಾಶವೆಲ್ಲಿಂದ ಬಂತು?

1. ದುಃಖದ ಕಲ್ಮಷವಿಲ್ಲದೆ, ವಿಷಯಗಳನ್ನು ಭೋಗಿಸುವ ಆಯಾಸವಿಲ್ಲದೆ.
2. ವಿಷಯಗಳ ಭೋಗದಿಂದುಂಟಾಗುವ ಸುಖಕ್ಕೆ ಅಡ್ಡಿಗಳಿರುವವು.
3. ಸುಖವಾಗಿ ನಿದ್ರಿಸಿದೆನು ಎಂದು ಪ್ರಸಿದ್ಧವಾಗಿರುವ ಸುಖವು ಯಾರಿಗೆ ಆಗುತ್ತದೆ? 4. ಛಾಂ.೬–೯,೬–೧೦–ಇವುಗಳಲ್ಲಿ ಈ ದೃಷ್ಟಾಂತಗಳನ್ನು ವಿವರಿಸಿದೆ.
5. ಕುಡುಗೋಲಿನ ಕೆಲಸವಾದಮೇಲೆ ಅಡಗಿಟ್ಟರೆ ಒಂದು ಕಡೆ ಇರುವಂತೆ ಕರಣಗಳು ಒಂದೊಂದು ಕಡೆ ಇರಲಿ. ಎತರಲ್ಲಿಯಾದರೂ ಏತಕ್ಕೆ ಸೇರಿಕೊಳ್ಳಬೇಕು ? ಎಂಬ ಆಕ್ಷೇಪ. "ದಾತೃ–ಆದಿ" ಎಂದು ಸಂಧಿಯನ್ನು ಬಿಡಿಸಿಕೊಂಡರೆ" ಹುಲ್ಲುಕೊಯ್ಯುವವರು ಮುಂತಾದವರ ಕರಣಗಳಂತೆ" ಎಂದು ಕನ್ನಡಿಸಬೇಕಾಗುವದು.

(ಪರಿಷಾದ):- ಈ ಶಂಕೆಯು ಸರಿಯಾದದ್ದೇ, ಏಕೆಂದರೆ ಒಂದರೊಡ ಸೊಂದು ಸೇರಿಕೊಂಡಿರುವ[1] ಕರಣಗಳು (ತಮ್ಮ) ಒಡೆಯನಿಗಾಗಿದ್ದುಕೊಂಡು (ಅವನ) ಅಧೀನವಾಗಿಯೇ ಎಚ್ಚರದಲ್ಲಿರುತ್ತವೆ. ಆದ್ದರಿಂದ ಹೀಗೆ ಒಂದರೊಡ ಸೊಂದು ಸೇರಿಕೊಂಡಿರುವ (ಅವುಗಳು) ನಿದ್ರೆಯಲ್ಲಿಯೂ ಪರಾಧೀನವಾಗಿಯೇ ಯಾವದರಲ್ಲಿಯೋ ಸೇರಿಕೊಂಡೇ ಇರಬೇಕೆಂಬುದು ಯುಕ್ತ. ಆದ್ದರಿಂದ ಶಂಕೆಗೆ ಅನುಗುಣವಾಗಿಯೇ ಈ ಪ್ರಶ್ನೆ (ಬಂದಿರುತ್ತದೆ). ಆದರೆ (ಈ) ಕಾರ್ಯಕರಣ ಗಳ ಸೂಕ್ಷ್ಮ ಸಹಿತ ಪ್ರಲಯಕಾಲಗಳಲ್ಲಿ[2] ಯಾವದರಲ್ಲಿ ಲಯವಾಗಿರುವದೋ ಅದು ಯಾವದಿರಬಹುದು ? ಎಂದು ಅದರ ವಿಶೇಷ(ಸ್ವರೂಪ)ವನ್ನು ತಿಳಿಯ ಬೇಕೆಂಬ ಇಚ್ಛೆಯಿಂದ[3] ಯಾವದರಲ್ಲಿ ಎಲ್ಲವೂ ಸೇರಿಕೊಂಡಿರುವವು ?" ಎಂದು ಕೇಳಿಕೊಂಡಿದೆ.

ಕರಣಗಳ ನಿದ್ರೆ

ತಸ್ಮೈ ಸ ಹೋವಾಚ ಯಥಾ ಗಾರ್ಗ್ಯ ಮರೀಚಯೋಽರ್ಕ ಸ್ಯಾಸ್ತಂ ಗಚ್ಛತಃ ಸರ್ವಾ ಏತಸ್ಮಿಂಸ್ತೇಜೋಮಣ್ಡಲೇ ಏಕೀಭವನ್ತಿ । ತಾಃ ಪುನಃ ಪುನರುದಯತಃ ಪ್ರಚರನ್ತ್ಯೇವಂ ಹ ವೈ ತತ್ಸರ್ವಂ ಪರೇ ದೇವೇ ಮನಸ್ಯೇಕೀ ಭವತಿ । ತೇನ ತರ್ಹ್ಯೇಷ ಪುರುಷೋ ನ ಶೃಣೋತಿ ನ ಪಶ್ಯತಿ ನ ಜಿಘ್ರತಿ ನ ರಸಯತೇ ನ ಸ್ಪೃಶತೇ ನಾಭಿನದತೇ ನಾದತ್ತೇ ನಾನನ್ದಯತೇ ನ ವಿಸೃಜತೇ ನೇಂಯಾಯತೇ ಸ್ವಪಿತೀತ್ಯಾಚಕ್ಷತೇ ॥ ೨ ॥

೨. ಅವನಿಗೆ ಆತನು ಹೇಳಿದನೆಂದರೆ:- ಎಲೈ ಗಾರ್ಗ್ಯನೆ, ಅರ್ಕನು ಅಸ್ತವಾಗುತ್ತಿರಲು ಹೇಗೆ ಕಿರಣಗಳೆಲ್ಲ ಈ ತೇಜೋಮಂಡಲ ದಲ್ಲಿ ಒಂದಾಗುವವೋ ಮತ್ತೆ ಉದಯಿಸಲು ಅವು ಮತ್ತೂ ಅವನಿಂದ ಹೇಗೆ ಹೊರಹೊರಡುತ್ತವೆಯೋ ಇದರಂತೆಯೇ ಅದೆಲ್ಲವೂ ಪರಮದೇವ ನಾದ ಮನಸ್ಸಿನಲ್ಲಿ ಒಂದಾಗಿಬಿಡುತ್ತದೆ. ಆದ್ದರಿಂದ ಆಗ ಈ ಪುರುಷನು ಕೇಳುವದಿಲ್ಲ, ಕಾಣುವದಿಲ್ಲ, ಮೂಸುವದಿಲ್ಲ, ಸವಿಯುವದಿಲ್ಲ, ಸೋಕು ವದಿಲ್ಲ, ಮಾತನಾಡುವದಿಲ್ಲ, ತೆಗೆದುಕೊಳ್ಳುವದಿಲ್ಲ, ಸುಖಪಡುವದಿಲ್ಲ,

1. ಮೂರನೆಯ ಪ್ರಶ್ನೆಯ ಅವತರಣಿಕೆಯನ್ನು ನೋಡಿ. ಸಂಹತವಾಗಿರುವ ಕರಣಗಳು ತಾವೇ ಜಿಡಿಯಾಗಿರಲಾರವು ಎಂದು ಭಾವ.

2. ಪ್ರಲಯವನ್ನೂ ಇಲ್ಲಿ ಸೇರಿಸಿಕೊಂಡಿರುವದರ ಕಾರಣವನ್ನು ಒನೆಯ ಪ್ರಶ್ನೆಯ ಭಾಷ್ಯದ ಅವತರಣಿಕೆಯಲ್ಲಿ ಕಾಣಬಹುದು.

3. ಆತ್ಮನ ಪರಮಾರ್ಥಸ್ವರೂಪವನ್ನು ತಿಳಿಯಬೇಕೆಂಬ ಇಚ್ಛೆಯಿಂದ. ಇಲ್ಲಿ ಪರಾನುರ್ಶಿಸಿರುವ ವ್ಯಾಖ್ಯಾನಕಾರರ ಅಭಿಪ್ರಾಯವನ್ನು ಪೀಠಿಕೆಯಲ್ಲಿ ವಿಮರ್ಶಿಸಿದೆ.

ಬಿಡುವದಿಲ್ಲ, ಹೋಗುವದಿಲ್ಲ. "ನಿದ್ರಿಸುತ್ತಿದ್ದಾನೆ" ಎಂದು ಹೇಳುತ್ತಾರೆ.

(ಭಾಷ್ಯ)

ಋಚಃ. ತಸ್ಮೈ ಸಃ ಹ ಉವಾಚ ಆಚಾರ್ಯಃ, ಶೃಣು ಹೇ ಗಾರ್ಗ್ಯ ಯತ್ ತ್ವಯಾ ಪೃಷ್ಟವಮ್ ! ಯಥಾ ಮರೀಚಯಃ ರಶ್ಮಯಃ ಅರ್ಕಸ್ಯ ಆದಿತ್ಯಸ್ಯ ಅಸ್ತಮ್ ಅದರ್ಶನಂ ಗಚ್ಛತಃ ಸರ್ವಾಃ ಅಶೇಷತಃ ಏತಸ್ಮಿನ್ ತೇಜೋ ಮಂಡಲೇ ತೇಜೋರಾಶಿರೂಪೇ ಏಕೀಭವನ್ತಿ ವಿವೇಕಾನರ್ಹತ್ವಮ್ ಅವಿಶೇಷತಾಂ ಗಚ್ಛನ್ತಿ ಮರೀಚಯಃ | ತಸ್ಯೈವ ಅರ್ಕಸ್ಯ ತಾಃ[1] ಪುನಃ ಪುನರುದಯತಃ ಉದ್ಗಚ್ಛತಃ ಪ್ರಚರನ್ತಿ ವಿಕೀರ್ಯನ್ತೇ | ಯಥಾಯಂ ದೃಷ್ಟಾನ್ತಃ, ಏವಂ ಹ ವೈ ತತ್ ಸರ್ವಂ ವಿಷಯೇನ್ದ್ರಿಯಾದಿಜಾತಂ ಪರೇ ಪ್ರಕೃಷ್ಟೇ ದೇವೇ ದ್ಯೋತನವತಿ ಮನಸಿ | ಚಕ್ಷುರಾದಿದೇವಾನಾಂ ಮನಸ್ತನ್ತ್ರತ್ವಾತ್ ಪರೋ ದೇವೋ ಮನಃ | ತಸ್ಮಿನ್ ಸ್ವಪ್ನಕಾಲೇ ಏಕೀಭವತಿ ಮಂಡಲೇ ಮರೀಚಿವತ್ ಅವಿಶೇಷತಾಂ ಗಚ್ಛತಿ | ಜಿಜಾಗರಿಷೋಶ್ಚ ರಶ್ಮಿವತ್ ಮಂಡಲಾತ್ ಮನಸ ಏವ ಪ್ರಚರನ್ತಿ ಸ್ವವ್ಯಾಪಾರಾಯ ಪ್ರತಿಷ್ಠನ್ತೇ | ಯಸ್ಮಾತ್ ಸ್ವಪ್ನಕಾಲೇ ಶ್ರೋತ್ರಾದೀನಿ ಶಬ್ದಾದ್ಯುಪಲಬ್ಧಿಕರಣಾನಿ ಮನಸಿ ಏಕೀಭೂತಾನೀವ ಕರಣವ್ಯಾಪಾರಾತ್ ಉಪರತಾನಿ | ತೇನ ತಸ್ಮಾತ್ ತರ್ಹಿ ತಸ್ಮಿನ್ ಸ್ವಾಪಕಾಲೇ ಏಷ ದೇವದತ್ತಾದಿಲಕ್ಷಣಃ ಪುರುಷೋ ನ ಶೃಣೋತಿ, ನ ಪಶ್ಯತಿ, ನ ಜಿಘ್ರತಿ, ನ ರಸಯತೇ, ನ ಸ್ಪೃಶತೇ, ನಾಭಿವದತೇ, ನಾದತ್ತೇ ನಾನನ್ದಯತೇ, ನ ವಿಸೃಜತೇ, ನೇಯಾಯತೇ "ಸ್ವಪಿತಿ" ಇತಿ ಆಚಕ್ಷತೇ ಲೌಕಿಕಾಃ ||

(ಭಾಷ್ಯಾರ್ಥ)

ಅವನಿಗೆ ಆ ಆಚಾರ್ಯನು ಹೇಳಿದನೇನೆಂದರೆ :-ಎಲೈ ಗಾರ್ಗ್ಯನೆ, ನೀನು ಕೇಳಿದೆಯಲ್ಲ (ಅದನ್ನು ಹೇಳುತ್ತೇನೆ) ಕೇಳು. ಹೇಗೆ ಆರ್ಕನು ಸೂರ್ಯನು ಅಸ್ತವನ್ನು ಕಣ್ಮರೆಯಾಗುವಿಕೆಯನ್ನು ಹೊಂದುತ್ತಿರಲು, ಕಿರಣಗಳೆಲ್ಲವೂ, ರಶ್ಮಿಗಳು ಒಂದೂ ಉಳಿಯದಂತೆ ಈ ತೇಜೋಮಂಡಲದಲ್ಲಿ ಬೆಳಕಿನ ರಾಶಿಯ ಸ್ವರೂಪವಾದ (ಸೂರ್ಯನಲ್ಲಿ) ಒಂದಾಗುವೆವೋ, ಎಂದರೆ (ಹೇಗೆ ಆ) ಕಿರಣಗಳು ಬಿಡಿಸಿ ಅರಿತುಕೊಳ್ಳುವದಕ್ಕಾಗದಂತೆ (ತಮ್ಮ) ವಿಶೇಷರೂಪವಿಲ್ಲದಂತೆ ಆಗುವವೋ, ಅದೇ ಸೂರ್ಯನು ಮತ್ತೆ ಉದಯಿಸಲು ಮೇಲಕ್ಕೆ ಬರಲು ಆ (ಕಿರಣಗಳು) ಅವನಿಂದ ಹೇಗೆ ಹೊರಟುಬರುವವೋ ಬೇರೆಬೇರೆಯಾಗಿ ಚದುರುವವೋ ಈ ದೃಷ್ಟಾಂತವು ಹೇಗೋ ಇದರಂತೆಯೇ ಇದೆಲ್ಲವೂ

1. 'ತಸ್ಯೈವ ಅರ್ಕಸ್ಯ ತಾ' ಎಂಬ ಗ್ರಂಥಭಾಗವು ವಾ॥ ಪಾಠದಲ್ಲಿ ಸ್ವಲ್ಪ ವ್ಯತ್ಯಸ್ತವಾಗಿದೆ.

ಎಂದರೆ ವಿಷಯಗಳು, ಇಂದ್ರಿಯಗಳು–ಮುಂತಾದವುಗಳ ಸಮೂಹವು ಪರಮ ಸಾಮ ಹೆಚ್ಚಿನ ದೇವನಾದ ಪ್ರಕಾಶಮಯವಾಗಿರುವ ಮನಸ್ಸಿನಲ್ಲಿ, ಚಕ್ಷುಸ್ಸೇ ಮುಂತಾದ ದೇವತೆಗಳು ಮನಸ್ಸಿನ ಅಧೀನವಾಗಿರುವುದರಿಂದ[1] ಮನಸ್ಸು ಪರಮ ದೇವನು; (ಅದರಲ್ಲಿ) ಸ್ವಪ್ನಕಾಲದಲ್ಲಿ ಒಂದಾಗಿಬಿಡುತ್ತದೆ[2] ಎಂದರೆ ಮಂಡಲದಲ್ಲಿ ಕಿರಣಗಳು ಹೇಗೋ ಹಾಗೆ (ಶಸ್ನ) ವಿಶೇಷಸ್ವರೂಪವಿಲ್ಲದ್ದಾಗುವುದು; ಮತ್ತು ಎಚ್ಚರವಾಗುತ್ತಲೂ ಮಂಡಲದಿಂದ ಕಿರಣಗಳು (ಹೊರಟುಬರುವಂತೆ (ಮನಸ್ಸಿನಿಂದಲೇ ಹೊರಕ್ಕೆ ಬರುತ್ತವೆ, ತನ್ನ ಕೆಲಸವನ್ನು ಮಾಡುವದಕ್ಕೆ ಹೊರಡುತ್ತವೆ.

ಹೀಗೆ ಸ್ವಪ್ನಕಾಲದಲ್ಲಿ ಶಬ್ದವೇ ಮುಂತಾದವುಗಳನ್ನು ಅರಿಯುವದಕ್ಕೆ ಕರಣಗಳಾಗಿರುವ ಶ್ರೋತ್ರಾದಿಗಳು ಮನಸ್ಸಿನಲ್ಲಿ ಒಂದಾದಂತೆ[3] ಕರಣದ ಕೆಲಸವನ್ನು ಬಿಟ್ಟುಬಿಡುತ್ತವೆಯಷ್ಟೆ; ಆದ್ದರಿಂದ ಆ ಕಾರಣದಿಂದ ಆಗ ಆ ಸ್ವಪ್ನ ಕಾಲದಲ್ಲಿ ಈ ದೇವದತ್ತನೇ ಮುಂತಾದ ಪುರುಷನು (ಏನೊಂದೂ) ಕೇಳುವದಿಲ್ಲ, ಕಾಣುವದಿಲ್ಲ, ಮೂಸುವದಿಲ್ಲ, ಸವಿಯುವದಿಲ್ಲ, ಸೋಕುವದಿಲ್ಲ, ಮಾತನಾಡುವದಿಲ್ಲ, ತೆಗೆದುಕೊಳ್ಳುವದಿಲ್ಲ, ಸುಖಪಡುವದಿಲ್ಲ, ಬಿಡುವದಿಲ್ಲ, ಹೋಗುವದಿಲ್ಲ, "(ಇವನು) ನಿದ್ರಿಸುತ್ತಿದ್ದಾನೆ" ಎಂದು ಜನರು ಆಡಿಕೊಳ್ಳುತ್ತಾರೆ.

ಪ್ರಾಣಗಳ ಎಚ್ಚರ–ಪ್ರಾಣಾಗ್ನಿಹೋತ್ರಭಾವನೆ

ಪ್ರಾಣಾಗ್ನಯ ಏವೈತಸ್ಮಿನ್ ಪುರೇ ಜಾಗ್ರತಿ। ಗಾರ್ಹಪತ್ಯೋ ಹ ವಾ ಏಷೋಽಪಾನೋ ವ್ಯಾನೋಽನ್ವಾಹಾರ್ಯಪಚನೋ ಯದ್ಗಾರ್ಹಪತ್ಯಾತ್ ಪ್ರಣೀಯತೇ ಪ್ರಣಯನಾದಾಹವನೀಯಃ ಪ್ರಾಣಃ ॥ ೫ ॥

೫. ಈ ಪುರದಲ್ಲಿ ಪ್ರಾಣಾಗ್ನಿಗಳೇ ಎಚ್ಚರಿರುತ್ತವೆ. ಈ ಅಪಾನವೇ ಗಾರ್ಹಪತ್ಯವು, ವ್ಯಾನವು ಅನ್ವಾಹಾರ್ಯಪಚನವು;

1. ಮನಸ್ಸಿನ ಸಂಬಂಧವಿಲ್ಲದಿದ್ದರೆ ಚಕ್ಷುರಾದಿಗಳು ಕೆಲಸಮಾಡಲಾರವು.

2. ಚಕ್ಷುರಾದಿಗಳು ಮನಸ್ಸಿನ ಬಲದಿಂದ ಕೆಲಸಮಾಡುತ್ತಿರುತ್ತವೆ. ಕನಸಿನಲ್ಲಿ ಅವುಗಳ ವ್ಯಾಪಾರವು ಸಂತು ಮನಸ್ಸೊಂದೇ ಕೆಲಸಮಾಡುತ್ತಿರುವದರಿಂದ ಮನಸ್ಸಿನಲ್ಲಿ ಒಂದಾಗಿಬಿಡುವವು ಎಂದು ಹೇಳಿದೆ. ಕನಸಿನಲ್ಲಿ ಇಂದ್ರಿಯಗಳಾಗಿ ತೋರುವವು ವಾಸನಾ ಮಯವಾಗಿರುವದರಿಂದ ಆಗ ನಿಜವಾದ ಇಂದ್ರಿಯಗಳ ವ್ಯಾಪಾರವಿರುವದಿಲ್ಲ. ಇಲ್ಲಿ ವೃತ್ತಿ ಲಯವನ್ನೇ ಹೇಳಿದೆ ಎಂಬುದಕ್ಕೆ ಸೂ. ಭಾ. ೪-೩-೧, ೪-೩-೩, ೪-೩-೫-ಇವನ್ನು ನೋಡಿ. ಇಲ್ಲಿರುವ ಕನಸಿನ ವರ್ಣನೆಯು ವ್ಯವಹಾರದೃಷ್ಟಿಯಿಂದ ಎಂಬುದನ್ನು ನೆನಪಿಡಬೇಕು.

3. ಎಚ್ಚರದಲ್ಲಿದ್ದ ಇಂದ್ರಿಯಗಳು ತಮ್ಮತಮ್ಮ ಎಚ್ಚರದ ವಿಷಯಗಳನ್ನು ಕಾಣಿಸಿಕ್ಕಿಸಿದ್ದರಿಂದ ಮನಸ್ಸಿನಲ್ಲಿ ಒಂದಾದಂತೆ; ನಿಜವಾಗಿ ಅವು ಆತ್ಮನಲ್ಲಿಯೇ ಒಂದಾಗಿರುವವು; ಏಕೆಂದರೆ ಕನಸಿನಲ್ಲಿ ಅವುಗಳಾಗಲಿ ವಿಷಯಗಳಾಗಲಿ ಇರುವದೇ ಇಲ್ಲ; ಆದರೆ ಈ ಪರಮಾರ್ಥದೃಷ್ಟಿಯನ್ನು ಇಲ್ಲಿ ಉಪಯೋಗಿಸಿಲ್ಲ.

ಪ್ರಣಯನವಾದ ಗಾರ್ಹಪತ್ಯದಿಂದ ತೆಗೆದುಕೊಂಡದ್ದಾವ್ದರಿಂದ ಪ್ರಾಣವು ಆಹವನೀಯವು.

(ಭಾಷ್ಯ)

೫೬. ಸುಪ್ತವತ್ಸು ಶ್ರೋತ್ರಾದಿಷು ಕರಣೇಷು ಏತಸ್ಮಿನ್ ಪುರೇ ನವ ದ್ವಾರೇ ದೇಹೇ ಪ್ರಾಣಾಗ್ನಯಃ ಪ್ರಾಣಾದಿಪಞ್ಚವಾಯವಃ ಅಗ್ನಯ ಇವ ಅಗ್ನಯಃ ಜಾಗ್ರತಿ | ಅಗ್ನಿಸಾಮಾನ್ಯಂ ಹಿ ಅಹ[1] | ಗಾರ್ಹಪತ್ಯೋ ಹ ವಾ ಏಷಃ ಅಪಾನಃ | ಕಥಮಿತಿ ? ಅಹ | ಯಸ್ಮಾತ್ ಗಾರ್ಹಪತ್ಯಾತ್ ಅಗ್ನೇಃ ಅಗ್ನಿಹೋತ್ರಕಾಲೇ[2] ಇತರಃ ಅಗ್ನಿಃ ಆಹವನೀಯಃ ಪ್ರಣೀಯತೇ | ಪ್ರಣಯನಾತ್ ಪ್ರಣೀಯತೇ ಅಸ್ಮಾತ್ ಇತಿ ಪ್ರಣಯನಃ | ಗಾರ್ಹಪತ್ಯೋಽಗ್ನಿಃ | ತಥಾ ಸುಪ್ತಸ್ಯ ಅಪಾನವೃತ್ತೇಃ ಪ್ರಣೀಯತೇ ಇವ ಪ್ರಾಣೋ ಮುಖನಾಸಿಕಾಭ್ಯಾಂ ಸಂಚರತಿ | ಅತಃ ಆಹವನೀಯಸ್ಥಾನೀಯಃ ಪ್ರಾಣಃ | ವ್ಯಾನಸ್ತು ಹೃದಯಾತ್ ದಕ್ಷಿಣಸುಷಿರದ್ವಾರೇಣ ನಿರ್ಗಮಾತ್ ದಕ್ಷಿಣದಿಕ್ಸಂಬನ್ಧಾತ್ ಅನ್ವಾಹಾರ್ಯ ಪಚನಃ ದಕ್ಷಿಣಾಗ್ನಿಃ ||

(ಭಾಷ್ಯಾರ್ಥ)

ಶ್ರೋತ್ರಾದಿಕರಣಗಳು ನಿದ್ರಿಸಲು ಈ ಒಂಭತ್ತು ಬಾಗಿಲಿನ[3] ಪುರವಾದ ದೇಹದಲ್ಲಿ ಪ್ರಾಣಾಗ್ನಿಗಳೇ, ಅಗ್ನಿಗಳಂತಿರುವದರಿಂದ ಅಗ್ನಿಗಳಾಗಿರುವ ಪ್ರಾಣವೇ ಮುಂತಾದ ಐದು ವಾಯುಗಳೇ ಎಚ್ಚೆತ್ತಿರುತ್ತವೆ.[4] ಅಗ್ನಿಗಳಿಗೂ (ಅವಕ್ಕೂ) ಹೋಲಿಕೆಯೇನೆಂದರೆ (ಶ್ರುತಿ) ಹೇಳುತ್ತದೆ :— ಈ ಅಪಾನವೇ ಗಾರ್ಹಪತ್ಯವು. ಹೇಗೆಂದರೆ (ಶ್ರುತಿ) ಹೇಳುತ್ತದೆ :–ಅಗ್ನಿಹೋತ್ರಕಾಲದಲ್ಲಿ ಗಾರ್ಹಪತ್ಯವೆಂಬ ಪ್ರಣಯನವಾದ ಅಗ್ನಿಯಿಂದ ಇನ್ನೊಂದಾದ ಆಹವನೀಯವೆಂಬ ಅಗ್ನಿಯನ್ನು ತೆಗೆದುಕೊಳ್ಳುತ್ತಾರೆ ; ಇದರಿಂದ ತೆಗೆದುಕೊಳ್ಳುತ್ತಾರೆ ("ಪ್ರಣೀಯತೇ") ; ಆದ್ದರಿಂದ ಗಾರ್ಹಪತ್ಯವೆಂಬ ಅಗ್ನಿಯು ಪ್ರಣಯನವೆನಿಸುತ್ತದೆ. ಇದರಂತೆ ನಿದ್ರಿಸಿರುವಾತನ ಅಪಾನವೃತ್ತಿಯಿಂದ ತೆಗೆದುಕೊಂಡುಬಂದರೋ ಎಂಬಂತೆ ಪ್ರಾಣವು ಮುಖ, ನಾಸಿಕಗಳ

---

1. "ಅಹ" ಎಂಬ ಮಾತು ವಾ॥ ಪಾಠದಲ್ಲಿ ಹೆಚ್ಚು.

2. "ಕಾಲೇಷ್ವ" ಎಂದು ಆ॥ ಪಾಠ.

3. ಗೀತೆ ೫–೧೩ರ ಸೂಚನೆ.

4. ಕೋಟೆಯೊಳಗಿರುವ ಊರಿನವರು ಎಲ್ಲರೂ ಮಲಗಿರುವಾಗ ಕೋಟೆಯನ್ನು ನಗರರಕ್ಷಕರು ಕಾಪಾಡುವಂತೆ ಪ್ರಾಣಗಳು ಎಚ್ಚೆತ್ತಿದ್ದು ಶರೀರವನ್ನು ಕಾಪಾಡಿಕೊಂಡಿರುವವು– ಎಂಬ ಭಾವವು "ಪುರ"ವೆಂಬ ಶಬ್ದದಿಂದ ಹೊರಡುತ್ತದೆ. ನಿದ್ರೆಯ ಕಾಲದಲ್ಲಿ ಪ್ರಾಣಗಳು ರಕ್ಷಿಸುತ್ತಿರುವವೆಂಬುದಕ್ಕೆ ಬೃ. ೪-೩-೦೨ ನೋಡಿರಿ.

ಮೂಲಕವಾಗಿ ಸಂಚರಿಸುತ್ತದೆ ; ಆದ್ದರಿಂದ ಪ್ರಾಣವು ಆಹವನೀಯವೆನಿದ್ದಂತೆ ಇದೆ.[1] ವ್ಯಾನವಾದರೋ ಅನ್ವಾಹಾರ್ಯಪಚನವು ; ಹೃದಯದ ಎಲರಂಧ್ರದ ಮೂಲಕವಾಗಿ ಹೊರಟುಹರುತ್ತಿರುವದರಿಂದ ದಕ್ಷಿಣಾದಿಕ್ಕಿನ ಸಂಬಂಧವುಳ್ಳ ವ್ಯಾಪಿಯಾಗಿದೆ[2]. ಆದ್ದರಿಂದ ಅನ್ವಾಹಾರ್ಯಪಚನವು, ಎಂದರೆ ದಕ್ಷಿಣಾಗ್ನಿಯು.

ಯದುಚ್ಛ್ವಾಸನಿಃಶ್ವಾಸಾವೇತಾವಾಹುತೀ : ಸಮಂ ನಯತೀತಿ ಸ ಸಮಾನಃ । ಮನೋ ಹ ವಾವ ಯಜಮಾನ ಇಷ್ಟ್ಯಾ ಲಕ್ಷ್ಯೋವೋದಾನಃ ಸ ವಿನಂ ಯಜಮಾನಮಹರಹರ್ಬ್ರಹ್ಮ ಗಮಯತಿ ॥ ೪ ॥

೪. ಉಚ್ಛ್ವಾಸನಿಃಶ್ವಾಸಗಳು ಎರಡೇ ಆಹುತಿಗಳನ್ನು ಸಮವಾಗಿ ಒಯ್ಯುತ್ತಿರುವದರಿಂದ ಅದು ಸಮಾನವು. ಮನಸ್ಸೇ ಯಜಮಾನನು, ಇಷ್ಟಫಲವೇ ಉದಾನವು. ಅದು ಈ ಯಜಮಾನನನ್ನು ದಿನದಿನವೂ ಬ್ರಹ್ಮನನ್ನು ಹೊಂದಿಸುತ್ತದೆ.

(ಭಾಷ್ಯ)

೪೭. ಅತ್ರ ಚ ಹೋತಾ ಅಗ್ನಿಹೋತ್ರಸ್ಯ ಯತ್ ಯಸ್ಮಾತ್ ಉಚ್ಛ್ವಾಸನಿಃಶ್ವಾಸೌ ಅಗ್ನಿಹೋತ್ರಾಹುತೀ ಇವ ನಿತ್ಯಂ ದ್ವಿತ್ವಸಾಮಾನ್ಯಾದೇವ ತು ಏತೌ ಆಹುತೀ ಸಮಂ ಸಾಮ್ಯೇನ ಶರೀರಸ್ಥಿತಿಭಾವಾಯ ನಯತಿ ಯೋ ವಾಯುಃ ಅಗ್ನಿಸ್ಥಾನೀಯೋಽಪಿ ಹೋತಾ ಚ ಆಹುತ್ಯೋರ್ನೇತೃತ್ವಾತ್ ; ಕೋಽಸೌ ? ಸ ಸಮಾನಃ । ಅತಶ್ಚ ವಿದುಷಃ ಸ್ವಾಪೋಽಪಿ ಅಗ್ನಿಹೋತ್ರಹವನಮೇವ ; ತಸ್ಮಾತ್ ವಿದ್ವಾನ್ ನಾಕರ್ಮಾತ್ಯೇವಂ ಮನ್ತವ್ಯಃ ಇತ್ಯಭಿಪ್ರಾಯಃ । "ಸರ್ವದಾ ಸರ್ವಾಣಿ ಭೂತಾನಿ ಚಿನ್ವನ್ತ್ಯಪಿ ಸ್ವಪತೋ" (ಶ. ಬ್ರಾ. ೧೦-೫-೩-೧೫) ಇತಿ ಹಿ ವಾಜಸನೇಯಕೇ ॥

(ಭಾಷ್ಯಾರ್ಥ)

ಇಲ್ಲಿ ಉಚ್ಛ್ವಾಸನಿಃಶ್ವಾಸವೆಂಬೀ ಎರಡು ಅಗ್ನಿಹೋತ್ರದ ಆಹುತಿಗಳಂತೆ ಯಾವಾಗಲೂ ಎರಡೆಂಬ ಹೋಲಿಕೆಯಿರುವದರಿಂದಲೇ[4] (ಆಹುತಿಗಳಾಗಿರುವ)

1. ಆಪಾನವು ಗಾರ್ಹಪತ್ಯವೆಂಬುದನ್ನು ತಿಳಿಸುವದಕ್ಕೆ ಕಾರಣವನ್ನು ಕೊಡುವದ ಕ್ಕೋಸ್ಕರ ಮುಂದೆ ಇರುವ ವಾಕ್ಯವನ್ನು ಕೈಬಿಟ್ಟು "ಯದ್ವಾಹಪತ್ಯಾತ್" ಎಂಬ ವಾಕ್ಯಕ್ಕೆ ಮೊದಲು ಭಾಷ್ಯವನ್ನು ಬರೆದಿರುತ್ತಾರೆ.

2. ಭಾಂ. ೩-೧೩-೩ರಲ್ಲಿ ವ್ಯಾನವು ಹೃದಯದ ಬಲರಂಧ್ರದಿಂದ ಹೊರಟುಂಬರುತ್ತಿರುವದೆಂದು ಹೇಳಿದೆ.

3. ಈ ವಾಕ್ಯವನ್ನು ಸೂ. ಭಾ. ೩-೩-೪೪ರಲ್ಲಿ ಉದಾಹರಿಸಿದೆ ; ಅಲ್ಲಿಯ ಪಾಠವನ್ನು ಅಂಗೀಕರಿಸಿ "ಚಿನ್ವನ್ತಿ" ಎಂದು ಇಲ್ಲಿಯೂ ಬರೆದುಕೊಂಡಿರುತ್ತೇವೆ.

4. ಉಚ್ಛ್ವಾಸನಿಃಶ್ವಾಸಗಳನ್ನು ಆಹುತಿಗಳೆಂದು ಭಾವಿಸುವದಕ್ಕೆ ಅವು ಎರಡೆಂಬುದೇ ಹೋಲಿಕೆ.

ಈ ಎರಡು ಆಹುತಿಗಳನ್ನು ಸಮವಾಗಿ ಎಂದರೆ ಸಮತೆಯಿಂದ ಶರೀರವ್ಯ ಇದ್ದುಕೊಂಡಿರುವದಕ್ಕೋಸ್ಕರ ಒಯ್ಯುತ್ತಿರುವ ವಾಯುವಿದೆಯಲ್ಲ, ಆ ಕಾರಣದಿಂದ ಅದು ಅಗ್ನಿಹೋತ್ರದ ಹೋಮಕರ್ತೃವಾಗಿರುತ್ತದೆ. (ಆದು) ಅಗ್ನಿಯ ಸ್ಥಾನದಲ್ಲಿಯೂ ಇರುವದಾದರೂ[1] ಹೋಮಕರ್ತೃವು. ಏಕೆಂದರೆ ಅದು ಆಹುತಿಗಳೆರಡನ್ನೂ (ಅವನಂತೆ) ಒಯ್ಯುತ್ತದೆ. ಅದು[2] ಯಾವದು ? ಎಂದರೆ ಅದು ಸಮಾನ(ವಾಯು)ವು. ಆದ್ದರಿಂದ ಜ್ಞಾನಿಯು ನಿದ್ರೆಯೂ ಅಗ್ನಿಹೋತ್ರದ ಹೋಮವೇ ; ಆದ್ದರಿಂದ ಜ್ಞಾನಿಯು ಅಕರ್ಮಿ ಎಂದು ಭಾವಿಸಬಾರದು ಎಂದು ಭಾವ.[3] ನಿದ್ರೆಮಾಡುತ್ತಿರುವ ಈತನಿಗಾಗಿ ಎಲ್ಲಾ ಪ್ರಾಣಿಗಳೂ ಯಾವಾಗಲೂ "ಚಯನಮಾಡುತ್ತಿರುವವು" (ಶ. ಬ್ರಾ. ೧೦-೫-೩-೧೫) ಎಂದಲ್ಲವೆ, ವಾಜಸನೇಯಕ(ಬ್ರಾಹ್ಮಣದಲ್ಲಿ)ರುವದು ?

(ಭಾಷ್ಯ)

೫ಲ. ಅತ್ರ ಹಿ ಜಾಗ್ರತ್ಸು ಪ್ರಾಣಾಗ್ನಿಷು ಉಪಸಂಹೃತ್ಯ ಬಾಹ್ಯಕರಣಾನಿ ವಿಷಯಾಂಶ್ಚ ಅಗ್ನಿಹೋತ್ರಫಲಮಿವ ಸ್ವರ್ಗಂ ಬ್ರಹ್ಮ ಜಿಗಮಿಷುಃ[4] ಮನಃ ಹ ವಾವ ಯಜಮಾನಃ ಜಾಗರ್ತಿ | ಯಜಮಾನವತ್ ಕಾರ್ಯಕರಣೇಷು ಪ್ರಾಧಾನ್ಯೇನ ಸಂವ್ಯವಹಾರಾತ್ ಸ್ವರ್ಗಮಿವ ಬ್ರಹ್ಮ ಪ್ರತಿ ಪ್ರಸ್ಥಿತತ್ವಾತ್ ಯಜಮಾನೋ ಮನಃ ಕಲ್ಪ್ಯತೇ | ಇಷ್ಟಫಲಂ ಯಾಗಫಲಮೇವ ಉದಾನೋ ವಾಯುಃ | ಉದಾನನಿಮಿತ್ತತ್ವಾತ್ ಇಷ್ಟಫಲಪ್ರಾಪ್ತೇಃ | ಕಥಮ್ ? ಸಃ ಉದಾನಃ ಏನಂ[5] ಮನಏಖ್ಯಂ ಯಜಮಾನಂ ಸ್ವಪ್ನವೃತ್ತಿರೂಪಾದಪಿ ಪ್ರಚ್ಯಾವ್ಯ ಅಹರಹಃ ಸುಷುಪ್ತಿಕಾಲೇ ಸ್ವರ್ಗಮಿವ ಬ್ರಹ್ಮ ಅಕ್ಷರಂ ಗಮಯತಿ | ಅತೋ ಯಾಗಫಲಸ್ಥಾನೀಯ ಉದಾನಃ ||

---

1. ಪ್ರಾಣಾಗ್ನಿಗಳು ಎಂಬ ಹೋಲಿಕೆಯಲ್ಲಿ ಅಗ್ನಿಯಾಗಿರುವ ಸಮಾನವು ಇಲ್ಲಿ ಆಹುತಿಗಳನ್ನು ಒಯ್ಯುವದರಿಂದ ಹೋತೃವೂ, (ಹೋಮಕರ್ತೃವೂ) ಆಗಿರುತ್ತದೆ-ಎಂದು ಭಾವ.

2. ಆ ಹೋಮಕರ್ತೃ ಯಾವದು ? ಉಚ್ಛ್ವಾಸನಿಃಶ್ವಾಸಗಳನ್ನು ಸಮವಾಗಿಟ್ಟುಕೊಂಡು ಇರುವ ಪ್ರಾಣಭೇದವು ಯಾವದು ?

3. ಪ್ರಾಣಗಳೈದೂ ಅಗ್ನಿಹೋತ್ರಕ್ಕೆ ಬೇಕಾದ ಅಗ್ನಿಗಳಂತೆ, ಹೋಮಕರ್ತೃವಿನಂತೆ ಇರುವದರಿಂದ ಅವೂ ಅಗ್ನಿಹೋತ್ರವನ್ನೇ ಮಾಡುತ್ತಿರುವವು—ಎಂದು ಭಾವಿಸುವ ಉಪಾಸಕನು ಆಪ್ತರಿಂದಲೇ ಕರ್ಮವನ್ನು ಮಾಡಿದಂತೆ ಆಗುತ್ತದೆ ಎಂದು ಭಾವ. ಇಲ್ಲಿ ಉಪಾಸಕನನ್ನು ಹೊಗಳಿದ್ದರೂ ಜ್ಞಾನಪ್ರಕರಣದಲ್ಲಿರುವ ಉಪಾಸನೆಗೆ ಕೈಮುಮುಕ್ತಿಯೇ ಫಲವಾಗಿರುವದರಿಂದ ಇದು ಜ್ಞಾನದ ಸ್ತುತಿಯೂ ಆಗಿರುತ್ತದೆ ಎಂದು ತಿಳಿಯಬೇಕು.

4 "ಜಿಗಮಿಷುಃ" ಎಂದೇ ಆಚ್ಚಿನ ಪುಸ್ತಕಗಳಲ್ಲಿದೆ. ಮನಸ್ಸಿಗೆ ವಿಶೇಷಣವಾಗಿರುವದರಿಂದ ಜಿಗಮಿಷು ಎಂದಿದ್ದರೇ ಉತ್ತಮವೆಂದು ತೋರುವದು.

5. ಇದು ಅ॥ ಪಾಠದ ಭಾಷ್ಯದಲ್ಲಿ ಬಿಟ್ಟುಹೋಗಿದೆ.

(ಭಾಷ್ಯಾರ್ಥ)

ಇಲ್ಲಿ ಪ್ರಾಣಾಗ್ನಿಗಳು ಎಚ್ಚತ್ತಿರುವಲ್ಲಿ ಹೊರಗಿನ ಕರಣಗಳನ್ನೂ ವಿಷಯುಗಳನ್ನೂ ಉಪಸಂಹಾರಮಾಡಿಕೊಂಡು ಅಗ್ನಿಹೋತ್ರದ ಫಲವಾದ ಸ್ವರ್ಗದಂತಿರುವ ಬ್ರಹ್ಮವನ್ನು ಹೋಗಿ ಸೇರಲಿರುವ ಮನಸ್ಸೆಂಬ ಯಜಮಾನನು[2] (ತಾನು) ಎಚ್ಚತ್ತಿರುತ್ತಾನೆ. ಯಜಮಾನನೆಂತೆ ಕಾರ್ಯಕರಣಗಳ ವಿಷಯದಲ್ಲಿ ಮುಖ್ಯವಾಗಿ ವ್ಯವಹರಿಸುತ್ತಿರುವದರಿಂದಲೂ (ಅಗ್ನಿಹೋತ್ರಿಯು) ಸ್ವರ್ಗಕ್ಕೆ (ಹೋಗಲಿರುವಂತೆ) ಬ್ರಹ್ಮವನ್ನು ಕುರಿತು ಹೊರಟಿರುವದರಿಂದಲೂ ಮನಸ್ಸನ್ನು ಯಜಮಾನನು ಎಂದು ಕಲ್ಪಿಸಿರುತ್ತದೆ. ಇಷ್ಟಫಲವೇ ಎಂದರೆ (ಈ) ಯಾಗದ ಫಲವೇ ಉದಾನವಾಯುವು. ಏಕೆಂದರೆ ಇಷ್ಟಫಲವನ್ನು ಕೊರಕುವದು ಉದಾನ (ವಾಯುವಿನ) ನಿಮಿತ್ತದಿಂದ. ಅದು ಹೇಗೆ? ಎಂದರೆ ಆ ಉದಾನ(ವಾಯುವು) ಈ ಮನಸ್ಸೆಂಬ ಯಜಮಾನನನ್ನು ಸ್ವಪ್ನವೃತ್ತಿಯ ರೂಪದಿಂದಲೂ ತಪ್ಪಿಸಿ ತನ್ನ ನಿದ್ರೆಯು ಸಮಯದಲ್ಲಿ ದಿನದಿನವೂ (ಅಗ್ನಿಹೋತ್ರಿಯನ್ನು) ಸ್ವರ್ಗಕ್ಕೆ (ಒಯ್ಯುವಂತೆ) ಬ್ರಹ್ಮವನ್ನು ಎಂದರೆ ಅಕ್ಷರವನ್ನು ಪಡೆಯಿಸುತ್ತಿರುವದು.[3] ಅದ್ದರಿಂದ ಉದಾನವು ಯಾಗದ ಫಲದಂತೆ ಇರುತ್ತದೆ.

ಭಾಷ್ಯ)

೫೯. ಏವಂವಿದುಷಃ ಶ್ರೋತ್ರಾದ್ಯುಪರಮಕಾಲಾದಾರಭ್ಯ ಯಾವತ್ ಸುಪ್ತೋತ್ಥಿತೋ ಭವತಿ ತಾವತ್ ಸರ್ವಯಾಗಫಲಾನುಭವ ಏವ ನ ಅವಿದುಷಾಮಿವ ಅನರ್ಥಾಯ ಇತಿ ವಿದ್ವತ್ತಾ ಸ್ತೂಯತೇ। ನ ಹಿ ವಿದುಷ ಏವ ಶ್ರೋತ್ರಾದೀನಿ ಸ್ವಪಂತೇ। ಪ್ರಾಣಾಗ್ನಯೋ ವಾ ಜಾಗ್ರತಿ, ಜಾಗ್ರತ್ಸ್ವಪ್ನಯೋರ್ಮನಃ ಸ್ವಾತಂತ್ರ್ಯಮ್ ಅನುಭವತ್ ಆಹರಹಃ ಸುಷುಪ್ತಂ ವಾ ಪ್ರತಿಪದ್ಯತೇ। ಸಮಾನಂ ಹಿ ಸರ್ವಪ್ರಾಣಿನಾಂ ಪರ್ಯಾಯೇಣ ಜಾಗ್ರತ್ಸ್ವಪ್ನ ಸುಷುಪ್ತಿಗಮನಮ್। ಅತೋ ವಿದ್ವತ್ತಾಸ್ತುತಿರೇವೇಯಮ್ ಉಪಪದ್ಯತೇ ॥

(ಭಾಷ್ಯಾರ್ಥ)

ಈ ರೀತಿಯಲ್ಲಿ ತಿಳಿದಿರುವವನಿಗೆ ಶ್ರೋತ್ರಾದಿಗಳು ಸುಮ್ಮನಾದ ಕಾಲದಿಂದ ಹಿಡಿದು (ಅವನು) ಮತ್ತೆ ನಿದ್ರೆಯಿಂದ ಎಚ್ಚರವಾಗುವವರೆಗೂ ಯಾಗ ಫಲವನ್ನೆಲ್ಲ ಅನುಭವಿಸುತ್ತಿರುವದೇ ಹೊರತು ಅಜ್ಞಾನಿಗಳಂತೆ ನಿಷ್ಪ್ರಯೋಜನ

---

1. ಸ್ವಪ್ನದಲ್ಲಿ.

2. ಯಾಗಕರ್ತನು.

3. ಬ್ರಹ್ಮಪ್ರಾಪ್ತಿಯಿಂದ ಆಗುವ ಆನಂದವು ಈ ಉಪಾಸಕನಿಗೆ ಉದಾನದ ಮೂಲಕ ದೊರೆಯುತ್ತದೆ.

4. ಪ್ರಾಣಾಗ್ನಿಗಳ ಉಪಾಸಕನಿಗೆ.

ವಾಗಿರುವದಿಲ್ಲ.[1] ಎಂದು ಜ್ಞಾನವನ್ನು ಹೊಗಳಿರುತ್ತದೆ. ಏಕೆಂದರೆ ಶ್ರೋತ್ರಾದಿಗಳು ನಿದ್ರೆಹೋಗುತ್ತವೆ ಎಂಬುದಾಗಲಿ, ಪ್ರಾಣಾಗ್ನಿಗಳು ಎಚ್ಚರಿತ್ತಿರುವನೆಂಬುದಾಗಲಿ, ಎಚ್ಚರಕನಸುಗಳಲ್ಲಿ ಮನಸ್ಸು ಸ್ವಾತಂತ್ರ್ಯವನ್ನು ಅನುಭವಿಸಿ ದಿವದಿನವೂ ತನ್ನನಿದ್ರೆಯನ್ನು ಅನುಭವಿಸುತ್ತದೆ–ಎಂಬುದಾಗಲಿ ಜ್ಞಾನಿಸೊಬ್ಬನಿನೇ (ಆಗುವ)ದಿಲ್ಲ[2]. ಎಚ್ಚರಕನಸುನಿದ್ರೆಗಳನ್ನು ಒಂದಾಗುತ್ತಲೊಂದನ್ನು ಅನುಭವಿಸುತ್ತಿರುವದೆಂಬುದು ಎಲ್ಲಾ ಪ್ರಾಣಿಗಳಿಗೂ ಸಮಾನವಾಗಿಯೇ ಇರುತ್ತದೆಯಷ್ಟೆ. ಆದ್ದರಿಂದ ಇದು ಜ್ಞಾನಿಯಾಗಿರುವದರ ಸ್ತುತಿಯೇ ಎಂಬುದೇ ಯುಕ್ತ.[3]

ಮನಸ್ಸಿಗೆ ಸ್ವಪ್ನಾನುಭವ

(ಭಾಷ್ಯ)

ಓಂ. ಯತ್ ಪೃಷ್ಟಂ ಕತರ ಏಷ ದೇವಃ ಸ್ವಪ್ನಾನ್ ಪಶ್ಯತೀತಿ, ತದಾಹ-

(ಭಾಷ್ಯಾರ್ಥ)

ಕನಸನ್ನು ಕಾಣುವನಲ್ಲ, ಈ ದೇವನು ಯಾರು ? ಎಂದು ಕೇಳಿತ್ತಷ್ಟೆ. ಅದಕ್ಕೆ (ಈಗ ಉತ್ತರವನ್ನು) ಹೇಳುತ್ತಾನೆ :—

(ಭಾಷ್ಯಾರ್ಥ)

ಅತ್ರೈಷ ದೇವಃ ಸ್ವಪ್ನೇ ಮಹಿಮಾನಮನುಭವತಿ । ಯದ್ದೃಷ್ಟಂ ದೃಷ್ಟಮನುಪಶ್ಯತಿ ಶ್ರುತಂ ಶ್ರುತಮೇವ ಅರ್ಥಮನುಶೃಣೋತಿ ದೇಶದಿಗನ್ತರೈಶ್ಚ ಪ್ರತ್ಯನುಭೂತಂ ಪುನಃ ಪುನಃ ಪ್ರತ್ಯನುಭವತಿ ದೃಷ್ಟಂ ಚಾದೃಷ್ಟಂ ಚ ಶ್ರುತಂ ಚಾಶ್ರುತಂ ಚಾನನುಭೂತಂ ಚಾನನುಭೂತಂ ಚ ಸಚ್ಚಾಸಚ್ಚ ಸರ್ವಂ ಪಶ್ಯತಿ ಸರ್ವಃ ಪಶ್ಯತಿ ॥ ೫ ॥

೫. ಈ ಸ್ವಪ್ನದಲ್ಲಿ ಈ ದೇವನು ಮಹಿಮೆಯನ್ನು ಅನುಭವಿಸುತ್ತಾನೆ. ನೋಡಿನೋಡಿದ್ದನ್ನು ಮತ್ತೆ ನೋಡುತ್ತಿರುತ್ತಾನೆ, ಕೇಳಿ ಕೇಳಿದ್ದ ವಿಷಯವನ್ನೇ ಮತ್ತೆ ಕೇಳುತ್ತಿರುತ್ತಾನೆ. ದೇಶದಿಗಂತರಗಳಲ್ಲಿ ಅನುಭವಿಸಿದ್ದನ್ನು ಮತ್ತೆ ಮತ್ತೆ ಅನುಭವಿಸುತ್ತಿರುತ್ತಾನೆ. ಕಂಡದ್ದು ಕಾಣದೆ ಇರುವದು ; ಕೇಳಿದ್ದು ಕೇಳದೆ ಇರುವದು ; ಅನುಭವಿಸಿದ್ದು

---

1. ಅಜ್ಞಾನಿಗಳೂ ಸುಷುಪ್ತಿಯಲ್ಲಿ ಬ್ರಹ್ಮವನ್ನೇ ಸೇರುವರಾದರೂ ಅವರಿಗೆ ಅದರ ಪ್ರಯೋಜನವಾಗುವದಿಲ್ಲ. ಇದಕ್ಕೆ ಅವರಿಗೆ ಈ ಭಾವನೆಯಿಲ್ಲದಿರುವದೇ ಕಾರಣ.

2. ಛಾ. ಭಾ. ಲ-ಶಿರಲ್ಲಿ "ವಿವಂವಿತ್" ಎಂಬುದರ ವ್ಯಾಖ್ಯಾನವನ್ನು ನೋಡಿ.

3. ಜ್ಞಾನಿಗೆ ಆಗುವ ಅವಸ್ಥಾತ್ರಯದ ಅನುಭವವೇ ಬೇರೆ ಎಂದೇನೂ ಅಭಿಪ್ರಾಯವಿಲ್ಲ ; ಎಲ್ಲರಿಗೂ ಆಗುವ ಅನುಭವವು ಜ್ಞಾನಿಗೆ ಜ್ಞಾನದ ಬಲದಿಂದ ವಿಲಕ್ಷಣಫಲಪ್ರದವಾಗುತ್ತದೆ ಎಂದು ಭಾವ. ಉತ್ಕ್ರಾಂತಿವಿಚಾರವೂ ಹೀಗೆಯೇ ಜ್ಞಾನಿಗೂ ಅಜ್ಞಾನಿಗೂ ಸಮಾನವಾದರೂ ಆತ್ಮನಲ್ಲಿ ಸೇರಿದ ಜ್ಞಾನಿಗೆ ಮತ್ತೆ ಪುನರಾವೃತ್ತಿಯಿಲ್ಲ. ಸೂ. ಭಾ. ೪-೩-೭.

ಅನುಭವಿಸಿದೆ ಇರುವದು; ಇರುವದು, ಇಲ್ಲದ್ದು—ಇವೆಲ್ಲವನ್ನೂ ಕಾಣುತ್ತಿದ್ದಾನೆ. ಎಲ್ಲವೂ ಆಗಿ ಕಾಣುತ್ತಾನೆ.

(ಭಾಷ್ಯ)

೬. ಅತ್ರ ಖಲು ಶರೀರೇಷು ಶ್ರೋತ್ರಾದಿಷು ದೇಹರಕ್ಷಾಯೈ ಜಾಗ್ರತ್ಸು ವ್ಯಾಪಾರವತಾಮಪಿ ಪ್ರಾಕ್ ಸುಷುಪ್ತೇಃ ಪ್ರತಿಸಂತ್ತೇಃ ಏತಸ್ಮಿನ್ ಅನ್ತರಾಲೇ ಏಷ ದೇವಃ ಅರ್ಕರಶ್ಮಿವತ್ ಸ್ವಾತ್ಮನಿ ಸಂಹೃತಶ್ರೋತ್ರಾದಿಕರಣಃ ಸ್ವಪ್ನೇ ಮಹಿಮಾನಂ ವಿಭೂತಿಂ ವಿಷಯನಿಷ್ಪಾದಿತಲಕ್ಷಣಮ್ ಅನೇಕಾತ್ಮಭಾವ ಗಮನಮಿವ ಅನುಭವತಿ ಪ್ರತಿಪದ್ಯತೇ[1].

(ಭಾಷ್ಯಾರ್ಥ)

ಇಲ್ಲಿ, ಎಂದರೆ ಶ್ರೋತ್ರವೇ ಮುಂತಾದವುಗಳು ಸುಮ್ಮನಾಗಿ, ದೇಹದ ರಕ್ಷಣೆಗಾಗಿ ಪ್ರಾಣವೇ ಮುಂತಾದ ವಾಯುಗಳು ಎಚ್ಚೆತ್ತಿರುವಲ್ಲಿ ತನಿನಿದ್ರೆಯನ್ನು ಪಡೆಯುವ ಮುಂಚೆ, ಈ ನಡುವಣ (ಕಾಲ)ದಲ್ಲಿ, ಈ ದೇವನು ಸೂರ್ಯಕಿರಣಗಳಂತೆ ತನ್ನಲ್ಲಿ ಶ್ರೋತ್ರಾದಿಕರಣಗಳನ್ನು ಉಪಸಂಹಾರಮಾಡಿಕೊಂಡು, ಸ್ವಪ್ನದಲ್ಲಿ ಮಹಿಮೆಯನ್ನು ಎಂದರೆ ವಿಷಯವಾಗಿಯೂ ವಿಷಯಿಯಾಗಿಯೂ ಇರುವದೆಂಬ ವಿಭೂತಿಯನ್ನು, ಅನೇಕ ಸ್ವರೂಪವನ್ನು ಹೊಂದುವಿಕೆಯನ್ನು ಅನುಭವಿಸುತ್ತಾನೆ, ಪಡೆಯುತ್ತಾನೆ.

ಮನಸ್ಸಿನ ಸ್ವತಂತ್ರತ್ವದ ಬಗ್ಗೆ ಆಕ್ಷೇಪಸಮಾಧಾನಗಳು

(ಭಾಷ್ಯ)

೬. ನನು ಮಹಿಮಾನುಭವನೇ ಕರಣಂ ಮನಃ ಅನುಭವಿತುಃ | ತತ್ ಕಥಂ ಸ್ವಾತನ್ತ್ರ್ಯೇಣ "ಅನುಭವತಿ" ಇತ್ಯುಚ್ಯತೇ | ಸ್ವತನ್ತ್ರೋ ಹಿ ಕ್ಷೇತ್ರಜ್ಞಃ | ನೈಷ ದೋಷಃ | ಕ್ಷೇತ್ರಜ್ಞಸ್ಯ ಸ್ವಾತನ್ತ್ರ್ಯಸ್ಯ ಮನಉಪಾಧಿಕೃತತ್ವಾತ್ | ನ ಹಿ ಕ್ಷೇತ್ರಜ್ಞಃ ಪರಮಾರ್ಥತಃ ಸ್ವಪಿತಿ, ಜಾಗರ್ತಿ ವಾ | ಮನಉಪಾಧಿಕೃತ ಮೇವ ತಸ್ಯ ಜಾಗರಣಂ ಸ್ವಪ್ನಶ್ಚ ಇತ್ಯುಕ್ತಂ[3] ವಾಜಸನೇಯಕೇ[4] "ಸಧೀಃ

---

1. "ಆರ್ಕೋ ರಶ್ಮಿವತ್" ಎಂದು ಪಾಠವಿದ್ದರೆ ಸೂರ್ಯನು ಕಿರಣಗಳನ್ನು ಉಪಸಂಹಾರಮಾಡಿಕೊಳ್ಳುವಂತೆ ಎಂದು ಸರಳವಾಗಿ ಅರ್ಥವಾಗುತ್ತದೆ.

2. ಮನಸ್ಸೇ ಎಲ್ಲವೂ ಆಗಿ ತೋರಿಕೊಳ್ಳುತ್ತದೆ. ಮನಸ್ಸಿಗಿಂತ ಬೇರೆ ಯಾವ ವಿಷಯವೂ ಇರುವದಿಲ್ಲ.

3. ವಾ। ಪಾಠದಲ್ಲಿ "ಉಕ್ತಂ" ಎಂದಿಷ್ಟೇ ಪಾಠವಿದೆ.

4. ಸೂ. ಭಾ. ೩-೩-೪೦ರಲ್ಲಿ "ಸಧೀಃ ಸ್ವಪ್ನೋ ಭೂತ್ವೇಮಂ ಲೋಕಮತಿಕ್ರಾಮತಿ" ಎಂದು ಈ ವಾಕ್ಯವು ಉದಾಹೃತವಾಗಿದೆ. ಆದ್ದರಿಂದ "ಧ್ಯಾಯತೀವ ಲೇಲಾಯತೀವ" ಎಂಬುದು ಹಿಂದಿನ ವಾಕ್ಯಭಾಗವೆಂದೂ ಮತ್ತೊಂದು ಪ್ರಮಾಣವಾಕ್ಯವೆಂದೂ ಗಣಿಸಲಾಗಿದೆ.

ಸ್ವಪ್ನೋ ಭೂತ್ವಾ" (ಬೃ. ಮಾ. ೪-೩-೭) "ಧ್ಯಾಯತೀವ ಲೇಲಾಯತೀವ" (ಬೃ. ೪-೩-೭) ಇತ್ಯಾದಿ | ತಸ್ಮಾತ್ ಮನಸೋ ವಿಭೂತ್ಯನುಭವೇ ಸ್ವಾತನ್ತ್ರ್ಯವಚನಂ ನ್ಯಾಯ್ಯಮೇವ ||

(ಭಾಷ್ಯಾರ್ಥ)

(ಆಕ್ಷೇಪ) :—ಅನುಭವಿಸುವವನಿಗೆ ಮಹಿಮೆಯನ್ನು ಅನುಭವಿಸುವದಕ್ಕೆ ಮನಸ್ಸು ಕರಣವಾಗಿರುತ್ತದೆ. ಹೀಗಿರುವಲ್ಲಿ (ಅದು) ಸ್ವತಂತ್ರವಾಗಿ "ಅನುಭವಿಸುತ್ತದೆ" ಎಂದು ಹೇಳಿದ್ದು ಹೇಗೆ? ಕ್ಷೇತ್ರಜ್ಞನಲ್ಲವೆ, ಸ್ವತಂತ್ರನು?

(ಸಮಾಧಾನ) :—ಇದು ತಪ್ಪಲ್ಲ. ಏಕೆಂದರೆ ಕ್ಷೇತ್ರಜ್ಞನ ಸ್ವಾತಂತ್ರ್ಯವು ಮನಸ್ಸೆಂಬ ಉಪಾಧಿಯಿಂದಾಗಿರುತ್ತದೆ. ಕ್ಷೇತ್ರಜ್ಞನು ನಿಜವಾಗಿ ನೋಡಿದರೆ ತಾನೇ ನಿದ್ರಿಸುವದೂ ಇಲ್ಲ, ಎಚ್ಚತ್ತಿರುವದೂ ಇಲ್ಲ. ಮನಸ್ಸೆಂಬ ಉಪಾಧಿಯಿಂದಲೇ ಅವನಿಗೆ ಎಚ್ಚರವೂ ಕನಸೂ ಆಗುತ್ತಿರುವವು-ಎಂದು ವಾಜಸನೇಯಕದಲ್ಲಿ "ಅವನು ಬುದ್ಧಿಯಿಂದ ಕೂಡಿ ಕನಸ(ನ್ನು ಕಾಣುವವ)ನಾಗಿ (ಈ ಲೋಕವನ್ನು ಅತಿಕ್ರಮಿಸುತ್ತಾನೆ)" (ಬೃ. ಮಾ. ೪-೩-೭) "ಅವನು ಸಮಾನವಾಗಿ ಎರಡು ಲೋಕಗಳನ್ನೂ ಒಂದೊಂದಾಗಿ ಸಂಚರಿಸುತ್ತಿರುತ್ತಾನೆ) ಚಿಂತಿಸುವಂತೆಯೂ, ಚಲಿಸುತ್ತಿರುವಂತೆಯೂ (ತೋರುತ್ತಿರುತ್ತಾನೆ)" (ಬೃ. ೪-೩-೭) ಎಂದು ಮುಂತಾಗಿ (ಹೇಳಿರುತ್ತದೆ). ಆದ್ದರಿಂದ ಮನಸ್ಸೇ ಮಹಿಮೆಯನ್ನನುಭವಿಸುವದಕ್ಕೆ ಸ್ವತಂತ್ರವಾಗಿರುವದೆಂದು ಹೇಳಿದ್ದು ಸರಿಯೇ.[1]

ಸ್ವಯಂಜ್ಯೋತಿಷ್ಟ್ವಾದ ಚರ್ಚೆ

(ಭಾಷ್ಯ)

೬೩. ಮನೆಉಪಾಧಿಸಹಿತತ್ವೇ ಸ್ವಪ್ನಕಾಲೇ ಕ್ಷೇತ್ರಜ್ಞಸ್ಯ ಸ್ವಯಂಜ್ಯೋತಿಷ್ಟ್ವಂ ಬಾಧ್ಯೇತ ಇತಿ ಕೇಚಿತ್ | ತನ್ನ| ಶ್ರುತ್ಯರ್ಥಾಪರಿಜ್ಞಾನಕೃತಾ ಭ್ರಾನ್ತಿಸ್ತೇಷಾಮ್ | ಯಸ್ಮಾತ್ ಸ್ವಯಂಜ್ಯೋತಿಷ್ಟ್ವಾದಿವ್ಯವಹಾರೋಽಪಿ ಅವೋಕ್ವಾನ್ತಃ ಸರ್ವೋಽವಿದ್ಯಾವಿಷಯ ಏವ ಮನೆಅದ್ಯುಪಾಧಿಜನಿತಃ | "ಯತ್ರ ವಾ ಅನ್ಯದಿವ ಸ್ಯಾತ್ ತತ್ರಾನ್ಯೋಽನ್ಯತ್ ಪಶ್ಯೇತ್" (ಬೃ. ೪-೩-೩೧), "ಮಾತ್ರಾಸಂಸರ್ಗಸ್ತ್ವಸ್ಯ ಭವತಿ" (ಬೃ. ಮಾ. ೪-೩-೧೪) "ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್" (ಬೃ. ೪-೫-೧೫) ಇತ್ಯಾದಿಶ್ರುತಿಭ್ಯಃ | ಅತೋ ಮನ್ದಬ್ರಹ್ಮವಿದಾಮೇವ ಇಯಮಾಶಙ್ಕಾ ನ ತು ಏಕಾತ್ಮವಿದಾಮ್ ||

---

1. ನಿಜವಾಗಿ ಮನಸ್ಸು ಜಡವಾಗಿರುವದರಿಂದ ಅದಕ್ಕೂ ಈ ಸ್ವಾತಂತ್ರ್ಯವಿಲ್ಲ. ಆದರೂ ಆತ್ಮನಿಗೆ ಉಪಾಧಿಯಿಂದಲೇ ಅವಸ್ಥಾವತ್ತ್ವವೆಂಬುದನ್ನು ತಿಳಿಸುವದಕ್ಕೆ ಈ ಸ್ವಾತಂತ್ರ್ಯವನ್ನು ಮನಸ್ಸಿನಲ್ಲಿ ಅಧ್ಯಾರೋಪಮಾಡಿದೆ. ಸೂ. ೦-೩-೦೩.

(ಭಾಷ್ಯಾರ್ಥ)

ಈಸಿನ ಕಾಲದಲ್ಲಿ ಮನಸ್ಸೆಂಬ ಉಪಾಧಿಯಿದ್ದರೆ ಕ್ಷೇತ್ರಜ್ಞನು ಸ್ವಯಂ ಜ್ಯೋತಿ ಎಂಬುದು ಸುಳ್ಳಾಗುತ್ತದೆ—[1] ಎಂದು ಕೆಲವರು ಹೇಳುತ್ತಾರೆ. ಅದು ಸರಿಯಲ್ಲ. ಶ್ರುತಿಯ ಅರ್ಥವನ್ನು ತಿಳಿಯುವ ಜನರಿಗೆ (ಈ) ಭ್ರಾಂತಿಯಾಗಿರುತ್ತದೆ. ಏಕೆಂದರೆ ಸ್ವಯಂಜ್ಯೋತಿಯಾಗಿರುವವೇ ಮುಂತಾದ[2] ಮೋಕ್ಷದವರೆಗಿನ ವ್ಯವಹಾರವೆಲ್ಲವೂ[3] ಮನಸ್ಸೇ ಮುಂತಾದ ಉಪಾಧಿಯಿಂದಾಗಿರುವದರಿಂದ[4] ಅವಿದ್ಯಾ ವಿಷಯವೇ ಆಗಿರುತ್ತದೆ. "ಎಲ್ಲಿಯೇ ಮತ್ತೊಂದು ಇದ್ದಂತೆ[5] ಆಗಿರುವದೋ ಅಲ್ಲಿ ಒಬ್ಬನು ಇನ್ನೊಂದನ್ನು ಕಾಣಬಹುದು" (ಬೃ. ೪-೫-೧೫) "ಆದರೆ (ಘ್ರಾಣೇಂದ್ರಿಯಗಳ) ವಾಸ್ತೈಗಳ ಸಂಬಂಧವು[6] ಅವನಿಗೆ ಇಲ್ಲದೆಹೋಗುವದು" (ಬೃ. ಮಾ. ೪-೫-೧೪) "ಆದರೆ ಎಲ್ಲಿ ಇವನಿಗೆ ಎಲ್ಲವೂ ಆತ್ಮನೇ ಆಯಿತೋ ಅಲ್ಲಿ ಏತಿಂದ ಯಾವನ್ನು ನೋಡಬೇಕು?" (ಬೃ. ೪-೫-೧೫)—ಇವೇ ಮುಂತಾದ ಶ್ರುತಿಗಳು ಇಲ್ಲಿ ಪ್ರಮಾಣವು. ಆದ್ದರಿಂದ ಈ ಆಕ್ಷೇಪವು ಅಲ್ಪಬ್ರಹ್ಮ ಪ್ರಜ್ಞಿತವರು[7] ಮಾಡುವದೇ ಹೊರತು ವಿಕಾಶ್ಮವನ್ನು ಬಲ್ಲವರು[8] (ಮಾಡುವ) ದಲ್ಲ.

(ಭಾಷ್ಯ)

೬೪. ನನ್ವೇವಂ ಸತಿ "ಆತ್ಮಾಯಂ ಪುರುಷಃ ಸ್ವಯಂಜ್ಯೋತಿಃ" (ಬೃ. ೪-೩-೧೪) ಇತಿ ವಿಶೇಷಣಾನರ್ ಅನರ್ಥಕಂ ಭವತಿ | ಅತ್ರೋಚ್ಯತೇ| ಆತ್ಮಲ್ಪ

---

1. ಈಸಿನಲ್ಲಿ ಮನಸ್ಸಿನ ಸಂಬಂಧದಿಂದ ಕೊರತೆಯಾಗುತ್ತಾನೆ ಎನ್ನುವದು ಇಲ್ಲಿ ಆತ್ಮನು ಸ್ವಯಂಜ್ಯೋತಿಯಾಗಿರುತ್ತಾನೆಂದು ಹೇಳುವ ಶ್ರುತಿಗೆ ವಿರುದ್ಧವಾದದ್ದಾಗಿ ಎಂದು ಭಾವ.

2. ಸ್ವಯಂಜ್ಯೋತಿಯೆಂದರೆ ತಾನೇ ಬೆಳಗುವದು; ಮತ್ತೊಂದರಿಂದ ಬೆಳಗುವದಕ್ಕೆ ಹೋಲಿಸಿದರೆ ಆತ್ಮನು ಸ್ವಯಂಜ್ಯೋತಿಯು. ನಿಜವಾಗಿ ಸ್ವಯಂಜ್ಯೋತಿ ಎಂಬುದೂ ಸರಿಯಲ್ಲ.

3. ಬಂಧ, ಮೋಕ್ಷ–ಮುಂತಾದ ವ್ಯವಹಾರಗಳೂ ಪರಮಾರ್ಥವಲ್ಲ; ಅವಿದ್ಯಕವೇ. ಪಾಂ. ಕಾ. ೩–೫೨.

4. ಮನಸ್ಸು ಆತ್ಮನ ಬೆಳಕಿನ ಸಹಾಯದಿಂದ ಬೆಳಗುತ್ತಾ ವಿಷಯಗಳನ್ನು ಬೆಳಗುತ್ತದೆ. ಆತ್ಮನು ತಾನೇ ಬೆಳಗುತ್ತಾನೆ, ಮನಸ್ಸನ್ನೂ ಬೆಳಗುತ್ತಾನೆ. ಹೀಗೆಯೇ ಮನಸ್ಸಿನ ಉಪಾಧಿಯಿಂದಲೇ ಆತ್ಮನಿಗೆ ಬಂಧಮೋಕ್ಷಗಳಿವೆ –ಎಂದು ವ್ಯವಹಾರವುಂಟಾಗಿರುತ್ತದೆ.

5. ಇದ್ದಂತೆ ಎಂದದ್ದರಿಂದ ದ್ವೈತವು ತೋರುವದು ಅವಿದ್ಯೆಯಿಂದಲೇ ಎಂದಾಯಿತು.

6. ಜ್ಞಾನಿಗೆ ಅವಿದ್ಯಾಕೃತವಾದ ಇಂದ್ರಿಯಗಳ ಅಥವಾ ಭೂತಗಳ ಸಂಪರ್ಕವಿರುವದಿಲ್ಲ.

7. ಬ್ರಹ್ಮವು ಪರಿಚ್ಛಿನ್ನವಾಗಿದೆ ಎಂದು ಭಾವಿಸುವವರು.

8. ಬ್ರಹ್ಮವು ಅದ್ವಿತೀಯವಾಗಿರುವದರಿಂದ ಅನಂತವಾಗಿದೆ ಎಂದು ಅರಿತುಕೊಂಡಿರುವವರು.

ಮಿದಮುಚ್ಯತೇ | "ಯ ಏಷೋಽನ್ತರ್ಹೃದಯ ಆಕಾಶಸ್ತಸ್ಮಿಞ್ಛೇತೇ" (ಬೃ. ೨-೧-೧೭) ಇತ್ಯನ್ತರ್ಹೃದಯಪರಿಚ್ಛೇದೇ[1] ಸುತರಾಂ ಸ್ವಯಂಜ್ಯೋತಿಷ್ಟ್ವ ಬಾಧ್ಯೇತ | ಸತ್ಯಮ್ ಏವಮ್ | ಅಯಂ ದೋಷೋ ಯದ್ಯಪಿ ಸ್ಯಾತ್ ಸ್ವಪ್ನೇ ಕೇವಲತಯಾ ಸ್ವಯಂಜ್ಯೋತಿಷ್ಟ್ವೇನ ಅರ್ಧಂ ತಾವದಪನೀತಂ ಭವತಸ್ಯ ಇತಿ ಚೇತ್ | ನ | ತತ್ರಾಪಿ "ಪುರೀತತಿ ನಾಡೀಷು ಶೇತೇ" ಇತಿ ಶ್ರುತೇಃ ಪುರೀತನ್ನಾಡೀಸಂಬಂಧಾತ್ ಅತ್ರಾಪಿ[2] ಪುರುಷಸ್ಯ ಸ್ವಯಂಜ್ಯೋತಿಷ್ಟ್ವೇನ ಅರ್ಧ ಭಾರಾಪನಯಾಭಿಪ್ರಾಯೋ ಮೃಷ್ಯೈವ ||

(ಭಾಷ್ಯಾರ್ಥ)

(ಆಕ್ಷೇಪ) :–ಹಾಗಾದರೆ "ಇಲ್ಲಿ ಈ ಪುರುಷನು ಸ್ವಯಂಜ್ಯೋತಿಯಾಗಿರುವನು" (ಬೃ. ೪-೩-೯, ೧೪) ಎಂದು ವಿಶೇಷಣವನ್ನು ಕೊಟ್ಟದ್ದು ವ್ಯರ್ಥವಾಗುವದಲ್ಲಾ[3] !

(ಸಮಾಧಾನ) :–ಇದಕ್ಕೆ ಉತ್ತರವನ್ನು ಹೇಳುತ್ತೇನೆ. ನೀವು ಹೇಳಿದ್ದು ಬಹು ಸ್ವಲ್ಪವಾಯಿತು. "ಈ ಹೃದಯದ ಒಳಗಡೆ ಆಕಾಶವಿದೆಯಲ್ಲ, ಅದರಲ್ಲಿ ಮಲಗಿರುತ್ತಾನೆ" (ಬೃ. ೨-೧-೧೭) ಎಂದು ಹೃದಯದೊಳಗಡೆ ಎಂಬ ಪರಿಚ್ಛೇದವಿರುವಲ್ಲಿ[4] ಸ್ವಯಂಜ್ಯೋತಿಷ್ಟ್ವಕ್ಕೆ ಇನ್ನೂ ಹೆಚ್ಚಿನ ಪ್ರತಿಬಂಧಕವಿದ್ದಂತೆ ಆಗುತ್ತದೆ.

(ಆಕ್ಷೇಪ) :–ನಿಜ, ಹಾಗೆಯೇ ಸರಿ. (ಆಲ್ಲಿ) ಈ ದೋಷವುಂಟಾಗುತ್ತದೆಯಾದರೂ ಕನಸಿನಲ್ಲಿ ಆತ್ಮನು ಒಬ್ಬನೇ ಇರುವದರಿಂದ[5] (ಆತ್ಮನು) ಸ್ವಯಂ

1. 'ಪರಿಚ್ಛೇದಕರಣೇ' ಎಂದು ವಾ॥ ಪಾಠ.

2. ವಾ॥ ಪಾಠ.

3. ಕನಸಿನಲ್ಲಿ ಆತ್ಮನು ಮನಸ್ಸಿನೊಡನೆಯೇ ಇದ್ದರೆ ಆತ್ಮನು ಅಲ್ಲಿ ಸ್ವಯಂಜ್ಯೋತಿಯಾಗಿರುವನೆಂದು ಶ್ರುತಿಯಲ್ಲಿ ಹೇಳಿರುವದು ಹೇಗೆ ? ಎಂಬು ಆಕ್ಷೇಪ.

4. ಕನಸಿನಲ್ಲಿ ಮನಸ್ಸಿನ ಸಂಬಂಧದಿಂದ ಸ್ವಯಂಜ್ಯೋತಿಷ್ಟ್ವಕ್ಕೆ ಬಾಧೆಯಾಗುವ ಬಾದರೆ ಸುಷುಪ್ತಿಯಲ್ಲಿಯೂ ಹೃದಯಾದಿಗಳ ಸಂಬಂಧವನ್ನು ಶ್ರುತಿಯಲ್ಲಿ ಹೇಳಿರುವದರಿಂದ ಅಲ್ಲಿ ಇನ್ನೂ ಹೆಚ್ಚಿನ ಬಾಧೆಯೇ ಆಗುತ್ತದೆ.

5. ಪೂರ್ವಪಕ್ಷಿಯ ಅಭಿಪ್ರಾಯದಲ್ಲಿ ದ್ವಿತೀಯಮನಸ್ಸಿನ ಸಂಬಂಧವಿದ್ದರೆ ಆತ್ಮನು ಸ್ವಯಂಜ್ಯೋತಿಯಾಗಲಾರನು.

ಜ್ಯೋತಿ ಎಂದಾಗುವದರಿಂದ ಅರ್ಥ ಹೊರೆಯುವ್ನಾದರೂ ಇಳಿಸಿಕೊಂಡಂತೆ ಆಗುವದಿಲ್ಲವೆ ?[1]

ಸಮಾಧಾನ) :–ಹಾಗಲ್ಲ. ಅಲ್ಲಿಯೂ "ಪುರೀತತ್ತಿನಲ್ಲಿ ನಾಡಿಗಳಲ್ಲಿ ಮಲಗಿರುತ್ತಾನೆ" ಎಂಬ ಶ್ರುತಿ[2] ಇರುತ್ತದೆಯಾದ್ದರಿಂದ ಪುರೀತತ್ತು ಮತ್ತು ನಾಡಿಗಳ ಸಂಬಂಧವಿರುತ್ತದೆಯಾದ್ದರಿಂದ ಇಲ್ಲಿ ಕೂಡ[3] ಪುರುಷನು ಸ್ವಯಂ ಜ್ಯೋತಿಷನಾಗಿರುವದರಿಂದ ಅರ್ಥಹೊರೆ ಇಳಿದಂತಾಗುವದೆಂಬ ಅಭಿಪ್ರಾಯವು ಸುಳ್ಳೇ ಆಗುವದು.

(ಭಾಷ್ಯ)

೬೫. ಕಥಂ ತರ್ಹಿ "ಅತ್ರಾಯಂ ಪುರುಷಃ ಸ್ವಯಂಜ್ಯೋತಿಃ" (ಬೃ. ೪-೩-೧೪) ಇತಿ ? ಅನ್ಯಶಾಖಾತ್ವಾತ್ ಅನಪೇಕ್ಷಾ[4] ಸಾ ಶ್ರುತಿಃ ಇತಿ ಚೇತ್| ನ ; ಆರ್ಥೈಕತ್ವಸ್ಯ ಇಷ್ಟತ್ವಾತ್ | ಏಕೋ ಹಿ ಅತ್ಮಾ ಸರ್ವವೇದಾನ್ತಾನಾಮರ್ಥೋ ವಿಜಿಜ್ಞಾಪಯಿಷಿತಃ ಬುಭುತ್ಸಿತಶ್ಚ | ತಸ್ಮಾತ್ ಯುಕ್ತಾ ಸ್ವಪ್ನೇ ಅತ್ಮನಃ ಸ್ವಯಂಜ್ಯೋತಿಷ್ಟ್ವೋಪಪತ್ತಿರ್ವಕ್ತುಮ್ | ಶ್ರುತೇರ್ಯಥಾರ್ಥತತ್ತ್ವ ಪ್ರಕಾಶಕತ್ವಾತ್ ||

(ಭಾಷ್ಯಾರ್ಥ)

(ಆಕ್ಷೇಪ) :–'ಇಲ್ಲಿ ಈ ಪುರುಷನು ಸ್ವಯಂಜ್ಯೋತಿಯಾಗಿರುತ್ತಾನೆ' (ಬೃ. ೪–೩–೧೪) ಎಂಬ ಶ್ರುತಿಯು ಹೇಗೆ (ಹೊಂದುತ್ತದೆ)? ಆ ಶ್ರುತಿಯು

---

1. ಬೃಹದಾರಣ್ಯಕದಲ್ಲಿರುವ ವರ್ಣನೆಯಲ್ಲಿ ಸುಷುಪ್ತಿಯಲ್ಲಿ ಹೃದಯಾಕಾಶ, ಪುರೀತತ್ತು, ನಾಡಿ– ಇವುಗಳ ಸಂಬಂಧವು ಆತ್ಮನಿಗಿರುತ್ತವೆಯೆಂದಿರುವದರಿಂದ ಅಲ್ಲಿ ಸ್ವಯಂಜ್ಯೋತಿಷ್ಟ್ವಕ್ಕೆ ಅಡ್ಡಿಯು ಹೆಡ್ಡಾಗಿದೆ ಎಂದು ಹೇಳಬಹುದು. ಕನಸಿನಲ್ಲಿ ಯಾವ ಪ್ರತಿಬಂಧಕವೂ ಇಲ್ಲವೆಂದು ತೋರಿಸಿದರೆ ಅಲ್ಲಿ ಸ್ವಯಂಜ್ಯೋತಿಷ್ಟ್ವವನ್ನು ಪ್ರತಿಪಾದನೆಮಾಡಿದಂತೆ ಆಗುವದರಿಂದ ವೇದಾಂತಿಯಮೇಲೆ ಈ ವಿಷಯದಲ್ಲಿರುವ ಜೊಹೆಗಾರಿಕೆಯಲ್ಲಿ ಅರ್ಥವಾದರೂ ಇಳಿದಂತೆ ಆಗುವದಿಲ್ಲವೆ ?-ಎಂದು ಆಕ್ಷೇಪಕನ ಭಾವ.

2. ಬೃಹದಾರಣ್ಯಕದ ಕನಸಿನ ವರ್ಣನೆಯಲ್ಲಿಯೂ ಆತ್ಮನಿಗೆ ಈ ನಾಡಿಗಳ ಸಂಬಂಧವನ್ನು ಹೇಳಿದೆ. (ಬೃ. ೪-೩-೫ ; ೪–೫–೩೦). ಆದ್ದರಿಂದ ಕನಸಿನಲ್ಲಿಯೂ ದ್ವಿತೀಯಸಂಬಂಧವಿರುವದರಿಂದ ಅಲ್ಲಿಯೂ ಸ್ವಯಂಜ್ಯೋತಿಷ್ಟ್ವವನ್ನು ಪ್ರತಿಪಾದನೆ ಮಾಡಿದಂತಾಗುವದಿಲ್ಲ.

3. ಕನಸಿನಲ್ಲಿಕೂಡ. "ಸುಷುಪ್ತಿಯಲ್ಲಿ ಪೂರಹೊರೆ ಇಳಿಯುವಂತಿದ್ದರೆ ಕನಸಿನಲ್ಲಿ ಅರ್ಥಹೊರೆಯಾದರೂ ಇಳಿಯಿತೆನ್ನಬಹುದು ; ಆದರೆ ಹಾಗಿಲ್ಲ, ಅಲ್ಲಿಯೂ ಬಹಳ ಪ್ರತಿಬಂಧಕವಿರುತ್ತದೆ" ಎಂಬ ಅಭಿಪ್ರಾಯವನ್ನು ವ್ಯಾಖ್ಯಾನಕಾರರು ತೆಗೆದಿರುತ್ತಾರೆ. ಆದರೆ ಪೂರ್ವಪಕ್ಷಿಯು ಸುಷುಪ್ತಿಯಲ್ಲಿ ಪೂರಹೊರೆ ಇಳಿಯುವದೆಂದೇನೂ ಹೇಳಿಲ್ಲ.

4. "ಅನಪೇಕ್ಷಾ" ಎಂದೇ ಮುದ್ರಿತಪುಸ್ತಕಗಳಲ್ಲಿದೆಯಾದರೂ "ಅನಪೇಕ್ಷಾಃ" ಎಂದೇ ಇರಬೇಕೆಂದು ತೋರುತ್ತದೆ.

ಬೇರೆಯ ಶಾಖೆಯಲ್ಲಿರುವದರಿಂದ[1] ಅದನ್ನು (ಇಲ್ಲಿ ಲಿಕ್ಕಕ್ಕೆ) ತೆಗೆದುಕೊಳ್ಳ ಬೇಕಾದದ್ದಿಲ್ಲ ಎಂದು (ನೀವು) ಹೇಳಬಹುದು; ಆದರೆ ಅದು ಸರಿಯಲ್ಲ. ಏಕೆಂದರೆ, ಶ್ರುತಿಗಳಿಗೆಲ್ಲ ಒಂದೇ ಅರ್ಥವು (ಅಭಿಪ್ರೇತವಾಗಿದೆ) ಎಂಬುದು (ವೇದಾಂತಿಗಳಿಗೆ)ಇಷ್ಟವಾಗಿರುತ್ತದೆ ಎಲ್ಲಾ ಉಪನಿಷತ್ತುಗಳಿಗೂ ಒಬ್ಬನೇ ಆತ್ಮನು ವಿಷಯವಾಗಿರುತ್ತಾನೆ; (ಆವನನ್ನೇ ಎಲ್ಲಾ ಉಪನಿಷತ್ತುಗಳೂ) ತಿಳಿಯಿಸುವದಕ್ಕೆ ಹೊರಟಿವೆ. ಮತ್ತು (ಆ ಒಬ್ಬನನ್ನೇ ನಾವು) ತಿಳಿಯಬೇಕೆಂದಿರುತ್ತೇವೆ;[2] ಆದ್ದರಿಂದ ಕನಸಿನಲ್ಲಿ ಆತ್ಮನು ಸ್ವಯಂಜ್ಯೋತಿಯಾಗಿರುವನೆಂಬುದು ಹೇಗೆಂಬುದಕ್ಕೆ ಯುಕ್ತಿಯನ್ನು ಹೇಳುವದು ನ್ಯಾಯವಾಗಿದೆ. ಏಕೆಂದರೆ ಶ್ರುತಿಯು ಇದ್ದವಿಷಯವನ್ನು ಇದ್ದಂತೆ ತಿಳಿಸಿಕೊಡತಕ್ಕದ್ದಾಗಿದೆ.[3]

(ಭಾಷ್ಯ)

೬೬. ಏವಂ ತರ್ಹಿ ಶೃಣು ಶ್ರುತ್ಯರ್ಥಂ ಹಿತ್ವಾ ಸರ್ವಮಭಿಮಾನಮ್ । ನ ತ್ವಭಿಮಾನೇನ[4] ವರ್ಷಶತೇನಾಪಿ ಶ್ರುತ್ಯರ್ಥೋ ಜ್ಞಾತುಂ ಶಕ್ಯತೇ ಸರ್ವೈಃ ಪಣ್ಡಿತಂಮನ್ಯೈಃ । ಯಥಾ ಹೃದಯಾಕಾಶೇ ಪುರೀತತಿ ನಾಡೀಷು ಚ ಸ್ವಪತಃ ತತ್ಸಂಬನ್ಧಾಭಾವಾತ್ ತತೋ ವಿವಿಚ್ಯ ದರ್ಶಯಿತುಂ ಶಕ್ಯತೇ ಇತ್ಯಾತ್ಮನಃ ಸ್ವಯಂಜ್ಯೋತಿಷ್ಟ್ವಂ ನ ಬಾಧ್ಯತೇ । ಏವಂ ಮನಸಿ ಅವಿದ್ಯಾಕಾಮಕರ್ಮ ನಿಮಿತ್ತೋದ್ಭೂತವಾಸನಾವತಿ ಕರ್ಮನಿಮಿತ್ತಾ ವಾಸನಾಃ[5] ಅವಿದ್ಯಯಾ ಅನ್ಯದ್ ವಸ್ತ್ವನ್ತರಮಿವ ಪಶ್ಯತಃ ಸರ್ವಕಾರ್ಯಕರಣೇಭ್ಯಃ ಪ್ರವಿವಿಕ್ತಸ್ಯ ದ್ರಷ್ಟುಃ ವಾಸನಾಭ್ಯೋ ದೃಶ್ಯರೂಪಾಭ್ಯೋಽನ್ಯತ್ವೇನ ಸ್ವಯಂಜ್ಯೋತಿಷ್ಟ್ವಂ ಸುದರ್ಪಿತೇನಾಪಿ ತಾರ್ಕಿಕೇಣ ನ[6] ವಾರಯಿತುಂ ಶಕ್ಯತೇ । ತಸ್ಮಾತ್ ಸಾಧೂಕ್ತಂ ಮನಸಿ ಪ್ರಲೀನೇಷು ಕರಣೇಷು ಅಪ್ರಲೀನೇ ಚ ಮನಸಿ ಮನೋಮಯಃ ಸ್ವಪ್ನಾನ್ ಪಶ್ಯತೀತಿ ॥

---

1. ಈ ಉಪನಿಷತ್ತು ಅಥರ್ವಣಶಾಖೆಗೆ ಸೇರಿದ್ದು; ಸ್ವಯಂಜ್ಯೋತಿಃಶ್ರುತಿಯು ವಾಜಸನೇಯಶಾಖೆಯ ಬೃಹದಾರಣ್ಯಕೋಪನಿಷತ್ತಿನಲ್ಲಿದೆ.

2. ಉಪನಿಷತ್ತುಗಳೆಲ್ಲೆಲ್ಲ ಒಂದೇ ಆತ್ಮತತ್ತ್ವವನ್ನು ಪ್ರತಿಪಾದಿಸಿರುತ್ತದೆ ಎಂದು ತೋರಿಸುವದೇ ಭಾಷ್ಯದ ಗುರಿ. ಸೂ. ಭಾ. ೧-೧-೪, ೩-೩-೧.

3. ವಸ್ತುಸ್ವರೂಪವು ಬೇರೆಬೇರೆಯಾಗಿರುವದು ಅಸಂಭವವಾದ್ದರಿಂದ ಒಂದೊಂದು ಶ್ರುತಿಯಲ್ಲಿ ಒಂದೊಂದುಬಗೆಯಾಗಿ ಅದನ್ನು ಹೇಳಿದೆ ಎಂದರೆ ಶ್ರುತಿಯೇ ಅಪ್ರಮಾಣವಾಗುತ್ತದೆ. ಸೂ.ಭಾ. ೧-೧-೩. 'ಅನುಭವಾವಸಾನತ್ವಾತ್, ಭೂತವಸ್ತುವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ' ಎಂಬ ವಾಕ್ಯದ ವಿವರಣೆಯನ್ನು ನೋಡಿ.

4. "ನ ಹಿ ಅಭಿಮಾನೇನ" ಎಂದು ವಾ॥ ಪಾಠ.

5. "ವಾಸನಾವಿದ್ಯಯಾ" ಎಂಬ ಆ॥ ಪಾಠಕ್ಕಿಂತ ಈ ವಾ॥ ಪಾಠವು ಉತ್ತಮ.

6. "ಕೇನ" ಎಂದು ಆ॥ ಪಾಠ.

(ಭಾಷ್ಯಾರ್ಥ)

(ಸಮಾಧಾನ) :- ಹಾಗಾದರೆ ಎಲ್ಲಾ ಅಭಿಮಾನವನ್ನೂ ತೊರೆದು ಶ್ರುತ್ಯರ್ಥವನ್ನು ಕೇಳು. (ಏಕೆಂದರೆ) ತಾವೇ ಪಂಡಿತರೆಂದು ಭಾವಿಸಿಕೊಂಡಿರುವ ಯಾವೇ ಆಗಲಿ ಅಭಿಮಾನದಿಂದ ಶ್ರುತಿಯ ಅರ್ಥವನ್ನು ನೂರುವರ್ಷವಾದರೂ ತಿಳಿದುಕೊಳ್ಳಲಾರ.[1] ಹೃದಯಾಕಾಶದಲ್ಲಿಯೂ ಪುರೀತತ್ತಿನಲ್ಲಿಯೂ ನಾಡಿಗಳಲ್ಲಿಯೂ ನಿದ್ರಿಸುತ್ತಿರುವ (ಆತ್ಮನಿಗೆ) ಅವುಗಳ ಸಂಬಂಧವಿಲ್ಲದಿರುವುದರಿಂದ[2] ಅವುಗಳಿಂದ ವಿಂಗಡಿಸಿ ತೋರಿಸುವದಕ್ಕಾಗುತ್ತದೆ ಎಂಬುದರ ನೋಲೆ ಆತ್ಮನು ಸ್ವಯಂಜ್ಯೋತಿ ಎಂಬುದಕ್ಕೆ ಹೇಗೆ ಬಾಧೆಯಾಗುವದಿಲ್ಲವೋ ಹಾಗೆಯೇ ಅವಿದ್ಯೆ, ಕಾಮ, ಕರ್ಮ– ಎಂಬ ನಿಮಿತ್ತಗಳಿಂದ ಮೇಲಕ್ಕೆ ಎದ್ದ ವಾಸನೆಯುಳ್ಳ[4] ಮನಸ್ಸಿನಲ್ಲಿ ಕರ್ಮ ನಿಮಿತ್ತವಾದ ವಾಸನೆಗಳನ್ನು ಅವಿದ್ಯೆಯಿಂದ, ವಿಲಕ್ಷಣವಾದ ಬೇರೊಂದು ವಸ್ತುವಿನಂತೆ ಕಾಣುತ್ತಿರುವ ಎಲ್ಲಾ ಕಾರ್ಯಕರಣಗಳಿಂದಲೂ ಬೇರ್ಪಟ್ಟಿರುವ ದ್ರಷ್ಟೃವಾದ[3] (ಆತ್ಮನು) ದೃಶ್ಯರೂಪವಾದ ವಾಸನೆಗಳಿಗಿಂತ ಬೇರೆಯಾಗಿರುವದರಿಂದ ಸ್ವಯಂಜ್ಯೋತಿಯಾಗಿರುವನೆಂಬುದನ್ನು ಎಂಥ ಗರ್ವಿತನಾದ ತಾರ್ಕಿಕನಿಂದಲೂ ತಪ್ಪಿಸಲಾಗುವಂತಿಲ್ಲ.[5] ಆದ್ದರಿಂದ ಕರಣಗಳು ಮನಸ್ಸಿನಲ್ಲಿ ಲಯವಾಗಿ ಮನಸ್ಸು ಲಯವಾಗದೆ ಇರುವಲ್ಲಿ ಮನೋಮಯನಾದ (ಆತ್ಮನು) ಸ್ವಪ್ನಗಳನ್ನು ಕಾಣುತ್ತಾನೆ ಎಂದದ್ದು ಸರಿಯೇ (ಆಯಿತು).

1. ಗುರುವಿನ ಅನುಗ್ರಹದಿಂದಲೇ ತಿಳಿದುಕೊಳ್ಳಬೇಕು. ಮುಂ. ಭಾ. ೨–೧೨.

2. ಪುರೀತತ್ತೆಂದರೆ ಹೃದಯದ ಮೇಲುಮುಸುಕು ; ಹೃದಯಾಕಾಶವೆಂದರೆ ಬ್ರಹ್ಮವೇ. ಇಲ್ಲಿ ಹೃದಯಾಕಾಶ, ಪುರೀತತ್ತು, ನಾಡಿಗಳು–ಇವುಗಳ ಸಮುಚ್ಚಯವನ್ನು ಹೇಗೆ ಅರ್ಥಮಾಡಿಕೊಳ್ಳಬೇಕೆಂಬುದನ್ನು ಸೂ. ಭಾ. ೩–೩–೭ರಲ್ಲಿ ವಿವರಿಸಿದೆ.

3. ನಾಡೀಪುರೀತತ್ತುಗಳ ಮೂಲಕ ಆಕಾಶವನ್ನು ಸೇರಿ ನಿದ್ರಿಸುತ್ತಿರುವನೆಂಬುದು ಎಚ್ಚರದ ದೃಷ್ಟಿಯಿಂದ ; ನಿಜವಾಗಿ ಸುಷುಪ್ತಿಯಲ್ಲಿ ಆತ್ಮನಿಗೆ ಯಾವ ಸಂಬಂಧವೂ ಇರುವದಿಲ್ಲ. ಎಚ್ಚರದ ದೃಷ್ಟಿಯಿಂದ ನೋಡಿದರೂ ಗಡಿಗೆಯೊಳಗಿನ ಆಕಾಶವು ಗಡಿಗೆಗೆ ನಿಜವಾಗಿ ಕಟ್ಟುಬಿದ್ದಿರದಂತೆ ಆತ್ಮನು ಹೃದಯಾದಿಗಳ ಎಲ್ಲೆಕಟ್ಟಿನೊಳಗೆ ಇರುವದಿಲ್ಲ.

4. ಎಚ್ಚರದ ವಾಸನೆಯಿಂದ ಕವಸಾಗುವದೆಂಬ ವ್ಯಾವಹಾರಿಕದೃಷ್ಟಿಯಿಂದ ಆದಿದ ಮಾತು.

5. ದೃಶ್ಯವಾದ ಕಾರ್ಯಕರಣಗಳಂತೆ ದೃಶ್ಯವಾದ ವಾಸನೆಗಳೂ ದ್ರಷ್ಟೃವಾದ ಆತ್ಮನಿಗಿಂತ ಬೇರೆ. ಆದ್ದರಿಂದ ಆತ್ಮನಿಗೆ ಮನಸ್ಸಿನ ಅಥವಾ ವಾಸನೆಯ ಸೋಂಕಿಲ್ಲ. ಭಾಂ. ಭಾ, ೮–೧೨–೧೨, ಬೃ. ಭಾ. ೪–೩–೯–ಇವುಗಳಲ್ಲಿ ವರ್ಣಿಸಿರುವದನ್ನು ನೋಡಿರಿ.

6. "ಯಾವ ಗರ್ವಿಕನಾದ ತಾರ್ಕಿಕನಿಂದ ತಪ್ಪಿಸಲಾದೀತು ?" ಎಂದು ವಾಕ್ಯಕ್ಕೆ ಅರ್ಥ.

ಕನಸಿನಲ್ಲಾಗುವ ಅನುಭವದ ವಿವರ

(ಭಾಷ್ಯ)

೬೭. ಕಥಂ ಮಹಿಮಾನಮನುಭವತೀತಿ ? ಉಚ್ಯತೇ । ಮತ್ ಮಿತ್ರಂ ಪುತ್ರಾದಿ ವಾ ಪೂರ್ವಂ ದೃಷ್ಟಮ್ (ಅನು ?)[1] ತದ್ವಾಸನಾವಾಸಿತಃ ಪುತ್ರ ಮಿತ್ರಾದಿ ವಾಸನಾಸಮುದ್ಭೂತಂ ಪುತ್ರಂ ಮಿತ್ರಮಿವ ವಾ ಅವಿದ್ಯಯಾ ಪಶ್ಯತಿ ಇತ್ಯೇವಂ ಮನ್ಯತೇ । ತಥಾ[2] ಶ್ರುತಮ್ ಅರ್ಥಂ ತದ್ವಾಸನಯಾ ಅನುಶೃಣೋತೀವ । ದೇಶದಿಗನ್ತರೈಶ್ಚ ದೇಶಾನ್ತರೈರ್ದಿಗನ್ತರೈಶ್ಚ ಪ್ರತ್ಯನುಭೂತಂ ಪುನಃ ಪುನಃ ತತ್ ಪ್ರತ್ಯನುಭವತೀವ ಅವಿದ್ಯಯಾ । ತಥಾ ದೃಷ್ಟಂ ಚ ಅಸ್ಮಿನ್ ಜನ್ಮನಿ । ಅದೃಷ್ಟಂ ಚ ಜನ್ಮಾನ್ತರದೃಷ್ಟಮ್ ಇತ್ಯರ್ಥಃ । ಅತ್ಯನ್ತಾದೃಷ್ಟೇ ವಾಸನಾನುಪಪತ್ತೇಃ । ಏವಂ ಶ್ರುತಂ ಚ ಅಶ್ರುತಂ ಚ । ಅನುಭೂತಂ ಚ ಅಸ್ಮಿನ್ ಜನ್ಮನಿ ಕೇವಲೇನ ಮನಸಾ । ಅನನುಭೂತಂ ಚ ಮನಸೈವ ಜನ್ಮಾನ್ತರೇ ಅನುಭೂತಮ್ ಇತ್ಯರ್ಥಃ । ಸಚ್ಚ ಪರಮಾರ್ಥೋದಕಾದಿ । ಅಸಚ್ಚ ಮರೀಚ್ಯುದಕಾದಿ । ಕಿಂ ಬಹುನಾ ? ಉಕ್ತಾನುಕ್ತಂ ಸರ್ವಂ ಪಶ್ಯತಿ ಸರ್ವಃ ಪಶ್ಯತಿ ಸರ್ವಮನೋವಾಸನೋಪಾಧಿಃ ಸನ್ । ಏವಂ ಸರ್ವಕರಣಾತ್ಮಾ ಮನೋದೇವಃ ಸ್ವಪ್ನಾನ್ ಪಶ್ಯತಿ ॥

(ಭಾಷ್ಯಾರ್ಥ)

ಮಹಿಮೆಯನ್ನು ಹೇಗೆ ಅನುಭವಿಸುತ್ತಾನೆ?-ಎಂದರೆ (ಶ್ರುತಿ) ಹೇಳುತ್ತದೆ. ಗೆಳೆಯನನ್ನಾಗಲಿ ಮಗನೇ ಮುಂತಾದದ್ದನ್ನಾಗಲಿ ಹಿಂದೆ ಯಾವದನ್ನು ನೋಡಿದ್ದನೋ ಆ ವಾಸನೆಯಿಂದ ಊಡಿಕೊಂಡು ವಾಸನೆಯಿಂದಾಗಿರುವ ಮಗನನ್ನು, ಗೆಳೆಯನನ್ನು ಮುಂತಾದದ್ದನ್ನು (ನಿಜವಾದ) ಮಗನಂತೆ ಅಥವಾ ಗೆಳೆಯನನ್ನು (ಮುಂತಾದದ್ದರಂತೆ ಅವಿದ್ಯೆಯಿಂದ ಕಾಣುತ್ತಾನೆ, ಎಂದರೆ ಹಾಗೆಂದು ಭಾವಿಸಿಕೊಳ್ಳುತ್ತಾನೆ (ಎಂದರ್ಥ). ಹಾಗೆಯೇ ಕೇಳಿದ್ದನ್ನೂ ಅದರ ವಾಸನೆಯಿಂದ ಮತ್ತೆ ಕೇಳುವಂತೆ (ಇರುತ್ತಾನೆ). ದೇಶದಿಗಂತರಗಳಲ್ಲಿ ಎಂದರೆ ಬೇರೆಬೇರೆಯ ದೇಶಗಳಲ್ಲಿಯೂ ಬೇರೆಬೇರೆಯ ದಿಕ್ಕುಗಳಲ್ಲಿಯೂ (ಕಾಣುತ್ತಾನೆ). ಹಾಗೂ ನೋಡಿದ್ದನ್ನು ಎಂದರೆ ಈ ಜನ್ಮದಲ್ಲಿ (ಕಂಡಿರುವದನ್ನೂ) ನೋಡದ್ದನ್ನೂ ಎಂದರೆ ಮತ್ತೊಂದು ಜನ್ಮದಲ್ಲಿ ಕಂಡಿರುವದನ್ನೂ ಎಂದರ್ಥ : ಏಕೆಂದರೆ ತೀರ ನೋಡದೆ ಇದ್ದರೆ (ಅದರ) ವಾಸನೆಯೇ ಉಂಟಾಗ

1. ಇಲ್ಲಿ "ಅನು" ಎಂಬ ಮಾತು ಭಾಷ್ಯದಲ್ಲಿ ಬಿಟ್ಟುಹೋಗಿರುವಂತೆ ತೋರುತ್ತದೆ. "ದೃಷ್ಟವತ್ ಅನು" ಎಂದು ಕಲ್ಪಿಸಿಕೊಳ್ಳಬೇಕು.

2. 'ಶೃಣೋತಿ ತಥಾ' ಎಂದು ವಾ। ಪಾಠ.

ಲಾಪದು ; ಇದಂತೆಯೇ ಕೇಳಿದ್ದನ್ನೂ ಕೇಳದ್ದನ್ನೂ (ಎಂಬುದರ ಅರ್ಥವನ್ನೂ ಅರಿಯಬೇಕು). ಅನುಭವಿಸಿದ್ದನ್ನು ಎಂದರೆ ಈ ಜನ್ಮದಲ್ಲಿ ಬರಿಯ ಮನಸ್ಸಿನಿಂದ ಅನುಭವಿಸಿದ್ದನ್ನು[2]. ಅನುಭವಿಸದೆ ಇರುವದನ್ನು ಎಂದರೆ ಮನಸ್ಸಿನಿಂದಲೇ (ಹಿಂದಿನ) ಬೇರೊಂದು ಜನ್ಮದಲ್ಲಿ ಅನುಭವಿಸಿರುವದನ್ನು ಎಂದರ್ಥ. ಇರುವ ದನ್ನು ಎಂದರೆ ನಿಜವಾದ ನೀರು ಮುಂತಾದದ್ದನ್ನು ; ಇಲ್ಲದ್ದನ್ನು ಎಂದರೆ ಬಿಸಿಲುಕುದುರೆಯ ನೀರೇ ಮುಂತಾದದ್ದನ್ನು[3]. ಹೆಚ್ಚು (ಹೇಳಿದ್ದ)ರಿಂದೇನು ? (ಇದುವರೆಗೆ) ಹೇಳಿರುವದು ಹೇಳದೆ ಇರುವದು–ಎಲ್ಲವನ್ನೂ[4] ನೋಡುತ್ತಾನೆ ; ಎಲ್ಲವೂ ಬಿಗಿ ನೋಡುತ್ತಾನೆ, ಎಂದರೆ ಎಲ್ಲಾ (ವಿಷಯದ) ಮನೋವಾಸನೆ ಗಳೆಂಬ ಉಪಾಧಿಯುಳ್ಳವನಾಗಿ (ನೋಡುತ್ತಾನೆ). ಹೀಗೆ ಎಲ್ಲ ಕರಣಗಳ ಸ್ವರೂಪವಾದ ಮನೋದೇವನು ಕನಸುಗಳನ್ನು ಕಾಣುತ್ತಿರುತ್ತಾನೆ.

ಸುಷುಪ್ತಿಯಲ್ಲಾಗುವ ನಿರುಪಾಧಿಕಸುಖ

ಸ ಯದಾ ತೇಜಸಾಭಿಭೂತೋ ಭವತಿ । ಅತ್ರೈಷ ದೇವಃ
ಸ್ವಪ್ನಾನ್ ನ ಪಶ್ಯತ್ಯಥ ತದೈತಸ್ಮಿಞ್ಶರೀರೇ ಏತತ್ಸುಖಂ ಭವತಿ॥೬॥

೬. ಅವನು ಯಾವಾಗ ತೇಜಸ್ಸಿನಿಂದ ತಿರಸ್ಕರಿಸಲ್ಪಡುತ್ತಾನೋ (ಆಗ) ಇಲ್ಲಿ ಈ ದೇವನು ಕನಸುಗಳನ್ನು ಕಾಣುವದಿಲ್ಲ. ಆಗ ಈ ಶರೀರದಲ್ಲಿ ಈ ಸುಖವುಂಟಾಗುತ್ತದೆ.

(ಭಾಷ್ಯ)

೬ಬಿ. ಸಃ ಯದಾ ಮನೋರೂಪೋ ದೇವಃ ಯಸ್ಮಿನ್ ಕಾಲೇ ಸೌರೇಣ ಔತ್ತಾತ್ಯೇನ ತೇಜಸಾ ನಾಡೀಶಯೇನ ಸರ್ವತೋಽಭಿಭೂತಃ ಭವತಿ ತಿರಸ್ಕೃತ ವಾಸನಾದ್ವಾರೋ ಭವತಿ ತದಾ ಸಹ ಕರಣೈರ್ಮನಸೋ ರಶ್ಮಯೋ ಹೃದ್ಯುಪ ಸಂಹೃತಾ ಭವನ್ತಿ ಯದಾ ಮನೋ ದಾರ್ವಗ್ನಿವತ್ ಅವಿಶೇಷವಿಜ್ಞಾನರೂಪೇಣ ಕೃತ್ಸ್ನಂ ಶರೀರಂ ವ್ಯಾಪ್ಯ ಅವತಿಷ್ಠತೇ ತದಾ ಸುಷುಪ್ತೋ ಭವತಿ । ಅತ್ರ ಏತಸ್ಮಿನ್ ಕಾಲೇ ಏಷಃ ಮನಆಖ್ಯೋ ದೇವಃ ಸ್ವಪ್ನಾನ್ ನ ಪಶ್ಯತಿ । ದರ್ಶನ

---

2. ಎಚ್ಚರದಲ್ಲಿ ಕಾಣದೆ ಇರುವದನ್ನೂ ಕನಸಿನಲ್ಲಿ ಕಾಣುವದುಂಟು; ಉದಾಹರಣೆಗೆ ತನಗೆ ನಾಲ್ಕು ಕೈಗಳಿರುವಂತೆ ಕಾಣುವದುಂಟು ; ಆದರೆ ನಾಲ್ಕು, ಕೈಗಳು–ಇವುಗಳನ್ನು ಎಚ್ಚರದಲ್ಲಿ ನೋಡಿಯೇ ಇರುತ್ತಾನೆ ; ಅವುಗಳ ಸಂಬಂಧವನ್ನು ಮಾತ್ರ ಅವಿದ್ಯೆಯಿಂದ ಕಲ್ಪಿಸಿರುತ್ತಾನೆ. ಇದೂ ಎಚ್ಚರದ ದೃಷ್ಟಿಯಿಂದ ಹೇಳಿದ್ದೆಂಬುದನ್ನು ಮರೆಯಬಾರದು.

2. ಉದಾಹರಣೆಗೆ ಸುಖದುಃಖಗಳನ್ನು.

3. ಕೈ. ಭಾ. ೩ನೆಯದರಲ್ಲಿ "ಸತ್ಯಂ ಚಾನೃತಂ" ಎಂಬುದರ ವಿವರವನ್ನು ನೋಡಿ.

4. ಈ ಜನ್ಮದಲ್ಲಿ ಎಚ್ಚರದಲ್ಲಿ ಕಂಡದ್ದು, ಅಥವಾ ಜನ್ಮಾಂತರದಲ್ಲಿ ಕಂಡದ್ದು – ಎಲ್ಲವನ್ನೂ.

5. ಎಲ್ಲಾ ಕರಣಗಳ ವಾಸನೆಯಿಂದಲೂ ಕೆಲಸಮಾಡುತ್ತಿರುವ.

ದ್ವಾರಸ್ಯ ನಿರುದ್ಧತ್ವಾತ್ ತೇಜಸಾ | ಅಥ ತದಾ ಏತಸ್ಮಿನ್ ಶರೀರೇ ಏತತ್ ಸುಖಂ ಭವತಿ ಯದ್ವಿಜ್ಞಾನಂ ನಿರಾಬಾಧಮ್ ಅನಿಶೇಷೇಣ ಶರೀರವ್ಯಾಪಕಂ ಪ್ರಸನ್ನಂ ಭವತಿ ಇತ್ಯರ್ಥಃ ||

(ಭಾಷ್ಯಾರ್ಥ)

ಅವನು ಎಂದರೆ (ಆ) ಮನೋರೂಪನಾದ ಜೀವನು ಯಾವಾಗ ಯಾವ ಕಾಲದಲ್ಲಿ ನಾಡಿಗಳಲ್ಲಿರುವ ಸೂರ್ಯಸಂಬಂಧವಾದ ಪಿತ್ತವೆಂಬ ಹೆಸರಿನ ತೇಜಸ್ಸಿನಿಂದ[1] ಎಲ್ಲಾ ಕಡೆಯಲ್ಲಿಯೂ ಅಭಿಭೂತನಾಗುವನೋ ಎಂದರೆ, ವಾಸನಾದ್ವಾರಗಳು ಮುಚ್ಚಿಹೋದವನಾಗುವನೋ[2] ಆಗ ಕರಣಗಳೊಡನೆ ಮನಸ್ಸಿನ ಕಿರಣಗಳು ಹೃದಯದಲ್ಲಿ ಅಡಗುತ್ತವೆ.[3] ಯಾವಾಗ ಮನಸ್ಸು ಕಟ್ಟಿಗೆಯ ಬೆಂಕಿಯಂತೆ ಸಾಮಾನ್ಯವಾದ ವಿಜ್ಞಾನದ ರೂಪದಿಂದ[4] ಶರೀರವೆಲ್ಲವನ್ನೂ ವ್ಯಾಪಿಸಿಕೊಂಡಿರುವದೋ ಇನ್ನು (ಆಗ) ಸುಷುಪ್ತನಾಗುತ್ತಾನೆ. ಇಲ್ಲಿ ಈ ಕಾಲದಲ್ಲಿ ಮನಸ್ಸೆಂಬ ಹೆಸರಿನ ದೇವನು ಕನಸುಗಳನ್ನು ಕಾಣುವದಿಲ್ಲ; ಏಕೆಂದರೆ ಕಾಣುವ ದ್ವಾರವು ತೇಜಸ್ಸಿನಿಂದ ಮುಚ್ಚಿಹೋಗಿರುತ್ತದೆ.[5] ಇನ್ನು ಆಗ[6]

1. ಈ ತೇಜಸ್ಸು ಎಲ್ಲೆಲ್ಲಿಯೂ ವ್ಯಾಪಿಸಿಕೊಳ್ಳುವದರಿಂದ ಹೊರಗಿನ ಅರಿವು ಇಲ್ಲದಂತಾಗುವದು. ಛಾ. ಛಾ. ೮–೬–೩ ನೋಡಿ. ತೇಜಸ್ಸೆಂದರೆ ಅಗ್ನಿರೂಪವೆಂದು ಅರ್ಥವಾಡಿದರೆ ತೇಜಸ್ಸಿನಲ್ಲಿ ಯಾವಾಗ ಮನಸ್ಸು ಸೇರುವದೋ ಎಂದರ್ಥ. ಸೂ.ಭಾ. ೩–೨–೭ನ್ನು ನೋಡಿರಿ.

2. ಕರಣದ್ವಾರಗಳನ್ನು ಪಿತ್ತವು ಮುಚ್ಚಿಕೊಂಡರೆ ವಾಸನೆಗಳು ಉಂಟಾಗದೆ ಇರುವವೆಂದು ಭಾವ. ಎಚ್ಚರವಾಗದೆ ಇರುವದಕ್ಕೆ ಇದೇ ಕಾರಣ. ಛಾಂ. ಛಾ. ೮–೬–೩.

3. ಮನಸ್ಸಿನ ಅನುಭವಸ್ಮೃತಿಗಳೆಂಬ ವ್ಯಾಪಾರಗಳು ವಿಶೇಷರೂಪವನ್ನು ಬಿಟ್ಟು ಪ್ರಾಣರೂಪದಿಂದ ಹೃದಯದಲ್ಲಿ ನಿಂತುಬಿಡುವವು. ಮೂಂ. ಕಾ. ಛಾ. ೧–೩; ಛಾಂ. ಛಾ ೪–೩–೩.

4. ಜ್ಞೈತನ್ಯರೂಪದಿಂದ ಎಂದರ್ಥ. "ಚೇತನಾ ಎಂಬ ಸಾಮಾನ್ಯವೃತ್ತಿರೂಪದಿಂದ ಎಂಬ ವ್ಯಾಖ್ಯಾನವು ಭಾಷ್ಯಕ್ಕೂ ಅನುಭವಕ್ಕೂ ವಿರುದ್ಧ. ಜ್ಞೈತನ್ಯವು ಶರೀರವನ್ನೆಲ್ಲ ಕಟ್ಟಿಗೆಯನ್ನು ಬೆಂಕಿಯು ವ್ಯಾಪಿಸಿಕೊಂಡಿರುವಂತೆ ವ್ಯಾಪಿಸಿಕೊಂಡಿರುತ್ತದೆ–ಎಂದು ಹೇಳಿರುವದು ಎಚ್ಚರದ ದೃಷ್ಟಿಯಿಂದ; ಸುಷುಪ್ತನ ದೃಷ್ಟಿಯಿಂದ ಶರೀರವೇ ಇರುವದಿಲ್ಲ.

5. ಕರಣಗಳನ್ನು ಪಿತ್ತವು ಮುಚ್ಚಿಹಾಕಿರುತ್ತದೆ; ಆದ್ದರಿಂದ ದರ್ಶನವಾಗಲಿ ವಾಸನೆಯಾಗಲಿ ಇರುವದಿಲ್ಲ.

6. 'ಅಥ ತದಾ' ಎಂಬುದಕ್ಕೆ ಬದಲು 'ಅಥ' ಎಂದಿಷ್ಟೇ ಇರುವ ಉಪನಿಷತ್ಪಾಠದಲ್ಲಿ 'ತದಾ' ಎಂಬುದು ಭಾಷ್ಯಕ್ಕೆ ಸೇರಿದ್ದೆಂದು ಭಾವಿಸಬೇಕು.

ಈ ಶರೀರವನ್ನೆ ಈ ಸುಷುಪ್ತಾವಸ್ಥೆಯು ಹೊಂದಿರುತ್ತದೆ. ಆದರೆ ಅವು ಸಾಮಾನ್ಯರೂಪದಿಂದ (ಶರೀರವನ್ನೆಲ್ಲ) ವ್ಯಾಪಿಸಿಕೊಂಡು ಪ್ರಸನ್ನವಾಗಿರುತ್ತದೆ ಎಂದರ್ಥ[2].

ಸುಷುಪ್ತಿಯಲ್ಲಿರುವ ಆದ್ವಯಾತ್ಮಸ್ವರೂಪ

(ಭಾಷ್ಯ)

೬. ಏತಸ್ಮಿನ್ ಕಾಲೇ ಅವಿದ್ಯಾಕಾಮಕರ್ಮನಿಬನ್ಧನಾನಿ ಕಾರ್ಯಕರಣಾನಿ ಶಾನ್ತಾನಿ ಭವನ್ತಿ। ತೇಷು ಶಾನ್ತೇಷು ಆತ್ಮಸ್ವರೂಪಮ್ ಉಪಾಧಿಭಿರನ್ಯಥಾ ವಿಧೀಯಮಾನಮ್ ಅದ್ವಯಮ್ ಏಕಂ ಶಿವಂ ಶಾನ್ತಂ ಭವತಿ ಇತಿ ಏತಾಮವಸ್ಥಾಂ ಪೃಥಿವ್ಯಾದ್ಯವಿದ್ಯಾಕೃತಮಾತ್ಮಾನುಪ್ರವೇಶೇನ ದರ್ಶಯಿತುಂ ದೃಷ್ಟಾನ್ತಮಾಹ—

(ಭಾಷ್ಯಾರ್ಥ)

ಈ ಕಾಲದಲ್ಲಿ ಅವಿದ್ಯಾ ಕಾಮಕರ್ಮಗಳಿಂದಾಗಿರುವ ಕಾರ್ಯಕರಣಗಳು ಇಲ್ಲವಾಗುವವು.[3] ಅವು ಇಲ್ಲವಾಗಲು ಉಪಾಧಿಗಳಿಂದ ಬೇರೆಯು ಸ್ವಕಾರವಾಗಿ ತಿಳಿಯಬರುತ್ತಿರುವ[4] ಆತ್ಮಸ್ವರೂಪವು ತನಗೆರಡನೆಯು ದಿಲ್ಲದೆ ಒಂದೇ ಒಂದಾಗಿ ಮಂಗಳಕರವಾಗಿ ಶಾಂತವಾಗಿರುವದು ಎಂದು ಈ ಅವಸ್ಥೆಯನ್ನು ಅವಿದ್ಯೆಯಿಂದಾಗಿರುವ ಪೃಥಿವಿಯೇ ಮುಂತಾದವುಗಳ ಮಾತ್ರೆಗಳ ಪ್ರವೇಶವಿಂದ ತೋರಿಸಿಕೊಡುವದಕ್ಕಾಗಿ[5] (ಶ್ರುತಿಯು) ದೃಷ್ಟಾಂತವನ್ನು ಹೇಳುತ್ತದೆ :—

ಸ ಯಥಾ ಸೋಮ್ಯ ವಯಾಂಸಿ ವಾಸೋವೃಕ್ಷಂ ಸಂಪ್ರತಿಷ್ಠನ್ತೇ
ಏವಂ ಹ ವೈ ತತ್ ಸರ್ವಂ ಪರ ಆತ್ಮನಿ ಸಂಪ್ರತಿಷ್ಠತೇ ॥೭॥

೭. ಅದು ಹೇಗೆಂದರೆ : ಎಲ್ಲೆ ಸೋಮ್ಯನೆ, ಹೇಗೆ ಪಕ್ಷಿಗಳು (ತಮ್ಮ) ವಾಸವ ವೃಕ್ಷವನ್ನು ಹೋಗಿ ಸೇರಿಕೊಳ್ಳುವವೋ, ಹೀಗೆಯೇ ಅದೆಲ್ಲವೂ ಪರಮಾತ್ಮನಲ್ಲಿ ಸೇರಿಕೊಳ್ಳುವದು.

---

1. ಇಲ್ಲಿ ಆನಂದಮಯಕೋಶವೆಂಬ ಹೆಸರಿನ ಆಜ್ಞಾನವನ್ನು ಹೇಳಿರುತ್ತದೆ— ಎಂಬ ವ್ಯಾಖ್ಯಾನವು ಭಾಷ್ಯವಿರುದ್ಧ. ಈ ವಿಷಯಕ್ಕೆ ಪೀಠಿಕೆಯನ್ನು ನೋಡಿರಿ.

2. ಈ ಸುಖವು ಆತ್ಮನ ಸ್ವರೂಪವೇ. ಸೂ. ಭಾ. ೧-೬-೬ ನೋಡಿ.

3. ಸುಷುಪ್ತಿಯಲ್ಲಿ ಅವಿದ್ಯಾಕಾಮಕರ್ಮಗಳು ಇರುವದಿಲ್ಲವಾದ್ದರಿಂದ ಕಾರ್ಯಕರಣಗಳಾಗಲಿ ವಿಷಯಗಳಾಗಲಿ ಇರುವದಿಲ್ಲವೆಂಬ ಬಗ್ಗೆ ಬೃ. ೪-೩-೩೦ ನೋಡಿ.

4. ಶ್ರೋತೃವೇ ಮುಂತಾದ ಉಪಾಧಿಗಳಿಂದ ಶ್ರೋತೃತ್ವವೇ ಮುಂತಾದವು ಆತ್ಮನ ರೂಪಗಳೆಂ ತೋರುತ್ತಿರುವವು. ಬೃ. ಭಾ. ೧,೪-೭.

5. ಉಪಾಧಿಗಳೆಲ್ಲವೂ ಆತ್ಮರೂಪದಲ್ಲಿ ವಿಲೀನಗೊಂಡಿರುವವೆಂದು ತೋರಿಸುವದಕ್ಕೆ.

(ಭಾಷ್ಯ)

೭೦. ಸ ದೃಷ್ಟಾನ್ತಃ ಯಥಾ ಯೇನ ಪ್ರಕಾರೇಣ ಸೋಮ್ಯ[1] ಪ್ರಿಯದರ್ಶನೇ ವಯಾಂಸಿ ಪಕ್ಷಿಣಃ ವಾಸಾರ್ಥಂ ವೃಕ್ಷಂ ವಾಸೋವೃಕ್ಷಂ ಪ್ರತಿ ಸಂಪ್ರತಿಷ್ಠನ್ತೇ ಗಚ್ಛನ್ತಿ ಏವಂ ಯಥಾ[2] ದೃಷ್ಟಾನ್ತಃ ಹ ವೈ ತತ್ ವಕ್ಷ್ಯಮಾಣಂ ಸರ್ವಂ ಪರೇ ಆತ್ಮನಿ ಅಕ್ಷರೇ ಸಂಪ್ರತಿಷ್ಠತೇ[3] ।

(ಭಾಷ್ಯಾರ್ಥ)

ಆ ದೃಷ್ಟಾಂತವು ಹೇಗೆಂದರೆ : ಹೇಗೆ[3] ಯಾವ ಪ್ರಕಾರದಿಂದ, ಎಲೈ ಸೋಮ್ಯನೆ, ಪ್ರಿಯದರ್ಶನನೆ, 'ವಯಾಂಸಿ' ಎಂದರೆ ಪಕ್ಷಿಗಳು ವಾಸದ ವೃಕ್ಷವನ್ನು (ತಾವು) ವಾಸಕ್ಕಾಗಿ ಮಾಡಿಕೊಂಡಿರುವ ಮರವನ್ನು ಕುರಿತು ಹೊರಡುತ್ತವೆಯೋ ಹೋಗಿ ಸೇರಿಕೊಳ್ಳುತ್ತವೆಯೋ, ಹೀಗೆಯೇ ಈ ದೃಷ್ಟಾಂತದಂತೆಯೇ ಅದೆಲ್ಲವೂ ಎಂದರೆ ಮುಂದೆ ಹೇಳುವದೆಲ್ಲವೂ ಪರಮಾತ್ಮನಲ್ಲಿ ದಕ್ಷರ (ತತ್ತ್ವ)ದಲ್ಲಿ ಹೋಗಿ ಸೇರಿಕೊಳ್ಳುವದು.

(ಭಾಷ್ಯ)

೭೧. ಕಿಂ ತತ್ ಸರ್ವಮ್ ?

(ಭಾಷ್ಯಾರ್ಥ)

ಅದೆಲ್ಲವೂ ಎಂದರೆ (ಯಾವ) ಯಾವದು?[4] (ಎಂದರೆ ಶ್ರುತಿ ಹೇಳುತ್ತದೆ):

ಪೃಥಿವೀ ಚ ಪೃಥಿವೀಮಾತ್ರಾ ಚಾಪಶ್ಚಾಪೋಮಾತ್ರಾ ಚ ತೇಜಶ್ಚ ತೇಜೋಮಾತ್ರಾ ಚ ವಾಯುಶ್ಚ ವಾಯುಮಾತ್ರಾಚಾಕಾಶಶ್ಚಾಕಾಶ ಮಾತ್ರಾ ಚ ಚಕ್ಷುಶ್ಚ ದ್ರಷ್ಟವ್ಯಂ ಚ ಶ್ರೋತ್ರಂ ಚ ಶ್ರೋತವ್ಯಂ ಚ ಘ್ರಾಣಂ ಚ ಘ್ರಾತವ್ಯಂ ಚ ರಸಶ್ಚ ರಸಯಿತವ್ಯಂ ಚ ತ್ವಕ್ಚ ಸ್ಪರ್ಶಯಿತವ್ಯಂ ಚ ವಾಕ್ಚ ವಕ್ತವ್ಯಂ ಚ ಹಸ್ತೌ ಚಾದಾತವ್ಯಂ ಚೋಪಸ್ಥಶ್ಚಾನನ್ದಯಿತವ್ಯಂ ಚ ಪಾಯುಶ್ಚ ವಿಸರ್ಜಯಿತವ್ಯಂ ಚ ಪಾದೌ ಚ ಗನ್ತವ್ಯಂ ಚ ಮನಶ್ಚ ಮನ್ತವ್ಯಂ ಚ ಬುದ್ಧಿಶ್ಚ ಬೋದ್ಧವ್ಯಂ ಚಾಹಂ ಕಾರಶ್ಚಾಹಂಕರ್ತವ್ಯಂ ಚ ಚಿತ್ತಂ ಚ ಚೇತಯಿತ

1. "ಹಿ ಸೋಮ್ಯ" ಎಂದು ವಾ॥ ಪಾಠ. ೇೇಹೇ ಸೋಮ್ಯ" ಎಂದಿದ್ದರೆ ಸರಿಯಾದೀತು.

2. ೇೇಯಥಾ" ಎಂಬ ಮಾತಿನ ಮುಂದೆ ೇೇಅಯಂ" ಎಂದಿದ್ದರೆ ಅರ್ಥವು ಸ್ಫುಟವಾಗುತ್ತದೆ.

3. "ಸ ದೃಷ್ಟಾನ್ತಃ ಯಥಾ" ಎಂದಿರಬೇಕು. ಅಥವಾ 'ಯಥಾ' ಎಂಬ ಮಾತು ಎರಡೂ ಕಡೆಗೂ ಅನ್ವಯಿಸುತ್ತದೆ ಎಂದಿಟ್ಟುಕೊಳ್ಳಬೇಕು. ಇಲ್ಲಿ ಕೊಟ್ಟಿರುವ ದೃಷ್ಟಾಂತದಲ್ಲಿ ಹಕ್ಕಿಗಳು ಗೂಡಿನಲ್ಲಿ ಪುರೆಯಾಗಿರುತ್ತವೆಯೇ ಹೊರತು ಒಂದಾಗಿರುವದಿಲ್ಲ ; ದಾಷ್ಟಾಂತಿಕದಲ್ಲಿ ಎಲ್ಲವೂ ಆತ್ಮನಲ್ಲಿ ಒಂದಾಗಿರುತ್ತದೆ ; ಆದ್ದರಿಂದ ತನ್ನ ಮೂಲವನ್ನು ಬಿಟ್ಟು ಬೇರೆಯಾಗಿರುವದಿಲ್ಲವೆಂಬುದಷ್ಟೇ ಇಲ್ಲಿ ಹೋಲಿಕೆ ಎಂದು ತಿಳಿಯಬೇಕು.

4. ಸುಷುಪ್ತಿಯಲ್ಲಿ ಒಂದಾಗುವದು ಯಾವಯಾವದು ?

ವ್ಯಂ ಚ ತೇಜಶ್ಚ ನಿದ್ಯೋತಯಿತವ್ಯಂ ಚ ಪ್ರಾಣಶ್ಚ ವಿಧಾರಯಿತವ್ಯಂ ಚ ॥ ೪ ॥

೪. ಪೃಥ್ವಿಯೂ ಪೃಥ್ವೀಮಾತ್ರೆಯೂ, ಅಪ್ಪು ಅಪ್ಸೋ ಮಾತ್ರೆಯೂ, ತೇಜಸ್ಸೂ ತೇಜೋಮಾತ್ರೆಯೂ, ವಾಯುವೂ ವಾಯುಮಾತ್ರೆಯೂ, ಆಕಾಶವೂ ಆಕಾಶಮಾತ್ರೆಯೂ, ಕಣ್ಣೂ ನೋಡಕ್ಕಮ್ಪೂ, ಕಿವಿಯೂ ಕೇಳತಕ್ಕದ್ದೂ, ಮೂಗೂ ಮೂಸಲ್ಪಡತಕ್ಕದ್ದೂ, ನಾಲಿಗೆಯೂ ಸವಿಸೋಡಲ್ಪಡತಕ್ಕದ್ದೂ, ತ್ವಕ್ಕೂ ಸೋಕಲ್ಪಡತಕ್ಕದ್ದೂ, ವಾಕ್ಕೂ ಮಾತಾಡತಕ್ಕದ್ದೂ, ಹಸ್ತಗಳೂ ತೆಗೆದುಕೊಳ್ಳಲ್ಪಡತಕ್ಕದ್ದೂ ಉಪಸ್ಥವೂ ಅನಂದಪಡತಕ್ಕದ್ದೂ, ಪಾಯುವೂ ಬಿಡತಕ್ಕದ್ದೂ, ಪಾದಗಳೂ ನಡೆಯತಕ್ಕದ್ದೂ, ಮನಸ್ಸೂ ಮನನಮಾಡಲ್ಪಡತಕ್ಕದ್ದೂ, ಬುದ್ಧಿಯೂ ನಿಶ್ಚಯಿಸಲ್ಪಡತಕ್ಕದ್ದೂ, ಅಹಂಕಾರವೂ ಅಭಿಮಾನಿಸಲ್ಪಡತಕ್ಕದ್ದೂ, ಚಿತ್ತವೂ ಅರಿಯಲ್ಪಡತಕ್ಕದ್ದೂ, ತೇಜಸ್ಸೂ ಬೆಳಗಲ್ಪಡತಕ್ಕದ್ದೂ, ಪ್ರಾಣವೂ ತಡೆದುಕೊಂಡಿರಬೇಕಾದದ್ದೂ.

(ಭಾಷ್ಯ)

೪. ಪೃಥಿವೀ ಚ ಸ್ಥೂಲಾ ಪಞ್ಚಗುಣಾ ತತ್ಕಾರಣಂ[1] ಚ ಪೃಥಿವೀಮಾತ್ರಾ[2] ಚ ಗನ್ಧತನ್ಮಾತ್ರಾ | ತಥಾ ಅಪಶ್ಚ ಅಪ್ಸೋಮಾತ್ರಾ[3] ಚ ತೇಜಶ್ಚ ತೇಜೋಮಾತ್ರಾ ಚ ವಾಯುಶ್ಚ ವಾಯುಮಾತ್ರಾ ಚ ಆಕಾಶಶ್ಚ ಆಕಾಶಮಾತ್ರಾ ಚ ಸ್ಥೂಲಾನಿ ಚ ಸೂಕ್ಷ್ಮಾಣಿ ಚ ಭೂತಾನಿ ಇತ್ಯರ್ಥಃ | ತಥಾ ಚಕ್ಷುಶ್ಚ ಇನ್ದ್ರಿಯಂ ರೂಪಂ ಚ ದ್ರಷ್ಟವ್ಯಂ ಚ, ಶ್ರೋತ್ರಂ ಚ ಶ್ರೋತವ್ಯಂ ಚ, ಘ್ರಾಣಂ ಚ ಘ್ರಾತವ್ಯಂ ಚ, ರಸಶ್ಚ ರಸಯಿತವ್ಯಂ ಚ, ತ್ವಕ್ಚ ಸ್ಪರ್ಶಯಿತವ್ಯಂ ಚ, ವಾಕ್ಚ ವಕ್ತವ್ಯಂ ಚ, ಹಸ್ತೌ ಚ, ಆದಾತವ್ಯಂ ಚ, ಉಪಸ್ಥಶ್ಚ ಆನನ್ದಯಿತವ್ಯಂ ಚ, ಪಾಯುಶ್ಚ ವಿಸರ್ಜಯಿತವ್ಯಂ ಚ, ಪಾದೌ ಚ ಗನ್ತವ್ಯಂ ಚ | ಬುದ್ಧೀನ್ದ್ರಿಯಾಣಿ ಕರ್ಮೇನ್ದ್ರಿಯಾಣಿ ತದರ್ಥಾಶ್ಚ ಉಕ್ತಾಃ[4] | ಮನಶ್ಚ

---

1. "ತತ್ಕಾರಣಾ ಚ" ಎಂಬ ಆ॥ ಪಾಠಕ್ಕಿಂತ ಈ ವಾ॥ ಪಾಠವು ಮೇಲು.

2. "ಪೃಥಿವೀಮಾತ್ರಾ" ಎಂಬು ಚಕಾರರಹಿತವಾಗಿ ವಾ॥ ಪಾಠ.

3. "ಅಪ್ಸೋಮಾತ್ರಾ" ಎಂಬಲ್ಲಿ ಸಮಾಸವಾಗಿದ್ದರೂ ವಿಭಕ್ತಿಪ್ರತ್ಯಯವು ಲೋಪವಾಗದೆ ಇರುವದು ವೈದಿಕಪ್ರಯೋಗವೆಂದು ವ್ಯಾಖ್ಯಾನದಲ್ಲಿದೆ ; 'ಆಪಃ' ಎಂಬುದು ಸಾಂತ ಶಬ್ದವೆಂದು ಕೆಲವರ ಅಭಿಪ್ರಾಯ.

4. "ತಥಾ ಶ್ರೋತ್ರಾನ್ತಿ" ಎಂಬ ಆ॥ ಪಾಠಕ್ಕಿಂತ ಈ ವಾ॥ ಪಾಠವು ಮೇಲು.

ಪೂರ್ವೋಕ್ತಮ್ | ಮನ್ತವ್ಯಂ ಚ ತದ್ವಿಷಯಃ | ಬುದ್ಧಿಶ್ಚ ನಿಶ್ಚಯಾತ್ಮಿಕಾ | ಬೋದ್ಧವ್ಯಂ ಚ ತದ್ವಿಷಯಃ | ಅಹಂಕಾರಶ್ಚ ಅಭಿಮಾನಲಕ್ಷಣಂ ಅನ್ತಃಕರಣಮ್ | ಅಹಂಕರ್ತವ್ಯಂ ಚ ತದ್ವಿಷಯಃ | ಚಿತ್ತಂ ಚ ಚೇತನಾವತ್ ಅನ್ತಃಕರಣಮ್ | ಚೇತಯಿತವ್ಯಂ ಚ ತದ್ವಿಷಯಃ | ತೇಜಶ್ಚ ತ್ವಗಿನ್ದ್ರಿಯವ್ಯತಿರೇಕೇಣ ಪ್ರಕಾಶವಿಶಿಷ್ಟಾ ಯಾ ತ್ವಕ್ | ತಯಾ ನಿರ್ಭಾಸ್ಯೋ ವಿಷಯಃ ವಿದ್ಯೋತಯಿತವ್ಯಮ್ | ಪ್ರಾಣಶ್ಚ ಸೂತ್ರಂ ಯದಾಚಕ್ಷತೇ| ತೇನ ವಿಧಾರಯಿತವ್ಯಂ ಸಂಗ್ರಹನೀಯಮ್ | ಸರ್ವಂ ಹಿ ಕಾರ್ಯಕರಣಜಾತಂ[1] ಪಾರಾರ್ಥ್ಯೇನ ಸಂಹತಂ ನಾಮರೂಪಾತ್ಮಕಮ್ ಏತಾವದೇವ ||

(ಭಾಷ್ಯಾರ್ಥ)

ಐದು ಗುಣಗಳಿಂದ ಕೂಡಿದ[2] ಪೃಥಿವಿಯು ಸ್ಥೂಲ(ಪೃಥಿವಿಯು) ; ಮತ್ತು ಪೃಥಿವೀಮಾತ್ರೆ ಎಂದರೆ ಈ (ಸ್ಥೂಲಪೃಥಿವಿ)ಗೆ ಕಾರಣವಾಗಿರುವ. ಗಂಧತನ್ಮಾತ್ರೆ.[3] ಇದರಂತೆ ಅಪ್ಪು ಅಪ್ಪೋಮಾತ್ರೆಯೂ, ತೇಜಸ್ಸು ತೇಜೋಮಾತ್ರೆಯೂ, ವಾಯುವೂ ವಾಯುಮಾತ್ರೆಯೂ, ಆಕಾಶವೂ ಆಕಾಶಮಾತ್ರೆಯೂ–ಎಂದರೆ ಸ್ಥೂಲವಾದ ಮತ್ತು ಸೂಕ್ಷ್ಮವಾದ ಭೂತಗಳು ಎಂದರ್ಥ. ಹಾಗೂ ಚಕ್ಷುಸ್ಸೆಂಬ ಇಂದ್ರಿಯವೂ ಅದರಿಂದ ನೋಡಲ್ಪಡತಕ್ಕ ರೂಪವೂ, ಶ್ರೋತ್ರವೂ ಕೇಳಲ್ಪಡತಕ್ಕದ್ದೂ, ಘ್ರಾಣವೂ ಮೂಸಲ್ಪಡತಕ್ಕದ್ದೂ, ಜಿಹ್ವೇಂದ್ರಿಯವೂ ಸವಿನೋಡಲ್ಪಡತಕ್ಕದ್ದೂ, ತ್ವಗಿಂದ್ರಿಯವೂ; ಮುಟ್ಟಲ್ಪಡತಕ್ಕದ್ದೂ, ವಾಗಿಂದ್ರಿಯವೂ ಮಾತನಾಡಲ್ಪಡತಕ್ಕದ್ದೂ, ಹಸ್ತಗಳೂ ತೆಗೆದುಕೊಳ್ಳಲ್ಪಡತಕ್ಕದ್ದೂ, ಉಪಸ್ಥವೂ (ಅನುಭವಿಸಿ) ಆನಂದಪಡತಕ್ಕದ್ದೂ, ಪಾಯುವೂ ಬಿಡತಕ್ಕದ್ದೂ, ಪಾದಗಳೂ ನಡೆಯತಕ್ಕದ್ದೂ ; ಎಂದರೆ ಹಿಂದೆ ಹೇಳಿದ[4] ಬುದ್ಧೀಂದ್ರಿಯಗಳು, ಕರ್ಮೇಂದ್ರಿಯಗಳು, ಮತ್ತು ಅವುಗಳ ವಿಷಯಗಳು

1. "ಕಾರ್ಯಕಾರಣಜಾತಮ್" ಎಂಬ ಪಾಠಕ್ಕಿಂತ ಈ ವಾ॥ ಪಾಠವು ಮೇಲು.

2. "ಸ್ಥೂಲಪೃಥ್ವಿಯಲ್ಲಿ ಐದು ಗುಣಗಳಿರುವೆವೆಂದು ಹೇಳಿರುವದರ ಅಭಿಪ್ರಾಯವೇನೆಂಬುದು ಸ್ಪಷ್ಟವಿಲ್ಲ ; ಏಕೆಂದರೆ ಆಚಾರ್ಯರು ಛಾಂ. ಭಾ. ೬–೪–೪ರಲ್ಲಿ ಪಂಚೀಕರಣವನ್ನು ಒಪ್ಪಿರುವದರಿಂದ ಎಲ್ಲಾ ಗುಣಗಳೂ ಎಲ್ಲಾ ಭೂತಗಳಲ್ಲಿಯೂ ಇರುತ್ತವೆ ಎಂದು ಹೇಳಿದಂತೆ ಆಯಿತು.

3. ತನ್ಮಾತ್ರೆಗಳ ವಿಷಯದಲ್ಲಿಯೂ ಅವುಗಳಿಗೂ ಸ್ಥೂಲಭೂತಗಳಿಗೂ ಇರುವ ಸಂಬಂಧದ ವಿಷಯಕ್ಕೂ ಪೀಠಿಕೆಯನ್ನು ನೋಡಿ.

4. ಪ್ರ. ಭಾ. ೩–೩ರಲ್ಲಿ ಹೇಳಿರುವ.

(ಎಂಪರ್ಧ). ಹಿಂದೆ ಹೇಳಿದ ಮನಸ್ಸು[1] ಮತ್ತು ಮನನಮಾಡಲ್ಪಡತಕ್ಕದ್ದು ಎಂಬ ಅದರ ವಿಷಯವು; ನಿಶ್ಚಯಮಾಡುವ ರೂಪದ ಬುದ್ಧಿಯು ಮತ್ತು ಅದರ ವಿಷಯವಾದ ಜ್ಞೇಯವ್ಯವು; ಅಹಂಕಾರವು ಎಂದರೆ ಅಭಿಮಾನ(ಮಾಡುವ) ರೂಪದ ಅಂತಃಕರಣವು, ಮತ್ತು ಅಹಂಕರ್ತವ್ಯವು (ಅಭಿಮಾನಮಾಡಲ್ಪಡತಕ್ಕ) ಅದರ ವಿಷಯವು; ಚಿತ್ತವು ಎಂದರೆ ಚೇತನಾ(ವೃತ್ತಿಯುಳ್ಳ)[2] ಅಂತಃಕರಣವು ಮತ್ತು ಚೇತಯಿತವ್ಯವಾದ ಅದರ ವಿಷಯವು; ತೇಜಸ್ಸು ಎಂದರೆ ತ್ವಗಿಂದ್ರಿಯವಲ್ಲದೆ (ವಿಷಯವನ್ನು) ತಿಳಿಸುವ (ಶಕ್ತಿಯಿಂದ) ಕೂಡಿರುವ[3] ತ್ವಕ್ಕಿದೆಯಲ್ಲ, ಅದು ಮತ್ತು ಅದರಿಂದ ತಿಳಿಸಲ್ಪಡತಕ್ಕ ವಿಷಯವು ವಿದ್ಯೋತಯಿತವ್ಯವು, ಅದು. (ಮತ್ತು) ಅದರಿಂದ ತಡೆದುಕೊಳ್ಳಲ್ಪಡತಕ್ಕದ್ದು ಎಂದರೆ ಗಂಟುಪಾಕೆ ನಿಲ್ಲಿಸಿಕೊಳ್ಳತಕ್ಕ (ವಿಷಯವು). ಮತ್ತೊಬ್ಬ (ಆತ್ಮನಿ)ಗಾಗಿ ಒಂದಪೊತಸೊಂದು ಕೂಡಿಕೊಂಡು ಗುಂಪಾಗಿರುವ[4] ನಾಮರೂಪಾತ್ಮಕವಾದ ಕಾರ್ಯಕರಣಸಮೂಹವೆಲ್ಲ ಇಷ್ಟೇ.[5]

(ಭಾಷ್ಯ)

೭೩. ಅತಃ ಪರಂ ಯತ್ ಅತ್ಯರೂಪಂ[6] ಜಲಸೂರ್ಯಕಾದಿವತ್ ಭೋಕ್ತೃತ್ವಕರ್ತೃತ್ವೇನ ಇಹ ಅನುಪ್ರವಿಷ್ಟಮ್—

1. ಪ್ರ. ಭಾ. ೩–೭ರಲ್ಲಿ ಹೇಳಿರುವ ಅಂತಃಕರಣ : ಇದನ್ನು ಇಲ್ಲಿ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ–ಎಂದು ವೃತ್ತಿಭೇದದಿಂದ ವಿಂಗಡಿಸಿ ಹೇಳಿರುತ್ತದೆ. ಸಾಮಾನ್ಯದಂತೆ ಚಿತ್ತವು; ಇಂಥದ್ದು, ಆಂಥದ್ದು –ಎಂದು ವಿಕಲ್ಪಿಸುವದು ಮನಸ್ಸು; ಇಂಥದ್ದೇ ಎಂದು ನಿಶ್ಚಯಿಸುವದು ಬುದ್ಧಿ; ಅನಾತ್ಮವಸ್ತುಗಳಲ್ಲಿ ನಾನು ಎಂದು ಭಾವಿಸುವದು ಅಹಂಕಾರವು.

2. ಸಾಮಾನ್ಯವಾಗಿ ಅರಿಯುವ.

3. ಉದಾಹರಣೆಗೆ ಬೆನ್ನಮೇಲೆ ಹಾಲಿನ ತಪ್ಪಲೆ ಎರೆದರೆ ಅದರ ಜಲನೆಯನ್ನು ತಿಳಿಸುವ.

4. ಕಾರ್ಯಕರಣಗಳು ಒಟ್ಟಾಗಿ ಒಂದಕ್ಕೊಂದಕ್ಕೆ ಹೊಂದಿಕೊಂಡು ಕೆಲಸ ಮಾಡುತ್ತಿರುವದು ಭೋಕ್ತೃವಾದ ಆತ್ಮನಿಗಾಗಿ. ಕೇ. ಭಾ. ೧–೨; ಕ.ಭಾ. ೫–೧೨ನ್ನು ನೋಡಿರಿ.

5. ಪ್ರಪಂಚವೆಲ್ಲಾ ಇಷ್ಟೇ. ಇದು ಅಸ್ವತಂತ್ರವು, ಸಂಹತವು, ಸುಷುಪ್ತಿಯಲ್ಲಿ ಲಯವಾಗಿ ಅಡಗುತ್ತದೆ

6. "ಆತ್ಮಸ್ವರೂಪಂ" ಎಂದು ವಾ' ಪಾಠ.

(ಭಾಷ್ಯಾರ್ಥ)

ಇದಾದ ಬಳಿಕ[1] ನೀರಿನಲ್ಲಿ (ತೋರುವ) ಸೂರ್ಯಪ್ರತಿಬಿಂಬವೇ ಮುಂತಾದವುಗಳಂತೆ[2] ಕರ್ತೃಭೋಕ್ತೃರೂಪವಿಂದ ಇಲ್ಲಿ ಹೊಕ್ಕಿರುವ[3] ಆತ್ಮರೂಪವಿದೆಯಷ್ಟೆ :—

ಏಷ ಹಿ ದ್ರಷ್ಟಾ ಸ್ಪೃಷ್ಟಾ ಶ್ರೋತಾ ಘ್ರಾತಾ ರಸಯಿತಾ ಮನ್ತಾ ಬೋದ್ಧಾ ಕರ್ತಾ ವಿಜ್ಞಾನಾತ್ಮಾ ಪುರುಷಃ। ಸ ಪರೇಽಕ್ಷರ ಆತ್ಮನಿ ಸಂಪ್ರತಿಷ್ಠತೇ ॥ ೯ ॥

೯. ಈ ನೋಡುವ, ಮುಟ್ಟುವ, ಕೇಳುವ, ಮೂಸುವ, ಸವಿಯುವ, ಯೋಚಿಸುವ, ಅರಿತುಕೊಳ್ಳುವ ಕರ್ತೃವಾದ ವಿಜ್ಞಾನಾತ್ಮನಾದ ಪುರುಷನಿರುವನಲ್ಲ, ಇವನು ಅಕ್ಷರವೆಂಬ ಪರಮಾತ್ಮನನ್ನು ಸೇರಿಕೊಳ್ಳುತ್ತಾನೆ.

(ಭಾಷ್ಯ)

೭೪. ಏಷ ಹಿ ದ್ರಷ್ಟಾ ಸ್ಪೃಷ್ಟಾ ಶ್ರೋತಾ ಘ್ರಾತಾ ರಸಯಿತಾ ಮನ್ತಾ ಬೋದ್ಧಾ ಕರ್ತಾ ವಿಜ್ಞಾನಾತ್ಮಾ। ವಿಜ್ಞಾನಂ ವಿಜ್ಞಾಯತೇ ಅನೇನ ಇತಿ ಕರಣಭೂತಂ ಬುದ್ಧ್ಯಾದಿ। ಇದಂ ತು ವಿಜಾನಾತೀತಿ ವಿಜ್ಞಾನಂ ಕರ್ತೃಕಾರಕರೂಪಮ್। ತದಾತ್ಮಾ ತತ್ಸ್ವಭಾವಃ। ವಿಜ್ಞಾತೃಸ್ವಭಾವಃ ಇತ್ಯರ್ಥಃ। ಪುರುಷಃ ಕಾರ್ಯಕರಣಸಙ್ಘಾತೋಕ್ತೋಪಾಧಿಪೂರಣಾತ್[4] ಪುರುಷಃ। ಸ ಚ ಜಲಸೂರ್ಯಕಾದಿಪ್ರತಿಬಿಮ್ಬಸ್ಯ ಸೂರ್ಯಾದಿಪ್ರವೇಶವತ್ ಜಲಾದ್ಯಾಧಾರ ಶೋಷೇ[5] ಪರೇ ಅಕ್ಷರೇ ಆತ್ಮನಿ ಸಂಪ್ರತಿಷ್ಠತೇ ॥

(ಭಾಷ್ಯಾರ್ಥ)

ಈ ನೋಡುವ, ಮುಟ್ಟುವ, ಕೇಳುವ, ಮೂಸುವ, ಸವಿಯುವ, ಯೋಚಿಸುವ, ಅರಿತುಕೊಳ್ಳುವ, ಕರ್ತೃವಾದ, ವಿಜ್ಞಾನಾತ್ಮನಾದ ಕರಣವಾಗಿರುವ ಬುದ್ಧಿಯೇ ಮುಂತಾದದ್ದು ತನ್ನಿಂದ ಅರಿಯುತ್ತಾರಾದ್ದರಿಂದ ವಿಜ್ಞಾನವೆನಿಸಿರುತ್ತದೆ, ಆದರೆ ಇದು ಅರಿಯುತ್ತದೆಯಾದ್ದರಿಂದ ವಿಜ್ಞಾನವು, ಕರ್ತೃಕಾರಕ

---

1. ಕಾರ್ಯಕರಣಗಳು ಆತ್ಮನಲ್ಲಿ ಅಡಗಿದ ಬಳಿಕ.

2. ಉಪಾಧಿನಿಮಿತ್ತವಾಗಿರುವ, ಪರಮಾರ್ಥವಲ್ಲದೆ ಇರುವ-ಎಂಬುದನ್ನು ತಿಳಿಸುವ ವೈಷ್ಣಾಂತವಿದು. ಸೂ. ಭಾ. ೩-೨-೧೮.

3. ಈ ಶರೀರದಲ್ಲಿ ಹೊಕ್ಕಿರುವ. ಪ್ರವೇಶಶ್ರುತಿಯು ಜರ್ಜಿಯನ್ನು ಕೈ. ಭಾ. ೨-೬, ಬೃ. ಭಾ. ೧-೪-೭ ಇವುಗಳಲ್ಲಿ ಕಾಣಬಹುದು.

4. "ಪೂರ್ಣತ್ವಾತ್" ಎಂದು ಅ॥ ಪಾಠ ; ನಾವು ಕೊಟ್ಟಿರುವದು ವಾ॥ ಪಾಠ.

5. "ಜಗದಾಧಾರಶೇಷೇ" ಅ॥, "ಜಗದಾಧಾರಕೋಷೇ" ಕಾ॥ ಎಂಬ ಪಾಠಗಳಿಗಿಂತ ಈ ವಾ॥ ಪಾಠವು ಮೇಲೆಂದು ತೋರುವದು.

ಹೊರವಾಪಪ್ಪ.[1] ಆ (ವಿಜ್ಞಾನ)ಾತ್ಮನು ಎಂದರೆ ಆ ಸ್ವಭಾವದವನು. ಆರಿ ಮುವ ಸ್ವಭಾವನಪನಾದ ಎಂದರ್ಥ. (ಆಂಧ್ರ) ಪುರುಷನು ; ಹಿಂದೆ ಹೇಳಿ ಪುವ ಕಾರ್ಯಕರಣಗಳ ಸಂಘಾತವೆಂಬ ಉಪಾಧಿಯನ್ನು ತುಂಬಿಕೊಂಡಿರುವದರಿಂದ[2] ಪುರುಷ(ನೆನಿಸಿಪ)ತ್ತಾನೆ). ಇವನು ನೀರಿನ ಸೂರ್ಯಬಿಂಬವೇ ಮುಂತಾದ ಪ್ರತಿ ಬಿಂಬವು ನೀರೇ ಮುಂತಾದ (ತನ್ನ) ಆಧಾರವು ಬತ್ತಿಹೋಗಲು ಸೂರ್ಯನೇ ಮುಂತಾದ (ಬಿಂಬ)ವನ್ನು ಕೊಗುವಂತೆ[3] ಅಕ್ಷರವೆಂಬ ಪರಮಾತ್ಮನಲ್ಲಿ ಹೋಗಿ ಸೇರಿಕೊಳ್ಳುತ್ತಾನೆ.

ಉಪಸಂಹಾರ

(ಭಾಷ್ಯ)

೭೫. ತದೇಕತ್ವವಿದಃ ಫಲಮ್ ಆಹ—

(ಭಾಷ್ಯಾರ್ಥ)

ಆ ವಿದ್ಯೆಯನ್ನು ತಿಳಿದುಕೊಂಡವನಿಗೆ (ಆಗುವ) ಫಲವನ್ನು (ಶ್ರುತಿ) ಹೇಳುತ್ತದೆ :—

ಪರಮೇವಾಕ್ಷರಂ ಪ್ರತಿಪದ್ಯತೇ ಸ ಯೋ ಹ ವೈ ತದಚ್ಛಾಯ ಮಶರೀರಮಲೋಹಿತಂ ಶುಭ್ರಮಕ್ಷರಂ ವೇದಯತೇ ಯಸ್ತು ಸೋಮ್ಯ ! ಸ ಸರ್ವಜ್ಞಃ ಸರ್ವೋ ಭವತಿ ತದೇಷ ಶ್ಲೋಕಃ॥೧೦॥

೧೦. ಎಲ್ಲಿ ಸೋಮ್ಯನೆ, ಯಾವನಾದರೆ ಆ ನೆರಳಿಲ್ಲದ ಶರೀರ ವಿಲ್ಲದ, ಕೆಂಪಲ್ಲದ, ಶುಭ್ರವಾದ, ಅಕ್ಷರವನ್ನು ಅರಿತುಕೊಳ್ಳು ತ್ತಾನೋ ಆತನು ಅಕ್ಷರವೆಂಬ ಪರ(ವಸ್ತು)ವನ್ನೇ ಪಡೆದುಕೊಳ್ಳು ತ್ತಾನೆ. ಯಾವನು ಹೀಗೆ ಅರಿತುಕೊಳ್ಳುತ್ತಾನೋ ಅವನು ಸರ್ವಜ್ಞನೂ ಸರ್ವವೂ ಆಗುತ್ತಾನೆ. ಅಲ್ಲಿ ಈ ಶ್ಲೋಕವಿದೆ :

(ಭಾಷ್ಯ)

೭೬. ಪರಮೇವ ಅಕ್ಷರಂ ವಕ್ಷ್ಯಮಾಣವಿಶೇಷಣಂ ಪ್ರತಿಪದ್ಯತೇ ಇತ್ಯೇತದುಚ್ಯತೇ[4] ; ಸ ಯೋ ಹ ವೈ ತತ್ ಸರ್ವೈಷಣಾವಿನಿರ್ಮುಕ್ತಃ ಅಚ್ಛಾಯಂ

1. ವಿಜ್ಞಾನಶಬ್ದವು ಕರಣಾರ್ಥದಲ್ಲಿ ಬುದ್ಧಿವಾಚಕ, ಕರ್ತೃರ್ಥದಲ್ಲಿ ಆತ್ಮವಾಚಕ.
2. ಕರಣಗಳಲ್ಲಿ ತೋರುವ ಅರಿವುಗಳೆಲ್ಲಿ ಈ ಆತ್ಮನ ಅರಿವಿನ ಅಧೀನ.
3. ನೀರು ಬತ್ತಿಹೋದರೆ ಪ್ರತಿಬಿಂಬವು ಸೂರ್ಯನಲ್ಲಿ ಬೆರೆತಂತೆ ಆಗುವ ಹಾಗೆ ಸುಷುಪ್ತಿಯಲ್ಲಿ ಉಪಾಧಿಲಯದಿಂದ ಜೀವರೂಪವೂ ಪರಮಾತ್ಮನಲ್ಲಿ ಬೆರೆತುಕೊಂಡಂತಾಗುತ್ತದೆ. ಸೂ. ಭಾ. ೧.೧.೯, ೩-೨-೩೪, ೪೫.
4. "ವಿಶದಮಚ್ಯತೇ" ಎಂಬ ಮಾತುಗಳು ಇಲ್ಲದಿದ್ದರೂ ಸಾಗುತ್ತದೆ. ಭಾಷ್ಯದಲ್ಲಿ ಅವು ಸೊದಲು ಇಲ್ಲದೆಯೂ ಇರಬಹುದೆಂದು ತೋರುತ್ತದೆ.

ತಮೋವರ್ಜಿತಮ್, ಅಶರೀರಂ ನಾಮರೂಪಸರ್ವೋಪಾಧಿಶರೀರವರ್ಜಿತಮ್[1] ಅಲೋಹಿತಂ ಲೋಹಿತಾದಿಸರ್ವಗುಣವರ್ಜಿತಮ್ | ಯತ ಏವಮ್ ಅತಃ ಶುಭ್ರಂ ಶುದ್ಧಮ್ | ಸರ್ವವಿಶೇಷಣರಹಿತತ್ವಾತ್ | ಅಕ್ಷರಂ ಸತ್ಯಂ ಪುರುಷಾಖ್ಯಮ್ ಅಪ್ರಾಣಮ್ ಅಮನೋಃ ಗೋಚರಮ್, ಶಿವಂ ಶಾನ್ತಂ ಸಬಾಹ್ಯಾಭ್ಯನ್ತರಮ್ ಅಜಂ ವೇದಯತೇ ವಿಜಾನಾತಿ ಯಸ್ತು ಸರ್ವತ್ಯಾಗೀ ಹೇ[2] ಸೋಮ್ಯ, ಸಃ ಸರ್ವಜ್ಞಃ ನ ತೇನ ಅವಿದಿತಂ ಕಿಂಚಿತ್ ಸಂಭವತಿ | ಪೂರ್ವಮ್ ಅವಿದ್ಯಯಾ ಅಸರ್ವಃ ಅಸೀತ್[3], ಪುನರ್ವಿದ್ಯಯಾ ಅವಿದ್ಯಾಪನಯೇ ಸರ್ವೋ ಭವತಿ | ತತ್ ಅಸ್ಮಿನ್ನರ್ಥೇ[4] ಏಷಃ ಶ್ಲೋಕಃ ಮನ್ತ್ರಃ ಭವತಿ ಉಕ್ತಾರ್ಥಸಙ್ಗ್ರಹಕಃ ||

(ಭಾಷ್ಯಾರ್ಥ)

(ಅವನು) ಅಕ್ಷರವೆಂಬ ಪರ(ತತ್ತ್ವ)ವನ್ನೇ ಎಂದರೆ ಮುಂದೆ ಹೇಳುವ (ಪರತತ್ತ್ವವನ್ನೇ) ಪಡೆಯುತ್ತಾನೆ ಎಂಬೀ ಅಭಿಪ್ರಾಯವನ್ನು ತಿಳಿಸಿರುತ್ತದೆ. ಯಾವನಾದರೆ ಹಾಗೆ ಎಂದರೆ ಎಲ್ಲಾ ಏಷಣೆಗಳನ್ನೂ ಬಿಟ್ಟು[5] ನೆರಳಿಲ್ಲದ ಎಂದರೆ (ಅಜ್ಞಾನದ) ತಮಸ್ಸಿಲ್ಲದ ಶರೀರವಿಲ್ಲದ ನಾಮರೂಪಗಳ ಯಾವ ಉಪಾಧಿಶರೀರವೂ ಇಲ್ಲದ,[6] ಕೆಂಪಿಲ್ಲದ ಎಂದರೆ ಕೆಂಪೇ ಮುಂತಾದ ಯಾವ ಗುಣವೂ ಇಲ್ಲದ.[7] ಹೀಗಿರುವದರಿಂದ ಶುಭ್ರವಾದ ಎಂದರೆ ಶುದ್ಧವಾದ (ಎಂದರ್ಥ); ಏಕೆಂದರೆ (ಅದರಲ್ಲಿ) ಯಾವ ವಿಶೇಷಣವೂ ಇರುವದಿಲ್ಲ.[8] ಅಕ್ಷರವನ್ನು ಎಂದರೆ ಪುರುಷನೆಂಬ ಹೆಸರಿನ ಸತ್ಯವನ್ನು,[9] ಪ್ರಾಣವಿಲ್ಲದ, ಮನಸ್ಸಿಲ್ಲದ,[10] ಅವಿಷಯ

---

1. "ನಾಮರೂಪಕೃತ....." ಎಂದಿದ್ದರೆ ಸ್ಪಷ್ಟತರವಾಗುತ್ತಿತ್ತು.
2. ಈ ಮಾತು ವಾ॥ ಪಾಠದಲ್ಲಿ ಮಾತ್ರ ಇದೆ.
3. 'ಅಸರ್ವಜ್ಞ ಆಸೀತ್' ಎಂದು ವಾ॥ ಪಾಠ.
4. "ತದಾ ತಸ್ಮಿನ್ನರ್ಥೇ" ಎಂಬ ಅ॥ ಪಾಠವು ಸರಿಯಾಗಿಲ್ಲ ; "ತತ್ ಏತಸ್ಮಿನ್ನರ್ಥೇ" ಎಂಬ ಮೈ॥ ಪಾಠಕ್ಕೆ ಬದಲು ಅದು ತಪ್ಪಾಗಿ ಬಿದ್ದಿರಬಹುದೆಂತ ಕಾಣುತ್ತದೆ. ನಾವು ಕೊಟ್ಟಿರುವದು ವಾ॥ ಪಾಠ.
5. ತತ್ ಎಂದರೆ ಅತ್ಯಾಶ್ಚರ್ಯಕರವಾಗಿ ; ಏಷಣಾತ್ರಯತ್ಯಾಗವೆಂಬುದು ಸಾಮಾನ್ಯರಿಗೆ ಅತ್ಯಾಶ್ಚರ್ಯಕರವಾಗಿರುವದರಿಂದ ತತ್ ಎಂಬ ವಿಶೇಷಣಕ್ಕೆ ಈ ಅರ್ಥವನ್ನು ಮಾಡಿದೆ.
6. ಸ್ಥೂಲಸೂಕ್ಷ್ಮಶರೀರಗಳಿಲ್ಲದ.
7. ದ್ರವ್ಯಗುಣಕರ್ಮಗಳಲ್ಲಿ ಒಂದೂ ಅಲ್ಲದ.
8. ಇಂಥದ್ದೆಂದು ನೇರಾಗಿ ಹೇಳದೆ ಮತ್ತೊಂದು ಧರ್ಮದ ನಿಷೇಧದಿಂದಲೇ ತಿಳಿಸಬೇಕಾಗಿರುವ, ತನಗೆರಡನೆಯದಿಲ್ಲದ ಒಂದೇ ಆಗಿರುವ ನಿರ್ವಿಶೇಷವಾದ. ಬೃ. ಭಾ. ೩-೮-೮ ನೋಡಿ.
9. ಮುಂ. ೧-೩-೧೩. 10. ಮುಂ. ೩-೧-೩.

ವಾಗಿದ್ದು, ಶಿವವೂ ಶಾಂತವೂ ಹೊರಗುಬಿಳಗುಗಳಿಂದ ಕೂಡಿ ಜನ್ಮರಹಿತವಾಗಿ ಗಿರುವ[1] (ತತ್ತ್ವವನ್ನು) ಅರಿತುಕೊಳ್ಳುತ್ತಾನೋ ಅನುಭವಕ್ಕೆ ತಂದುಕೊಳ್ಳುತ್ತಾನೋ (ಅವನು ಅಕ್ಷರವೆಂಬ ಪರವಸ್ತುವನ್ನೇ ಪಡೆದುಕೊಳ್ಳುತ್ತಾನೆ). ಮೂಲ ಸರ್ವತ್ಯಾಗಿಯಾದರೆ (ಹೀಗೆ ಅರಿತುಕೊಳ್ಳುವನೋ) ಅವನು ಸರ್ವಜ್ಞನು. ಎಂದರೆ ಅವನು ಅರಿತುಕೊಳ್ಳದೆ ಇರುವದೆಂಬುದು ಯಾವದೊಂದೂ (ಇರು)ವುದಿಲ್ಲ.[2] (ಅವನು) ಮೊದಲು ಅವಿದ್ಯೆಯಿಂದ ಅಸರ್ವನಾಗಿರುತ್ತಿದ್ದನು, ಮತ್ತೆ (ಈಗ) ವಿದ್ಯೆಯಿಂದ ಅವಿದ್ಯೆಯು ತೊಲಗಲಾಗಿ ಸರ್ವವೂ ಆಗುವನು.[3]

ಅಲ್ಲಿ ಎಂದರೆ ಈ ವಿಷಯದಲ್ಲಿ (ಈವರೆಗೆ) ಹೇಳಿದ ವಿಷಯಗಳನ್ನು ಸಂಗ್ರಹವಾಗಿ ತಿಳಿಸುವ ಈ ಶ್ಲೋಕವು ಎಂದರೆ ಮಂತ್ರವು ಇರುತ್ತದೆ :

ವಿಜ್ಞಾನಾತ್ಮಾ ಸಹ ದೇವೈಶ್ಚ ಸರ್ವೈಃ
ಪ್ರಾಣಾ ಭೂತಾನಿ ಸಂಪ್ರತಿಷ್ಠನ್ತಿ ಯತ್ರ ।
ತದಕ್ಷರಂ ವೇದಯತೇ ಯಸ್ತು ಸೋಮ್ಯ
ಸ ಸರ್ವಜ್ಞಃ ಸರ್ವಮೇವಾವಿವೇಶೇತಿ ॥ ೧೧ ॥

೧೧. ಎಲೈ ಸೋಮ್ಯನೆ, ಎಲ್ಲಾ ದೇವತೆಗಳೊಡನೆ ವಿಜ್ಞಾನಾತ್ಮನೂ ಪ್ರಾಣಗಳೂ ಭೂತಕಗಳೂ ಎಲ್ಲಿ ಸೇರಿಕೊಳ್ಳುವವೋ, ಆ ಅಕ್ಷರವನ್ನು ಯಾವನಾವರೆ ಅರಿತುಕೊಳ್ಳುವನೋ ಆ ಸರ್ವಜ್ಞನು ಎಲ್ಲವನ್ನೂ ಪ್ರವೇಶಿಸುವನು.

(ಭಾಷ್ಯ)

೨೨. ವಿಜ್ಞಾನಾತ್ಮಾ ಸಹ ದೇವೈಶ್ಚ ಅಗ್ನ್ಯಾದಿಭಿಃ ಪ್ರಾಣಾಃ ಚಕ್ಷುರಾದಯಃ ಭೂತಾನಿ ಪೃಥಿವ್ಯಾದೀನಿ ಸಂಪ್ರತಿಷ್ಠನ್ತಿ ಪ್ರವಿಶನ್ತಿ ಯತ್ರ ಯಸ್ಮಿನ್ ಅಕ್ಷರೇ ತತ್ ಅಕ್ಷರಂ ವೇದಯತೇ ಯಸ್ತು ಹೇ[4] ಸೋಮ್ಯ ಪ್ರಿಯದರ್ಶನ, ಸ ಸರ್ವಜ್ಞಃ ಸರ್ವಮೇವ ಅವಿವೇಶ ಆವಿಶತಿ ಇತ್ಯರ್ಥಃ ॥

---

1. ಮುಂ. ೧-೧-೯

2. ಮುಂ ೩-೧-೩

3. ಯಾವದಾತ್ಮನ ಅರಿಕರೆ ಸರ್ವವನ್ನೂ ಅರಿಕಂತಾಗುವದು ? ಎಂಬ ಮುಂ. ೧-೧-೩ರ ಪ್ರಶ್ನೆಗೆ ಉತ್ತರವಿದು.

4. ಬ್ರಹ್ಮಜ್ಞಾನದಿಂದ ನಿತ್ಯಪ್ರಸಿದ್ಧವಾದ ಸರ್ವಾತ್ಮಭಾವವನ್ನು ಜ್ಞಾನಿಯು ಪಡೆದುಕೊಳ್ಳುವನು. ಬೃ. ಭಾ. ೧-೪-೧೦.

5. ಈ ಮಾತು ಆ) ಪಾಠದಲ್ಲಿಲ್ಲ.

(ಭಾಷ್ಯಾರ್ಥ)

ಎಲೈ ಸೋಮ್ಯನೆ, ಪ್ರಿಯದರ್ಶನನೆ, ಅಗ್ನಿಯೇ ಮುಂತಾದ ದೇವತೆಗಳೊಡನೆ[1] ವಿಜ್ಞಾನಾತ್ಮನೂ ಚಕ್ಷುಸ್ಸೂ ಮುಂತಾದ ಪ್ರಾಣಗಳೂ ಪೃಥಿವಿಯೇ ಮುಂತಾದ ಭೂತಗಳೂ ಎಲ್ಲಿ ಎಂದರೆ ಯಾವ ಅಕ್ಷರದಲ್ಲಿ ಹೋಗಿ ಸೇರಿಕೊಳ್ಳುವವೋ ಆ ಅಕ್ಷರವನ್ನು ಯಾವನಾದರೆ ಅರಿತುಕೊಳ್ಳುವನೋ ಆ ಸರ್ವಜ್ಞನು, ಎಲ್ಲವನ್ನೂ (ಅವಿವೇಶ=ಆವಿಶತಿ) ಪ್ರವೇಶಿಸುವನು ಎಂದರ್ಥ.[2]

1. ಹಿಂದೆ ಐರಿಯು ಇಂದ್ರಿಯಗಳ ಮತ್ತು ವಿಷಯಗಳ ಅಯವನ್ನು ಹೇಳಿರುವದರಿಂದ ಅಧಿದೈವವಾದ ದೇವತೆಗಳನ್ನು ಬಿಟ್ಟಿದೆ ಎಂದು ತಿಳಿಯಬಾರದು. ಕೌ. ಬ್ರಾ. ಉಪನಿಷತ್ತಿನಲ್ಲಿ (೩–೩) ದೇವತೆಗಳ ಲಯವನ್ನೂ ಸ್ಪಷ್ಟವಾಗಿ ಹೇಳಿರುತ್ತದೆ.

2. ಸರ್ವಾತ್ಮನಾಗುವನು, ತಾನು ಎಲ್ಲಕ್ಕೂ ಆತ್ಮನೆಂಬುದನ್ನು ಕಂಡುಕೊಳ್ಳುವನು.

ಐದನೆಯ ಪ್ರಶ್ನೆ

ಈ ಪ್ರಶ್ನೆಯ ಸಂಬಂಧ

(ಭಾಷ್ಯ)

೭೮. "ಅಥ ಹೈನಂ ಶೈಬ್ಯಃ ಸತ್ಯಕಾಮಃ ಪಪ್ರಚ್ಛ" | ಅಥೇದಾನೀಂ ಪರಾಪರಬ್ರಹ್ಮಪ್ರಾಪ್ತಿಸಾಧನತ್ವೇನ ಓಂಕಾರಸ್ಯ ಉಪಾಸನವಿಧಿತ್ಸಯಾ ಪ್ರಶ್ನ ಆರಭ್ಯತೇ:—

(ಭಾಷ್ಯಾರ್ಥ)

"ಅಥ ಹೈನಂ ಶೈಬ್ಯಃ ಸತ್ಯಕಾಮಃ ಪಪ್ರಚ್ಛ" ಬಳಿಕ ಈತನನ್ನು ಶೈಬ್ಯ ಸತ್ಯಕಾಮನು ಕೇಳಿದನೇನೆಂದರೆ (ಎಂದು ಮೊದಲಾಗಿರುವ ಗ್ರಂಥದ ಸಂಬಂಧ ವಿದು): ಇನ್ನು ಈಗ ಪರಾಪರಬ್ರಹ್ಮಗಳನ್ನು ಪಡೆಯುವದಕ್ಕೆ ಸಾಧನವಾಗಿ ಓಂಕಾರದ ಉಪಾಸನೆಯುನ್ನು ವಿಧಾನಸುಾಡಬೇಕೆಂದು (ಈ) ಪ್ರಶ್ನೆಯನ್ನು ಆರಂಭಿಸಿರುತ್ತದೆ:—

ಸತ್ಯಕಾಮನ ಪ್ರಶ್ನೆ: ಓಂಕಾರಧ್ಯಾನದ ಫಲವೇನು ?

ಅಥ ಹೈನಂ ಶೈಬ್ಯಃ ಸತ್ಯಕಾಮಃ ಪಪ್ರಚ್ಛ । ಸ ಯೋ ಹ ವೈ ತದ್ಭಗವನ್ ಮನುಷ್ಯೇಷು ಪ್ರಾಯಣಾನ್ತಮೋಂಕಾರಮಭಿ ಧ್ಯಾಯೀತ ಕತಮಂ ವಾವ ಸ ತೇನ ಲೋಕಂ ಜಯತೀತಿ ॥೧॥

೧. ಆಮೇಲೆ ಈತನನ್ನು ಶೈಬ್ಯಸತ್ಯಕಾಮನು ಕೇಳಿದನೇನೆಂದರೆ: ಭಗವಂತನೆ, ಮನುಷ್ಯರಲ್ಲಿ ಪ್ರಾಯಣದವರೆಗೂ ಓಂಕಾರವನ್ನು ಯಾವನಾವನೆ ಹಾಗೆ ಅಭಿಧ್ಯಾನಮಾಡುತ್ತಿರುವನೋ ಅವನು ಅದರಿಂದ ಯಾವ ಲೋಕವನ್ನು ಗೆದ್ದುಕೊಳ್ಳುತ್ತಾನೆ ?

(ಭಾಷ್ಯ)

೭೯. ಸ ಯಃ ಕಶ್ಚಿದ್ ಹ ವೈ ಭಗವನ್ ಮನುಷ್ಯೇಷು ಮನುಷ್ಯಾಣಾಂ ಮಧ್ಯೇ ಕತ್ ಅದ್ಭುತಮಿವ ಪ್ರಾಯಣಾನ್ತಂ ಮರಣಾನ್ತಮ್ | ಯಾವಜ್ಜೀವಮ್ ಇತ್ಯೇತತ್ | ಓಂಕಾರಮ್ ಅಭಿಧ್ಯಾಯೀತ ಅಭಿಮುಖ್ಯೇನ ಚಿನ್ತಯೇತ್ | ಬಾಹ್ಯವಿಷಯೇಭ್ಯಃ ಉಪಸಂಹೃತಕರಣಃ, ಸಮಾಹಿತಚಿತ್ತಃ, ಭಕ್ತ್ಯಾವೇಶಿತಬ್ರಹ್ಮಭಾವ ಓಂಕಾರೇ | ಆತ್ಮಪ್ರತ್ಯಯಸನ್ತಾನವಿಚ್ಛೇದೋ ಭಿನ್ನಜಾತೀಯಪ್ರತ್ಯಯಾನ್ತರಾಪಿಲೀಕೃತೋ ನಿವಾತಸ್ಥದೀಪಶಿಖಾಸಮೋಽಭಿ ಧ್ಯಾನಶಬ್ದಾರ್ಥಃ | ಸತ್ಯಬ್ರಹ್ಮಜಿಜ್ಞಾಸಾಹಿಂಸಾಪರಿಗ್ರಹತ್ಯಾಗಸಂನ್ಯಾಸಶೌಚ

---

1. ಅಕ್ಷರದಲ್ಲಿ ಸರ್ವವೂ ಲಯವಾಗುತ್ತದೆಯಾದ್ದರಿಂದ ಅದು ಅದ್ವಿತೀಯಾತ್ಮನು ಎಂಬ ಜ್ಞಾನದಿಂದ ಆಗುವ ಸದ್ಯೋಮುಕ್ತಿಯನ್ನು ತಿಳಿಸಿದ ಬಳಿಕ.

ಸನ್ತೋಷಾಮಾಯಾವಿತ್ವಾದ್ಯನೇಕಯಮನಿಯಮಾನುಗೃಹೀತಃ | ಸಃ ಏವಂ ಯಾವಜ್ಜೀವವ್ರತಧಾರಣಃ ಕತಮಂ ವಾವ | ಅನೇಕೇ ಹಿ ಜ್ಞಾನಕರ್ಮಭಿರ್ಜೇತವ್ಯಾ ಲೋಕಾಸ್ತಿಷ್ಠನ್ತಿ | ತೇಷು ತೇನ ಓಂಕಾರಾಭಿಧ್ಯಾನೇನ ಕತಮಂ ಸಃ ಲೋಕಂ ಜಯತಿ ? ಇತಿ ||

(ಭಾಷ್ಯಾರ್ಥ)

ಎಲೈ ಪೂಜ್ಯರೆ, ಮನುಷ್ಯರಲ್ಲಿ ಪುನುಷ್ಯರೊಳಗೆ ಯಾವನಾದರಿ ಹಾಗೆ ಆಶ್ಚರ್ಯಕರವಾಗಿ[1] ಪ್ರಾಯಣದವರೆಗೂ ಎಂದರೆ ಸಾಯುವ ತನಕ (ತಾನು) ಬದುಕಿರುವವರೆಗೂ[2] ಎಂದರ್ಥ. ಓಂಕಾರವನ್ನು ಅಭಿಧ್ಯಾನಮಾಡುತ್ತಿರುವನೋ ಎಂದರೆ ಅಭಿಮುಖನಾಗಿ ಚಿಂತಿಸುತ್ತಿರುವನೋ (ಎಂದರ್ಥ). ಹೊರಗಿನ ವಿಷಯಗಳಿಂದ ಕರಣಗಳನ್ನು ಹಿಂದಕ್ಕೆಳೆದುಕೊಂಡು, ಚಿತ್ತವನ್ನು ಸಮಾಧಾನ ಗೊಳಿಸಿಕೊಂಡು, ಭಕ್ತಿಯಿಂದ ಓಂಕಾರದಲ್ಲಿ ಬ್ರಹ್ಮಭಾವವನ್ನು ಇಟ್ಟುಕೊಂಡು[3] (ಚಿಂತಿಸುತ್ತಾನೋ ಎಂದರ್ಥ). "ಅಭಿಧ್ಯಾನ"ವೆಂಬ ಮಾತಿಗೆ ಮತ್ತೊಂದು ಜಾತಿಯ ಪ್ರತ್ಯಯಗಳು ಅಡ್ಡಬರದಂತೆ ಸತ್ಯ, ಬ್ರಹ್ಮಚರ್ಯ, ಅಹಿಂಸೆ, ಅಪರಿಗ್ರಹ,[4] ತ್ಯಾಗ, ಸಂನ್ಯಾಸ, ಶೌಚ, ಸಂತೋಷ, ಅಮಾಯಾವಿತ್ವ-ಮುಂತಾದ ಅನೇಕ[5] ಯಮನಿಯಮಗಳಿಂದ ಅನುಗ್ರಹವನ್ನು ಪಡೆದು,[6] ಗಾಳಿಯಿಲ್ಲದೆಡೆಯಲ್ಲಿರುವ ದೀಪದ ಕುಡಿಯಂತೆ ಆತ್ಮ ಪ್ರತ್ಯಯಗಳ ಪ್ರವಾಹವನ್ನು ಕಡಿವಡೆಯದಂತೆ (ಇಟ್ಟುಕೊಳ್ಳುವ ದೆಂದು) ಅರ್ಥ.[7] (ಯಾವನು ಹಿಂಗೆ ಅಭಿಧ್ಯಾನಮಾಡುತ್ತಾನೋ) ಬದುಕಿರುವ ವರೆಗೂ (ಈ) ವ್ರತವನ್ನಿಟ್ಟುಕೊಂಡಿರುವ ಆತನು ಯಾವ ಲೋಕವನ್ನು-ಜ್ಞಾನ

---

1. ಇಂಥ ಧ್ಯಾನವನ್ನು ಮಾಡುವದು ಅದ್ಭುತವಾದದ್ದು ಎಂಬುದನ್ನು ತತ್(ಹಾಗೆ) ಎಂಬ ಮಾತು ಸೂಚಿಸುತ್ತದೆ ಎಂಬ ಭಾವ.

2. ಪಡೆಯಬೇಕಾದ ಫಲವನ್ನು ಭಾವಿಸುವ ಉಪಾಸನೆಯನ್ನು ಸಾಯುವವರೆಗೂ ಮಾಡುತ್ತಿರಬೇಕೆಂಬುದನ್ನು ಸೂ. ಭಾ. ೪-೧-೧೨ರಲ್ಲಿ ನಿರ್ಣಯಿಸಿದೆ.

3. ಅದೇ ಬ್ರಹ್ಮವೆಂಬ ಭಾವನೆಯನ್ನಿಟ್ಟುಕೊಂಡು.

4. ತನ್ನದೆಂಬ ಸ್ವತ್ತಿಲ್ಲದೆ ಇರುವದು.

5. ಯೋ. ಸೂ. ೨-೩೦, ೩೧ರಲ್ಲಿ ಹೇಳಿರುವ ಯಮನಿಯಮಗಳನ್ನು ಉಪಲಕ್ಷಣವಾಗಿ ಹೇಳಿದೆ ; ಅಷ್ಟೇ ಎಂದು ಲೆಕ್ಕಮಾಡಿ ಅಲ್ಲಿ ಹೇಳಿಲ್ಲ– ಎಂದು ಭಾವ.

6. ''ಸತ್ಯ.....ಯಮನಿಯಮಾನುಗೃಹೀತಃ'' ಎಂಬುದನ್ನು ''ಆತ್ಮಪ್ರತ್ಯಯಃ ಸನ್ತಾನಾವಿಚ್ಛೇದಃ'' ಎಂಬುದಕ್ಕೆ ವಿಶೇಷಣವೆಂದು ಎಣಿಸುವದರಲ್ಲಿ ಸ್ವಾರಸ್ಯವು ಹೆಚ್ಚು. ''ಅಭಿಧ್ಯಾನ'' ಎಂಬ ಮಾತಿನ 'ಅಭಿ' ಎಂಬ ಉಪಸರ್ಗಕ್ಕೆ ಇದೆಲ್ಲ ಅರ್ಥವೆಂದು ವಿವರಿಸಿದಂತೆ ಆಗುತ್ತದೆ.

7. ತೈ. ಭಾ. ೧–೩, ಬೃ. ಭಾ. ೧–೫–೨, ಗಿ. ಭಾ. ೧೨–೩, ಸೂ. ಭಾ. ೪–೧–೧—ಇವುಗಳಲ್ಲಿ ಉಪಾಸನ ಶಬ್ದಾರ್ಥವಿವರಣೆಯನ್ನು ನೋಡಿ.

ಕರ್ಮಗಳಿಂದ ಪಡೆಮಕೊಳ್ಳಬಹುದಾದ ಲೋಕಗಳು ಅನೇಕವಾಗಿರುವವಷ್ಟೆ[1]; ಅವುಗಳಲ್ಲಿ ಯಾವ ಲೋಕವನ್ನು—ಅದರಿಂದ ಆ ಓಂಕಾರದ ಅಭಿಧ್ಯಾನದಿಂದ ಗೆದ್ದುಕೊಳ್ಳುತ್ತಾನೆ?

ಓಂಕಾರವು ಬ್ರಹ್ಮಪ್ರತೀಕ

ತಸ್ಮೈ ಸ ಹೋವಾಚ। ಏತದ್ವೈ ಸತ್ಯಕಾಮ ಪರಂ ಚಾಪರಂ ಚ ಬ್ರಹ್ಮ ಯದೋಙ್ಕಾರಃ। ತಸ್ಮಾದ್ವಿದ್ವಾನೇತೇನೈವಾಯತನೇನೈಕತರಮನ್ವೇತಿ ॥ ೫ ॥

೫. ಅವನಿಗೆ ಆತನು ಹೇಳಿದನೆಂದರೆ: ಎಲೈ ಸತ್ಯಕಾಮನೆ, ಈ ಪರ(ಬ್ರಹ್ಮ)ವೆಂಬುದೂ ಅಪರಬ್ರಹ್ಮವೆಂಬುದೂ ಯಾವ ಮಂಜೋ (ಅದು) ಓಂಕಾರವೇ. ಆದ್ದರಿಂದ ತಿಳಿದವನು ಇದೇ ಆಯತನದಿಂದ ಇವೆರಡರಲ್ಲಿ ಒಂದನ್ನು ಹಿಂಬಾಲಿಸುತ್ತಾನೆ.

(ಭಾಷ್ಯ)

೫೧. ಹೃಷ್ಟವತೇ ತಸ್ಮೈ ಸ ಹ ಉವಾಚ ಪಿಪ್ಪಲಾದಃ। ಏತದ್ ವೈ ಸತ್ಯಕಾಮ। ಏತದ್ ಬ್ರಹ್ಮ ವೈ ಪರಂ ಚ ಅಪರಂ ಚ ಬ್ರಹ್ಮ। ಪರಂ ಸತ್ಯಮ್ ಅಕ್ಷರಂ ಪುರುಷಾಖ್ಯಮ್। ಅಪರಂ ಚ ಪ್ರಾಣಾಖ್ಯಂ ಪ್ರಥಮಜಂ ಯತ್ ತದೋಙ್ಕಾರ ಏವ ಓಂಕಾರಾತ್ಮಕಮ್। ಓಂಕಾರಪ್ರತೀಕತ್ವಾತ್। ಪರಂ ಹಿ ಬ್ರಹ್ಮ ಶಬ್ದಾದ್ಯುಪಲಕ್ಷಣಾನರ್ಹಂ ಸರ್ವಧರ್ಮವಿಶೇಷವರ್ಜಿತಮ್। ಅತೋ ನ ಶಕ್ಯಮ್ ಅತೀನ್ದ್ರಿಯಗೋಚರತ್ವಾತ್ ಕೇವಲೇನ ಮನಸಾ ಅವಗಾಹಿತುಮ್। ಓಂಕಾರೇ ತು ವಿಷ್ಣ್ವಾದಿ ಪ್ರತಿಮಾಸ್ಥಾನೀಯೇ ಭಕ್ತ್ಯಾವೇಶಿತಬ್ರಹ್ಮಧಾನೇ ಧ್ಯಾಯಿನಾಂ ತತ್ ಪ್ರಸೀದತಿ ಇತ್ಯವಗಮ್ಯತೇ ಶಾಸ್ತ್ರಪ್ರಾಮಾಣ್ಯಾತ್। ತಥಾ ಅಪರಂ ಚ ಬ್ರಹ್ಮ। ತಸ್ಮಾತ್ ಪರಂ ಚಾಪರಂ ಚ ಬ್ರಹ್ಮ ಯದೋಙ್ಕಾರಃ ಇತ್ಯುಪಚರ್ಯತೇ। ತಸ್ಮಾತ್ ಏವಂ ವಿದ್ವಾನ್ ಏತೇನೈವ (ಅಯತನೇನ)[2] ಆತ್ಮಪ್ರಾಪ್ತಿಸಾಧನೇನೈವ ಓಂಕಾರಾಭಿಧ್ಯಾನೇನ ಏಕತರಂ ಪರಮ್ ಅಪರಂ ವಾ ಬ್ರಹ್ಮ[3] ಅನ್ವೇತಿ ಅನುಗಚ್ಛತಿ। ನೇದಿಷ್ಠಂ ಹಿ ಅಲಮ್ಬನಮ್ ಓಂಕಾರೋ ಬ್ರಹ್ಮಣಃ ॥

---

1. ಭೃತ್ಯನಿಂದ ಮನುಷ್ಯಲೋಕವು, ಕರ್ಮದಿಂದ ಪಿತೃಲೋಕವು, ವಿದ್ಯೆಯಿಂದ ದೇವಲೋಕಗಳು– ಎಂದು ಅನೇಕವಾಗಿರುವವು.

2. ಉಪನಿಷತ್ತಿನ "ಆಯತನೇನ" ಎಂಬ ಮಾತು ಭಾಷ್ಯದಲ್ಲಿ ಬರೆದವರ ಕೈತಪ್ಪಿನಿಂದ ಬಿಟ್ಟು ಹೋಗಿದೆ.

3. "ಬ್ರಹ್ಮ" ಎಂಬ ಮಾತು 'ಅನ್ವೇತಿ' ಎಂಬುದಾದಮೇಲೆಯೇ ಮುದ್ರಿತಪುಸ್ತಕಗಳಲ್ಲಿದೆ; ಆದರೆ "ಅಪರಂ ಚಾ" ಎಂಬುದಾದಮೇಲೆಯೇ ಅದು ಇರಬೇಕಾದದ್ದು.

(ಭಾಷ್ಯಾರ್ಥ)

(ಹೀಗೆಂದು) ಕೇಳಿದ ಆವನಿಗೆ ಆ ಪಿಪ್ಪಲಾದನು ಹೇಳಿದನೇನೆಂದರೆ : ಎಲ್ಲೆ ಸತ್ಯಕಾಮನೆ, ಈ ಬ್ರಹ್ಮವೇ ಪರಬ್ರಹ್ಮವೆಂಬುದೂ ಅಪರಬ್ರಹ್ಮವೆಂಬುದೂ (ಆಗಿದೆ). ಪರವೆಂದರೆ ಪುರುಷನೆಂಬ ಹೆಸರಿನ ಸತ್ಯವಾದ ಅಕ್ಷರವು, ಅಪರವೆಂದರೆ (ಎಲ್ಲಕ್ಕಿಂತಲೂ) ಮೊದಲು ಹುಟ್ಟಿದ[1] ಪ್ರಾಣನೆಂಬ ಹೆಸರಿನ (ಬ್ರಹ್ಮವು) ಓಂಕಾರವು ಅದಕ್ಕೆ ಪ್ರತೀಕವಾಗಿರುತ್ತದೆ. ಹೇಗೆಂದರೆ ಪರಬ್ರಹ್ಮವು ಶಬ್ದವೇ ಮುಂತಾದ ಉಪಲಕ್ಷಣಕ್ಕೆ ತಕ್ಕದ್ದಲ್ಲ, (ಅದರಲ್ಲಿ) ಯಾವ ಧರ್ಮವಿಶೇಷವೂ ಇರುವದಿಲ್ಲ; ಆದ್ದರಿಂದ ಇಂದ್ರಿಯಗೋಚರವಾಗಿರುವ(ದನ್ನಿಲ್ಲ) ಮಿಂಚಿರುತ್ತದೆಯಾದ್ದರಿಂದ ಬರಿಯ ಮನಸ್ಸಿನಿಂದ[2] (ತಟ್ಟನೆ) ತಿಳಿಯುವದಕ್ಕೆ ಶಕ್ಯವಲ್ಲ. ಆದರೆ ವಿಷ್ಣುವೇ ಮುಂತಾದ (ದೇವತೆಗಳ) ಪ್ರತಿನಿಧಿಗಳಂತಿರುವ ಓಂಕಾರದಲ್ಲಿ ಭಕ್ತಿಯಿಂದ ಬ್ರಹ್ಮಭಾವವನ್ನಿಟ್ಟರೆ[3] ಉಪಾಸಕರಿಗೆ ಆ (ಪರಬ್ರಹ್ಮವು) ಪ್ರಸನ್ನವಾಗುತ್ತದೆ ಎಂದು ಶಾಸ್ತ್ರಪ್ರಮಾಣದಿಂದ ಗೊತ್ತಾಗುತ್ತದೆ[4]. ಅಪರಬ್ರಹ್ಮವೂ ಹಾಗೆಯೇ[5]. ಆದ್ದರಿಂದ 'ಪರಬ್ರಹ್ಮವೂ ಅಪರಬ್ರಹ್ಮವೂ (ಎಂಬುದು) ಯಾವದೋ (ಅದು) ಓಂಕಾರವೆ' ಎಂದು ಉಪಚಾರದಿಂದ ಹೇಳಿರುತ್ತದೆ.[7]

ಆದ್ದರಿಂದ ಹೀಗೆಂದು ತಿಳಿದಾತನು[8] ಇದು (ಆಯತನದಿಂದ, ಆಲಂಬನದಿಂದ) ಆತ್ಮಪ್ರಾಪ್ತಿಗೆ ಸಾಧನವಾಗಿರುವ ಓಂಕಾರದ ಅಭಿಧ್ಯಾನದಿಂದಲೇ,

1. ಪರ, ಅಪರ—ಎಂಬುದು ಒಂದೇ ಬ್ರಹ್ಮದ ಎರಡು ರೂಪಗಳು. ಸೂ. ಭಾ. ೧-೧-೧೨, ೩-೩-೧೧, ೪-೩-೬, ೪-೩-೭.

2. ಬೃ. ೫-೪-೧೦.

3. ಪ್ರತೀಕದ ಸಹಾಯವಿಲ್ಲದ ಬರಿಯ ಮನಸ್ಸಿನಿಂದ ಎಂದರ್ಥ. ಪರಬ್ರಹ್ಮದಲ್ಲಿ ಶಬ್ದಾದಿಗಳು ಯಾವವೂ ಇಲ್ಲದ್ದರಿಂದಲೂ ಅಪರಬ್ರಹ್ಮವು ಕೇವಲ ಮನೋಮಯವಾಗಿರುವದರಿಂದಲೂ ಸ್ಥೂಲಬುದ್ಧಿಗಳಾದವರು ಅದನ್ನು ಉಪಾಸನೆಮಾಡಲಾರರು.

4. "ಅಭಿಧ್ಯಾಯಿತ" ಎಂಬ ಶಬ್ದದ ವ್ಯಾಖ್ಯಾನವನ್ನು ಭಾ. ಭಾ. ೭೯ರಲ್ಲಿ ಮಾಡಿರುವಂತೆ ಇಲ್ಲಿಯೂ ಓಂಕಾರೋಪಾಸನೆಗೆ ಸಹಕಾರಸಾಮಗ್ರಿಯನ್ನು ಕಲ್ಪಿಸಿಕೊಳ್ಳಬೇಕು. 5. ತಾನೇ ನೇರವಾಗಿ ಉಪಾಸನೆಗೆ ನಿಲುಕದಿದ್ದರೂ ಓಂಕಾರದ ಮೂಲಕವಾಗಿ ಉಪಾಸ್ಯವಾಗಿ ಒಲಿಯುತ್ತದೆ.

6. ಅಪರಬ್ರಹ್ಮವು ಸ್ವತಃ ಮನೋಮಯವಾಗಿ ಸೂಕ್ಷ್ಮವಾಗಿದ್ದರೂ ಓಂಕಾರವೆಂಬ ಶಬ್ದರೂಪವಾದ ಶ್ರುತೀಕಮೂಲಕವಾಗಿ ಮಂದಮತಿಗಳಿಗೂ ಉಪಾಸ್ಯವಾಗಿ ಒಲಿಯುತ್ತದೆ. 7, ಓಂಕಾರವು ಬ್ರಹ್ಮವಲ್ಲದಿದ್ದರೂ ಬ್ರಹ್ಮಪ್ರಾಪ್ತಿಗೆ ಸಾಧನವಾಗಿರುವದರಿಂದ ಅದನ್ನು ಬ್ರಹ್ಮವೆಂದು ಗೌಣವೃತ್ತಿಯಿಂದ ಕರೆದಿರುತ್ತದೆ.

8. ಉಪಾಸನೆಮಾಡಿದವನು.

ತಾವೆದಿರಲ್ಲೊಂದನ್ನು ಎಂದರೆ ಪರಬ್ರಹ್ಮನನ್ನೊ, ಅಪರಬ್ರಹ್ಮವನ್ನೊ[1] ಹಿಂಜಾಲಿಸುತ್ತಾನೆ, ಪಡೆಯುತ್ತಾನೆ. ಏಕೆಂದರೆ ಓಂಕಾರವು ಬ್ರಹ್ಮಕ್ಕೂ ತೀರ ಹತ್ತಿರವಾದ ಆಲಂಬನವಾಗಿರುತ್ತದೆ.[2]

ಮಾತ್ರೆಗಳಲ್ಲಿ ಒಂದೊಂದರ ಜ್ಞಾನದಿಂದ ಕೂಡಿದ ಉಪಾಸನೆ

ಸ ಯದ್ಯೇಕಮಾತ್ರಮಭಿಧ್ಯಾಯೀತ ಸ ತೇನೈವ ಸಂವೇದಿತ ಸ್ತೂರ್ಣಮೇವ ಜಗತ್ಯಾಮನುಸಂಪದ್ಯತೇ। ತಮೃಚೋ ಮನುಷ್ಯ ಲೋಕಮುಪನಯಂತೇ ಸ ತತ್ರ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ಸಂಪನ್ನೋ ಮಹಿಮಾನಮನುಭವತಿ ॥೩॥

೩. ಇತನು ಒಂದು ಮಾತ್ರೆಯನ್ನು ಅಭಿಧ್ಯಾನಮಾಡಿದರೆ ಅವನು ಅನಂತರವೇ ಅರಿತುಕೊಂಡವನಾಗಿ ಬೇಗನೆ ಜಗತ್ತಿನಲ್ಲಿ ಪಡೆಯುತ್ತಾನೆ. ಅವನನ್ನು ಋಕ್ಕುಗಳು ಮನುಷ್ಯಲೋಕವನ್ನು ಸೇರಿಸುತ್ತವೆ. ಅವನು ಅಲ್ಲಿ ತಪಸ್ಸಿನಿಂದಲೂ ಬ್ರಹ್ಮಚರ್ಯದಿಂದಲೂ ಶ್ರದ್ಧೆಯಿಂದಲೂ ಕೂಡಿ ಮಹಿಮೆಯನ್ನನುಭವಿಸುತ್ತಾನೆ.

(ಭಾಷ್ಯ)

೩ಗ. ಸಃ ಯದ್ಯಪಿ ಓಂಕಾರಸ್ಯ ಸಕಲಮಾತ್ರಾವಿಭಾಗಜ್ಞೋ ನ ಭವತಿ, ತಥಾಪಿ ಓಂಕಾರಾಭಿಧ್ಯಾನಪ್ರಭಾವಾದ್ ವಿಶಿಷ್ಟಾಮೇವ ಗತಿಂ ಗಚ್ಛತಿ। ಏತದೇಕವೇಶಜ್ಞಾನವೈಗುಣ್ಯತಯಾ ಓಂಕಾರಶರಣಃ ಕರ್ಮಜ್ಞಾನೋಭಯಭ್ರಷ್ಟೋ ನ ದುರ್ಗತಿಂ ಗಚ್ಛತಿ। ಕಿಂ ತರ್ಹಿ ಯದಿ ಏವಮ್ ಓಂಕಾರಮೇವ ಏಕಮಾತ್ರಾವಿಭಾಗಜ್ಞ ಏವ ಕೇವಲಃ ಅಭಿಧ್ಯಾಯೀತ ಏಕಮಾತ್ರಂ ಸದಾ ಧ್ಯಾಯೀತ, ಸ ತೇನೈವ ಏಕಮಾತ್ರಾವಿಶಿಷ್ಟೋಂಕಾರಾಭಿಧ್ಯಾನೇನೈವ ಸಂವೇದಿತಃ ಸಂಬೋಧಿತಃ ತೂರ್ಣಂ ಕ್ಷಿಪ್ರಮೇವ ಜಗತ್ಯಾಂ ಪೃಥಿವ್ಯಾಮ್ ಅಭಿಸಂಪದ್ಯತೇ। ಕಿಮ್ ? ಮನುಷ್ಯಲೋಕಮ್। ಅನೇಕಾನಿ ಹಿ ಜನ್ಮಾನಿ ಜಗತ್ಯಾಂ ಸಂಭವನ್ತಿ। ತತ್ರ ತು ಸಾಧಕಂ ಜಗತ್ಯಾಂ ಮನುಷ್ಯಲೋಕಮೇವ ಋಚಃ[3] ಉಪನಯಂತೇ ಉಪನಿಗಮಯನ್ತಿ। ಋಗ್ವೇದರೂಪಾ ಹಿ ಓಂಕಾರಸ್ಯ ಪ್ರಥಮಾ ಏಕಮಾತ್ರಾ ಅಭಿಧ್ಯಾತಾ। ತೇನ ಸ ತತ್ರ ಮನುಷ್ಯಜನ್ಮನಿ ದ್ವಿಜಾಗ್ರ್ಯಃ ಸನ್ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ಚ ಸಂಪನ್ನಃ ಮಹಿ

---

1. ಯಾವುದನ್ನು ಉಪಾಸನೆಮಾಡಿರುವನೋ ಅದನ್ನು ಕ. ಭಾ. ೧–೨–೧೬.

2. ಪರಮಾತ್ಮನ ಸಾನುಗಳಲ್ಲೆಲ್ಲ ಓಂಕಾರವು ತೀರ ಹತ್ತಿರವಾದದ್ದು; ಅದಿತ್ಯಾದಿ ಪ್ರತೀಕಗಳೆಲ್ಲಕ್ಕಿಂತಲೂ ಪರಮಾತ್ಮನಿಗೆ ಇದು ಹತ್ತಿರವಾದದ್ದು. ಛಾಂ. ಭಾ. ೧–೧–೧. ಅದ್ದರಿಂದ ಓಂಕಾರಧ್ಯಾನದಿಂದ ಅನಶ್ಯವಾಗಿ ಬ್ರಹ್ಮಪ್ರಾಪ್ತಿಯಾಗುತ್ತದೆ ಎಂದು ಭಾವ.

3. ಈ ಮಾತು ವಾಜಿ ಪಾಠದಲ್ಲಿ ವಾಕ್ಯದ ಕೊನೆಯಲ್ಲಿದೆ.

ಮಾನಂ ವಿಭೂತಿಮ್ ಅನುಭವತಿ | ನ ವೀತಶ್ರಮ್ಣೋಃ ಮುಕ್ತಸ್ಯ ಕೀಮ್ಬೋ ಭವತಿ | ಯೋಗಭ್ರಷ್ಟಃ ಕದಾಚಿದಪಿ ನ ದುರ್ಗತಿಂ ಗಚ್ಛತಿ ।

(ಭಾಷ್ಯಾರ್ಥ)

ಅವನು ಓಂಕಾರದ ಎಲ್ಲಾ ಮಾತ್ರೆಗಳ ವಿಂಗಡನೆಯನ್ನೂ ಅರಿಯದವನಾಗಿದ್ದರೂ ಓಂಕಾರದ ಅಭಿಧ್ಯಾನದ ಬಲದಿಂದ ಉತ್ತಮವಾದ ಗತಿಯನ್ನೇ ಪಡೆಯುವನು. ಇದರ ಒಂದು ಭಾಗದ ಅರಿವು ಊಸವಾದ್ದರಿಂದ ಓಂಕಾರಶರಣನಾದವನು[1] "ಕರ್ಮಜ್ಞಾನಗಳೆರಡರಿಂದಲೂ ಭ್ರಷ್ಟನಾಗಿ ದುರ್ಗತಿಯನ್ನು ಹೊಂದುವದಿಲ್ಲ." ಮತ್ತೇನೆಂದರೆ ಈ ರೀತಿಯಲ್ಲಿ ಕೇವಲನಾಗಿ ಒಂದೇ ಮಾತ್ರೆಯ ವಿಂಗಡವನ್ನು ಅರಿತುಕೊಂಡು ಒಂದು ಮಾತ್ರೆಯ ಓಂಕಾರವನ್ನೇ[2] ಯಾವಾಗಲೂ ಧ್ಯಾನಮಾಡುತ್ತಿದ್ದರೆ, ಅವನು ಅದರಿಂದಲೇ ಎಂದರೆ ಒಂದು ಮಾತ್ರೆಯಿಂದೊಡಗೂಡಿದ ಓಂಕಾರದ ಅಭಿಧ್ಯಾನದಿಂದಲೇ[3] ಅರಿತವನಾಗಿ ಜ್ಞಾನವನ್ನು ಹೊಂದಿದವನಾಗಿ[4] ಬೇಗನೆ ಈ ಜಗತ್ತಿನಲ್ಲಿ ಪಡೆಯುತ್ತಾನೆ. ಏನನ್ನು ? ಎಂದರೆ ಮನುಷ್ಯಲೋಕವನ್ನು.[5] (ಈ) ಜಗತ್ತಿನಲ್ಲಿ ಅನೇಕ ಜನ್ಮಗಳು ಉಂಟಾಗಬಹುದಷ್ಟೆ ; ಅವುಗಳಲ್ಲಿ ಆ ಸಾಧಕನನ್ನು ಋಕ್ಕುಗಳು ಜಗತ್ತಿನಲ್ಲಿ ಮನುಷ್ಯಜನ್ಮವನ್ನೇ ಸೇರಿಸುತ್ತವೆ, ಹೊಂದಿಸುತ್ತವೆ. ಏಕೆಂದರೆ ಓಂಕಾರದ ಮೊದಲನೆಯದಾದ ಋಗ್ವೇದರೂಪವಾದ ಒಂದು ಮಾತ್ರೆಯನ್ನು[6] ಅವನು ಅಭಿಧ್ಯಾನಮಾಡಿರುತ್ತಾನೆ. ಆದ್ದರಿಂದ ಅವನು ಅಲ್ಲಿ ಎಂದರೆ (ಆ) ಮನುಷ್ಯಜನ್ಮದಲ್ಲಿ ಬ್ರಾಹ್ಮಣಶ್ರೇಷ್ಠನಾಗಿ[7] ತಪಸ್ಸು, ಬ್ರಹ್ಮಚರ್ಯ, ಶ್ರದ್ಧೆ– ಇವುಗಳಿಂದೊಡಗೂಡಿ ಮಹಿಮೆಯನ್ನು ಎಂದರೆ ವಿಭೂತಿಯನ್ನು ಅನುಭವಿಸು

---

1. ಓಂಕಾರವೊಂದನ್ನೇ ಸರ್ವಕರ್ಮಸಂನ್ಯಾಸಪೂರ್ವಕವಾಗಿ ಉಪಾಸನೆಮಾಡುತ್ತಿರುವವನು.

2. ಒಂದು ಮಾತ್ರೆಯ ಜ್ಞಾನದಿಂದ ಕೂಡಿ ಓಂಕಾರವನ್ನು ಅನನ್ಯಭಕ್ತಿಯಿಂದ ಉಪಾಸನೆಮಾಡುತ್ತಿದ್ದರೆ ಎಂದರ್ಥ ; ಅಕಾರವನ್ನು ಮಾತ್ರ ಉಪಾಸನೆಮಾಡುತ್ತಿದ್ದರೆ ಎಂಬ ವ್ಯಾಖ್ಯಾನವು ಭಾಷ್ಯವಿರುದ್ಧ.

3. ಒಂದು ಮಾತ್ರೆಯ ಜ್ಞಾನದಿಂದ ಮಾಡಿದ ಉಪಾಸನೆಯಿಂದಲೇ ಎಂದರ್ಥ.

4. ಆ ಗುಣದಿಂದ ಕೂಡಿದ ಓಂಕಾರವನ್ನು ಸಾಕ್ಷಾತ್ಕಾರಮಾಡಿಕೊಂಡು.

5. ಇದು ವಾಕ್ಯಶೇಷದಿಂದ ಗೊತ್ತಾಗುತ್ತದೆ.

6. ಒಂದು ಮಾತ್ರೆಯ ಜ್ಞಾನದಿಂದ ಕೂಡಿ ಉಪಾಸನೆಮಾಡಿದ ಓಂಕಾರವನು ಹಿಂದು ಮಾತ್ರೆ ಎಂದಿದೆ. ಮುಂದೆ "ಎರಡು ಮಾತ್ರೆ" ಎಂಬ ಮಾತಿಗೂ ಹೀಗೆಯೇ ಅರ್ಥವನ್ನು ಮಾಡಬೇಕು.

7. ಗೀ. ೬–೪೧.

ತ್ತಾನೆ; ಶ್ರದ್ಧೆಯಿಲ್ಲದ ಸ್ವೇಚ್ಛಾಚಾರಿಯಾಗುವದಿಲ್ಲ.[1] ಯೋಗಭ್ರಷ್ಟನಾದನವನಿಗೆ ಎಂದಿಗೂ ಮರ್ಗತಿಯಾಗುವದಿಲ್ಲ.[2]

ಅಥ ಯೋನಿ ದ್ವಿಮಾತ್ರೇಣ ಮನಸಿ ಸಂಪದ್ಯತೇ ಸೋಽನ್ತರಿಕ್ಷಂ
ಯಜುರ್ಭಿರುನ್ನೀಯತೇ ಸೋಮಲೋಕಮ್ । ಸ ಸೋಮ
ಲೋಕೇ ವಿಭೂತಿಮನುಭೂಯ ಪುನರಾವರ್ತತೇ ॥ ೪ ॥

೪. ಇನ್ನು ಎರಡು ಮಾತ್ರೆಯಿಂದ ಮನಸ್ಸಿನಲ್ಲಿ ಸೇರಿಕೊಳ್ಳುತ್ತಾನಾದರೆ ಅವನು ಅಂತರಿಕ್ಷದ ಸೋಮಲೋಕಕ್ಕೆ ಯಜುಸ್ಸುಗಳಿಂದ ಒಯ್ಯಲ್ಪಡುತ್ತಾನೆ. ಅವನು ಸೋಮಲೋಕದಲ್ಲಿ ವಿಭೂತಿಯನ್ನು ಅನುಭವಿಸಿ ಮತ್ತೆ ಹಿಂತಿರುಗುತ್ತಾನೆ.

(ಭಾಷ್ಯ)

೪ಬ. ಅಥ ಪುನಃ ಯದಿ ದ್ವಿಮಾತ್ರಾವಿಭಾಗಜ್ಞೋ ದ್ವಿಮಾತ್ರೇಣ ವಿಶಿಷ್ಟಮ್ ಓಂಕಾರಮ್ ಅಭಿಧ್ಯಾಯೀತ ಸ್ವಪ್ನಾತ್ಮಕೇ ಮನಸಿ ಮನನೀಯೇ ಯಜುರ್ಮಯೇ ಸೋಮದೈವತ್ಯೇ ಸಂಪದ್ಯತೇ ಏಕಾಗ್ರತಯಾ ಆತ್ಮಭಾವಂ ಗಚ್ಛತಿ। ಸ ಏವಂ ಸಂಪನ್ನಃ ವ್ಯತಃ ಅನ್ತರಿಕ್ಷಮ್ ಅನ್ತರಿಕ್ಷಾಧಾರಂ ದ್ವಿತೀಯಮಾತ್ರಾರೂಪಂ ದ್ವಿತೀಯಮಾತ್ರಾರೂಪೈರೇವ ಯಜುರ್ಭಿಃ ಉನ್ನೀಯತೇ ಸೋಮಲೋಕಮ್ ಸೌಮ್ಯಂ ಜನ್ಮ ಪ್ರಾಪಯನ್ತಿ ತಂ ಯಜೂಂಷಿ ಇತ್ಯರ್ಥಃ। ಸಃ ತತ್ರ ವಿಭೂತಿಮ್ ಅನುಭೂಯ ಸೋಮಲೋಕೇ ಮನುಷ್ಯಲೋಕಂ ಪ್ರತಿ ಪುನರಾವರ್ತತೇ ॥

(ಭಾಷ್ಯಾರ್ಥ)

ಇನ್ನು ಎರಡು ಮಾತ್ರೆಗಳ ವಿಂಗಡವನ್ನು ಅರಿತುಕೊಂಡು ಎರಡು ಮಾತ್ರೆಗಳಿಂದೊಡಗೂಡಿದ ಓಂಕಾರವನ್ನು[4] ಅಭಿಧ್ಯಾನಮಾಡುತ್ತಾನಾದರೆ ಸ್ವಪ್ನರೂಪವಾದ[5] ಮನಸ್ಸಿನಲ್ಲಿ ಎಂದರೆ ಮನನಮಾಡತಕ್ಕ ಸೋಮದೇವತಾಕವಾದ[6] ಯಜುಃಸ್ವರೂಪವಾದ (ಓಂಕಾರದಲ್ಲಿ) ಸೇರಿಕೊಳ್ಳುತ್ತಾನಾದರೆ, ಎಂದರೆ ಏಕಾ

---

1. ಯೋಗದ ವಾಸನೆಯಿಂದ ಆದೇ ದಾರಿಯಲ್ಲಿ ಮುನ್ನಡೆಯುತ್ತಾನೆ. ಗೀ. ೬–೪೪.
2. ಗೀ. ೬.೪೦.
3. "ಸೌಮ್ಯದೈವತ್ಯ" ಎಂಬ ಪಾಠಕ್ಕಿಂತ ಇದೇ ಮೇಲೆಂದು ಕಾಣುತ್ತದೆ.
4. ಓಂಕಾರದಲ್ಲಿ ಎರಡೇ ಮಾತ್ರೆಗಳಿರುವವೆಂದು ಅಭಿಪ್ರಾಯವಲ್ಲ ; ಮೂರನೆಯ ಮಾತ್ರೆಯು ಸ್ವರೂಪವು ಅರಿವಿಲ್ಲದೆ ಎರಡು ಮಾತ್ರೆಗಳ ಅರಿವುಳ್ಳವನು ಮಾಡುವ ಓಂಕಾರೋಪಾಸನೆಗೆ ಫಲವನ್ನು ಹೇಳಿರುತ್ತದೆ.
5. ಉಕಾರವು ಸ್ವಪ್ನಾವಸ್ಥೆಯ ತೈಜಸನನ್ನು ತಿಳಿಸುವ ಪ್ರತೀಕವು. ಮಾಂ. ೧೦,
6. ಮನಸ್ಸಿಗೆ ಚಂದ್ರನು ಅಧಿಮಾನದೇವತೆ.

ಗ್ರತೆಯಿಂದ ಅದೇ ತಾನೆಂಬ ಭಾವನೆಯನ್ನು ಪಡೆಮಕೊಂಡರೆ[1] ಅವನು ಎಂದಿ ಹಾಗೆ ಸೇರಿಕೊಂಡವನು ಸತ್ತಮೇಲೆ ಅಂತರಿಕ್ಷದ ಎಂದರೆ ಅಂತರಿಕ್ಷವೆಂಬ ಆಧಾರ ವುಳ್ಳ ಎರಡನೆಯ ಮಾತ್ರೆಯ ರೂಪವಾದ ಸೋಮಲೋಕಕ್ಕೆ ಎರಡನೆಯ ಮಾತ್ರೆಯ ರೂಪವಾಗಿರುವ ಯಜುಸ್ಸುಗಳಿಂದಲೇ ಒಯ್ಯಲ್ಪಡುತ್ತಾನೆ; ಅವನಿಗೆ ಯಜುಸ್ಸುಗಳು ಸೋಮಲೋಕದ ಜನ್ಮವನ್ನು ದೊರಕಿಸುತ್ತವೆ ಎಂದರ್ಥ. ಅವನು ಆ ಸೋಮಲೋಕದಲ್ಲಿ ವಿಭೂತಿಯನ್ನು ಅನುಭವಿಸಿ ಮನುಷ್ಯಲೋಕ ಕ್ಕೆ[2] ಮತ್ತೆ ಹಿಂತಿರುಗುತ್ತಾನೆ.

ಓಂಕಾರದ ಪೂರ್ಣೋಪಾಸನೆಯ ಫಲ

ಯೋಃ ಪುನರೇತಂ ತ್ರಿಮಾತ್ರೇಣೋಮಿತ್ಯೇತೇನೈವಾಕ್ಷರೇಣ ಪರಂ
ಪುರುಷಮಭಿಧ್ಯಾಯೀತ ಸ ತೇಜಸಿ ಸೂರ್ಯೇ ಸಂಪನ್ನಃ ।
ಯಥಾ ಪಾದೋದರಸ್ತ್ವಚಾ ವಿನಿರ್ಮುಚ್ಯತ ಏವಂ ಹ ವೈ ಸ
ಪಾಪ್ಮನಾ ವಿನಿರ್ಮುಕ್ತಃ ಸ ಸಾಮಭಿರುನ್ನೀಯತೇ ಬ್ರಹ್ಮ
ಲೋಕಂ ಸ ಏತಸ್ಮಾಜ್ಜೀವಘನಾತ್ ಪರಾತ್ಪರಂ ಪುರಿಶಯಂ
ಪುರುಷಮೀಕ್ಷತೇ । ತದೇತೌ ಶ್ಲೋಕೌ ಭವತಃ ॥೫॥

೫. ಆದರೆ ಯಾವನು ಈ (ಓಂಕಾರವನ್ನು) ಮೂರು ಮಾತ್ರೆ ಗಳಿಂದೊಡಗೂಡಿದ ಓಮ್ ಎಂಬ ಇದೇ ಅಕ್ಷರದಿಂದ ಪರಮಪುರುಷನ ನ್ನಾಗಿ ಧ್ಯಾನಿಸುವನೋ, ಅವನು ತೇಜಸ್ಸಾದ ಸೂರ್ಯನಲ್ಲಿ ಸೇರಿಕೊಳ್ಳು ವನು. ಹೇಗೆ ಪಾದೋದರವು ಪರೆಯಿಂದ ಬಿಡಲ್ಪಡುತ್ತದೆಯೋ ಹಾಗೆ ಯೇ ಅವನು ಪಾಪದಿಂದ ಬಿಡುಗಡೆಹೊಂದುತ್ತಾನೆ. ಅವನು ಸಾಮ ಗಳಿಂದ ಬ್ರಹ್ಮಲೋಕಕ್ಕೆ ಒಯ್ಯಲ್ಪಡುತ್ತಾನೆ. ಅವನು ಈ ಹೆಚ್ಚಿನ ಜೀವಘನನಿಗಿಂತಲೂ ಹೆಚ್ಚಿನನನಾದ ಪುರದಲ್ಲಿದ್ದುಕೊಂಡಿರುವ ಪುರುಷ ನನ್ನು ಕಂಡುಕೊಳ್ಳುತ್ತಾನೆ, ಅಲ್ಲಿ ಈ ಎರಡು ಶ್ಲೋಕಗಳು ಇರುತ್ತವೆ.

(ಭಾಷ್ಯ)

೫. ಯಃ ಪುನಃ ಏತಮ್ ಓಂಕಾರಮ್ ತ್ರಿಮಾತ್ರೇಣ ತ್ರಿಮಾತ್ರಾ ವಿಷಯವಿಜ್ಞಾನವಿಶಿಷ್ಟೇನ ಓಮಿತ್ಯೇತೇನೈವ ಅಕ್ಷರೇಣ ಪರಂ ಸೂರ್ಯಾನ್ತರ್ಗತಂ

---

1. "ಪಡೆದುಕೊಳ್ಳುತ್ತಾನೆ" ಎಂದೂ ಕನ್ನಡಿಸಬಹುದು; ಅಭಿಧ್ಯಾನಮಾಡುತ್ತಿದ್ದರೆ ಅದೇ ಸಾಕ್ಷಾತ್ತಾಗಿ ವನ್ನು ಪಡೆಯುತ್ತಾನೆ ಎಂದು ಅರ್ಥ.

2. ಮೊದಲನೆಯ ಉಪಾಸನೆಯಿಂದ ಪೃಥ್ವಿಯಲ್ಲಿ ಉತ್ತಮನಾದ ಮನುಷ್ಯ ಜನ್ಮವು ಬರುತ್ತದೆ ಎಂದಭಿಪ್ರಾಯ.

ಪುರುಷಂ ಪ್ರತೀಕೇನ ಅಭಿಧ್ಯಾಯೀತ ತೇನ ಅಭಿಧ್ಯಾನೇನ ಪ್ರತೀಕತ್ವೇನ ಹಿ ಅಲಮ್ಬನತ್ವಂ ಪ್ರಕೃತ್ಯರ್ಥಸ್ಯ ! 'ಪರಂ ಚ ಅಪರಂ ಚ ಬ್ರಹ್ಮ' (೫-೪) ಇತ್ಯಭೇದಪ್ರತೀತೇಃ 'ಓಂಕಾರಸ್ತು' ಇತಿ ಚ ದ್ವಿತೀಯಾ ಅನೇಕಶಃ ಶ್ರುತಾ ಬಾಹ್ಯೇಷ ಅನ್ಯಥಾ ಯದ್ಯಪಿ ತೃತೀಯಾಭಿಧಾನತ್ವೇನ ಕರಣತ್ವಮ್ ಉಪಪದ್ಯತೇ ಕಥಂ ತು ಪ್ರಕೃತಾಸೌ ಉದ್ಗೀಥಾತ್ 'ತ್ರಿಮಾತ್ರಂ ಪರಂ ಪುರುಷಮನು' ಇತಿ ದ್ವಿತೀಯೈವ ಪರಿಣೇಯಾ 'ತೃತೀಯೇದೇಕಂ ಕುಲಸ್ಯಾರ್ಧೇ' ಇತಿ ನ್ಯಾಯೇನ! ಸ ತೃತೀಯಮಾತ್ರಾರೂಪೇಣ[2] ತೇಜಸಿ ಸೂರ್ಯೇ ಸಂಪನ್ನೋ ಭವತಿ ಧ್ಯಾಯಮಾನಃ | ವ್ಯತೋಽಪಿ ಸೂರ್ಯಾತ್ ಸೋಮಲೋಕಾದಿವತ್ ನ ಪುನರಾವರ್ತತೇ | ಕಿಂ ತು ಸೂರ್ಯೇ ಸಂಪನ್ನೋಮಾತ್ರೇ ಏವ | ಯಥಾ ಪಾದೋದರಃ ಸರ್ಪಃ ತ್ವಚಾ ವಿನಿರ್ಮುಚ್ಯತೇ ಜೀರ್ಣಾತ್ವಗ್ವಿನಿರ್ಮುಕ್ತಃ ಸ ಪುನರ್ನವೋ ಭವತಿ ಏವಂ ಹ ವೈ ಏಷ ಯಥಾ ದೃಷ್ಟಾನ್ತೇಃ ಸ ಪಾಪ್ಮನಾ ಸರ್ಪತ್ವಕ್ಸ್ಥಾನೀಯೇನ ಅಶುದ್ಧಿರೂಪೇಣ ವಿನಿರ್ಮುಕ್ತಃ ಸ ಸಾಮಭಿಃ ತೃತೀಯಮಾತ್ರಾರೂಪೈಃ ಉನ್ನೀಯತೇ ಬ್ರಹ್ಮಲೋಕಂ ಹಿರಣ್ಯಗರ್ಭಸ್ಯ ಬ್ರಹ್ಮಣೋ ಲೋಕಂ ಸತ್ಯಾಖ್ಯಮ್ | ಸ ಹಿರಣ್ಯಗರ್ಭಃ ಸರ್ವೇಷಾಂ ಸಂಸಾರಿಣಾಂ ಜೀವಾನಾಮ್ ಅಕ್ಷಭೂತಃ | ಸ ಹಿ ಅನ್ತರಾತ್ಮಾ ಲಿಙ್ಗರೂಪೇಣ ಸರ್ವಭೂತಾನಾಮ್ ಅಸ್ಮಿನ್ ಹಿ ಲಿಙ್ಗಾತ್ಮನಿ ಸಂಹತಾಃ ಸರ್ವೇ ಜೀವಾಃ| ತಸ್ಮಾತ್ ಸ ಜೀವಘನಃ| ಸ ವಿದ್ವಾನ್ ತ್ರಿಮಾತ್ರೇಣೋಂಕಾರಾಭಿಧ್ಯಾನೀ ಏತಸ್ಮಾತ್ ಜೀವಘನಾತ್ ಹಿರಣ್ಯಗರ್ಭಾತ್ ಪರಾತ್ ಪರಂ ಪರಮಾತ್ಮಾಖ್ಯಂ ಪುರುಷಮ್ ಈಕ್ಷತೇ ಪುರಿಶಯಂ ಸರ್ವಶರೀರಾನುಪ್ರವಿಷ್ಟಂ ಪಶ್ಯತಿ ಧ್ಯಾಯಮಾನಃ | ತತ್ ಏತಸ್ಮಿನ್ ಅರ್ಥೇ ಏತೌ ಯಥೋಕ್ತಾರ್ಥಪ್ರಕಾಶಕೌ ಶ್ಲೋಕೌ ಮನ್ತ್ರೌ[3] ಭವತಃ ||

(ಭಾಷ್ಯಾರ್ಥ)

ಆದರೆ ಯೋವಾತನು ಈ ಓಂಕಾರವನ್ನು ಮೂರು ಮಾತ್ರೆಯುಳ್ಳ ಎಂದರೆ ಮೂರು ಮಾತ್ರೆಗಳ ವಿಷಯದ ಅರಿವಿನಿಂದ ಕೂಡಿದ ಓಂ ಎಂಬೀ ಅಕ್ಷರದಿಂದಲೇ[4] ಪರಮನಾದ ಸೂರ್ಯನೊಳಗಿ

---

1. "ಪ್ರತೀಕತ್ವೇನ" ಎಂಬ ವಾ॥ ಪಾಠಕ್ಕಿಂತ ಈ ಆ॥ ಪಾಠವು ಮೇಲು.

2. "ತೃತೀಯಮಾತ್ರರೂಪಃ" ಎಂಬ ಪಾಠಕ್ಕಿಂತ ಇದು ಉತ್ತಮವೆಂದು ತೋರುತ್ತದೆ.

3. ಈ ವಾಕ್ಯವು ವಾ॥ ಕಾ॥ ಪಾಠಗಳಲ್ಲಿ "ತತ್ ಏತೌ ಅಸ್ಮಿನ್ ಯಥೋಕ್ತಾರ್ಥ ಪ್ರಕಾಶಕೌ ಶ್ಲೋಕೌ ಮನ್ತ್ರೌ ಭವತಃ" ಎಂದಿದೆ ; ಆ॥ ಪಾಠದಲ್ಲಿ "ತದೇತಸ್ಮಿನ್ ಯಥೋಕ್ತಾರ್ಥಪ್ರಕಾಶಕೌ" ಎಂದಿಷ್ಟೇ ಇದೆ. ನಾವು ಹಿಡಿದಿರುವ ಪಾಠವು ಹಿಂದಿನ ಇಂಥ ಭಾಷ್ಯವಾಕ್ಯಗಳಿಗೆ ಅನುಗುಣವಾಗಿ ಉಪಪನ್ನಮೂಲಕ್ಕೂ ಹೊಂದಿಕೆಯಾಗಿದೆ.

4. ಪೂರ್ಣವಾದ ಓಂಕಾರದಿಂದಲೇ, ಕೆಲವು ಮಾತ್ರೆಗಳಿಂದಲ್ಲ.

ರೆವ[1] ಪುರುಷನನ್ನು[2] (ಓಂ ಎಂಬ) ಪ್ರತೀಕದಿಂದ ಅಭಿಧ್ಯಾನವಾಡುತ್ತಾನೋ ಆ ಅಭಿಧ್ಯಾನದಿಂದ (ಎಂದರ್ಥ). ಏಕೆಂದರೆ ಓಂಕಾರವು ಪ್ರತೀಕವಾಗಿಯೇ[3] ಆಲಂಬನವಾಗಿದೆಯೆಂದು ಪ್ರಕರಣದಿಂದ ಗೊತ್ತಾಗುತ್ತದೆ.[4] "ಪರವೂ ಅಪರವೂ ಆಗಿರುವ ಬ್ರಹ್ಮವು (ಯಾವದೋ ಅದು) ಓಂಕಾರವು" (೫-೨) ಎಂದು (ಬ್ರಹ್ಮವನ್ನೂ ಓಂಕಾರವನ್ನೂ) ಅಭೇದವಾಗಿ (ತಿಳಿಸುವ) ಶ್ರುತಿಯು ಇದಕ್ಕೆ ಪ್ರಮಾಣವು.[5] ಹೀಗೆ (ಅರ್ಥ)ಮಾಡದಿದ್ದರೆ "ಓಂಕಾರವನ್ನು" ಎಂದು ನಂತ್ರ ಮತ್ತೆ ದ್ವಿತೀಯೆಯನ್ನು ಅನೇಕ ಸಲ ಶ್ರುತಿಯಲ್ಲಿ ಹೇಳಿರುವದಕ್ಕೆ ಬಾಧೆಯುಂಟಾಗುವದು. ತೃತೀಯೆಯಿಂದ ಹೇಳಿರುವದಕ್ಕಿಂತ ಓಂಕಾರವು ಉಪಾಸನೆಗೆ) ಕರಣವೆಂಬುದೂ ಹೊಂದುತ್ತದೆಯಾದರೂ ಪ್ರಕೃತಕ್ಕೆ ತಕ್ಕಂತೆ 'ಮೂರು ಮಾತ್ರೆಯುಳ್ಳ (ಓಂಕಾರವನ್ನು) ಪರಮಪುರುಷನನ್ನಾಗಿ' ಎಂದು ದ್ವಿತೀಯಾ ವಿಭಕ್ತಿಯಾಗಿಯೇ (ಆದನ್ನು) ಮಾರ್ಪಡಿಸಿಕೊಳ್ಳಬೇಕು. "ಕುಲಕ್ಕಾಗಿ ಒಬ್ಬನನ್ನು ಬಿಡಬೇಕು" ಎಂಬ ನ್ಯಾಯಕ್ಕೆ ಅನುಗುಣವಾಗಿ[6] (ಹೀಗೆ ಮಾರ್ಪಡಿಸಿಕೊಳ್ಳುವದು ಅವಶ್ಯವಾಗಿದೆ).

ಅವನು ಮೂರನೆಯ ಮಾತ್ರೆಯ ರೂಪದ[7] ಬೆಳಕಿನಲ್ಲಿ ಎಂದರೆ ಸೂರ್ಯನಲ್ಲಿ ಧ್ಯಾನಮಾಡುತ್ತಾ ಸೇರಿಕೊಳ್ಳುತ್ತಾನೆ[8]. ಸತ್ತಬಳಿಕವೂ ಸೋಮಲೋಕವೇ ಮುಂತಾದವುಗಳಿಂದ (ಹಿಂತಿರುಗುವಂತೆ) ಸೂರ್ಯನಿಂದ ಹಿಂತಿರುಗುವ

---

1. ಪರಮಾತ್ಮನು ಎಲ್ಲೆಲ್ಲಿಯೂ ಇದ್ದರೂ ಉತ್ಕೃಷ್ಟೋಪಾಧಿಯಾದ ಸೂರ್ಯನಲ್ಲಿ ವಿಶೇಷವಾಗಿ ಪ್ರಕಟವಾಗಿರುತ್ತಾನೆ.

2. ಈ ಪುರುಷನು ಪರಬ್ರಹ್ಮವೇ.

3. "ಈ ಆಯತನದಿಂದಲೇ" ಮುಂತಾದ ಶ್ರುತಿಯು ಓಂಕಾರವು ಇಲ್ಲಿ ಪ್ರತೀಕವೆಂಬುದನ್ನು ತಿಳಿಸುತ್ತದೆ.

4. ಈ ಪ್ರಕರಣದಲ್ಲಿ ಓಂಕಾರದ ಧ್ಯಾನವು ಪ್ರಕೃತವಾಗಿರುತ್ತದೆ.

5. ಓಂಕಾರವು ಪ್ರತೀಕವಲ್ಲದಿದ್ದರೆ ಓಂಕಾರವೇ ಬ್ರಹ್ಮವೆಂದು ತಿಳಿಸುತ್ತಿರಲಿಲ್ಲ.

6. "ಪ್ರಶ್ನೆಯಲ್ಲಿ ಓಂಕಾರವನ್ನು ಧ್ಯಾನಮಾಡುವವನಿಗೆ ಫಲವೇನು?" ಎಂದು ಕೇಳಿದೆ. ಮೂರನೆಯ ಮಂತ್ರದಲ್ಲಿ "ಓಂಮು ಮಾತ್ರೆಯು (ಓಂಕಾರವನ್ನು)" ಧ್ಯಾನಮಾಡಿದರೆ ಆಗುವ ಫಲವನ್ನು ಹೇಳಿದೆ. ಇಲ್ಲಿಯೂ 'ಏತಮ್' ಎಂಬ ಪ್ರಕೃತಗಾಮಿಯಾದ ಸರ್ವನಾಮವು ದ್ವಿತೀಯೆಯಲ್ಲಿದೆ. "ದ್ವಿಮಾತ್ರೇಣ" ಎಂಬ ತೃತೀಯೆಯು ಇರುವ ಶ್ರುತಿಯಲ್ಲಿ ಆತ್ಮನ ಉಪಾಸನೆಯನ್ನಾಗಲಿ ಓಂಕಾರೋಪಾಸನೆಯನ್ನಾಗಲಿ ಬಾಯಿಬಿಟ್ಟು ಹೇಳಿಲ್ಲ. ಆದ್ದರಿಂದ ದ್ವಿತೀಯಾಶ್ರುತಿಯೇ ಪ್ರಬಲ.

7. "ತೃತೀಯಾಮಾತ್ರಾರೂಪಣ" ಎಂಬುದನ್ನು ಮೂರನೆಯ ಮಾತ್ರೆಯು ರೂಪವನ್ನು ಹೊಂದಿ ಎಂದು ಕನ್ನಡಿಸಬೇಕು.

8. ಮೂರನೆಯ ಮಾತ್ರೆಯನ್ನು ಪ್ರಧಾನವಾಗಿ ಮಾಡಿಕೊಂಡು ಅಪರಬ್ರಹ್ಮವನ್ನು ಉಪಾಸನೆಮಾಡಿದ್ದರ ಫಲವಾಗಿ ಸೂರ್ಯಸಾಕ್ಷಾತ್ಕಾರವಾಗುತ್ತದೆ.

ದ್ದಿಲ್ಲ.[1] ಮತ್ತೇನೆಂದರೆ ಸೂರ್ಯನಲ್ಲಿ ಸೇರಿಕೊಂಡವನೇ, ಹೇಗೆ ಪಾದೋದರವು ಎಂದರೆ ಹಾವು ಪರೆಯಿಂದ ಬಿಡುಗಡೆಯನ್ನು ಹೊಂದುತ್ತದೆಯೋ, ಹಳೆಯ ಪರೆಯಿಂದ ಬಿಡುಗಡೆಯನ್ನು ಹೊಂದಿ ಅದು ಹೇಗೆ ಮತ್ತೆ ಹೊಸದಾಗುವದೋ, ಇದಕ್ಕಂತೆಯೇ ಎಂದರೆ ಈ ದೃಷ್ಟಾಂತದಂತೆಯೇ ಅವನು ಹಾವಿನ ಪರೆಯಂತಿರುವ ಅಶುದ್ಧಿರೂಪವಾದ ಪಾಪದಿಂದ ಬಿಡುಗಡೆಯನ್ನು ಹೊಂದಿ[2] ಮೂರನೆಯ ವನಾಶ್ರಮ ರೂಪವಾಗಿರುವ ಸಾಮಗಳಿಂದ ಮೇಲಕ್ಕೆ ಬ್ರಹ್ಮಲೋಕಕ್ಕೆ ಎಂದರೆ ಹಿರಣ್ಯಗರ್ಭನೆಂಬ ಬ್ರಹ್ಮದ ಸತ್ಯವೆಂಬ ಹೆಸರಿನ ಲೋಕಕ್ಕೆ ಒಯ್ಯಲ್ಪಡುವನು. ಆ ಹಿರಣ್ಯಗರ್ಭನು ಸಂಸಾರಿಗಳಾದ ಜೀವರುಗಳಿಗೆಲ್ಲ ಆತ್ಮರೂಪನಾಗಿ ಇರುತ್ತಾನೆ; ಏಕೆಂದರೆ ಅವನು ಲಿಂಗ(ಶರೀರ)ರೂಪದಿಂದ ಸರ್ವಪ್ರಾಣಿಗಳಿಗೂ ಒಳಗಿನ ಆತ್ಮರೂಪನಾಗಿರುತ್ತಾನೆ. ಲಿಂಗಾತ್ಮನಾದ ಆತನಲ್ಲಿಯೇ ಅಲ್ಲವೆ, ಎಲ್ಲಾ ಜೀವರುಗಳೆಲ್ಲರೂ ಒಟ್ಟಾಗಿರುತ್ತಾರೆ[3] ? ಆದ್ದರಿಂದ ಅವನು ಜೀವಘನನು.[4] ಮೂರುಮಾತ್ರೆಗಳ ಓಂಕಾರವನ್ನು ಬಲ್ಲ ಆ ಉಪಾಸಕನು ಈ ಜೀವಘನನಾದ ಹೆಚ್ಚಿನ ಹಿರಣ್ಯಗರ್ಭನಿಗಿಂತಲೂ ಹೆಚ್ಚಿನವನಾದ ಪರಮಾತ್ಮನೆಂಬ ಹೆಸರಿನ, ಪರದಲ್ಲಿದ್ದುಕೊಂಡಿರುವ ಎಂದರೆ ಎಲ್ಲರ ಶರೀರಗಳಲ್ಲಿಯೂ ಅನುಪ್ರವೇಶ ಮಾಡಿರುವ[5] ಪುರುಷನನ್ನು ಧ್ಯಾನಮಾಡುತ್ತಾ[6] ಕಂಡುಕೊಳ್ಳುವನು. ಅಲ್ಲಿ ಎಂದರೆ ಈ ವಿಷಯದಲ್ಲಿ, ಈ ಹೇಳಿದ ವಿಷಯವನ್ನು ಬೆಳಗುವ ಈ ಎರಡು ಶ್ಲೋಕಗಳು, ಮಂತ್ರಗಳು, ಇರುತ್ತವೆ.

ಉಪಸಂಹಾರ

ತಿಸ್ರೋ ಮಾತ್ರಾ ಮೃತ್ಯುಮತ್ಯಃ ಪ್ರಯುಕ್ತಾ
ಅನ್ಯೋನ್ಯಸಕ್ತಾ ಅನವಿಪ್ರಯುಕ್ತಾಃ।
ಕ್ರಿಯಾಸು ಬಾಹ್ಯಾಭ್ಯನ್ತರಮಧ್ಯಮಾಸು
ಸಮ್ಯಕ್ಪ್ರಯುಕ್ತಾಸು ನ ಕಮ್ಪತೇ ಜ್ಞಃ ॥೬॥

1. ಕೃಪುಮುಕ್ತಿಯನ್ನೇ ಹೊಂದುತ್ತಾನೆ.

2. ಪಾಪದಿಂದ ಬಿಡುಗಡೆಯಾಗುವದೆಂಬ ಫಲವೂ ಪರಬ್ರಹ್ಮದ ಉಪಾಸನೆಯಿಂದಲೇ ಎಂಬ ಸೂ, ಭಾ. ೧–೫–೧೩ರಲ್ಲಿದೆ.

3. ಲಿಂಗವು ಆತ್ಮರಾತ್ಮನೆಂಬುದಕ್ಕೆ ಮುಂ. ಭಾ. ೩–೧–೪ ನೋಡಿ. ಲಿಂಗ ಸಮಷ್ಟಿಯೇ ಹಿರಣ್ಯಗರ್ಭನ ಉಪಾಧಿ.

4. ಜೀವಘನವೆಂದರೆ ಬ್ರಹ್ಮಲೋಕವೆಂದು ಸೂ. ಭಾ. ೧–೫–೧೩ರಲ್ಲಿ ಲಕ್ಷಣಾರ್ಥವನ್ನು ಕೊಟ್ಟಿದೆ.

5. ಕೈ. ೩–೬ರ ಸೂಚನೆ.

6. ಮುಂ. ಭಾ. ೩–೧–೮. ಪರಾತ್ಪರನೆಂದರೆ ಪರಮಾತ್ಮನೇ ಎಂದು ಸೂ. ಭಾ. ೧–೫–೧೩ರಲ್ಲಿ ಸೂಚಿಸಿದೆ.

೬. ಅನ್ಯೋನ್ಯಸಕ್ತವಾಗಿರುವ ಮೂರು ಮಾತ್ರೆಗಳು ಅನವಿ ಪ್ರಯುಕ್ತವಾಗಿ ಪ್ರಯೋಗಿಸಲ್ಪಟ್ಟರೆ ಮೃತ್ಯುವಂತವಾಗಿರುವವು. ಹೊರಗಿನ, ಒಳಗಿನ, ನಡುವಿನ ಕ್ರಿಯೆಗಳು ಚೆನ್ನಾಗಿ ಪ್ರಯೋಗಿಸಲ್ಪಟ್ಟಿರಲಿ ಜ್ಞಾನಿಯು ಅಲುಗಾಡುವದಿಲ್ಲ.

(ಭಾಷ್ಯ)

೬. ತಿಸ್ರಃ ತ್ರಿಸಂಖ್ಯಾಕಾಃ ಅಕಾರೋಕಾರಮಕಾರಾಖ್ಯಾಃ ಓಂಕಾರಸ್ಯ ಮಾತ್ರಾಃ | ಮೃತ್ಯುಮತ್ಯಃ ಮೃತ್ಯುರ್ಯಾಸಾಂ ವಿದ್ಯತೇ ತಾ ಮೃತ್ಯುಮತ್ಯಃ ಮೃತ್ಯುಗೋಚರಾತ್ ಅನತಿಕ್ರಾನ್ತಾಃ | ಮೃತ್ಯುಗೋಚರಾ ಏವ ಇತ್ಯರ್ಥಃ | ತಾ ಆತ್ಮನೋ ಧ್ಯಾನಕ್ರಿಯಾಸು ಪ್ರಯುಕ್ತಾಃ | ಕಿಂ ಚ ಅನ್ಯೋನ್ಯಸಕ್ತಾ ಇತರೇತರಸಂಬದ್ಧಾಃ | ಅನವಿಪ್ರಯುಕ್ತಾಃ ವಿಶೇಷೇಣ ಏಕೈಕವಿಷಯೇ ಏವ ಪ್ರಯುಕ್ತಾಃ ವಿಪ್ರಯುಕ್ತಾಃ ; ನ ತಥಾ ವಿಪ್ರಯುಕ್ತಾಃ ಅವಿಪ್ರಯುಕ್ತಾಃ ನ ಅವಿಪ್ರಯುಕ್ತಾಃ ಅನವಿಪ್ರಯುಕ್ತಾಃ | ಕಿಂ ತರ್ಹಿ ? ವಿಶೇಷೇಣ ಏಕಸ್ಮಿನ್ (ಪ್ರಯುಕ್ತಾ ಏವ[1]) ಧ್ಯಾನಕಾಲೇ | ತಿಸೃಷು ಕ್ರಿಯಾಸು ಬಾಹ್ಯಾಭ್ಯನ್ತರ ಮಧ್ಯಮಾಸು ಜಾಗ್ರತ್ಸ್ವಪ್ನಸುಷುಪ್ತಸ್ಥಾನಪುರುಷಾಭಿಧ್ಯಾನಲಕ್ಷಣಾಸು ಯೋಗ ಕ್ರಿಯಾಸು[2] ಸಮ್ಯಕ್‌ಪ್ರಯುಕ್ತಾಸು ಸಮ್ಯಕ್ ಧ್ಯಾನಕಾಲೇ ಪ್ರಯೋಜಿತಾಸು ನ ಕಮ್ಪತೇ ನ ಚಲತಿ ಜ್ಞಾನಃ ಯೋಗೀ ಯಥೋಕ್ತವಿಧಾಗಜ್ಞಾನಃ ಓಂಕಾರಸ್ಯ ಇತ್ಯರ್ಥಃ| ನ ತಸ್ಯ ಏವಂವಿದಃ ಚಲನಮ್ ಉಪಪದ್ಯತೇ | ಯಸ್ಮಾತ್ ಜಾಗ್ರತ್ಸ್ವಪ್ನಸುಷುಪ್ತಪುರುಷಾಃ ಸಹ ಸ್ಥಾನೈಃ ಮಾತ್ರಾತ್ಮಕ್ರಯರೂಪೇಣ ಓಂಕಾರಾತ್ಮ ರೂಪೇಣ ದೃಷ್ಟಾಃ | ಸ ಹಿ ಏವಂವಿದ್ವಾನ್ ಸರ್ವಾತ್ಮಭೂತಃ ಓಂಕಾರಮಯಃ ಕುತೋ ವಾ ಚಲೇತ್ ಕಸ್ಮಿನ್ ವಾ ? ॥

(ಭಾಷ್ಯಾರ್ಥ)

ಓಂಕಾರದ ಮೂರು (ಮಾತ್ರೆ)ಗಳು ಎಂದರೆ ಅಕಾರ, ಉಕಾರ, ಮಕಾರ– ಎಂಬ ಮೂರು ಸಂಖ್ಯೆಯ ಮಾತ್ರೆಗಳು ಮೃತ್ಯುವಂತವಾಗಿರುವವು. ಮೃತ್ಯುವಂತವಾಗಿರುವವು ಎಂದರೆ ಮೃತ್ಯುವು ಅದಕ್ಕೆ ಇರುತ್ತದೆ, ಮೃತ್ಯುವಿನ ವಿಷಯವನ್ನು ಅವು ಮೀರಿರುವದಿಲ್ಲ; ಮೃತ್ಯುವಿಗೆ ಗೋಚರವಾದವುಗಳೇ ಆಗಿರುತ್ತವೆ ಎಂದರ್ಥ[3]. ಅವು

1. ಈ ಮಾತುಗಳು ಭಾಷ್ಯದಲ್ಲಿ ಕೈಬಿಟ್ಟುಹೋಗಿವೆ ಎಂದು ಕಲ್ಪಿಸಲಾಗಿದೆ.

2. "ಯುಕ್ತಾಸು" ಎಂದು ವಾ॥ ಪಾಠದಲ್ಲಿ ಹೆಚ್ಚಾಗಿದೆ.

3. ಮುಂದೆ ಹೇಳುವಂತೆ ಒಂದೊಂದು ವಿಷಯಕ್ಕೇ ಸಂಬಂಧಪಟ್ಟಿದ್ದರೆ ಅವುಗಳ ಧ್ಯಾನವು ಅನಿತ್ಯಫಲವನ್ನು ಮಾತ್ರ ಕೊಡುವದು.

ತಮ್ಮ[1] ಧ್ಯಾನಕ್ರಿಯೆಗಳಲ್ಲಿ ಪ್ರಯೋಗಿಸಲ್ಪಟ್ಟರೆ ಮತ್ತು ಅನ್ಯೋನ್ಯಸಕ್ತವಾಗಿ ಇವ ಎಂದರೆ ಒಂದಕ್ಕೊಂದಕ್ಕೆ ಸಂಬಂಧಪಟ್ಟಿರುವ (ಈ ಮಾತ್ರೆಗಳು) ಆಗವಿ ಪ್ರಯುಕ್ತವಾಗಿ (ಪ್ರಯೋಗಿಸಲ್ಪಟ್ಟರೆ)–ವಿಶೇಷವಾಗಿ ಒಂದೊಂದು ವಿಷಯದಲ್ಲಿಯೇ ಪ್ರಯೋಗಿಸಿದರೆ ವಿಪ್ರಯುಕ್ತ(ವೆನಿಸುವವು); ಹಾಗೆ ವಿಪ್ರಯುಕ್ತವಾಗದೆ ಇದ್ದರೆ ಅನಿಪ್ರಯುಕ್ತ(ವಾಗುವವು); ಅವಿಪ್ರಯುಕ್ತವಾಗದೆ ಅನವಿ ಪ್ರಯುಕ್ತವಾಗಿ (ಪ್ರಯೋಗಿಸಲ್ಪಟ್ಟರೆ)-(ಅವಿಪ್ರಯುಕ್ತವಾಗಿ ಅಲ್ಲ,) ಮತ್ತೇ ನೆಂದರೆ ವಿಶೇಷವಾಗಿ (ಪ್ರಯುಕ್ತವೇ ಆದರೆ[2] ಮೃತ್ಯುವಂತವಾಗುವದು).

ಧ್ಯಾನಕಾಲದಲ್ಲಿ ಹೊರಗಿನ, ಒಳಗಿನ ಮತ್ತು ನಡುವಿನ ಎಂದರೆ ಎಚ್ಚರ, ಕನಸು, ತನಿನಿದ್ರೆ–ಎಂಬ (ಮೂರ)ವಸ್ಥೆಗಳ ಪುರುಷನನ್ನು ಅಭಿಧ್ಯಾನಮಾಡುವ ದೆಂಬ ಮೂರು ಕ್ರಿಯೆಗಳೂ (ಮೂರು) ಯೋಗಕ್ರಿಯೆಗಳೂ ಚೆನ್ನಾಗಿ ಪ್ರಯೋಗಿಸಲ್ಪಟ್ಟರೆ[3] ಜ್ಞಾನಿಯು ಎಂದರೆ ಓಂ ಕಾರದ ಈ ಹೇಳಿದ ವಿಭಾಗವನ್ನು ಬಲ್ಲ–ಯೋಗಿಯು ಎಂದರ್ಥ[4]; (ಅವನು) ಅಲುಗಾಡುವದಿಲ್ಲ, ಚಲಿಸುವದಿಲ್ಲ ಎಂದರ್ಥ. ಹೀಗೆ ಆರಿತ[5] ಅವನಿಗೆ ಚಲನವೆಂಬುದು ಎಂದಿಗೂ ಆಗುವದಾಗಿಲ್ಲ; ಏಕೆಂದರೆ ಎಚ್ಚರ, ಕನಸು, ತನಿನಿದ್ರೆ-ಇವುಗಳ ಪುರುಷನು (ಆ) ಅವಸ್ಥೆಗಳೊಡನೆ ಮೂರು ಮಾತ್ರೆಗಳ ರೂಪದ ಓಂಕಾರಾತ್ಮರೂಪದಿಂದಲೇ ಸಾಕ್ಷಾತ್ಕರಿಸಲ್ಪಟ್ಟಿರು

---

1. 'ಆತ್ಮನ ಧ್ಯಾನಕ್ರಿಯೆಗಳಲ್ಲಿ' ಎಂಬುದಕ್ಕಿಂತ "ತಮ್ಮ ಧ್ಯಾನಕ್ರಿಯೆಗಳಲ್ಲಿ" ಎಂದು ಅರ್ಥಮಾಡುವದರಲ್ಲಿ ಸ್ವಾರಸ್ಯ ಹೆಚ್ಚು. ಆಯಾ ಮಾತ್ರೆಯನ್ನು ಮಾತ್ರ ಧ್ಯಾನಿಸಿದರೆ ಅನಿತ್ಯಫಲ ಎಂದರ್ಥ.

2. 'ವಿಶೇಷೇಣ' ಎಂಬ ಮಾತಿನ ಮುಂದೆ 'ಪ್ರಯುಕ್ತಾ ಏವ' ಎಂದಿರಬೇಕು. ವಿ. ವಿಶೇಷವಾಗಿ (ಒಂದೊಂದರಲ್ಲಿಯೇ) ಪ್ರಯುಕ್ತಾಃ–ಪ್ರಯೋಗಿಸಲ್ಪಟ್ಟವು. ಅವಿ ಪ್ರಯುಕ್ತಾಃ ಎಂದರೆ ಹಾಗೆ ಪ್ರಯೋಗಿಸಲ್ಪಡದೆ ಇರುವವು. ಅನವಿಪ್ರಯುಕ್ತಾಃ ಎಂದರೆ ಅವಿಪ್ರಯುಕ್ತವಾದೆ ಎಂದರೆ ವಿಪ್ರಯುಕ್ತವಾಗಿಯೇ ಇರುವವುಗಳು ಎಂದು ವಿಗ್ರಹವಾಕ್ಯಕಥನ. ಒಂದೊಂದೇ ಅವಯವವು ಪುರುಷನನ್ನು ಧ್ಯಾನಮಾಡುವಪಕ್ಷಕ್ಕೆ ಮಾತ್ರೆಗಳನ್ನು ಪ್ರಯೋಗಿಸಿದರೆ ಅವು ಮೃತ್ಯುವಂತವಾಗುವವು ಎಂದು ಅಭಿಪ್ರಾಯ.

3. ಒಟ್ಟುಗೂಡಿಸಿ ಓಂಕಾರವಾಗಿ ಮಾಡಿಕೊಂಡು ಪರಮಪುರುಷನನ್ನೇ ಧ್ಯಾನ ಮಾಡಿದರೆ ಎಂದರ್ಥ.

4. ಓಂಕಾರೋಪಾಸಕನನ್ನೇ ಇಲ್ಲಿ 'ಜ್ಞಾನಿ' ಎಂದು ಕರೆದಿದೆ. ಗೀ. ಭಾ. ೮–೧೨.

5. ಸಾಕ್ಷಾತ್ಕಾರಮಾಡಿಕೊಂಡಿರುವ.

ತ್ತಾರೆ.[1] ಹೀಗೆಂದು ಅರಿತುಕೊಂಡಿರುವ ಆ ಉಪಾಸಕನು ಸರ್ವಾತ್ಮನಾಗಿ ಓಂಕಾರಮಯನಾಗಿರುವದರಿಂದ ಏತರಿಂದ ಎಲ್ಲಿಗೆ ಚಲಿಸಿಯಾನು ?[2]

(ಭಾಷ್ಯ)

ಅಜ್ಞ. ಸರ್ವಾರ್ಥಸಂಗ್ರಹಾರ್ಥೋ ದ್ವಿತೀಯೋ ಮನ್ತ್ರಃ—

(ಭಾಷ್ಯಾರ್ಥ)

(ಇದುವರೆಗೆ ಹೇಳಿರುವ) ವಿಷಯವನ್ನೆಲ್ಲ[3] ಸಂಗ್ರಹಿಸಿ ತಿಳಿಸುವದಕ್ಕೆ (ಈ) ಎರಡನೆಯ ಮಂತ್ರವು (ಬಂದಿದೆ) :—

ಋಗ್ಭಿರೇತಂ ಯಜುರ್ಭಿರನ್ತರಿಕ್ಷಂ
ಸಾಮಭಿರ್ಯತ್ತತ್ಕವಯೋ ವೇದಯನ್ತೇ ।
ತಮೋಙ್ಕಾರೇಣೈವಾಯತನೇನಾನ್ವೇತಿ ವಿದ್ವಾನ್
ಯೇತ್ತಚ್ಛಾನ್ತಮಜರಮಮೃತಭಯಂ ಪರಂ ಚೇತಿ ॥೭॥

೭. ಋಕ್ಕುಗಳಿಂದ ಈ (ಲೋಕವನ್ನು), ಯಜುಸ್ಸುಗಳಿಂದ ಅಂತರಿಕ್ಷವನ್ನು, ಸಾಮಗಳಿಂದ ಯಾವದನ್ನು ಕವಿಗಳು ತಿಳಿದಿರುವರೋ ಅವನ್ನು ಓಂಕಾರವೆಂಬ ಆಯತನದಿಂದಲೇ ವಿದ್ವಾಂಸನು ಹೊಂದುತ್ತಾನೆ. ಯಾವದುಶಾಂತವಾಗಿ ಮುಪ್ಪಿಲ್ಲದೆ ಮರಣವಿಲ್ಲದೆ ಭಯವಿಲ್ಲದೆ ಇರುವದೋ ಆ ಪರ(ಬ್ರಹ್ಮವನ್ನು ಹೊಂದುತ್ತಾನೆ).

(ಭಾಷ್ಯ)

೭. ಋಗ್ಭಿಃ ಏತಂ ಲೋಕಂ ಮನುಷ್ಯೋಪಲಕ್ಷಿತಮ್ | ಯಜುರ್ಭಿಃ ಅನ್ತರಿಕ್ಷಂ ಸೋಮಾಧಿಷ್ಠಿತಮ್ | ಸಾಮಭಿಃ ಯತ್ ತತ್ ಬ್ರಹ್ಮಲೋಕಃ ಇತಿ ತೃತೀಯಂ ಕವಯಃ ಮೇಧಾವಿನಃ ವಿದ್ವಾನ್ತ ಏವ ನಾವಿದ್ವಾಂಸಃ ವೇದಯನ್ತೇ | ತಂ ತ್ರಿವಿಧಂ ಲೋಕಮ್ ಓಂಕಾರೇಣ ಸಾಧನೇನ ಅಪರ ಬ್ರಹ್ಮಲಕ್ಷಣಮ್ ಅನ್ವೇತಿ ಆನುಗಚ್ಛತಿ ವಿದ್ವಾನ್ | ತೇನೈವ ಓಂಕಾರೇಣ ಯತ್ ತತ್ ಪರಂ ಬ್ರಹ್ಮ ಅಕ್ಷರಂ ಸತ್ಯಂ ಪುರುಷಾಖ್ಯಂ ಶಾನ್ತಂ ವಿಮುಕ್ತ

---

1. ಅಕಾರವು ಎಚ್ಚರ ಮೆಕ್ಕು ವೈಶ್ವಾನರ ; ಉಕಾರವು ಕನಸು ಮೆಕ್ಕು ತೈಜಸ; ಮಕಾರವು ಸುಷುಪ್ತಿ ಮೆಕ್ಕು ಪ್ರಾಜ್ಞ. ಆದರೆ ಓಂಕಾರವು ಈ ಮೂರು ಅವಸ್ಥೆಗಳಿಗೂ ಸೇರಿರುವ ಪರಮಾತ್ಮನೇ ಎಂದು ಓಂಕಾರೋಪಾಸಕನು ಸಾಕ್ಷಾತ್ಕಾರಮಾಡಿಕೊಂಡಿರುತ್ತಾನೆ. ವೈಶ್ವಾನರಾದಿರೂಪದಿಂದ ತೋರುವ ಪುರುಷರು ಈ ಪರಮಾತ್ಮನಿಗಿಂತ ಬೇರೆಯಲ್ಲ. ಇವನನ್ನೇ ಆಜ್ಞರು ಆಯೊ ವಿಶೇಷರೂಪದಿಂದ ಕಾಣುತ್ತಾರೆ ಎಂಬುದು ಸಾಕ್ಷಾತ್ಕಾರದಿಂದಾದ ತಿಳಿವಳಿಕೆ.

2. ಪರಮಾತ್ಮರೂಪವಾದ ಓಂಕಾರವೇ ನಾನು ಎಂಬ ಅರಿವಾಗಿರುವವನಿಗೆ ಎರಡನೆಯದಾಗಿ ಏನೂ ಉಳಿದಿರುವದಿಲ್ಲ ; ಆದ್ದರಿಂದ ಅವನಿಗೆ ವಿಶೇಷನೆಂಬುದಿಲ್ಲ.

3. ಓಂಕಾರದ ಉಪಾಸನೆಯಿಂದ ಪರಾಪರಬ್ರಹ್ಮಗಳ ಪ್ರಾಪ್ತಿಯಾಗುವದೆಂಬುದನ್ನು

ಜಾಗ್ರತ್ಸ್ವಪ್ನಸುಷುಪ್ತಾದಿವಿಶೇಷಂ ಸರ್ವಪ್ರಪಞ್ಚವರ್ಜಿತಮ್ ಅತ ಏವ ಅಜರಂ ಜರಾದಿನಿರ್ಜಿತಮ್ | ಅಮೃತಂ ಮೃತ್ಯುವರ್ಜಿತಮ್ ಅತ ಏವ | ಸುಸ್ಥಾತ್ ಜರಾದಿನಿಕ್ರಿಯಾರೂಪಕತ್ವಾತ್ ಅತಃ ಅಭಯಮ್ | ಯಸ್ಮಾದೇವ ಅಭಯಮಂ ತಸ್ಮಾತ್ ಪರಂ ನಿರತಿಶಯಮ್ | ತದಪಿ ಓಂಕಾರೇಣೈವ ಆಯತನೇನ ಗನುಸಧಾವಸೀನ ಅನ್ವೇತಿ ಇತ್ಯರ್ಥಃ | ಇತಿಶಬ್ದಃ ವಾಕ್ಯಪರಿಸಮಾಪ್ತ್ಯರ್ಥಃ ||

(ಭಾಷ್ಯಾರ್ಥ)

ಋಕ್ಕುಗಳಿಂದ ಈ ಲೋಕವನ್ನೆ ಮನುಷ್ಯ (ಜನ್ಮವೆಂಬ) ಉಪಲಕ್ಷಣವುಳ್ಳ (ಈ ಲೋಕವನ್ನೆ)[1] ; ಯಜುಸ್ಸುಗಳಿಂದ ಸೋಮನು ಆಳುತ್ತಿರುವ ಅಂತರಿಕ್ಷ (ಲೋಕವನ್ನು ; ಸಾಮಗಳಿಂದ ಮೂರನೆಯದಾದ ಬ್ರಹ್ಮಲೋಕವನ್ನು ; ಕವಿಗಳು ಎಂದರೆ (ರಹಸ್ಯವನ್ನು) ಬಲ್ಲ ಉಪಾಸಕರೇ ಹೊರತು ಉಪಾಸಕರಲ್ಲದ ಮನುಷ್ಯಾದಿಯನ್ನೆ ಅರಿಯರೋ ಆದನ್ನು[2] ಅಪರಬ್ರಹ್ಮರೂಪವಾದ[3] ಈ ಮೂರು ಬಗೆಯ ಲೋಕವನ್ನೂ ಓಂಕಾರವೆಂಬ ಸಾಧನದಿಂದ ಉಪಾಸಕನು ಹೊಂದುತ್ತಾನೆ, ಹೊಗಿ ಸೇರುತ್ತಾನೆ. ಅದೇ ಓಂಕಾರದಿಂದಲೇ[4] **ಯಾವದ ಪುರುಷನೆಂಬ ಹೆಸರಿನ ಸತ್ಯವಾದ ಅಕ್ಷರವೋ**[5] ಆ ಪರಬ್ರಹ್ಮವನ್ನೂ ಶಾಂತವಾದ ಮುಕ್ತಸ್ವರೂಪವಾದ ಎಚ್ಚರ, ಕನಸು, ತನ್ನಿದ್ರೆ–ಮುಂತಾದ ಯಾವ ವಿಶೇಷವೂ ಇಲ್ಲದ ಯಾವ ಪ್ರಪಂಚವೂ ಇಲ್ಲದ[7],

1. ಋಗ್ರೂಪವಾದ ಅಕಾರಮಾತ್ರೆಯ ಜ್ಞಾನದಿಂದೊಡಗೂಡಿ ಓಂಕಾರವನ್ನು ಉಪಾಸನೆಮಾಡಿದ್ದರಿಂದ. ಹೀಗೆಯೇ 'ಯಜುಸ್ಸುಗಳಿಂದ, ಸಾಮಗಳಿಂದ' ಎಂದರೆ ಉಕಾರಮಾತ್ರೆಯ ಜ್ಞಾನದಿಂದ, ಮಕಾರಮಾತ್ರೆಯ ಜ್ಞಾನದಿಂದ, ಕೂಡಿದ ಓಂಕಾರವನ್ನು ಉಪಾಸನೆಮಾಡಿದ್ದರಿಂದ–ಎಂದರ್ಥವನ್ನು ಮಾಡಬೇಕು.

2. ಈ ಲೋಕದಲ್ಲಿ ಉಳಿದ ಪ್ರಾಣಿಗಳೂ ಇವೆಯಾದರೂ ಕರ್ಮಜ್ಞಾನಗಳಿಗೆ ಅಧಿಕಾರವಿರುವ ಮನುಷ್ಯರನ್ನೇ ಹೆಗ್ಗುರುತಾಗಿ ಹೇಳಿದೆ.

3. ಹಿರಣ್ಯಗರ್ಭನನ್ನು ಉಪಾಸನೆಮಾಡಿರುವ ಮಹನೀಯರು ಮಾತ್ರ ಬ್ರಹ್ಮಲೋಕವನ್ನು ಬಲ್ಲರು. ಮೂರನೆಯ ಮಾತ್ರೆಯ ಉಪಾಸನೆಯನ್ನು ಪ್ರತ್ಯೇಕವಾಗಿ ಹೇಳದಿದ್ದರೂ ಜನನೆಯ ಮಂತ್ರದಲ್ಲಿ ಆದೂ ಅಡಕವಾಗಿದೆ ಎಂಬುದಕ್ಕೆ ಈ ಭಾಷ್ಯವು ಗಮಕವು. 4. ಪರಬ್ರಹ್ಮವಲ್ಲದ್ದೆಲ್ಲ ಅಪರಬ್ರಹ್ಮಲಕ್ಷಣವಾದ ಫಲವೇ.

5. ಯಾವ ಓಂಕಾರದ ಉಪಾಸನೆಯಿಂದ ಅಪರಬ್ರಹ್ಮವನ್ನು ಪಡೆಯುವರೋ ಅದರ ಉಪಾಸನೆಯಿಂದಲೇ ಎಂದರ್ಥ. ಒಂದು ಮಾತ್ರೆ, ಎರಡು ಮಾತ್ರೆ–ಎಂದು ಹೇಳಿರುವಾಗ ಬರಿಯ ಮಾತ್ರೆಗಳ ಉಪಾಸನೆಯಲ್ಲವೆಂದೂ ಆಯಾ ಮಾತ್ರೆಗಳ ಅರಿವಿನಿಂದ ಕೂಡಿ ಓಂಕಾರವನ್ನು ಉಪಾಸನೆಮಾಡುವದೆಂದೂ ಭಾಷ್ಯಕಾರರ ಅಭಿಪ್ರಾಯವು. "ಈ ಓಮ್ ಎಂಬೀ ಅಕ್ಷರದಿಂದಲೇ" ಎಂಬ ಜನನೆಯ ಮಂತ್ರದ ಅವಧಾರಣೆಗೆ ಇದೇ ಅಭಿಪ್ರಾಯ

6. ಮುಂಡಕದಲ್ಲಿ ಹೇಳಿದ ಅಕ್ಷರವನ್ನೂ ಉಪಾಸನೆಯಿಂದ ಪಡೆಯಬಹುದೆಂದು ಭಾವ. 7. " ಜಾಗ್ರತ್ಸ್ವಪ್ನಸುಷುಪ್ತಾದಿವಿಶೇಷಸರ್ವಪ್ರಪಞ್ಚವರ್ಜಿತವ್ " ಎಂಬ ಆ ವಾಕ್ಯದಲ್ಲಿ ವಿಶೇಷಗಳೆಂಬ ಯಾವ ಪ್ರಪಂಚವೂ ಇಲ್ಲದ ಎಂದರ್ಥ.

ಆದ್ದರಿಂದಲೇ ಅಜರವಾಗಿರುವ ಎಂದರೆ ಮುಪ್ಪಿಲ್ಲದ, ಆದ್ದರಿಂದಲೇ ಅಮೃತವಾದ ಎಂದರೆ ಮರಣವಿಲ್ಲದ, ಮುಪ್ಪೇ ಮುಂತಾದ ವಿಕಾರಗಳಿಲ್ಲದಿರುವದರಿಂದ ಅಭಯವಾಗಿರುವ, ಅಭಯವಾಗಿರುವದರಿಂದಲೇ ಪರವಾದ, ಎಂದರೆ ತನಗಿಂತ ಮಿಗಿಲಿಲ್ಲದ (ಬ್ರಹ್ಮವು ಯಾವದೋ) ಅದನ್ನೂ– ಓಂಕಾರವೆಂಬ ಆಯತನದಿಂದಲೇ ಎಂದರೆ (ಆ) ಗತಿಸಾಧನದಿಂದಲೇ ಹೊಂದುತ್ತಾನೆ ಎಂದರ್ಥ. (ಕೊನೆಯಲ್ಲಿ) ಇತಿ ಎಂಬ ಮಾತನ್ನು ಪ್ರಯೋಗಿಸಿರುವದು ವಾಕ್ಯವು[1] ಮುಗಿಯಿತೆಂದು ತಿಳಿಸುವದಕ್ಕೆ.

1. ಈ ಪ್ರಶ್ನೆಯು.

ಆರನೆಯ ಪ್ರಶ್ನೆ

ಈ ಪ್ರಶ್ನೆಯ ಸಂಬಂಧ

(ಭಾಷ್ಯ)

೮೭. "ಅಥ ಹೈನಂ ಸುಕೇಶಾ ಭಾರದ್ವಾಜಃ ಪಪ್ರಚ್ಛ" | ಸಮಸ್ತಂ ಜಗತ್ ಕಾರ್ಯಕರಣಲಕ್ಷಣಂ[1] ಸಹ ವಿಜ್ಞಾನಾತ್ಮನಾ ಪರಸ್ಮಿನ್ ಅಕ್ಷರೇ ಸುಷುಪ್ತಿ ಕಾಲೇ ಸಂಪ್ರತಿಷ್ಠತೇ ಇತ್ಯುಕ್ತಮ್ | ತತ್ಸಮರ್ಥ್ಯಾತ್ ಪ್ರಲಯೇಽಪಿ ತಸ್ಮಿನ್ನೇವಾಕ್ಷರೇ ಸಂಪ್ರತಿಷ್ಠತೇ ಜಗತ್ ತತ ಏವೋತ್ಪದ್ಯತೇ ಇತಿ ಚ, ಸಿದ್ಧಂ ಭವತಿ | ನ ಹಿ ಅಕಾರಣೇ ಕಾರ್ಯಸ್ಯ ಸಂಪ್ರತಿಷ್ಠಾನಮ್ ಉಪಪದ್ಯತೇ | ಉಕ್ತಂ ಚ "ಅತ್ಮನ ಏಷ ಪ್ರಾಣೋ ಜಾಯತೇ" (೩-೩) ಇತಿ | ಜಗತಶ್ಚ ಯನ್ಮೂಲಂ ತತ್ಪರಿಜ್ಞಾನಾತ್ ಪರಂ ಶ್ರೇಯಃ ಇತಿ ಸರ್ವೋಪನಿಷದಾಂ ನಿಶ್ಚಿತೋಽರ್ಥಃ; ಅನನ್ತರಂ ಚೋಕ್ತಮ್ 'ಸ ಸರ್ವಜ್ಞಃ ಸರ್ವೋ ಭವತಿ' (೪-೧೦) ಇತಿ | ವಕ್ತವ್ಯಂ ಚ ಕ್ವ ತರ್ಹಿ ತದಕ್ಷರಂ ಸತ್ಯಂ ಪುರುಷಾಖ್ಯಂ ವಿಜ್ಞೇಯಮ್ ಇತಿ | ತದರ್ಥೋಽಯಂ ಪ್ರಶ್ನ ಆರಭ್ಯತೇ | ವೃತ್ತಾನ್ವಾಖ್ಯಾನಂ ಚ ವಿಜ್ಞಾನಸ್ಯ ಮೂರ್ಧಭತ್ವಖ್ಯಾಪನೇನೇಃ ತಲ್ಲಬ್ಧ್ವಾರ್ಥಂ ಮುಮುಕ್ಷೂಣಾಂ ಯತ್ನವಿಶೇಷೋ ಶ್ರದ್ಧಾನಾರ್ಥಮ್[2] ||

(ಭಾಷ್ಯಾರ್ಥ)

'ಅಥ ಹೈನಂ ಸುಕೇಶಾ ಭಾರದ್ವಾಜಃ ಪಪ್ರಚ್ಛ' ಆಗ ಈತನನ್ನು ಸುಕೇಶ ಭಾರದ್ವಾಜನು ಕೇಳಿದನು (ಎಂಬ ಆರನೆಯ ಪ್ರಶ್ನೆಯ ಸಂಬಂಧವೇನೆಂದರೆ) : **ಸುಷುಪ್ತಿಕಾಲದಲ್ಲಿ ಕಾರ್ಯಕರಣರೂಪವಾಗಿರುವ ಜಗತ್ತೆಲ್ಲವೂ ವಿಜ್ಞಾನಾತ್ಮನೊಡನೆ ಪರಮಾತ್ಮನಾದ ಅಕ್ಷರದಲ್ಲಿ ಸೇರಿಹೋಗುತ್ತದೆ** ಎಂದು ಹಿಂದೆ (೪-೧೧)ರಲ್ಲಿ ಹೇಳಿದ್ದಾಗಿದೆ. ಪ್ರಲಯದಲ್ಲಿಯೂ ಅದೇ ಅಕ್ಷರದಲ್ಲಿ ಜಗತ್ತು ಸೇರಿಹೋಗುತ್ತದೆಯೆಂದೂ ಅದರಿಂದಲೇ ಉಂಟಾಗುತ್ತದೆಯೆಂದೂ (ನ್ಯಾಯಸಾಮರ್ಥ್ಯದಿಂದ[4] ಸಿದ್ಧವಾಗುತ್ತದೆ.[5] ಏಕೆಂದರೆ ಕಾರಣವನ್ನು

---

1. "ಕಾರ್ಯಕಾರಣಲಕ್ಷಣಮ್" ಎಂದು ಅಚ್ಚಿನಪುಸ್ತಕಗಳಲ್ಲಿರುವದನ್ನು ಹೀಗೆಂದು ತಿದ್ದಿಕೊಂಡಿದೆ.

2. 'ಜ್ಞಾಪನೇನ' ಎಂದು ವಾ॥ ಪಾಠ.

3. 'ಯತ್ನವಿಶೇಷೋಪಾದಾನಾರ್ಥಂ' ಎಂದು ಆ॥ವಾ॥ ಪಾಠ; ಇಲ್ಲಿ ಕೊಟ್ಟಿರುವದು ವೈ॥ ಪಾಠ.

4. ಸೇಷುಪ್ತಿಯಂತೆಯೇ ಪ್ರಲಯವೂ ಕಾರ್ಯವಿಲ್ಲದ ಅವಸ್ಥೆ ಎಂಬುದು ನ್ಯಾಯ. ಈ ಅವಸ್ಥೆಗಳಲ್ಲಿ ಜಗತ್ತು ಕಾರಣಾವಿದ್ಯೆಯಲ್ಲಿ ಲಯವಾಗುತ್ತದೆ ಎಂಬ ವಾದವು ಈ ಭಾಷ್ಯಕ್ಕೆ ವಿರುದ್ಧ.

5. ಈ ಜ್ಞಾನದಿಂದ ಅಕ್ಷರವು ನಿಷ್ಪ್ರಪಂಚವೆಂದು ಏರ್ಪಡುತ್ತದೆ.

ಬಿಟ್ಟು ಮತ್ತೇತರಲ್ಲಿಯೂ ಕಾರ್ಯವು ಲಯವಾಗುವದೆಂಬುದು ಹೊಂದುವದೇ ಇಲ್ಲ. "ಆತ್ಮನಿಂದ ಈ ಪ್ರಾಣನು ಹುಟ್ಟುತ್ತಾನೆ" (೩-೩) ಎಂದು ಹಿಂದೆ ಹೇಳಿಯೂ ಇರುತ್ತದೆ.[1] ಮತ್ತು ಜಗತ್ತಿನ ಕಾರಣವು ಯಾವದೋ ಅದರ ಅರಿವಿನಿಂದ ಹೆಚ್ಚಿನ ಶ್ರೇಯಸ್ಸು (ಆಗುತ್ತದೆ) ಎಂಬುದು ಉಪನಿಷತ್ತುಗಳಲ್ಲೆಲ್ಲ ನಿಶ್ಚಯವಾಗಿರುವ ವಿಷಯವಾಗಿರುತ್ತದೆ.[2] "ಆ ಸರ್ವಜ್ಞನು ಸರ್ವವೂ ಆಗುವನು" (೪-೧೦) ಎಂದು ಆ ಬಳಿಕ ಹೇಳಿರುತ್ತದೆ.[3] ಹಾಗಾದರೆ ಆ ಪುರುಷನೆಂಬ ಹೆಸರಿನ ಸತ್ಯವಾದ ಅಕ್ಷರವನ್ನು ಎಲ್ಲಿ ಅರಿತುಕೊಳ್ಳಬೇಕು ? ಎಂಬುದನ್ನು (ಈಗ) ಹೇಳಬೇಕಾಗಿರುತ್ತದೆ. ಅದಕ್ಕಾಗಿ ಈ ಪ್ರಶ್ನೆಯನ್ನು ಪ್ರಾರಂಭಿಸಿರುತ್ತದೆ.

ಹಿಂದೆ ನಡೆದ ವೃತ್ತಾಂತವನ್ನು ಹೇಳಿರುವದು[4] ಜ್ಞಾನವು ದಕ್ಕುವದು ಕಷ್ಟವೆಂದು ತಿಳಿಸಿ ಅದನ್ನು ಪಡೆಯುವದಕ್ಕಾಗಿ ಮುಮುಕ್ಷುಗಳಲ್ಲಿ ಅಸಾಧಾರಣವಾದ ಯತ್ನವನ್ನುಂಟುಮಾಡುವದಕ್ಕಾಗಿ.[5]

ಸುಕೇಶನ ಪ್ರಶ್ನೆ : ಷೋಡಶಕಲೆಗಳ ಪುರುಷನಿರುವಪತ್ತಿ?

ಅಥ ಹೈನಂ ಸುಕೇಶಾ ಭಾರದ್ವಾಜಃ ಪಪ್ರಚ್ಛ। ಭಗವನ್ ಹಿರಣ್ಯನಾಭಃ ಕೌಸಲ್ಯೋ ರಾಜಪುತ್ರೋ ಮಾಮುಪೇತ್ಯೈತಂ ಪ್ರಶ್ನಮಪೃಚ್ಛತ। ಷೋಡಶಕಲಂ ಭಾರದ್ವಾಜ ಪುರುಷಂ ವೇತ್ಥ। ತಮಹಂ ಕುಮಾರಮಬ್ರುವಂ ನಾಹಮಿಮಂ ವೇದ ಯದ್ಯಹಮಿಮಮವೇದಿಷಂ ಕಥಂ ತೇ ನಾವಕ್ಷ್ಯಮಿತಿ ಸಮೂಲೋ ವಾ ಏಷ ಪರಿಶುಷ್ಯತಿ ಯೋಽನೃತಮಭಿವದತಿ ತಸ್ಮಾನ್ನಾರ್ಹಾಮ್ಯನೃತಂ ವಕ್ತುಮ್। ಸ ತೂಷ್ಣೀಂ ರಥಮಾರುಹ್ಯ ಪ್ರವವ್ರಾಜ। ತಂ ತ್ವಾ ಪೃಚ್ಛಾಮಿ ಕ್ವಾಸೌ ಪುರುಷ ಇತಿ ॥ ೧ ॥

೧. ಆಮೇಲೆ ಸುಕೇಶಭಾರದ್ವಾಜನು ಈತನನ್ನು ಪ್ರಶ್ನೆಮಾಡಿದನೇನೆಂದರೆ : ಭಗವಂತನೆ, ರಾಜಪುತ್ರನಾದ ಕೌಸಲ್ಯಹಿರಣ್ಯನಾಭನು

---

1. ಆತ್ಮನಿಂದ ಪ್ರಾಣಾದಿಗಳು ಉಂಟಾಗುತ್ತವೆ ಎಂದು ಶ್ರುತಿಯಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ ; ಆದ್ದರಿಂದ ಆತ್ಮನಲ್ಲಿಯೇ ಅದು ಲಯವಾಗುವದು ಯುಕ್ತವಾಗಿರುತ್ತದೆ.

2. ಜಗತ್ಕಾರಣನಾದ ಆತ್ಮನಲ್ಲಿ ಲಯವನ್ನು ಹೇಳಿರುವದು ಆತ್ಮಸ್ವರೂಪವನ್ನು ತಿಳಿಸುವದಕ್ಕೇ ಎಂದು ಇದರಿಂದ ವಿಶದಪಡುತ್ತದೆ.

3. ಆತ್ಮನನ್ನು ತಿಳಿದರೇ ಪರಮಪುರುಷಾರ್ಥ-ಎಂಬುದನ್ನು ಈ ಶ್ರುತಿಯು ಹೇಳಿದಂತೆ ಆಯಿತು.

4. ಸುಕೇಶನು ತನ್ನ ಪ್ರಶ್ನೆಯನ್ನು ರಾಜಪುತ್ರನ ಕಥೆಯಿಂದ ಪ್ರಾರಂಭಿಸಿರುವದು

5. ರಾಜಪುತ್ರನೂ ಸುಕೇಶನೂ ಹೇಗೆ ಕಷ್ಟಪಟ್ಟು ಆತ್ಮನನ್ನು ಹೇಳುವ ಗುರುವನ್ನು ಹುಡುಕಿದರೋ ಹಾಗೆಯೇ ಉಳಿದ ಮುಮುಕ್ಷುಗಳೂ ಹುಡುಕಬೇಕೆಂದು ತಿಳಿಸುವದಕ್ಕೆ

ನನ್ನ ಬಳಿಗೆ ಬಂದು ಈ ಪ್ರಶ್ನೆಯನ್ನು ಮಾಡಿದನು" "ಭಾರದ್ವಾಜನೆ, ಷೋಡಶಕಲೆಗಳ ಪುರುಷನನ್ನು ಬಲ್ಲೆಯ?" ನಾನು ಆ ಕುಮಾರನಿಗೆ ಹೇಳಿದೆನೆಂದರೆ: "ನನಗೆ ಈ (ಪುರುಷನು) ಗೊತ್ತಿಲ್ಲ. ಈ (ಪುರುಷನನ್ನು) ನಾನು ಅರಿತಿದ್ದರೆ ಹೇಗೆತಾನೆ ನಿನಗೆ ಹೇಳದೆ ಇರುತ್ತಿದ್ದೆನು? ಯಾವನು ಸುಳ್ಳನ್ನು ಹೇಳುತ್ತಾನೋ ಅವನು ಬೇರು ಸಹಿತವಾಗಿ ಒಣಗಿಹೋಗುವನು; ಆದ್ದರಿಂದ ನಾನು ಸುಳ್ಳುಹೇಳಲಾರೆ." ಅವನು ಸುಮ್ಮನೆ ರಥವನ್ನೇರಿ ಹೊರಟುಹೋದನು. ಆತನ ವಿಷಯವನ್ನು ನಿನ್ನನ್ನು ಕೇಳುತ್ತಿದೇನೆ. ಆ ಪುರುಷನು ಎಲ್ಲಿರುವನು?

(ಭಾಷ್ಯ)

೮೮. ಹೇ ಭಗವನ್ ಹಿರಣ್ಯನಾಭೋ ನಾಮತಃ ಕೋಸಲಾಯಾಂ ಭವಃ ಕೌಸಲ್ಯಃ ರಾಜಪುತ್ರಃ ಜಾತಿತಃ ಕ್ಷತ್ರಿಯಃ ಮಾಮ್ ಉಪೇತ್ಯ ಉಪಗಮ್ಯ ಏತಮ್ ಉಚ್ಯಮಾನಂ ಪ್ರಶ್ನಮ್ ಅಪೃಚ್ಛತ। ಷೋಡಶಕಲಂ ಷೋಡಶ ಸಂಖ್ಯಾಕಾಃ ಕಲಾ ಅವಯವಾ ಇವ ಅತ್ಮನಿ ಅವಿದ್ಯಾಧ್ಯಾರೋಪಿತರೂಪಾಃ ಯಸ್ಮಿನ್ ಪುರುಷೇ ಸೋಽಯಂ ಷೋಡಶಕಲಃ। ತಂ ಷೋಷಡಕಲಂ ಹೇ ಭಾರದ್ವಾಜ ಪುರುಷಂ ವೇತ್ಥ ವಿಜಾನಾಸಿ? ತಮ್ ಅಹಂ ರಾಜಪುತ್ರಂ ಕುಮಾರಂ ಪೃಷ್ಟವನ್ತಮ್ ಅಬ್ರುವಮ್ ಉಕ್ತವಾನ್ ಅಸ್ಮಿ। ನಾಹಮ್ ಇಮಂ ವೇದ ಯಂ ತ್ವಂ ಪೃಚ್ಛಸಿ ಇತಿ। ಏವಮ್ ಉಕ್ತವತ್ಯಪಿ ಮಯಿ ಅಜ್ಞಾನಮ್ ಅಸಂಭಾವಯನ್ತಂ ತಮ್ ಅಜ್ಞಾನೇ ಕಾರಣಮ್ ಆವಾದಿಷಮ್। ಯದಿ ಕಥಂಚಿತ್ ಅಹಮ್ ಇಮಂ ತ್ವಯಾ ಪೃಷ್ಟಂ ಪುರುಷಮ್ ಅವೇದಿಷಂ ವಿದಿತವಾನಸ್ಮಿ ಕಥಮ್ ಅತ್ಯನ್ತಶಿಷ್ಯಗುಣವತೇ ಅರ್ಥಿನೇ ತೇ ತುಭ್ಯಂ ನಾವಕ್ಷ್ಯಂ ನೋಕ್ತವಾನಸ್ಮಿ? ನ ಬ್ರೂಯಾಮ್ ಇತ್ಯರ್ಥಃ। ಭೂಯೋಽಪಿ ಅಪ್ರತ್ಯಯಮಿವ[1] ಆಲಕ್ಷ್ಯ ಪ್ರತ್ಯಾಯಯಿತುಮ್ ಅಬ್ರುವಮ್। ಸಮೂಲಃ ಸಹ ಮೂಲೇನ ವೈ ಏಷಃ ಅನೃತಾ ಸನ್ತಮ್ ಆತ್ಮಾನಮ್ ಅನೃತಾ ಕುರ್ವನ್ ಅನೃತಮ್ ಅಯಥಾಭೂತಾರ್ಥಮ್ ಅಭಿವದತಿ ಯಃ ಸ ಪರಿಶುಷ್ಯತಿ ಕೋಷಮ್ ಉಪೈತಿ ಇಹಲೋಕಪರಲೋಕಾಭ್ಯಾಂ ವಿಚ್ಛಿದ್ಯತೇ ವಿನಶ್ಯತಿ। ಯತಃ ಏವಂ ಜಾನೇ ತಸ್ಮಾತ್ ನಾಹಾರ್ಷಮಿ ಅಹಮ್ ಅನೃತಂ ವಕ್ತುಂ ಮೂಢವತ್। ಸ ರಾಜಪುತ್ರಃ ಏವಂಪ್ರತ್ಯಾಯಿತಃ ತೂಷ್ಣೀಂ ವ್ರೀಡಿತಃ ರಥಮ್ ಆರುಹ್ಯ ಪ್ರವವ್ರಾಜ, ಪ್ರಗತವಾನ್ ಯಥಾಗತಮೇವ।

---

1. "ವೇತ್ಥ ತ್ವಂ" ವಾ। ಪಾಠ.

2. "ಅಪ್ರತ್ಯಯಮೇವ" ವಾ।.

ತತೋ ನ್ಯಾಯತ ಉಪಸನ್ನಾಯ ಪೋಗ್ಯಾಯ ಜಾನತಾ ವಿದ್ಯಾ ವಕ್ತವ್ಯೈವ ಅನೃತಂ ಚ ನ ವಕ್ತವ್ಯಂ ಸರ್ವಾಸ್ವಪಿ ಅವಸ್ಥಾಸು ಇಶ್ಯೇತತ್ ಸಿದ್ಧಂ ಭವತಿ | ತಂ ಪುರುಷಂ ತ್ವಾ ತ್ವಾಂ ಪೃಚ್ಛಾಮಿ ಮನು ಹೃದಿ ವಿಜ್ಞೇಯಮೇವೈನ ಶಲ್ಯ ಮಿವ[1]ಸ್ಥಿತಂ ಕ್ವಾಸೌ ವರ್ತತೇ ವಿಜ್ಞೇಯಃ ಪುರುಷಃ ಇತಿ ;

(ಛಾಂ.೬.೮.೫)

ಎಲೈ ಭಗವಂತನೆ, ಹಿರಣ್ಯನಾಭನೆಂಬ ಹೆಸರುಳ್ಳ ಕೌಸಲ್ಯ ಎಂದರೆ ಕೋಸಲೆಯಲ್ಲಿ ಹುಟ್ಟಿದ, ರಾಜಪುತ್ರನು ಕ್ಷತ್ರಿಯಜಾತಿಯವನು, ನನ್ನ ಒಳಿಗೆ ಒಂದು ಎಂದರೆ (ಶಿಷ್ಯನಾಗಿ) ಹತ್ತಿರಕ್ಕೆ ಬಂದು ಈ ಮುಂದೆ ಹೇಳುವ ಪ್ರಶ್ನೆಯನ್ನು ಕೇಳಿದನು : ಎಲೈ ಭಾರದ್ವಾಜನೆ, ಷೋಡಶಕಲೆಗಳ-ಹದಿನಾರು ಸಂಖ್ಯೆಯ್ನು ಕಲೆಗಳು ಎಂದರೆ ಅವಯವಗಳಂತೆ ತನ್ನಲ್ಲಿ ಅವಿದ್ಯೆಯಿಂದ ಹುಟ್ಟುಗಟ್ಟಿರುವ ರೂಪಗಳು[2] ಯಾವ ಪುರುಷನಲ್ಲಿರುವವೋ ಅವನು ಷೋಡಶಕಲೆಗಳ (ಪುರುಷನು). ಆ ಷೋಡಶಕಲೆಗಳ-ಪುರುಷನನ್ನು ಬಲ್ಲೆಯ, ಅರಿತಿರುವೆಯ ? ನಾನು ಆ ಕುಮಾರನಿಗೆ (ಪ್ರಶ್ನೆಯನ್ನು) ಕೇಳಿದ (ಆ) ರಾಜಪುತ್ರನಿಗೆ ಹೇಳಿದೆನೇನೆಂದರೆ ತಿಳಿಸಿದ್ದೇನೆಂದರೆ : "ನೀನು ಯಾವ (ಪುರುಷ)ನನ್ನು ಕೇಳುತ್ತಿರುವೆಯೋ ಅವನನ್ನು ನಾನು ಅರಿಯೆನು." ನಾನು ಹೀಗೆಂದು ತಿಳಿಸಿದರೂ ನನ್ನಲ್ಲಿ ಅಜ್ಞಾನವು ಇರಲಾರದೆಂದು ಭಾವಿಸಿದ್ದ ಅವನಿಗೆ ನನಗೆ ಅದು ತಿಳಿಯದೆಂಬುದಕ್ಕೆ ಕಾರಣವನ್ನು ತಿಳಿಸಿದೆನು. "ಒಂದುವೇಳೆ ಹೇಗೋ ನೀನು ಕೇಳುತ್ತಿರುವ ಈ ಪುರುಷನನ್ನು ನಾನು ತಿಳಿದಿದ್ದರೆ ಬಲ್ಲವನಾಗಿದ್ದರೆ (ಎಲ್ಲಾ)ಶಿಷ್ಯ ಗುಣಗಳೂ[3] ಚೆನ್ನಾಗಿರುವ (ತತ್ತ್ವವನ್ನರಿಯಬೇಕೆಂದು) ಬಯಸುತ್ತಿರುವ ನಿನಗೆ ಹೇಗೆತಾನೆ ಹೇಳದೆ ಇದ್ದೇನು ? ತಿಳಿಸದೆ ಇರುವೆನೆಲ್ಲ, ಅದು ಹೇಗೆ? (ಹೇಗೆ) ಹೇಳಿಕೊಡದೆ ಇದ್ದೇನು ? ಎಂದರ್ಥ. ಇನ್ನೂ (ನಾನು ಹೇಳಿದ್ದರಲ್ಲಿ) ನಂಬಿಕೆಯಾಗದವನಂತೆ ಕಂಡುಬಂದದ್ದರಿಂದ (ಅವನಿಗೆ) ನಂಬಿಕೆ ಹುಟ್ಟಿಸುವದಕ್ಕಾಗಿ (ನಾನು) ಹೇಳಿದೆನೇನೆಂದರೆ : "ತಾನು ಒಂದು ರೀತಿಯಲ್ಲಿರುವಾಗ ಇನ್ನೊಂದು ರೀತಿಯಲ್ಲಿ ತೋರಿಸಿಕೊಂಡು[4] ಯಾವನು ಸುಳ್ಳನು, ಇದ್ದದ್ದು ಇದ್ದಂತೆ ಇರುವದಲ್ಲದ ವಿಷಯವನ್ನು ಹೇಳುತ್ತಾನೋ ಅವನು ಸಮೂಲವಾಗಿ ಎಂದರೆ ಬೇರುಸಹಿತ

---

1. "ಶಲ್ಯಮಿವ" ಎಂಬ ಮಾತಿನ ಮುಂದೆ "ಮೇ ಹೃದಿ" ಎಂದು ಆ ಮುಂತಾದ ಕಲವು ಪಾಠಗಳಲ್ಲಿರುವದು ಅವಶ್ಯವಿಲ್ಲ.

2. ಆತ್ಮನಿಗೆ ಸೇರಿರುವಂತೆ ತೋರುವ ಪ್ರಾಣಾದಿಕಲೆಗಳು ನಿಜವಾಗಿ ಅವನಿಗೆ ಸೇರಿರುವದಿಲ್ಲ; ತಪ್ಪು ತಿಳಿವಳಿಕೆಯಿಂದ ಜನರು ಅವನ್ನು ಆವನ ಅವಯವಗಳೆಂದು ಭಾವಿಸಿರುತ್ತಾರೆ.

3. ತತ್ತ್ವಜ್ಞಾನದಲ್ಲಿ ಆಸೆ, ಸಾಮರ್ಥ್ಯ, ತಿಳಿವಳಿಕೆ, ಯೋಗ್ಯತೆ-ಇವು.

4. ತನ್ನ ಸ್ವರೂಪವನ್ನು ಮರೆಮಾಚಿ ಮತ್ತೊಂದು ಸ್ವರೂಪದವನು ತಾನೆಂದು ತೋರಿಸಿಕೊಂಡವನು ಎಲ್ಲಾ ಪಾಪಗಳನ್ನೂ ಮಾಡಿದಂತೆ ಎಂದು (ಮನು. ೪-೨೫೫) ಸ್ಮೃತಿ.

ವಾಗಿ ಒಣಗಿಹೋಗುತ್ತಾನೆ, ಈ ಲೋಕಪರಲೋಕಗಳಿಂದ ಚ್ಯುತನಾಗುತ್ತಾನೆ, ಹಾಳಾಗುತ್ತಾನೆ. ಹೀಗೆಂದು ನಾನು ಆರಿತಿರುವದರಿಂದ ಮೂಢನಂತೆ ಸುಳ್ಳನ್ನು ಆತಲಾರೆನು." ಆ ರಾಜಪ್ರಕ್ರನು ಹೀಗೆ (ಹೇಳಿದ್ದರಿಂದ) ನಂಬಿಗೆಯಾದವನಾಗಿ ಸುಮ್ಮನೆ ನಾಚಿಕೆಯಿಂದ ರಥವನ್ನೇರಿ ಬಂದ ದಾರಿಯನ್ನೇ ಹಿಡಿದು ಹೋದನು, ಹೊರಟುಹೋದನು. ಆದ್ದರಿಂದ ನ್ಯಾಯದಿಂದ (ಶಿಷ್ಯನಾಗಿ) ಹತ್ತಿರಬಂದ ಯೋಗ್ಯನಿಗೆ ತಿಳಿದವನು ವಿದ್ಯೆಯನ್ನು ಹೇಳಲೇಬೇಕು; ಎಂಥ ಅವಸ್ಥೆಯಲ್ಲಿಯೂ ಸುಳ್ಳನ್ನು ಹೇಳಬಾರದು[1]– ಎಂಬುದು ಸಿದ್ಧವಾಯಿತು.

ಆ ಪ್ರಮಿತಿಯನ್ನು (ತ್ವಾ=ತ್ವಾಮ್) ನಿನ್ನನ್ನು ಕೇಳುತ್ತಿದ್ದೇನೆ. ನನ್ನ ಕೃದಯದಲ್ಲಿ (ಅತನನ್ನು) ತಿಳಿಯಬೇಕೆಂಬ (ಆಸೆಯು) ಮುಳ್ಳಿನಂತೆ (ನೆಟ್ಟುಕೊಂಡು) ಇದೇ[2](ಯಾದ್ದರಿಂದ) ಆ ತಿಳಿಯಬೇಕಾದ ಪುರುಷನು ಎಲ್ಲಿರುತ್ತಾನೆ? ಎಂದು (ಕೇಳುತ್ತಿದೇನೆ).

ಪುರುಷನು ಶರೀರದೊಳಗೇ ಇರುತ್ತಾನೆ

ತಸ್ಮೈ ಸ ಹೋವಾಚ। ಇಹೈವಾನ್ತಃಶರೀರೇ ಸೋಮ್ಯ ಸ ಪುರುಷೋ ಯಸ್ಮಿನ್ನೇತಾಃ ಷೋಡಶ ಕಲಾಃ ಪ್ರಭವನ್ತೀತಿ ॥ ೨ ॥

೨. ಅವನಿಗೆ ಆತನು ಹೇಳಿದನೇನೆಂದರೆ: ಎಲೈ ಸೋಮ್ಯನೆ, ಯಾವನಲ್ಲಿ ಈ ಹದಿನಾರು ಕಲೆಗಳು ಉಂಟಾಗುತ್ತಿರುವವೋ ಆ ಪುರುಷನು ಇಲ್ಲಿಯೇ (ಈ) ಶರೀರದೊಳಗೆ (ಇರುತ್ತಾನೆ).

(ಭಾಷ್ಯ)

ಭಾ. ತಸ್ಮೈ ಸ ಹ ಋವಾಚ। ಇಹೈವ ಆನ್ತಃಶರೀರೇ ಹೃದಯಪುಣ್ಡರೀಕಾಕಾಶಮಧ್ಯೇ ಹೇ ಸೋಮ್ಯ, ಸ ಪುರುಷಃ ನ ದೇಶಾನ್ತರೇ ವಿಜ್ಞೇಯಃ। ಯಸ್ಮಿನ್ ಏತಾಃ ಉಚ್ಯಮಾನಾಃ[3] ಷೋಡಶಕಲಾಃ ಪ್ರಾಣಾದ್ಯಾಃ ಪ್ರಭವನ್ತಿ ಉತ್ಪದ್ಯನ್ತೇ ಇತಿ ॥

(ಭಾಷ್ಯಾರ್ಥ)

ಅವನಿಗೆ ಆ (ಪಿಪ್ಪಲಾದನು) ಹೇಳಿದನೇನೆಂದರೆ ಇಲ್ಲಿಯೇ (ಈ) ಶರೀರದೊಳಗೇ ಹೃದಯಕಮಲದ ಆಕಾಶ

---

1. ತನಗೆ ತಿಳಿದರೂ ತಿಳಿಯದಿದ್ದವರು ಇದ್ದ ಸಂಗತಿಯನ್ನು ಹೇಳಬೇಕು.

2. ಷೋಡಶಕಲಪುರುಷನನ್ನು ತಿಳಿದುಕೊಳ್ಳದೆ ಇದ್ದರೆ ಮಿಕ್ಕ ಯಾವದನ್ನೂ ತಿಳಿದುಕೊಂಡಿದ್ದರೂ ತಿಳಿವಳಿಕೆ ಪೂರ್ಣವಾಗಲಿಲ್ಲ ಎಂಬ ಭಾವವು ಈ ವಾಕ್ಯದಲ್ಲಿ ಅಡಗಿದೆ.

3. "ಉಚ್ಯಮಾನಾಃ" ಎಂಬುದು "ವಕ್ಷ್ಯಮಾಣಾಃ" ಎಂದಿರಬೇಕು; ಅಥವಾ ಆ ಅರ್ಥವಲ್ಲಿ ಪ್ರಯೋಗವಾಗಿದೆ ಎಂದು ಕಲ್ಪಿಸಬೇಕು.

ದಲ್ಲಿಯೇ[1], ಎಲೈ ಸೋಮ್ಯನೆ, ಆ ಪುರುಷನನ್ನು ಅರಿಯಬೇಕು, ಬೇರೊಂದು ಕಡೆಯಲ್ಲಲ್ಲ.[2] ಯಾವ ಅತನಲ್ಲಿಯೇ ಈ (ಮುಂದೆ) ಹೇಳುವ ಪ್ರಾಣವೇ ಮುಂತಾದ ಹದಿನಾರು ಕಲೆಗಳು ಉಂಟಾಗುತ್ತಿರುವವು.

(ಭಾಷ್ಯ)

೯೦. ಷೋಡಶಭಿಃ ಕಲಾಭಿಃ[3] ಉಪಾಧಿಭೂತಾಭಿಃ ಸಕಲ ಇವ ನಿಷ್ಕಲ ಪುರುಷೋ ಲಕ್ಷ್ಯತೇ ಅವಿದ್ಯಯಾ ಇತಿ ತದುಪಾಧಿಕಲಾಧ್ಯಾರೋಪಾಪನಯೇನ[4] ವಿದ್ಯಯಾ ಸ ಪುರುಷಃ ಕೇವಲೋ ದರ್ಶಯಿತವ್ಯಃ ಇತಿ ಕಲಾನಾಂ ತತ್ಪ್ರಭವತ್ವಮ್ ಉಚ್ಯತೇ ಪ್ರಾಣಾದೀನಾಮ್ | ಅತ್ಯನ್ತನಿರ್ವಿಶೇಷೇ ಹಿ ಅದ್ವಯೇ ಶುದ್ಧೇ[5] ತತ್ತ್ವೇ ನ ಶಕ್ಯಃ ಅಧ್ಯಾರೋಪಮನ್ತರೇಣ ಪ್ರತಿಪಾದ್ಯ ಪ್ರತಿಪಾದನಾದಿವ್ಯವಹಾರಃ ಕರ್ತುಮ್ ಇತಿ ಕಲಾನಾಂ ಪ್ರಭವಸ್ಥಿತ್ಯಪ್ಯಯಾ ಆರೋಪ್ಯನ್ತೇ ಅವಿದ್ಯಾವಿಷಯಾಃ | ಜೈತನ್ಯಾನ್ವಯವ್ಯತಿರೇಕೇಣೈವ ಹಿ ಕಲ್ಯಾ ಜಾಯಮಾನಾಃ ತಿಷ್ಠನ್ತ್ಯಃ ಪ್ರಲೀಯಮಾನಾಶ್ಚ ಸರ್ವದಾ ಲಕ್ಷ್ಯನ್ತೇ ; ಅತ ಏವ ಭ್ರಾನ್ತಾಃ ಕೇಚಿತ್ ಅಗ್ನಿಸಂಯೋಗಾತ್ ಘೃತಮಿವ ಘಟಾದ್ಯಾಕಾರೇಣ ಚೈತನ್ಯಮೇವ ಪ್ರತಿಕ್ಷಣಂ ಜಾಯತೇ ನಶ್ಯತಿ ಇತಿ[6] ತನ್ನಿರೋಧೇ ಶೂನ್ಯಮೇವ[7] ಸರ್ವಮ್ ಇತ್ಯಪರೇ | ಘಟಾದಿವಿಷಯಂ ಜೈತನ್ಯಂ ಜ್ಞೇತಯಿತುರ್ನಿತ್ಯಸ್ಯಾತ್ಮನಃ ಅನಿತ್ಯಂ ಜಾಯತೇ ವಿನಶ್ಯತಿ ಇತ್ಯಪರೇ | ಚೈತನ್ಯಂ ಭೂತಧರ್ಮಃ ಇತಿ ಲೋಕಾಯತಿಕಾಃ ||

(ಭಾಷ್ಯಾರ್ಥ)

ಉಪಾಧಿಯೊಗಿರುವ ಹದಿನಾರು ಕಲೆಗಳಿಂದ ಸಕಲನಾಗಿರುವಂತೆ ನಿಷ್ಕಲನಾದ ಪುರುಷನು ಅವಿದ್ಯೆಯಿಂದ ತೋರಿಕೊಳ್ಳುತ್ತಿರುವದರಿಂದ[7] ಆ ಉಪಾಧಿಗಳಾಗಿರುವ ಕಲೆಗಳೆ ಆರೋಪವನ್ನು ವಿದ್ಯೆಯಿಂದ ತೊಲಗಿಸಿ ಆ ಕೇವಲಪುರುಷನನ್ನು ತೋರಿಸಬೇಕೆಂದು ಪ್ರಾಣವೇ ಮುಂತಾದ ಕಲೆಗಳು ಆ (ಪುರುಷ)ನಿಂದ ಹುಟ್ಟುತ್ತವೆ ಎಂದು

---

1. ಆತ್ಮನನ್ನು ಹೃದಯಾಕಾಶದಲ್ಲಿ ಬುದ್ಧಿಸಾಕ್ಷಿಯ ರೂಪದಿಂದಲೇ ಅರಿತುಕೊಳ್ಳಬೇಕು. ತೈ. ೨-೧.

2. ಅನಾತ್ಮರೂಪದಿಂದಲ್ಲ; ಆತ್ಮನು ದೃಶ್ಯನಲ್ಲ, ದೃಗ್ರೂಪನೇ.

3. "ಷೋಡಶಕಲಾಭಿಃ" ಆ॥ ಪಾಠ.

4. "ಅಪನಯನೇನ" ವಾ॥ ಪಾಠ.

5. "ವಿಶುದ್ಧೇ" ವಾ॥ ಪಾಠ.

6. "ಶೂನ್ಯಮಿವ" ಎಂಬ ಆ॥ ಪಾಠಕ್ಕಿಂತ ಈ ವಾ॥ ಪಾಠವು ಉತ್ತಮ.

7. ಪ್ರಾಣವೇ ಮುಂತಾದ ಉಪಾಧಿಗಳು ಅವಿದ್ಯಾಕಲ್ಪಿತವಾಗಿರುವದರಿಂದ ಅವಿದ್ಯಾಕಾಲದಲ್ಲಿ ಆತ್ಮನಿಗೆ ಸೇರಿರುವಂತೆ ಕಾಣುತ್ತವೆ. ಉಪಾಧಿಗಳು ಅವಿದ್ಯಾಕಲ್ಪಿತವೆಂಬುದಕ್ಕೆ ಸೂ. ಭಾ. ೩-೩-೧೧೧ನ್ನು ನೋಡಿ.

ಹೇಳಲಾಗಿರುತ್ತದೆ.[1] ಏಕೆಂದರೆ ತನಗೆನೆಡನೆಯದಿಲ್ಲದ, ಅತ್ಯಂತವಾಗಿ ನಿರ್ವಿಶೇಷವಾಗಿರುವ ಪರಿಶುದ್ಧವಾದ ತತ್ತ್ವದಲ್ಲಿ ಅಧ್ಯಾರೋಪವಿಲ್ಲದೆ[2] ತಿಳಿಸಲ್ಪಡತಕ್ಕ ವಿಷಯ, ತಿಳಿಸುವ (ಶಾಸ್ತ್ರ)ದೋಷೆ ಮುಂತಾದ ವ್ಯವಹಾರವನ್ನು[3] ಮಾಡುವಪೆಕ್ಕಾಗಲಾರದು. ಆದ್ದರಿಂದ ಅವಿದ್ಯೆಯ ವಿಷಯವಾದ ಕಲೆಗಳ ಹುಟ್ಟು, ಇರವು, ಲಯ– ಇವುಗಳನ್ನು (ಅದರಲ್ಲಿ) ಆರೋಪಿಸಲಾಗಿದೆ.[4]

ಚೈತನ್ಯಕ್ಕಿಂತ ಬೇರೆಯಾಗಿರದೆ ಕಲೆಗಳು ಹುಟ್ಟುವಾಗಲೂ ಇರುವಾಗಲೂ ಲಯವಾಗುವಾಗಲೂ ಜೀವಾಗಲೂ (ಅದಕ್ಕೆ ಸೇರಿಕೊಂಡೇ) ಕಾಣಬರುತ್ತವೆ.[5] ಆದ್ದರಿಂದಲೇ ಕೆಲವರು ಬೆಂಕಿಯ ಸಂಬಂಧದಿಂದ ತುಪ್ಪವು (ಕರಗಿ ನಾರ್ಪಡುವಂತೆ[6]) ಚೈತನ್ಯವೇ ಗಡಿಗೆಯೇ ಮುಂತಾದ ಆಕಾರದಲ್ಲಿ ಒಂದೊಂದು ಕ್ಷಣದಲ್ಲಿಯೂ ಹುಟ್ಟಿ ಸಾಯುತ್ತಿರುವದು ಎಂದು ಭ್ರಾಂತರಾಗಿರುತ್ತಾರೆ.[7] ಆದು ನಾಶವಾಗಲೂ ಎಲ್ಲವೂ ಶೂನ್ಯವಾಗುವದೆಂದು ಮತ್ತೆ ಕೆಲವರು ಭ್ರಾಂತರಾಗಿರುತ್ತಾರೆ.[8] ಗಡಿಗೆ ಮುಂತಾದವುಗಳ ವಿಷಯವಾದ ಅನಿತ್ಯವಾದ ಅರಿವು ನಿತ್ಯವಾದ ಜ್ಞಾತೃವಾದ (ಆತ್ಮ)ನಿಗೆ (ಧರ್ಮವಾಗಿ) ಹುಟ್ಟಿ ಸಾಯುತ್ತಿರುವದು ಎಂದು ಇನ್ನು ಕೆಲವರು[9] (ಭ್ರಾಂತರಾಗಿರುವರು).

1. ಕಲೆಗಳನ್ನು ಆತ್ಮೈಕತ್ವಜ್ಞಾನಕ್ಕೆ ಉಪಾಯವಾಗಿ ಹೇಳಿದೆ.

2. ಅವಿದ್ಯೆಯಿಂದಾಗಿರುವ ಆರೋಪವನ್ನು ಇಟ್ಟುಕೊಳ್ಳದೆ.

3. ಶಾಸ್ತ್ರಶಿಷ್ಯಾದಿಭೇದವೂ ಅಧ್ಯಾರೋಪಿತವಾದರೂ ಅಜ್ಞರ ಉಪದೇಶಕ್ಕಾಗಿ ಈ ಭೇದವನ್ನು ಆವರ ದೃಷ್ಟಿಯಿಂದ ಇಟ್ಟುಕೊಂಡಿದೆ. ಮೂಂ. ಕಾ. ಭಾ. ೧–೧೮.

4. ಉತ್ಪತ್ತ್ಯಾದಿಗಳನ್ನು ಹೇಳಿರುವದು ಆತ್ಮಜ್ಞಾನಕ್ಕಾಗಿಯೇ ಹೊರತು ಉತ್ಪತ್ತ್ಯಾದಿಗಳನ್ನು ತಿಳಿಸುವದಕ್ಕಲ್ಲ. ತೈ. ಭಾ. ೩–೯, ಬೃ ಭಾ. ೨–೧–೨೦ ; ಸೂ. ಭಾ. ೧–೪–೧೪.

5. ಆತ್ಮಚೈತನ್ಯವಿಲ್ಲದೆ ಇವು ಕಾಣಬರುವದಿಲ್ಲ; ಆದ್ದರಿಂದ ಇವು ಚೈತನ್ಯಕ್ಕಿಂತ ಬೇರೆಯಲ್ಲ.

6. ಈ ದೃಷ್ಟಾಂತವನ್ನು ಏತಕ್ಕೆ ಕೊಟ್ಟಿದ್ದಾರೆಂಬುದು ಸ್ಪಷ್ಟವಾಗಿಲ್ಲ ; ತುಪ್ಪವು ಬೆಂಕಿಯಿಂದ ನೀರಾಗುವಂತೆ ಆಲಯವಿಜ್ಞಾನವು ವಾಸನೆಯ ವಶದಿಂದ ವಿಷಯಾಕಾರವಾಗುತ್ತದೆ ಎಂಬುದು ವಿವಕ್ಷಿತವಾದ ಹೋಲಿಕೆಯೆಂದು ಆ ಟೀಕೆಯಲ್ಲಿದೆ. ವಿಜ್ಞಾನವೇ ವಿಷಯಾಕಾರವನ್ನು ತಿಳಿಯುತ್ತದೆ ಎಂಬುದು ವಿಜ್ಞಾನವಾದಿಗಳ ಮತವು.

7. ಬೌದ್ಧರಲ್ಲಿ ಕ್ಷಣಿಕವಿಜ್ಞಾನವಾದಿಗಳ ಮತವಿದು.

8. ಶೂನ್ಯವಾದಿಗಳಾದ ಬೌದ್ಧರ ಮತವಿದು.

9. ವೈಶೇಷಿಕರೇ ಮೊದಲಾದವರ ಮತದಲ್ಲಿ ಜ್ಞಾನವು ಆತ್ಮನ ಧರ್ಮವು.

ಚೈತನ್ಯವೆಂಬುದು ಭೂತಗಳ ಧರ್ಮವು ಎಂದು ಲೋಕಾಯತರು (ಹೇಳುತ್ತಿರುವರು)[1].

ಆತ್ಮಚೈತನ್ಯವು ಕೂಟಸ್ಥವೂ ಅದ್ವಿತೀಯವೂ ಆಗಿದೆ

(ಭಾಷ್ಯ)

೯೧. ಅನೆಪಾಯೋಪಜನಧರ್ಮಕಚೈತನ್ಯಮ್[2] ಆತ್ಮೈವ ನಾಮರೂಪಾದ್ಯುಪಾಧಿಧರ್ಮೈಃ ಪ್ರತ್ಯವಭಾಸತೇ | 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧), 'ಪ್ರಜ್ಞಾನಂ ಬ್ರಹ್ಮ' (ಐ. ೩-೩), "ವಿಜ್ಞಾನಮಾನನ್ದಂ ಬ್ರಹ್ಮ" (ಬೃ. ೩-೯-೨೮), 'ವಿಜ್ಞಾನಘನ ಏವ' (ಬೃ. ೨-೪-೧೨) ಇತ್ಯಾದಿ ಶ್ರುತಿಭ್ಯಃ | ಸ್ವರೂಪವ್ಯಭಿಚಾರಿಷು ಪದಾರ್ಥೇಷು ಚೈತನ್ಯಸ್ಯ ಅವ್ಯಭಿಚಾರಾತ್ | ಯಥಾ ಯಥಾ ಯೋ ಯಃ ಪದಾರ್ಥೋ ಜ್ಞಾಯತೇ ತಥಾ ತಥಾ ಜ್ಞಾಯಮಾನತ್ವಾದೇವ ತಸ್ಯ ತಸ್ಯ ಚೈತನ್ಯಸ್ಯ ಅವ್ಯಭಿಚಾರಿತ್ವಮ್ | ವಸ್ತು ತತ್ತ್ವಂ ಭವತಿ ಕಿಂಚಿತ್ ನ ಜ್ಞಾಯತೇ ಇತಿ ಚ ಅನುಪಪನ್ನಮ್ | ರೂಪಂ ಚ ದೃಶ್ಯತೇ ನ ಚಾಸ್ತಿ ಚಕ್ಷುಃ ಇತಿ ಯಥಾ | ವ್ಯಭಿಚರತಿ ತು ಜ್ಞೇಯಂ (ಜ್ಞಾನಮ್[3]), ನ ಜ್ಞಾನಂ ವ್ಯಭಿಚರತಿ ಕದಾಚಿದಪಿ ಜ್ಞೇಯಮ್ | ಜ್ಞೇಯಾಭಾವೇಽಪಿ ಜ್ಞೇಯಾನ್ತರೇ ಭಾವಾತ್ ಜ್ಞಾನಸ್ಯ | ನ ಹಿ ಜ್ಞಾನೇ ಅಸತಿ ಜ್ಞೇಯಂ ನಾಮ ಭವತಿ ಕಸ್ಯಚಿತ್ | ಸುಷುಪ್ತೇ ಆದರ್ಶನಾತ್ ||

(ಭಾಷ್ಯಾರ್ಥ)

ಸಾವುಹುಟ್ಟುಗಳೆಂಬ ಧರ್ಮಗಳಿಲ್ಲದ ಚೈತನ್ಯವಾದ ಆತ್ಮನೇ ನಾಮರೂಪಾದಿಗಳಾದ ಧರ್ಮವುಳ್ಳವನಂತೆ ತೋರುತ್ತಿರುತ್ತಾನೆ. "ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು" (ತೈ. ೨-೧), 'ಪ್ರಜ್ಞಾನವು ಬ್ರಹ್ಮವು' (ಐ. ೩-೩), 'ವಿಜ್ಞಾನವೂ ಆನಂದವೂ ಆದದ್ದು ಬ್ರಹ್ಮವು' (ಬೃ. ೩-೯-೨೮), 'ವಿಜ್ಞಾನದ ಗಟ್ಟಿಯೇ' (ಬೃ. ೨-೪-೧೨)– ಇವೇ ಮುಂತಾದ ಶ್ರುತಿಗಳು ಇದಕ್ಕೆ ಪ್ರಮಾಣ. ಪದಾರ್ಥಗಳು ತಮ್ಮ ತಮ್ಮ ಸ್ವರೂಪವನ್ನು ಬೇರ್ಪಡಿಸಿಕೊಳ್ಳುತ್ತಿದ್ದರೂ ಚೈತನ್ಯವು ಬೇರ್ಪಡದೆ ಇರುವದರಿಂದ ಯಾವ ಯಾವ ಪದಾರ್ಥವು ಹೇಗೆ ಹೇಗೆ ಅರಿಯಲ್ಪಡುವದೋ ಹಾಗೆ ಹಾಗೆ (ಅದು)

---

1. ಅನೇಕಪದಾರ್ಥಗಳ ಸೇರುವೆಯಿಂದ ಮದಶಕ್ತಿಯುಂಟಾಗುವಂತೆ ಭೂತಗಳ ಸೇರುವೆಯಿಂದ ಚೈತನ್ಯವು ಹುಟ್ಟುತ್ತದೆ–ಎಂಬ ಚಾರ್ವಾಕರ ಮತವಿದು. ಇದುವರೆಗೆ ಹೇಳಿರುವ ನಾಲ್ಕು ಮತಗಳಲ್ಲಿಯೂ ಆತ್ಮನಿಗಿಂತ ಬೇರೆಯಾದ ಹುಟ್ಟುಹೊಂದುಗಳುಳ್ಳ ಕಲಾವಿಶೇಷವೇ ಚೈತನ್ಯವೆಂಬ ತಪ್ಪಾದ ಭಾವನೆಯಿದೆ. ಆದರಿಂದ ಕಲೆಗಳಿಲ್ಲದೆಯೂ ಚೈತನ್ಯವಿರುವದೆಂಬ ಸಿದ್ಧಾಂತವನ್ನು ತೋರಿಸಿಕೊಡುವದು ಅವಶ್ಯ–ಎಂದು ಭಾವ.

2. "ಧರ್ಮಕಂ ಚೈತನ್ಯವ್" ಎಂದೇ ಭಾಷ್ಯವಿದ್ವಿರೆಬಹುದು.

3. ಈ ಮಾತು ಇಲ್ಲಿರಬೇಕಾದದ್ದು ಬಿಟ್ಟುಹೋಗಿದೆ.

ಅರಿಯಲ್ಪಡುವದರಿಂದಲೇ ಅವರದರ ಅರಿವು ಬೇರ್ಪಡುವದಿಲ್ಲ– ಎಂದಾಗುತ್ತದೆ. (ಏಕೆಂದರೆ) ಪ್ರಾಸದಾನಸೂ ವಸ್ತುತತ್ತ್ವವು ಇದೆ, ಆದರೆ (ಅದು) ಅರಿಯಲ್ಪಡುವದಿಲ್ಲ ಎಂಬುದು ಅಯುಕ್ತ.[1] ರೂಪವು ಕಾಣುತ್ತದೆ, ಆದರೆ ಕಣ್ಣು ಇಲ್ಲ– ಎಂಬುದು ಹೇಗೆ (ಅಯುಕ್ತವೋ ಹಾಗೆಯೇ ಇದೂ ಅಯುಕ್ತ). ಜ್ಞೇಯವು (ಜ್ಞಾನವನ್ನು) ಬಿಟ್ಟುಹೋಗುವದುಂಟು,[2] ಆದರೆ ಜ್ಞಾನವು ಎಂದಿಗೂ ಜ್ಞೇಯವನ್ನು ಬಿಟ್ಟುಹೋಗುವದಿಲ್ಲ; ಏಕೆಂದರೆ (ಅದು) ಜ್ಞೇಯವು ಇಲ್ಲವಾದರೂ ಮತ್ತೊಂದು ಜ್ಞೇಯದ ವಿಷಯದಲ್ಲಿ ಜ್ಞಾನವು (ಇದ್ದೇ) ಇರುತ್ತದೆ.[3] ಜ್ಞಾನವಿಲ್ಲದೆ ಜ್ಞೇಯವೆಂಬುದು ಯಾರ ಮತದಲ್ಲಿಯೂ ಇರುವದೇ ಇಲ್ಲ; ಏಕೆಂದರೆ ಸುಷುಪ್ತಿಯಲ್ಲಿ (ಅದು) ಕಂಡುಬರುವದಿಲ್ಲ.[4]

ಜ್ಞಾನಕ್ಕೆ ಅಭಾವವಿಲ್ಲ

(ಭಾಷ್ಯ)

೧೨. ಜ್ಞಾನಸ್ಯಾಪಿ ಸುಷುಪ್ತೇ ಅಭಾವಾತ್ ಜ್ಞೇಯವತ್ ಜ್ಞಾನಸ್ವರೂಪಸ್ಯ ವ್ಯಭಿಚಾರಃ ಇತಿ ಚೇತ್ | ನ | ಜ್ಞೇಯಾವಭಾಸಕಸ್ಯ ಜ್ಞಾನಸ್ಯ ಆಲೋಕವತ್ ಜ್ಞೇಯಾಭಿವ್ಯಞ್ಜಕತ್ವಾತ್[5] ಸ್ವವ್ಯಞ್ಜ್ಯಾಭಾವೇ ಆಲೋಕಾಭಾವಾನುಪಪತ್ತಿವತ್[6] ಸುಷುಪ್ತೇ ವಿಜ್ಞಾನಾಭಾವಾನುಪಪತ್ತೇಃ | ನ ಹಿ ಅನ್ಧಕಾರೇ ಚಕ್ಷುಷಾ ರೂಪಾಣ್ಯುಪಲಬ್ಧ್ವಾ ಚಕ್ಷುಷೋಽಭಾವಃ ಶಕ್ಯಃ ಕಲ್ಪಯಿತುಮ್ ಆವೈನಾಶಿಕೇನ[7] | ವೈನಾಶಿಕೋ ಜ್ಞೇಯಾಭಾವೇ ಜ್ಞಾನಾಭಾವಂ ಕಲ್ಪಯತ್ಯೇವ ಇತಿ ಚೇತ್ | ಯೇನ ತದಭಾವಂ ಕಲ್ಪಯೇತ್ ತಸ್ಯಾಭಾವಃ ಕೇನ ಕಲ್ಪ್ಯತೇ ಇತಿ

---

1. ಏಕೆಂದರೆ ಜ್ಞಾನವೂ ಬೇರ್ಪಡುತ್ತಿದ್ದರೆ ಆಗ ಹೀಗಿತ್ತು, ಈಗ ಹೀಗಿದೆ–ಎಂದು ಅರಿಯುವದಕ್ಕೆ ಆಗುತ್ತಿರಲಿಲ್ಲ.

2. ವಸ್ತುವು ಪ್ರತ್ಯಕ್ಷವಾಗಿರಲಿ, ಅಪ್ರತ್ಯಕ್ಷವಾಗಿರಲಿ, ಜ್ಞಾತವಾಗಿಯೇ ಹಾಗೆ ತೋರುತ್ತದೆ. ವಸ್ತುವೆಂದರೆ ಜ್ಞಾನಕ್ಕೆ ಸಂಬಂಧಪಟ್ಟಿರುವದೆಂದೇ ಅರ್ಥ.

3. ಜ್ಞಾನವಿರುವಾಗಲೇ ಜ್ಞೇಯವು ಇಲ್ಲವಾಗಬಹುದು ಎಂದರ್ಥ.

4. ಪ್ರತಿವಾದಿಗಳು ಒಂದೊಂದು ವಿಷಯಕ್ಕೆ ಒಂದೊಂದು ಜ್ಞಾನವುಂಟಾಗುವದೆನ್ನುತ್ತಾರೆ; ಒಂದೇ ಜ್ಞಾನವೇ ಸಾಕಾಗಿರುವಾಗ ಹಾಗೆ ಅನೇಕಜ್ಞಾನಗಳನ್ನು ಕಲ್ಪಿಸುವದು ಯುಕ್ತಿವಿರುದ್ಧ. ಘಟಿಸಕ್ತಿಯೂ ಪಟಿಸಕ್ತಿಯೂ ಒಂದೇ; ಹೀಗೆಯೇ ಘಟಜ್ಞಾನವೂ ಪಟಜ್ಞಾನವೂ ಒಂದೇ.

5. ಜ್ಞಾನವು ನಿತ್ಯವೆಂದು ಒಪ್ಪದ ವಾದಿಗಳಾದರೂ ಜ್ಞಾನವಿಲ್ಲದೆ ಜ್ಞೇಯವಿದೆ ಎಂದು ಹೇಳುವದಕ್ಕೆ ಬರುವದಿಲ್ಲವೆಂಬುದಕ್ಕೆ ಈ ದೃಷ್ಟಾಂತ. ಸಿದ್ಧಾಂತದಲ್ಲಿ ಜ್ಞಾನರೂಪವಾದ ಆತ್ಮನು ಸುಷುಪ್ತಿಯಲ್ಲಿಯೂ ಇದ್ದೇ ಇರುತ್ತಾನೆ.

6. "ಅಭಿವ್ಯಕ್ತ್ಯರ್ಥತ್ವಾಚ್ಚ" ವಾ॥

7. ಇದಾದಬಳಿಕ "ಅಪ್ರತೀತೇಷು ವಸ್ತುಷು" ಎಂದು ವಾ॥ಪಾಠದಲ್ಲಿ ಹೆಚ್ಚಾಗಿದೆ

8. 'ಆವೈನಾಶಿಕೇನ' ಎಂದು ಆ॥; "ವೈನಾಶಿಕೇನ" ಎಂದು ವಾ॥ ಪಾಠ.

ವಕ್ತವ್ಯಂ ವೈನಾಶಿಕೇನ | ತದಭಾವಸ್ಯಾಪಿ ಜ್ಞೇಯತ್ವಾತ್ ಜ್ಞಾನಾಭಾವೇ ತದನುಪಪತ್ತೇಃ | ಜ್ಞಾನಸ್ಯ ಜ್ಞೇಯಾವ್ಯತಿರಿಕ್ತತ್ವಾತ್ ಜ್ಞೇಯಾಭಾವೇ ಜ್ಞಾನಾಭಾವಃ ಇತಿ ಚೇತ್ | ನ | ಅಭಾವಸ್ಯಾಪಿ ಜ್ಞೇಯತ್ವಾಭ್ಯುಪಗಮಾತ್ | ಅಭಾವೋಽಪಿ ಜ್ಞೇಯೋಽಭ್ಯುಪಗಮ್ಯತೇ ವೈನಾಶಿಕೈಃ | ನಿತ್ಯಶ್ಚ | ತದವ್ಯತಿರಿಕ್ತಂ ಚೇತ್ ಜ್ಞಾನಂ ನಿತ್ಯಂ ಕಲ್ಪಿತಂ ಸ್ಯಾತ್ | ತದಭಾವಸ್ಯ ಚ ಜ್ಞಾನಾತ್ಮಕತ್ವಾತ್ ಅಭಾವತ್ವಂ ವಾಜ್ಞಾತ್ರಮೇವ ನ ಪರಮಾರ್ಥತೋಽಭಾವತ್ವಮ್; ಅನಿತ್ಯತ್ವಂ ಚ ಜ್ಞಾನಸ್ಯ | ನ ಚ ನಿತ್ಯಸ್ಯ ಜ್ಞಾನಸ್ಯ ಅಭಾವನಾಮಮಾತ್ರಾಧ್ಯಾರೋಪೇ ಕಿಂಚಿನ್ನಶ್ಯೇನ್ನಮ್ ||

(ಭಾಷ್ಯಾರ್ಥ)

(ಆಕ್ಷೇಪ) :– ಜ್ಞಾನವೂ ತನ್ನಿನ್ದ್ರಿಯಲ್ಲಿ ಇರುವದಿಲ್ಲವಾದ್ದರಿಂದ ಜ್ಞೇಯದಂತೆ ಜ್ಞಾನಸ್ವರೂಪವೂ ಬೇರ್ಪಡುವದೆಂದಾಯಿತಲ್ಲ[1] !

(ಪರಿಹಾರ) :– ಹಾಗಲ್ಲ. ಜ್ಞೇಯವನ್ನು ಬೆಳಗುವ ಜ್ಞಾನವು ಬೆಳಕಿನಂತೆ ಜ್ಞೇಯಕ್ಕೆ ಅಭಿವ್ಯಂಜಕವಾಗಿರುತ್ತದೆ ; ತಾನು ತೋರಿಕೊಡಬೇಕಾಗಿರುವ (ಪದಾರ್ಥ)ವಿಲ್ಲದಿರುವಾಗ ಬೆಳಕೇ ಇಲ್ಲವೆಂಬುದು ಹೇಗೆ (ಸರಿಯಲ್ಲವೋ) ಹಾಗೆ (ವಸ್ತುಗಳು ಕಾಣದಿರುವಾಗ)[2] ಸುಷುಪ್ತಿಯಲ್ಲಿ ಜ್ಞಾನವೇ ಇಲ್ಲವೆಂಬುದೂ ಸರಿಯಲ್ಲ[3], ಕತ್ತಲೆಯಲ್ಲಿ ಕಣ್ಣು ರೂಪವನ್ನು ಅರಿಯದೆ ಇದ್ದರೆ ಕಣ್ಣೇ ಇಲ್ಲವೆಂದು ಆವೈನಾಶಿಕನು[4] ಕಲ್ಪಿಸುವದಕ್ಕಾಗಲಾರದಷ್ಟೆ.

(ಆಕ್ಷೇಪ) :– ಜ್ಞೇಯವು ಇಲ್ಲದಿರುವಾಗ ಜ್ಞಾನವೂ ಇಲ್ಲವೆಂದು ವೈನಾಶಿಕನು ಕಲ್ಪಿಸಿಯೇ ಕಲ್ಪಿಸುತ್ತಾನಲ್ಲ[5] !

(ಪರಿಹಾರ) :– ಯಾವದರಿಂದ ಅದು ಇಲ್ಲವೆಂದು ಕಲ್ಪಿಸುತ್ತಾನೋ ಅದರ ಅಭಾವವನ್ನು ಏತರಿಂದ ಕಲ್ಪಿಸಲಾಗುತ್ತದೆ ಎಂಬುದನ್ನು ವೈನಾಶಿಕನು

---

1. ವಿಶೇಷಜ್ಞಾನಕ್ಕಿಂತ ಬೇರೆಯಾದ ಸ್ವರೂಪಜ್ಞಾನವನ್ನು ಪೂರ್ವಪಕ್ಷಿ ಒಪ್ಪಿಲ್ಲ. ಆದ್ದರಿಂದ ಈ ಆಕ್ಷೇಪವನ್ನು ತೆಗೆದಿರುತ್ತಾನೆ.

2. ಕಂಸದಲ್ಲಿರುವ ವಾ॥ ಪಾಠಕ್ಕೆ ಅನುವಾದ.

3. ಜ್ಞೇಯವನ್ನು ಬೆಳಗದಿದ್ದರೆ ಜ್ಞಾನವಿಲ್ಲ ಎಂದು ವಾದಿಸಬಹುದು ; ಜ್ಞೇಯವಿಲ್ಲದ ಸುಷುಪ್ತಿಯಲ್ಲಿ ಜ್ಞಾನವು ಅದನ್ನು ಬೆಳಗಲಿಲ್ಲವಲ್ಲ !– ಎಂದು ಆಕ್ಷೇಪಿಸುವದಕ್ಕೆ ಕಾರಣವಿಲ್ಲ. ಬೃ. ೪–೩–೨೪ರಿಂದ ೩೦ರವರೆಗಿನ ಮಂತ್ರಗಳನ್ನು ನೋಡಿ.

4. ಆತ್ಮನು ಆಗಂತುಕಜ್ಞೈತನ್ಯವುಳ್ಳವನೆಂದೂ ಸುಷುಪ್ತಿಯಲ್ಲಿ ಜ್ಞೈತನ್ಯಧರ್ಮವು ಅವನಲ್ಲಿರುವದಿಲ್ಲವೆಂದೂ ವಾದಿಸುವ ವೈಶೇಷಿಕನ ಖಂಡನೆಯಿದೆಂದು ಭಾವಿಸಬಹುದು. ಜ್ಞೇಯವಿಲ್ಲದ ಮಾತ್ರದಿಂದ ಜ್ಞಾನಸ್ವರೂಪವನ್ನು ಅಲ್ಲಗಳೆದರೆ ವೈನಾಶಿಕಸಿದ್ಧಾಂತವಾದೀತು–ಎಂದು ಭಾವ, ಅರಿಯುವ ಶಕ್ತಿಯು ಸುಷುಪ್ತಿಯಲ್ಲಿಯೂ ಇದೆ ಎಂಬುದಕ್ಕೆ ಸೂ. ಭಾ. ೨–೩–೧೮ ನೋಡಿ.

5. ಇದು ಬೌದ್ಧನ ಆಕ್ಷೇಪವು.

ಹೇಳಬೇಕಾಗುತ್ತದೆ. ಏಕೆಂದರೆ ಅದರ ಅಭಾವವೂ ಜ್ಞೇಯವಾಗಿರುವದರಿಂದ ಜ್ಞಾನವಿಲ್ಲದೆ ಅದು ಇರಲಾರದು[1].

(ಆಕ್ಷೇಪ) :– ಜ್ಞಾನವು ಜ್ಞೇಯಕ್ಕಿಂತ ಬೇರೆಯಲ್ಲವಾದ್ದರಿಂದ[2] ಜ್ಞೇಯ ವಿಲ್ಲದಿದ್ದರೆ ಜ್ಞಾನವೂ ಇರುವದಿಲ್ಲ.

(ಪರಿಹಾರ) :– ಹಾಗಲ್ಲ. ಏಕೆಂದರೆ ಅಭಾವವೂ ಜ್ಞೇಯವೆಂದು ಅಂಗೀಕರಿಸಲಾಗಿದೆ. ವೈನಾಶಿಕರು ಅಭಾವವು ಜ್ಞೇಯವೆಂದೂ ನಿತ್ಯವೆಂದೂ ಒಪ್ಪುತ್ತಾರೆ. ಜ್ಞಾನವು ಅದಕ್ಕಿಂತ ಬೇರೆಯಲ್ಲದಿದ್ದರೆ ಅದು ನಿತ್ಯವೆಂದೇ ಕಲ್ಪಿಸಿದಂತೆ ಆಗುತ್ತದೆ.[3] ಆದರೆ ಅಭಾವವೂ ಜ್ಞಾನಾತ್ಮಕವಾಗಿರುವದರಿಂದ[4] ಅದನ್ನು ಅಭಾವವೆನ್ನುವದು ಬರಿಯ ಮಾತೇ (ಆಗುವದೇ ಹೊರತು) ನಿಜವಾಗಿ ಜ್ಞಾನವು ಅಭಾವವೂ ಅಲ್ಲ, ಅನಿತ್ಯವೂ ಅಲ್ಲ. ನಿತ್ಯವಾಗಿರುವ ಜ್ಞಾನಕ್ಕೆ ಅಭಾವವೆಂಬ ಹೆಸರಿನಿಂದನ್ನು ಹುಟ್ಟುಗಟ್ಟುವದಮಾತ್ರದಿಂದ ನಮಗೇನೂ ಹಾನಿಯಾಗುವದೂ ಇಲ್ಲ.[5]

ಜ್ಞಾನವು ಜ್ಞೇಯವಲ್ಲ

(ಭಾಷ್ಯ)

೧೩. ಅಥ ಅಭಾವೋ ಜ್ಞೇಯೋಽಪಿ ಸನ್ ಜ್ಞಾನವ್ಯತಿರಿಕ್ತಃ ಇತಿ ಚೇತ್ | ನ ತರ್ಹಿ ಜ್ಞೇಯಾಭಾವೇ ಜ್ಞಾನಾಭಾವಃ | ಜ್ಞೇಯಂ ಜ್ಞಾನವ್ಯತಿರಿಕ್ತಂ ನ ತು ಜ್ಞಾನಂ ಜ್ಞೇಯವ್ಯತಿರಿಕ್ತಮ್ ಇತಿ ಚೇತ್ | ನ | ಶಬ್ದಮಾತ್ರತ್ವಾತ್

---

1. ಜ್ಞೇಯಕ್ಕೆ ಜ್ಞಾನವು ಬೇಕೇಬೇಕು ಎಂದು ಹಿಂದೆ ತೋರಿಸಲಾಗಿದೆ; ಜ್ಞಾನವು ತನಗೆ ತಾನೇ ಜ್ಞೇಯವೆಂಬುದು ಬೌದ್ಧನ ಸಿದ್ಧಾಂತವಾಗಿದೆ. ಆದ್ದರಿಂದ ಜ್ಞೇಯವಿದ್ದರೆ ಜ್ಞಾನವಿರಬೇಕು.

2. ಜ್ಞಾನವು ಯಾವಾಗಲೂ ತನ್ನನ್ನು ವಿಷಯೀಕರಿಸಿಯೇ ತೀರುತ್ತದೆ; ಇಲ್ಲದಿದ್ದರೆ ತಾನೇ ಇರಲಾರದು ಎಂದರ್ಥ. "ಅವ್ಯತಿರಿಕ್ತ"ವೆಂದರೆ ಅಭಿನ್ನವೆಂದರ್ಥವಲ್ಲ. ಟೀಕೆಯನ್ನು ನೋಡಿ.

3. ಸೂ. ಭಾ. ೩–೩–೨೨ರಲ್ಲಿ ಅಭಾವವು ಜ್ಞೇಯವೆಂದೂ ನಿತ್ಯವೆಂದೂ ಕ್ಷಣಿಕವಾದಿಗಳಾದ ಬೌದ್ಧರೂ ಒಪ್ಪುತ್ತಾರೆಂತ ಹೇಳಿದೆ.

4. ಜ್ಞೇಯದ ಅಭಾವವು ಹೇಗೆ ಜ್ಞೇಯವೇ ಆಗಿರುವದೋ, ಜ್ಞಾನದ ಅಭಾವವೂ ಜ್ಞೇಯವೇ; ಜ್ಞಾನವು ತನಗೆತಾನೇ ಜ್ಞೇಯವೆಂದು ಕಲ್ಪಿಸುವ ಬೌದ್ಧರಿಗೆ ಜ್ಞೇಯವೂ ಜ್ಞಾನಾತ್ಮಕವೇ ಆಗಿರುತ್ತದೆ.

5. ಜ್ಞಾನವಿಲ್ಲದ ಸ್ಥಲವನ್ನು ಬೌದ್ಧರು ಎಂದಿಗೂ ತೋರಿಸಿದಂತೆ ಆಗುವದಿಲ್ಲ. ಜ್ಞೇಯವು ಭಾನರೂಪವಾಗಿರಲಿ ಅಭಾವರೂಪವಾಗಿರಲಿ ಜ್ಞಾನವಿಲ್ಲದೆ ಇರಲಾರದು ಎಂಬುದು ಮೊದಲಿನ ಯುಕ್ತಿ; ನಿಮ್ಮ ಮತದಲ್ಲಿ ಜ್ಞೇಯವೆಂದರೂ ಜ್ಞಾನವಾಗಿರುವದರಿಂದ ಭಾನರೂಪಜ್ಞೇಯವಾಗಲಿ ಅಭಾವರೂಪಜ್ಞೇಯವಾಗಲಿ ಜ್ಞಾನವೇ ಆಗಿರುತ್ತದೆ. ಆದ್ದರಿಂದ ಜ್ಞಾನವಿಲ್ಲದ ಸ್ಥಲವಿಲ್ಲ ಎಂದು ಈಗಿನ ಯುಕ್ತಿ.

ವಿಶೇಷಾನುಪಪತ್ತೇಃ | ಜ್ಞೇಯಜ್ಞಾನಯೋರೇಕತ್ವಂ ಚೇತ್ ಅಭ್ಯುಪಗಮ್ಯತೇ 'ಜ್ಞೇಯಂ ಜ್ಞಾನವ್ಯತಿರಿಕ್ತಮ್' ನ ಜ್ಞೇಯವ್ಯತಿರಿಕ್ತಂ ಜ್ಞಾನಮ್, ಇತಿ ತು ಶಬ್ದಮಾತ್ರಮೇತತ್ "ವಹ್ನಿರಗ್ನಿವ್ಯತಿರಿಕ್ತಃ ಅಗ್ನಿರ್ನ ವಹ್ನಿವ್ಯತಿರಿಕ್ತಃ" ಇತಿ ಯದ್ವದಭ್ಯುಪಗಮ್ಯತೇ | ಜ್ಞೇಯವ್ಯತಿರೇಕೇ ತು ಜ್ಞಾನಸ್ಯ ಜ್ಞೇಯಾಭಾವೇ ಜ್ಞಾನಾಭಾವಾನುಪಪತ್ತಿಃ ಸಿದ್ಧಾ ||

(ಭಾಷ್ಯಾರ್ಥ)

(ಆಕ್ಷೇಪ) :—ಅಭಾವವು ಜ್ಞೇಯವಾದರೂ ಜ್ಞಾನಕ್ಕಿಂತ ಬೇರೆಯೇ ಎಂದರೆ ?[1]

(ಪರಿಹಾರ :— ಹಾಗಾದರೆ ಜ್ಞೇಯವಿಲ್ಲವಿದ್ದರೆ ಜ್ಞಾನವಿಲ್ಲವೆಂಬುದೇ ಸರಿಯಾಗುವದಿಲ್ಲ.[2]

(ಆಕ್ಷೇಪ) :–ಜ್ಞೇಯವು ಜ್ಞಾನಕ್ಕಿಂತ ಬೇರೆ : ಆದರೆ ಜ್ಞಾನವು ಜ್ಞೇಯಕ್ಕಿಂತ ಬೇರೆಯಾಗಿರುವದಿಲ್ಲ.[3]

(ಪರಿಹಾರ) :–ಇದು ಸರಿಯಲ್ಲ. ಏಕೆಂದರೆ (ಇದು) ಬರಿಯ ಮಾತಾಗುತ್ತದೆಯಾದ್ದರಿಂದ (ಅವೆರಡಕ್ಕೂ) ಯಾವ ಹೆಚ್ಚುಕಡಿಮೆಯೂ ಇರುವದೆಂಬುದು ಹೊಂದುವದಿಲ್ಲ. ಜ್ಞೇಯಜ್ಞಾನಗಳೆರಡೂ ಒಂದೇ[4] ಎಂಬುದನ್ನು ಒಪ್ಪಿಕೊಂಡರೆ 'ಜ್ಞೇಯವು ಜ್ಞಾನಕ್ಕಿಂತ ಬೇರೆ, ಜ್ಞಾನವು ಜ್ಞೇಯಕ್ಕಿಂತ ಬೇರೆಯಲ್ಲ' ಎಂದು (ಹೇಳುವದು) "ವಹ್ನಿಯು ಅಗ್ನಿಗಿಂತ ಬೇರೆ, ಅಗ್ನಿಯು ವಹ್ನಿಗಿಂತ ಬೇರೆಯಲ್ಲ" ಎಂಬಂತೆ ಬರಿಯ ಮಾತನ್ನು ಮಾತ್ರ ಇಟ್ಟುಕೊಂಡಂತೆ ಆಗುತ್ತದೆ.[5] ಜ್ಞೇಯಕ್ಕಿಂತ ಜ್ಞಾನವು ಬೇರೆ ಎಂದರಂತೂ ಜ್ಞೇಯವಿಲ್ಲದಾಗ

---

1. ಜ್ಞೇಯಸ್ವಭಾವವು ಜ್ಞಾನಸ್ವಭಾವಕ್ಕಿಂತ ಬೇರೆ–ಎಂದು ಭಾವ.

2. ಬೇರೆಯಾಗಿರುವ ಆ ಜ್ಞೇಯವಿಲ್ಲದಿದ್ದರೆ ಜ್ಞಾನವೇಕಕ್ಕೆ ಇರಬಾರದು? ಕುದುರೆ ಇದ್ದರೂ ಇಲ್ಲದಿದ್ದರೂ ಎತ್ತು ಇರಬಹುದಷ್ಟೆ ?

3. ಜ್ಞೇಯವು ಸ್ವಭಾವದಿಂದ ಬೇರೆಯಾಗಿರುತ್ತದೆ; ಆದರ ತತ್ತ್ವವು ಜ್ಞಾನವೇ ಎಂದರ್ಥ. ಜ್ಞೇಯವಾದ ಅನಾತ್ಮವು ಆರೋಪಿತವು; ಜ್ಞಾನಸ್ವರೂಪನಾದ ಆತ್ಮನಿಗಿಂತ ಬೇರೆಯೆಂದಾಗಲಿ ಬೇರೆಯಲ್ಲವೆಂದಾಗಲಿ ಹೇಳುವದಕ್ಕೆ ಬರುವದಿಲ್ಲ; ಅಧಿಷ್ಠಾನವಾಗಿರುವ ಆತ್ಮನು ಅದಕ್ಕಿಂತ ಬೇರೆಯೇ ಎಂಬ ವೇದಾಂತಿಗಳ ಮತವು (ಸೂ. ಭಾ. ೨–೧–೧೪) ಇದಕ್ಕಿಂತ ವಿಲಕ್ಷಣವಾಗಿದೆ. ಈ ಬೌದ್ಧರ ಮತದಲ್ಲಿ ಜ್ಞಾನವು ಕ್ಷಣಿಕವಾಗಿ ತನಗೆತಾನೇ ನಿಜವಾಗಿ ಜ್ಞೇಯವಾಗಿಯೂ ಇದೆ.

4. ಎರಡೂ ಜ್ಞಾನವೇ ಎಂದರ್ಥ; ಜ್ಞಾನವೂ ಜ್ಞೇಯವೇ ಎಂದರ್ಥವಲ್ಲ.

5. ಏಕೆಂದರೆ ಆಗ ಜ್ಞಾನಕ್ಕಿಂತ ಜ್ಞಾನವು ಬೇರೆ ಎಂದತೆ ಆಗುವದು.

ಜ್ಞಾನವು ಇಲ್ಲವೆಂಬುದು ಹೊಂದುವದಿಲ್ಲವೆಂಬುದು ಸಿದ್ಧವಾಗಿಯೇ ಇದೆ.[1]

(ಭಾಷ್ಯ)

ಸು. ಜ್ಞೇಯಾಭಾವೇ ಅದರ್ಶನಾತ್ ಅಭಾವೋ ಜ್ಞಾನಸ್ಯ ಇತಿ ಚೇತ್ | ನ | ಸುಷುಪ್ತೌ ಜ್ಞಾನಸ್ಯಾಭ್ಯುಪಗಮಾತ್ | ವೈನಾಶಿಕೈರಭ್ಯುಪಗಮ್ಯತೇ ಹಿ ಸುಷುಪ್ತೇಽಪಿ ಜ್ಞಾನಾಸ್ತಿತ್ವಮ್ | ತತ್ರಾಪಿ ಜ್ಞೇಯತ್ವಮಭ್ಯುಪಗಮ್ಯತೇ ಜ್ಞಾನಸ್ಯ ಸ್ವೇನೈವ ಇತಿ ಚೇತ್ | ನ | ಭೇದಸ್ಯ ಸಿದ್ಧತ್ವಾತ್ | ಸಿದ್ಧಂ ಹಿ ಅಭಾವಜ್ಞೇಯವಿಷಯಸ್ಯ ಜ್ಞಾನಸ್ಯ ಅಭಾವಜ್ಞೇಯವ್ಯತಿರೇಕಾತ್ ಜ್ಞೇಯ ಜ್ಞಾನಯೋರನ್ಯತ್ವಮ್ | ನ ಹಿ ತತ್ ಸಿದ್ಧಂ ಮೃತಮಿವ ಉಜ್ಜೀವಯಿತುಂ ಪುನರನ್ಯಥಾ ಶಕ್ಯಂ ಶಕ್ಯತೇ ವೈನಾಶಿಕಶತೈರಪಿ ||

(ಭಾಷ್ಯಾರ್ಥ)

(ಆಕ್ಷೇಪ) :-ಜ್ಞೇಯವು ಇಲ್ಲದಾಗ (ಜ್ಞಾನವು) ಕಾಣದೆ ಇರುವದರಿಂದ[2] ಜ್ಞಾನವು (ಆಗ) ಇರುವದಿಲ್ಲವೆಂಬುದೇ ಸರಿ).

(ಪರಿಹಾರ) :—ಹಾಗಲ್ಲ ಏಕೆಂದರೆ ಸುಷುಪ್ತಿಯಲ್ಲಿ ಜ್ಞಾನವನ್ನು ಅಂಗೀಕರಿಸಲಾಗಿದೆ. ವೈನಾಶಿಕರು ಸುಷುಪ್ತಿಯಲ್ಲಿಯೂ ಜ್ಞಾನವಿರುವದೆಂದೇ ಒಪ್ಪುತ್ತಾರಲ್ಲವೆ ?

(ಆಕ್ಷೇಪ) :—ಅಲ್ಲಿಯೂ ಜ್ಞಾನವು ತನಗೆತಾನೇ ಜ್ಞೇಯವೆಂದು ಅವರು ಒಪ್ಪುತ್ತಾರಲ್ಲ ![3]

(ಪರಿಹಾರ) :—ಅದು ಸರಿಯಲ್ಲ. ಏಕೆಂದರೆ ಭೇದವು ಸಿದ್ಧವಾಗಿರುತ್ತದೆ. (ಹೇಗೆಂದರೆ) : ಅಭಾವರೂಪವಾಗಿರುವ ಜ್ಞೇಯವನ್ನು ವಿಷಯಮಾಡುವ ಜ್ಞಾನವು ಅಭಾವ(ರೂಪ)ಜ್ಞೇಯಕ್ಕಿಂತ ಬೇರೆಯಾಗಿರುವದರಿಂದ ಜ್ಞೇಯ

---

1. ಇದು ವೇದಾಂತಿಗಳ ಅಭಿಪ್ರಾಯ. ಜ್ಞೇಯವಿರುವಾಗ ಅದನ್ನು ಜ್ಞಾನವು ಬೆಳಗುತ್ತಿರುತ್ತದೆ. ಇಲ್ಲದಾಗ ತಾನೇ ಬೆಳಗುತ್ತಿರುತ್ತದೆ. ಈ ಮತವನ್ನು ಮುಂದಿನ ಭಾ. ಭಾ. ದಲ್ಲಿ ಸ್ಪಷ್ಟಗೊಳಿಸಲಾಗುವದು.

2. ಜ್ಞಾನವು ಇದ್ದರೆ ತನಗೆತಾನೇ ಅನುಭವಕ್ಕೆ ಬರಬೇಕು ಎಂಬುದು ಕ್ಷಣಿಕ ವಿಜ್ಞಾನವಾದಿಯ ಮತ. ಸೂ. ಭಾ. ೨-೨-೨೮.

3. ವಿಜ್ಞಾನವಾದಿಗಳು ಸ್ವವಿಜ್ಞೇಯವಾದ ವಿಜ್ಞಾನವನ್ನು ಸುಷುಪ್ತಿಯಲ್ಲಿ ಒಪ್ಪಿರುತ್ತಾರೆ; ತನಗಿಂತ ಬೇರೆಯಾದ ವಿಷಯವು ಎಚ್ಚರದಲ್ಲಿರುವಂತೆ ತೋರಿದರೂ ಅದು ಕನಸಿನ ವಿಷಯಗಳಂತೆ ಭ್ರಾಂತಿ ಎನ್ನುತ್ತಾರೆ

4. ವಿಜ್ಞಾನವು ತನ್ನನ್ನೇ ತಾನು ಅರಿಯುತ್ತದೆಯೆಂದು ನಾವು ಒಪ್ಪುವದರಿಂದ ನಮ್ಮ ಮತದಂತೆ ವಿಜ್ಞಾನವಿಲ್ಲದಿರಬಹುದು; ಆದರೆ ನಿಮ್ಮ ಮತದಂತೆ ಸುಷುಪ್ತಿಯಲ್ಲಿರುವ ಜ್ಞಾನವು ವಿಜ್ಞೇಯವಲ್ಲ, ಬೇರೆ ವಿಜ್ಞೇಯಗಳೂ ಇಲ್ಲ ; ಆದ್ದರಿಂದ ನಿಮ್ಮ ಮತದಂತೆ ಜ್ಞಾನವಿರುವದಿಲ್ಲವೆಂಬುದೇ ಸರಿ ಎಂದು ಪೂರ್ವಪಕ್ಷಿಯ ಭಾವ.

ಜ್ಞಾನಗಳು ಬೇರೆ ಬೇರೆ) ಎಂದು ಸಿದ್ಧವಾಗಿಯೇ ಇರುತ್ತದೆ. ಹಾಗೆ ಸಿದ್ಧವಾಗಿರುವದನ್ನು (ಜ್ಞಾನವು ಸ್ವಜ್ಞೇಯ ಎಂಬ ವಾದವನ್ನು ಹಿಡಿದು) ಸತ್ಯವನ್ನು ಬದುಕಿಸುವಂತೆ ಮತ್ತೆ ಬದಲಾಯಿಸುವದಕ್ಕೆ ನೂರು ಜನ ವೈನಾಶಿಕರಿಂದಲೂ ಆಗಲಾರದು.[1]

ಕೂಟಸ್ಥಚೈತನ್ಯವಾದದಲ್ಲಿ ಯಾವ ದೋಷವೂ ಇಲ್ಲ

(ಭಾಷ್ಯ)

೧೫. ಜ್ಞಾನಸ್ಯ ಸ್ವಾಜ್ಞೇಯತ್ವೇಽಪಿ ತದನ್ಯಸ್ಯೇವ, ತದನ್ಯಸ್ಯೇವ– ಇತಿ ತ್ವತ್ಪಕ್ಷೇ ಅತಿಪ್ರಸಜ್ಯತೇ ಇತಿ ಚೇತ್ | ನ | ತದ್ವಿಭಾಗೋಽಪಪತ್ತೇಃ ಸರ್ವಸ್ಯ ಸರ್ವಂ ಜ್ಞೇಯಂ ಕಸ್ಯಚಿತ್ ತದಾ ತವ್ಯತಿರಿಕ್ತಂ ಜ್ಞಾನಂ ಜ್ಞಾನಮೇವೇತಿ | ದ್ವಿತೀಯೋ ವಿಭಾಗ ಏವ ಅಭ್ಯುಪಗಮ್ಯತೇ ಅವೈನಾಶಿಕೈಃ, ನ ತೃತೀಯಸ್ತದ್ವಿಷಯಃ ಇತಿ ಅನವಸ್ಥಾನುಪಪತ್ತಿಃ | ಜ್ಞಾನಸ್ಯ ಸ್ವೇನೈವ ಅವಿಜ್ಞೇಯತ್ವೇ ಸರ್ವಜ್ಞತ್ವಹಾನಿಃ ಇತಿ ಚೇತ್ | ಸೋಽಪಿ ದೋಷಸ್ತಸ್ಯೈವಾಸ್ತು ಕಿಂ ತನ್ನಿಬರ್ಹಣೇನ ಅಸ್ಮಾಕಮ್ ? ಅನವಸ್ಥಾದೋಷಶ್ಚ | ಜ್ಞಾನಸ್ಯ ಜ್ಞೇಯತ್ವಾಭ್ಯುಪಗಮಾತ್ | ಅವಶ್ಯಂ ಚ ವೈನಾಶಿಕಾನಾಂ ಜ್ಞಾನಂ ಜ್ಞೇಯಮ್ ; ಸ್ವಾತ್ಮನಾ ಚ ಅವಿಜ್ಞೇಯತ್ವೇನ ಅನವಸ್ಥಾ ಅನಿವಾರ್ಯಾ ; ಸಮಾನ ಏವಾಯಂ ದೋಷಃ ಇತಿ ಚೇತ್ | ನ | ಜ್ಞಾನಸ್ಯ ಏಕತ್ವೋಪಪತ್ತೇಃ | ಸರ್ವದೇಶಕಾಲಪುರುಷಾದ್ಯವಸ್ಥಮ್ ಏಕಮೇವ ಜ್ಞಾನಂ ನಾಮರೂಪಾದ್ಯನೇಕೋಪಾಧಿಭೇದಾತ್ ಸವಿತ್ರಾದಿಜಲಾದಿಪ್ರತಿಬಿಂಬವತ್ ಅನೇಕಧಾ ಅವಭಾಸತೇ ಇತಿ ನಾಸೌ ದೋಷಃ | ತಥಾ ಚೇಹ ಇದಮ್ ಉಚ್ಯತೇ ||

(ಭಾಷ್ಯಾರ್ಥ)

(ಆಕ್ಷೇಪ) :— ಜ್ಞಾನವು ತನ್ನನ್ನು ತಾನೇ ಅರಿಯುವದಿಲ್ಲವಾದರೆ ಅದೂ ಮತ್ತೊಂದರಿಂದ (ಅರಿಯಲ್ಪಡಬೇಕು), ಅದೂ ಮತ್ತೊಂದರಿಂದ

1. ಎಚ್ಚರಕನಸುಗಳಲ್ಲಿ ತೋರುವ ವಿಷಯಗಳ ಅಭಾವನೆಯನ್ನು ನೀವೂ ಒಪ್ಪಿದ್ದೀರಿ ಅದನ್ನು ಅರಿಯುವ ವಿಜ್ಞಾನವು ಆ ಅಭಾವರೂಪಜ್ಞೇಯಕ್ಕಿಂತ ಬೇರೆಯೇ ಆಗಿದೆ. ವಿಜ್ಞಾನವು ತನ್ನನ್ನು ತಾನು ಅರಿಯಲಿ, ಬಿಡಲಿ, ತಾನು ಅರಿಯುವ ವಿಷಯಾಭಾವಕ್ಕಿಂತ ಬೇರೆ ಎಂಬುದನ್ನು ಅಲ್ಲಗಳೆಯುವದು ಹೇಗೆ ? ಅದನ್ನು ಒಪ್ಪಿದಮೇಲೆ ಜ್ಞೇಯಕ್ಕಿಂತ ಜ್ಞಾನವು ಬೇರೆ ಎಂಬುದನ್ನು ಮತ್ತೆ ನಿಷೇಧಿಸುವದು ಸತ್ಯನಿಲುವನ್ನು ಬದುಕಿಸುವ ಪ್ರಯತ್ನವಲ್ಲವೆ ?

2. 'ಜ್ಞೇಯತ್ವಮೇವೇತಿ' ಎಂಬ ಅ॥ ಪಾಠಕ್ಕಿಂತ ಈ ವಾ॥ ಪಾಠವೇ ಮೇಲು.

ಎಂದು ನಿನ್ನ ಪಕ್ಷದಲ್ಲಿ ಅತಿಪ್ರಸಕ್ತಿ ಬಾಗುವದಲ್ಲ ![1]

(ಪರಿಹಾರ) :– ಹಾಗಲ್ಲ. ಎಲ್ಲವೂ ಅದಕ್ಕಿಂತ ಬೇರೆ (ಎಂದು ಹೇಳುವದು) ಯುಕ್ತವಾಗುತ್ತದೆ. ಜಾವಾಗ ಎಲ್ಲವೂ ಒಂದಕ್ಕೆ ಜ್ಞೇಯವೆಂದಾಯಿತೋ ಆಗ (ಜ್ಞೇಯಕ್ಕಿಂತ) ಬೇರೆಯಾದ ಜ್ಞಾನವು ಜ್ಞಾನವೇ ಆಗಿರುವದರಿಂದ (ಜ್ಞಾನವೆಂಬ) ಎರಡನೆಯ ವಿಧಾಗವೊಂದನ್ನೇ ಆವೈನಾಶಿಕರು[2] ಒಪ್ಪುತ್ತಾರೆಯೇ ಹೊರತು ಅದನ್ನು ವಿಷಯಮಾಡಿಕೊಂಡಿರುವ ಮೂರನೆಯ (ಜ್ಞಾನವನ್ನು) (ಒಪ್ಪುವವರಿಲ್ಲ. ಆದ್ದರಿಂದ (ಅವರ ಪಕ್ಷದಲ್ಲಿ) ಅನವಸ್ಥೆಯೆಂಬುದು ಯುಕ್ತವಲ್ಲ.[3]

(ಆಕ್ಷೇಪ) :– ಜ್ಞಾನವು ತನ್ನನ್ನು ತಾನೇ ಅರಿಯುವದಿಲ್ಲವೆಂದರೆ ಅದು ಸರ್ವಜ್ಞವೆಂಬುದು ಹೋಗುವದಲ್ಲ ![4]

(ಪರಿಹಾರ) :–ಈ ದೋಷವೂ ಅವನಿಗೇ ಆಗಲಿ! ಅದನ್ನು ಖಂಡಿಸುವದರಿಂದ ನಮಗೇನಾಗಬೇಕು[5] ? ಅನವಸ್ಥಾದೋಷವೂ (ಅವನಿಗೇ ಆಗಲಿ) ! ಏಕೆಂದರೆ ಜ್ಞಾನವು ಜ್ಞೇಯವೆಂದು (ಅವನು) ಒಪ್ಪಿರುತ್ತಾನೆ. ಜ್ಞಾನವು ಜ್ಞೇಯವೇ ಆಗಿರಬೇಕೆಂಬುದು ವೈನಾಶಿಕನ (ಮತವು); (ಅದು) ತನ್ನನ್ನು ತಾನೇ ಅರಿಯ

---

1. ಬೌದ್ಧರಲ್ಲದ ನಿನ್ನ ಪಕ್ಷದಲ್ಲಿ ಜ್ಞಾನವು ತನ್ನನ್ನು ತಾನು ಅರಿಯುವದಿಲ್ಲವಾದ್ದರಿಂದ ಅದನ್ನು ಅರಿಯುವದಕ್ಕೆ ಮತ್ತೊಂದು ಜ್ಞಾನವು ಬೇಕಾಗುವದು. ಹೀಗೆ ಜ್ಞಾನಗಳ ಸಾಲಿಗೆ ಸಲುಗಡೆಯೇ ಇಲ್ಲದೆಹೋಗುತ್ತದೆ; ಮತ್ತೊಂದು ಜ್ಞಾನವನ್ನು ಒಪ್ಪದಿದ್ದರೆ ಜ್ಞಾನವೇ ಸಿದ್ಧಿಸುವದಿಲ್ಲ–ಎಂದು ಆಕ್ಷೇಪ.

2. ಆವೈನಾಶಿಕರೆಂದರೆ ಇಲ್ಲಿ ವೇದಾಂತಿಗಳೆಂದರ್ಥ ; ಏಕೆಂದರೆ ತಾರ್ಕಿಕರು ಜ್ಞಾನೇತರವಾದ ಅನುವ್ಯವಸಾಯವೆಂಬ ಜ್ಞಾನವನ್ನು ಒಪ್ಪಿರುತ್ತಾರೆ.

3. ಜ್ಞಾನವು ಸ್ವತಃಸಿದ್ಧವಾಗಿರುವದರಿಂದ ಅದನ್ನು ಅರಿಯುವದಕ್ಕೆ ಮತ್ತೊಂದು ಜ್ಞಾನದ ಬೇಕಿಲ್ಲ ; ಜ್ಞೇಯವೆಲ್ಲವನ್ನೂ ಒಂದೇ ಜ್ಞಾನವು ಅರಿಯುತ್ತದೆ ಎಂದು ನಾವು ಒಪ್ಪುವದರಿಂದ ಅನೇಕಜ್ಞಾನಗಳೂ ಬೇಕಾಗುವದಿಲ್ಲ ಎಂದು ಭಾವ.

4. ತನ್ನನ್ನು ಅರಿಯುವದಿಲ್ಲವೆಂಬಷ್ಟು ಮಟ್ಟಿಗೆ ಅಸರ್ವಜ್ಞವಾಯಿತಲ್ಲ !

5. ಅಜ್ಞೇಯವಾದ ತನ್ನನ್ನು ಜ್ಞಾನವು ಅರಿಯದೆ ಇದ್ದರೆ ಅಸರ್ವಜ್ಞತ್ವವುಂಟಾಗದು. ಅದರೆ ಬೌದ್ಧರ ಪಕ್ಷದಲ್ಲಿ ಜ್ಞಾನವು ಜ್ಞೇಯವೇ ಎಂದು ಒಪ್ಪಿರುವದರಿಂದಲೂ ಜ್ಞೇಯಕ್ಕಿಂತ ಜ್ಞಾನವು ಬೇರೆಯೆಂದು ನಾವು ತೋರಿಸಿಕೊಟ್ಟಿರುವದರಿಂದ ಜ್ಞಾನವು ತನ್ನನ್ನು ತಾನು ಅರಿಯಲಾರದೆಂದಾಗುವದರಿಂದಲೂ ಅಸರ್ವಜ್ಞತ್ವದೋಷವು ಗಂಟು ಬೀಳುತ್ತದೆ.

ಲಾರದಾದ್ದರಿಂದ (ಆ ವ ರಿಂ ದ) ಆನವಸ್ಥಾದೋಷವನ್ನು ಪರಿಹರಿಸುವದು ಆಗಲೂ ಆರದು.[1]

(ಆಕ್ಷೇಪ) :– ಈ ದೋಷವು (ಇಬ್ಬರಿಗೂ) ಸಮಾನವೇ (ಆಗಿರುತ್ತದೆ)[2].

(ಪರಿಹಾರ) :– ಹಾಗಲ್ಲ. ಏಕೆಂದರೆ ಜ್ಞಾನವು ಒಂದೇ[3] (ಎಂಬುದು) ಯುಕ್ತವಾಗಿರುತ್ತದೆ. ಎಲ್ಲಾ ದೇಶಗಳು, ಕಾಲಗಳು, ಪುರುಷರು–ಮುಂತಾದ ಅವಸ್ಥೆಗಳುಳ್ಳದ್ದಾಗಿ ಜ್ಞಾನವು ತಾನೊಂದೇ ಆಗಿದ್ದು ನಾಮರೂಪಗಳೇ ಮುಂತಾದ ಅನೇಕ ಉಪಾಧಿಗಳ ಭೇದದಿಂದ[4] ಸೂರ್ಯನೇ ಮುಂತಾದವುಗಳಿಗೆ (ಅನೇಕ) ಪ್ರತಿಬಿಂಬಗಳಾಗುವಂತೆ ಬಲುಬಗೆಯಾಗಿ ತೋರುತ್ತಿರುತ್ತದೆ. ಆದ್ದರಿಂದ ಈ ದೋಷವಿಲ್ಲ[5]. ಆದ್ದರಿಂದಲೇ ಇಲ್ಲಿ ಈ (ವಿಷಯವನ್ನು) ಹೇಳಿಯೂ ಇರುತ್ತದೆ[6].

ಪುರುಷನು ಶರೀರದಲ್ಲಿರುವ ಬಗೆ

೯. ನನು ಶ್ರುತೇರಿಹೈವ ಅನ್ತಃಶರೀರೇ ಪರಿಚ್ಛಿನ್ನಃ ಕುಣ್ಡಬದರವತ್ ಪುರುಷಃ ಇತಿ | ನ | ಪ್ರಾಣಾದಿಕಲಾಕಾರಣತ್ವಾತ್ | ನ ಹಿ ಶರೀರಮಾತ್ರಪರಿಚ್ಛಿನ್ನಃ[7] ಪ್ರಾಣಶ್ರದ್ಧಾದೀನಾಂ ಕಲಾನಾಂ ಕಾರಣತ್ವಂ ಪ್ರತಿಪದ್ಯತುಂ ಶಕ್ನುಯಾತ್ | ಕಲಾಕಾರ್ಯತ್ವಾಚ್ಚ ಶರೀರಸ್ಯ | ನ ಹಿ ಪುರುಷಕಾರ್ಯಾಣಾಂ ಕಲಾನಾಂ ಕಾರ್ಯಂ ಸತ್ ಶರೀರಂ ಕಾರಣಕಾರಣಂ ಸ್ವಸ್ಯ ಪೌರುಷಂ ಕುಣ್ಡಬದರವದಿವ ಅಭ್ಯನ್ತರೀಕುರ್ಯಾತ್| ಬೀಜವೃಕ್ಷಾದಿವತ್ ಸ್ಯಾತ್ ಇತಿ ಚೇತ್

---

1. ಜ್ಞಾನವು ತನ್ನನ್ನೇ ತಾನು ಅರಿಯುವದೆಂದರೆ ಆತ್ಮಾಶ್ರಯದೋಷ ; ಅದು ಅರಿಯುವದೆಂಬುದು ಸಿದ್ಧವಾಗಿಯೂ ಇಲ್ಲ, ಜ್ಞಾನಕ್ಕಿಂತ ಬೇರೆಯಾದ ಜ್ಞಾನವು ಅದನ್ನು ಅರಿಯುವದೆಂದರೆ ಅನವಸ್ಥಾದೋಷವು ಬರುತ್ತದೆ. ಜ್ಞಾನವು ಜ್ಞೇಯವಲ್ಲ ಎಂಬ ನಮ್ಮ ಪಕ್ಷವನ್ನು ಒಪ್ಪಿಕೊಂಡಹೊರತು ಈ ದೋಷವು ಹೋಗಲಾರದು.

2. ಜ್ಞಾನವು ಸ್ವಪ್ರಕಾಶವೆಂದು ಒಪ್ಪಿದರೆ ಆತ್ಮಾಶ್ರಯದೋಷವು ; ಅದನ್ನು ತಪ್ಪಿಸಿಕೊಳ್ಳುವದಕ್ಕೆ ಹೊರಟರೆ ನಮ್ಮಂತೆಯೇ ವೇದಾಂತಿಗಳಾದ ನಿಮಗೂ ಅನವಸ್ಥಾದೋಷವು ಬರುತ್ತದೆ.

3. ಅದ್ವಿತೀಯವು.

4. ಈ ಉಪಾಧಿಗಳೂ ಅವಿದ್ಯಾಕಲ್ಪಿತವಾಗಿರುತ್ತವೆ. ಸೂ. ಭಾ. ೩–೩–೫೫.

5. ಆತ್ಮಾಶ್ರಯ, ಅನವಸ್ಥಾ–ಮುಂತಾದ ದೋಷಗಳು ದ್ವೈತವನ್ನು ಸತ್ಯವೆಂದು ಒಪ್ಪುವ ನಿಮಗೆ ಉಂಟಾಗುವದೇ ಹೊರತು ಅದ್ವೈತಿಗಳಾದ ನಮಗೆ ಉಂಟಾಗುವದಿಲ್ಲ. ನಮ್ಮ ಮತದಲ್ಲಿ ಜ್ಞಾನವು ಅದ್ವಿತೀಯವಾಗಿರುತ್ತದೆ ; ಅದೇ ಅವಿದ್ಯಾವ್ಯವಹಾರದಲ್ಲಿ ವೃತ್ತಿಜ್ಞಾನಗಳಾಗಿಯೂ ಜ್ಞಾನಜ್ಞೇಯಗಳ ರೂಪದಿಂದಲೂ ಕಾಣಿಸಿಕೊಳ್ಳುತ್ತದೆ ಎಂದು ಒಪ್ಪಿರುವದರಿಂದ ನಮ್ಮ ಪಕ್ಷದಲ್ಲಿ ಯಾವ ದೋಷಗಳೂ ಇರುವದಿಲ್ಲ.

6. ಶ್ರುತಿಯಲ್ಲಿ ಚೈತನ್ಯವೊಂದೇ ಪರಮಾರ್ಥವೆಂದು ಹೇಳಿಯೂ ಇದೆ.

7. ಈ ವಾಕ್ಯ ಪಾಠವೇ ಸರಿ.

ಯಥಾ ಬೀಜಕಾರ್ಯಂ ವೃಕ್ಷಃ ತತ್ಕಾರ್ಯಂ ಚ ಫಲಂ ಸ್ವಕಾರಣಕಾರಣಂ ಬೀಜಮ್ ಅಭ್ಯನ್ತರೀಕರೋತಿ ಅಮುಷ್ಯಾದಿ ತದ್ವತ್ ಪುರುಷಮ್ ಅಭ್ಯನ್ತರೀ ಕುರ್ವಾತ್ ಶರೀರಂ ಸ್ವಕಾರಣಮಪಿ ಇತಿ ಚೇತ್ ! ನ ; ಅನ್ಯತ್ವಾತ್, ಸಾವ ಯವತ್ವಾಚ್ಚ ; ದೃಷ್ಟಾನ್ತೇ ಕಾರಣಾದ್[1] ಬೀಜಾತ್ ವೃಕ್ಷಫಲಸಂವೃತ್ತಾನಿ ಅನ್ಯಾನ್ಯೇವ ಬೀಜಾನಿ ; ಪಾರ್ಶ್ವಾಸ್ತಿಕೇ ತು ಸ್ವಕಾರಣಕಾರಣಭೂತಃ ನ ಏವ ಪುರುಷಃ ಶರೀರೇ ಅಭ್ಯನ್ತರೀಕೃತಃ ಶ್ರೂಯತೇ ! ಬೀಜವೃಕ್ಷಾದೀನಾಂ ಸಾವ ಯವತ್ವಾಚ್ಚ ಸ್ಯಾದಾಧಾರಾಧೇಯತ್ವಮ್ ! ನಿರವಯವಶ್ಚ ಪುರುಷಃ, ಸಾವಯವಾ ವಾಶ್ಚ ಕಲಾಃ ಶರೀರಂ ಚ ; ಏತೇನ ಆಕಾಶಸ್ಯಾಪಿ ಶರೀರಾಧಾರತ್ವಮ್ ಆನುಪ ಪನ್ನಂ ಕಿಮುತ ಆಕಾಶಕಾರಣಸ್ಯ ಪುರುಷಸ್ಯ ! ತಸ್ಮಾತ್ ಅಸಮಾನೋ ದೃಷ್ಟಾನ್ತಃ ।

(ಭಾಷ್ಯಾರ್ಥ)

(ಆಕ್ಷೇಪ) :- ಶ್ರುತಿಪ್ರಮಾಣದಿಂದ ನೋಡಿದರೆ, ಕುಂಡದಲ್ಲಿ ಎಗಚೀ ಕಾಯಿಗಳಿರುವಂತೆ ಪುರುಷನೂ ಶರೀರದೊಳಗೆ ಆಡಕವಾಗಿರಬೇಕಲ್ಲವೆ ?

(ಪರಿಹಾರ) :- ಹಾಗಲ್ಲ. ಏಕೆಂದರೆ (ಅವನು) ಪ್ರಾಣವೇ ಮುಂತಾದ ಕಲೆಗಳಿಗೆ ಕಾರಣನಾಗಿರುತ್ತಾನೆ. ಶರೀರದಷ್ಟೇ ಅಳತೆಯುಳ್ಳವನು ಪ್ರಾಣ, ಶ್ರದ್ಧೆ-ಮುಂತಾದ ಕಲೆಗಳಿಗೆ ಕಾರಣತ್ವವನ್ನು ಹೊಂದುವದಕ್ಕೆ ಶಕ್ತನಾಗಲಾರನಷ್ಟೆ. ಶರೀರವು ಕಲೆಗಳ ಕಾರ್ಯವಾಗಿರುವದರಿಂದಲೂ (ಹೀಗೆಂದು ತಿಳಿಯಬೇಕು). ಏಕೆಂದರೆ ಶರೀರವು ಪುರುಷನ ಕಾರ್ಯವಾಗಿರುವ ಕಲೆಗಳ ಕಾರ್ಯವಾಗಿದ್ದುಕೊಂಡೇ ತನ್ನ ಕಾರಣಕ್ಕೂ ಕಾರಣನಾಗಿರುವ ಪುರುಷನನ್ನು ಕುಂಡವು ಎಗಚೀಕಾಯಿಗಳನ್ನು (ಒಳಗೊಳ್ಳುವಂತೆ)[4] ತನ್ನೊಳಗೆ ಇಟ್ಟುಕೊಳ್ಳಲಾರದು.

(ಆಕ್ಷೇಪ) :- ಬೀಜವೃಕ್ಷಾದಿಗಳಂತೆ ಇರಬಹುದಲ್ಲ ! (ಹೇಗೆಂದರೆ) ಬೀಜದ ಕಾರ್ಯವು ಮರವು; ಆದರೆ ಕಾರ್ಯವಾದ ಮಾವಿನಹಣ್ಣೇ ಮುಂತಾದದ್ದು ತನ್ನ ಕಾರಣಕ್ಕೂ ಕಾರಣವಾಗಿರುವ ಬೀಜವನ್ನು ಹೇಗೆ ತನ್ನೊಳಗೆ ಇಟ್ಟುಕೊಂಡಿರು

---

1. 'ಕಾರಣಬೀಜಾತ್' ಎಂದು ಆ॥ ಪಾಠ.

2. ಜ್ಞಾನರೂಪನಾದ ಆತ್ಮನು ಅದ್ವಿತೀಯನು, ನಿತ್ಯನು- ಎಂಬುದು ಪುರುಷನು ಶರೀರದ ಅಳತೆಗೆ ಕಟ್ಟುಬಿದ್ದಿರುತ್ತಾನೆಂದು ಹೇಳುವ ಶ್ರುತಿಗೆ ವಿರುದ್ಧವಲ್ಲವೆ ?

3. ಶ್ರುತಿಯು ವಾಕ್ಯಶೇಷದಲ್ಲಿ ಈ ಪುರುಷನಿಂದ ಕಲೆಗಳು ಉಂಟಾಗುವವೆಂದು ಹೇಳಿರುವದರಿಂದ ಪುರುಷನು ಕಲೆಗಳಿಂದ ಪರಿಚ್ಛಿನ್ನನಾಗಲಾರನು.

4. 'ಕುಣ್ಡಬದರವತ್' ಎಂಬುದು 'ಕುಣ್ಡೇ ಬದರವತ್' ಎಂದೂ, 'ಕುಣಡ ಬದರವಿವ' ಎಂಬುದು 'ಕುಣ್ಡಂ ಬದರವಿವ' ಎಂದೂ ಇದ್ದರೆ ದೃಷ್ಟಾಂತವು ಇನ್ನೂ ಸ್ಪಷ್ಟವಾಗುವದು.

ವದೋ ಹಾಗೆ ಶರೀರವು ತನ್ನ ಕಾರಣಕ್ಕೂ ಕಾರಣವಾಗಿರುವ ಪುರುಷನನ್ನು ತನ್ನೊಳಗೆ ಇಟ್ಟುಕೊಳ್ಳಬಹುದಲ್ಲ!

(ಪರಿಹಾರ) :– ಹಾಗಲ್ಲ, ಏಕೆಂದರೆ (ಅದು) ಬೇರೆಯಾಗಿರುತ್ತದೆ, ಸಾವಯವವಾಗಿಯೂ ಇರುತ್ತದೆ. (ಇದರ ವಿವರ) : ದೃಷ್ಟಾಂತದಲ್ಲಿ ಕಾರಣವಾದ ಬೀಜಕ್ಕಿಂತ ಮರದ ಹಣ್ಣಿನಿಂದ ಆಗಿರುವ ಬೀಜಗಳು ಬೇರೆಯೇ ಆಗಿರುತ್ತವೆ : ಆದರೆ ದಾರ್ಷ್ಟಾಂತಿಕದಲ್ಲಿ ತನ್ನ ಕಾರಣಕ್ಕೂ ಕಾರಣನಾಗಿರುವ ಅದೇ ಪುರುಷನನ್ನೇ ಶರೀರದೊಳಗೆ ಅಡಕಮಾಡಿಕೊಂಡಿರುತ್ತದೆ ಎಂದು ಶ್ರುತಿಯಲ್ಲಿದೆ. (ಇದಲ್ಲದೆ) ಬೀಜ, ವೃಕ್ಷ ಮುಂತಾದವುಗಳು ಅವಯವಗಳುಳ್ಳವಾಗಿರುವದರಿಂದ (ಅವುಗಳಲ್ಲಿ) ಒಂದು ಆಧಾರವೂ ಇನ್ನೊಂದು ಆಧೇಯವೂ ಆಗಿರಬಹುದು. ಆದರೆ ಪುರುಷನಿಗೆ ಅವಯವಗಳಿಲ್ಲ; ಕಲೆಗಳಿಗೆ ಅವಯವಗಳಿವೆ, ಶರೀರಕ್ಕೂ ಇವೆ. (ಆದ್ದರಿಂದ ಅಲ್ಲಿ ಆಧಾರಾಧೇಯಭಾವವಿರಲಾರದು)[1]. ಈ ಕಾರಣದಿಂದಲೇ[2] ಆಕಾಶವು ಕೂಡ ಶರೀರವೆಂಬ ಆಧಾರದಲ್ಲಿದೆ ಎನ್ನುವದು ಹೊಂದುವಂತಿಲ್ಲ. (ಹೀಗಿರುವಲ್ಲಿ) ಆಕಾಶಕ್ಕೂ ಕಾರಣನಾಗಿರುವ ಪುರುಷನು (ಅದರೊಳಗೆ) ಇರಲಾರನೆಂಬುದನ್ನು ಹೇಳತಕ್ಕದ್ದೇನು ?[4] ಆದ್ದರಿಂದ (ನೀವು ಕೊಟ್ಟ) ದೃಷ್ಟಾಂತವು ಸಮನಲ್ಲ.

(ಭಾಷ್ಯ)

೯೭. ಕಿಂ ದೃಷ್ಟಾನ್ತೇನ ? ವಚನಾತ್ ಸ್ಯಾತ್ ಇತಿ ಚೇತ್ ; ನ ; ವಚನಸ್ಯ ಆಕಾರಕತ್ವಾತ್ | ನ ಹಿ ವಚನಂ ವಸ್ತುನೋಽನ್ಯಥಾಕರಣೇ ವ್ಯಾಪ್ರಿಯತೇ | ಕಿಂ ತರ್ಹಿ ಯಥಾಭೂತಾರ್ಥಾವದ್ಯೋತನೇ | ತಸ್ಮಾತ್ ಅನ್ತಃ ಶರೀರೇ ಇತ್ಯೇತದ್ ವಚನಂ 'ಅಣ್ಡಸ್ಯಾನ್ತರ್ಯೋಮ' ಇತಿವತ್[5] ದ್ರಷ್ಟವ್ಯಮ್ ||

---

1. ಪುರುಷರು ಅನೇಕರೆಂದಾಗಲಿ, ಕಲೆಗಳಿಗೆ ಕಾರಣನಾಗಿರುವ ಪುರುಷನೂ ಶರೀರದೊಳಗಿರುವ ಪುರುಷನೂ ಬೇರೆಯೆಂದಾಗಲಿ ಶ್ರುತಿಯಲ್ಲಿಲ್ಲ. ಹೀಗೆ ಶರೀರದೊಳಗೆ ಪುರುಷನಿದಾನೆ ಎಂಬ ವಾಕ್ಯವು ಮುಂದಿನ ವಾಕ್ಯಕ್ಕೆ ಹೊಂದಿಕೆಯಾಗುವದಿಲ್ಲವಾದ್ದರಿಂದ ಈ ವಾಕ್ಯಕ್ಕೆ ಅಕ್ಷರಾರ್ಥವನ್ನು ತೆಗೆದುಕೊಳ್ಳದಾರದು ಎಂದು ಭಾವ.

2. ನಿರವಯವವಸ್ತುವಿಗೆ ಸಾವಯವವಾದದ್ದು ಆಧಾರವಾಗಲಾರದು.

3. ನಿರವಯವವಾಗಿರುವದರಿಂದಲೇ.

4. ನಿಜವಾಗಿ ಅವನೇ ಆಕಾಶಾದಿರೂಪಿಯಾಗಿ ಎಲ್ಲಕ್ಕೂ ಆಧಾರವಾಗಿರುತ್ತಾನೆ, ಏಕೆಂದರೆ ಅವನಲ್ಲಿ ಎಲ್ಲವೂ ಕಲ್ಪಿತವಾಗಿರುತ್ತದೆ.

5. "ಇತಿವಚ್ಚ" ಎಂಬ ಪಾಠದಲ್ಲಿ "ಚ" ಹೆಚ್ಚು.

(ಭಾಷ್ಯಾರ್ಥ)

(ಆಕ್ಷೇಪ) :- ದೃಷ್ಟಾಂತದಿಂದೇನು[1] " ವಚನದಿಂದಲೇ (ಶರೀರವು ಆಧಾರ) ವಾಗಬಹುದಲ್ಲವೆ ?

(ಪರಿಹಾರ) :- ಹಾಗಲ್ಲ. ಏಕೆಂದರೆ ವಚನವು ಕಾರಕವಲ್ಲ. ವಚನಕ್ಕೆ ಇರುವದನ್ನು ಬೇರೆಯಾಗಿ ಮಾಡುವದು ಕೆಲಸವಲ್ಲ, ಮತ್ತೇನೆಂದರೆ— ಪದಾರ್ಥವು ಹೇಗಿರುವದೋ ಹಾಗೆ ಅದನ್ನು ತೋರಿಸಿಕೊಡುವದೇ (ಅದರ ಕೆಲಸವು)[2]. ಆದ್ದರಿಂದ "ಶರೀರದೊಳಗೆ" ಎಂಬ (ಮಾತನ್ನು) 'ಪೊಟ್ಟಿಯಲ್ಲಿ ಆಕಾಶವಿರುವದು' ಎಂಬಂತೆ[3] ಅರಿಯಬೇಕು.

(ಭಾಷ್ಯ)

೯೮. ಉಪಲಬ್ಧಿನಿಮಿತ್ತತ್ವಾಚ್ಚ | ದರ್ಶನಶ್ರವಣಮನನವಿಜ್ಞಾನಾದಿ ಲಿಙ್ಗೈಃ ಅನ್ತಃಶರೀರೇ ಪರಿಚ್ಛಿನ್ನ ಇವ ಹಿ ಉಪಲಭತೇ ಪುರುಷಃ ಉಪಲಭ್ಯತೇ ಚಾತ್ರ[4] ; ಅತ ಉಚ್ಯತೇ 'ಅನ್ತಃಶರೀರೇ ಸೋಮ್ಯ ಸ ಪುರುಷಃ' ಇತಿ | ನ ಪ್ರಸರಾಕಾಶಕಾರಣಭೂತಃ ಸನ್ ಕುಣ್ಡಬದರವತ್ ಶರೀರಪರಿಚ್ಛಿನ್ನಃ ಇತಿ ಮನಸಾಪಿ ಇಚ್ಛತಿ ವಕ್ತುಂ ಮೂಢೋಽಪಿ | ಕಿಮುತ ಪ್ರಮಾಣಭೂತಾ ಶ್ರುತಿಃ ||

(ಭಾಷ್ಯಾರ್ಥ)

ತಿರಿವಿಗೆ ನಿಮಿತ್ತವಾಗಿರುವದರಿಂದಲೂ (ಹೀಗೆಂದು ಹೇಳಿರುತ್ತದೆ). ಪುರುಷನು ನೋಡುವದು, ಕೇಳುವದು, ಯೋಚಿಸುವದು, ಗೊತ್ತಾಗಿ ಅರಿಯುವದು-ಮುಂತಾದ ಲಿಂಗಗಳಿಂದ ಶರೀರದೊಳಗಡೆಯಲ್ಲಿ ಅಳತೆಗೆ ಸಿಕ್ಕಿರುವಂತೆ ಕಾಣುತ್ತಿರುತ್ತಾನೆ, ಮತ್ತು ಅಲ್ಲಿಯೇ (ತನ್ನ ರೂಪದಲ್ಲಿ) ಅರಿಯಲ್ಪಡು

---

1. ಶ್ರುತಿಯು ಸ್ಪಷ್ಟವಾಗಿ ಹೇಳಿರುವದರಿಂದ ದೃಷ್ಟಾಂತವು ಹೊಂದದಿದ್ದರೂ ಶರೀರದೊಳಗೆ ಪುರುಷನಿದಾನೆಂದು ಹೇಳಬಹುದಲ್ಲ ! ಎಂದು ಭಾವ.

2. ವಚನವು ಪ್ರಮಾಣವಾದ್ದರಿಂದ ಅದು ಅನುಭವವನ್ನುಂಟುಮಾಡುವದಾಗಿರಬೇಕು. ಅನುಭವಕ್ಕೆ ವಿರುದ್ಧವಾಗಿ ವಚನವು ಎಂದಿಗೂ ಹೇಳಲಾರದು. ಕೈ.ಭಾ. ೧-೧೦ ಉಪಸಂಹಾರಭಾಷ್ಯ ಬ್ರ. ಭಾ. ೩-೨-೩೦, ೩-೪ ಉಪಸಂಹಾರ; ಗೀತಾ. ಭಾ. ೧೮-೧೬

3. "ಪೊಟ್ಟೆಯಲ್ಲಿ ಆಕಾಶವಿದೆ" ಎಂಬುದು ಮುಖ್ಯಾರ್ಥದಲ್ಲಿ ಹೊಂದುವದಿಲ್ಲ; ಮತ್ತು ಆಕಾಶವೇ ಪರಂಪರೆಯಿಂದ ಪೊಟ್ಟೆಯಾಗಿರುತ್ತದೆ.

4. ಇದು ವಾ॥ ಕಾ॥ ಪಾಠ; "ಉಪಲಭ್ಯತೇ ಹ" ಎಂದಿಷ್ಟೇ ಆ॥.

5. ಹೊಗೆಯಿಂದ ಬೆಂಕಿಯನ್ನು ಅರಿಯುವಂತೆ ದೃಷ್ಟ್ಯಾದಿಗಳಿಂದ ಪುರುಷನನ್ನು ಈ ಶರೀರದಲ್ಲಿ ಪರಿಚ್ಛಿನ್ನರೂಪದಿಂದ ಅರಿಯುವರು. ಮುಂ.ಭಾ. ೩-೨-೧, ಗೀ. ಭಾ. ೧೫-೧೦. ನಿಜವಾಗಿ ನೋಡಿದರೆ ಆತ್ಮನಿಗೆ ಈ ದೃಷ್ಟ್ಯಾದಿಗಳು ಲಿಂಗವಾಗಿವೆ ಎಂಬುದೇನೂ ಶ್ರುತಿಯಲ್ಲಿ ವಿವಕ್ಷಿತವಲ್ಲ. ಸೂ. ಭಾ. ೧-೧-೬ರಲ್ಲಿ "ವಕ್ತಾರಂ ವಿದ್ಯಾತ್" ಎಂಬುದರ ವಿವರವನ್ನು ನೋಡಿರಿ.

ತ್ತಾನೆ.[1] ಆದ್ದರಿಂದ "ಎಲೈ ಸೋಮ್ಯ ನೀನು, ಆ ಪುರುಷನು ಶರೀರದೊಳಗೆ ಇದ್ದು ತ್ತಾನೆ" ಎಂದು ಹೇಳಿರುತ್ತದೆ ಇಷ್ಟೇ ಹೊರತು ಆಕಾಶಕ್ಕೂ ಕಾರಣನಾಗಿರುವ (ಆತ್ಮನು) ಕುಂಡದಲ್ಲಿ ಎಗಚಿಕಾಯಿಗಳು (ಅಡಕವಾಗಿರುವಂತೆ ಶರೀರದಲ್ಲಿ ಅಡಕ ನಾಗಿರುತ್ತಾನೆಂದು ಹೇಳುವದಕ್ಕೆ ಮೂಢನಿಗೆಕೂಡ ಮನಸ್ಸಿನಲ್ಲಿಯೂ ಒಪ್ಪ ಲಾರದು ; ಹೀಗಿರುವಲ್ಲಿ ಪ್ರಮಾಣವಾದ ಶ್ರುತಿಯು (ಹಾಗೆಂದು ಹೇಳುವದಕ್ಕೆ ಹೊರಡಲಾರದೆಂದು) ಹೇಳತಕ್ಕದ್ದೇನು ?

ಪುರುಷನಿಂದ ಕಲೆಗಳ ಸೃಷ್ಟಿ

(ಭಾಷ್ಯ)

೯. "ಯಸ್ಮಿನ್ನೇತಾಃ ಷೋಡಶಕಲಾಃ ಪ್ರಭವನ್ತಿ" ಇತ್ಯುಕ್ತಃ ಪುರುಷ ವಿಶೇಷಣಾರ್ಥಃ[2] ಕ-ಲಾನಾಂ ಪ್ರಭವಃ | ಸ ಚ ಅನ್ಯಾರ್ಥೋಽಪಿ ಶ್ರುತಃ ಕೇನ ಕ್ರಮೇಣ ಸ್ಯಾತ್ ಇತ್ಯತಃ ಇದಮುಚ್ಯತೇ ' ಚೇತನಪೂರ್ವಿಕಾ ಚ ಸೃಷ್ಟಿಃ ಇತ್ಯೇವಮರ್ಥಂ ಚ ||

(ಭಾಷ್ಯಾರ್ಥ)

"ಯಾವಾತನಲ್ಲಿ ಈ ಹದಿನಾರು ಕಲೆಗಳು ಹುಟ್ಟುತ್ತವೆಯೋ" ಎಂದು ಹೇಳಿರುವ ಕಲೆಗಳ ಉತ್ಪತ್ತಿಯು ಪುರುಷನಿಗೆ ವಿಶೇಷಣವನ್ನು ತಿಳಿಸುವದ ಕ್ಕಾಗಿ (ಬಂದಿರುತ್ತದೆ)[3]. (ಹೀಗೆ) ಬೇರೊಂದು ಪ್ರಯೋಜನಕ್ಕಾಗಿ ಶ್ರುತಿಯಲ್ಲಿ ಹೇಳಿದ್ದಾದರೂ ಇದು ಯಾವ ಕ್ರಮದಿಂದ[4] ಆಗುತ್ತದೆ ಎಂಬುದನ್ನು ತಿಳಿಸುವದ ಕ್ಕಾಗಿಯೂ ಚೇತನಪೂರ್ವಕವಾಗಿಯೇ[5] ಸೃಷ್ಟಿಯಾಗುತ್ತದೆ ಎಂದು ತಿಳಿಸುವದ ಕ್ಕಾಗಿಯೂ ಹೇಳಿರುತ್ತದೆ :—

ಸ ಈಕ್ಷಾಂಚಕ್ರೇ | ಕಸ್ಮಿನ್ನಹಮುತ್ಕ್ರಾನ್ತೇ ಉತ್ಕ್ರಾನ್ತೋ
ಭವಿಷ್ಯಾಮಿ ಕಸ್ಮಿನ್ ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮೀತಿ ||೩||

---

1. ಅವನೆ ಪರಮಾರ್ಥಸ್ವರೂಪವನ್ನು ಹೃದಯವಲ್ಲಿರುವ ಬುದ್ಧಿಗೆ ಸಾಕ್ಷಿಯಾಗಿರುವನೆಂದು ಈ ಶರೀರದಲ್ಲಿಯೇ ಜಿಜ್ಞಾಸುಗಳು ಅರಿತುಕೊಳ್ಳಬೇಕಾಗುವದು. ಮುಂ. ಭಾ. ೩-೨-೬, ತೈ. ಭಾ. ೨-೦.

2 "ಇತ್ಯುಕ್ತಃ ಪುರುಷವಿಶೇಷಣಾರ್ಥವಾ" ಎಂಬ ಪಾಠದಲ್ಲಿ ಸ ಚ ಎಂಬುದಕ್ಕೆ ಪರಾಮೃಷ್ಟವಾದದ್ದು ಯಾವದೂ ಇಲ್ಲದೆ ಹೋಗುತ್ತದೆ ; ಆದ್ದರಿಂದ ಈ ವಾ। ಕಾ। ಪಾಠವನ್ನು ಅನುಸರಿಸಿದೆ.

3. ಪುರುಷನಿಗಿಂತ ಬೇರೆಯಾಗಿ ಕಲೆಗಳಿಲ್ಲ, ಅವನು ಅದ್ವಿತೀಯನು ಎಂದು ತಿಳಿಸುವದಕ್ಕೆ ಬಂದಿದೆ. ಶ್ರುತಿಗೆ ಸೃಷ್ಟಿಯೆಲ್ಲಿ ತಾತ್ಪರ್ಯವಿಲ್ಲ. ಸೂ. ಭಾ. ೩-೧-೩೭ ; ೪-೩-೧೪ ; ಮೂಂ. ಕಾ. ಭಾ. ೩-೧೫ ; ಛಾಂ. ಭಾ. ೬-೪-೩ ; ಬೃ. ಭಾ. ೧-೪-೭.

4. ಈ ಕ್ರಮವು ಉಪಾಸನೆಗೂ ಲಯಚಿಂತನೆಗೂ ಉಪಯೋಗವಾಗುತ್ತದೆ. ಸೂ. ಭಾ. ೩-೧-೧೪, ೩-೩-೧೪.

5. ಚೇತನರೂಪವಾದ ಕಾರಣದಿಂದಲೇ.

೩. ಅವನು "ಯಾವನು ಉತ್ಕ್ರಾಂತನಾದರೆ ನಾನು ಉತ್ಕ್ರಾಂತನಾಗುವೆನು, ಯಾವನು ನಿಂತರೆ ನಾನು ನಿಂತುಕೊಂಡಿರುವೆನು ?" ಎಂದು (ಆಲೋಚಿಸಿ) ನೋಡಿದನು.

(ಭಾಷ್ಯ)

೧೦೦. ಸಃ ಪುರುಷಃ ಷೋಡಶಕಲಃ ಪ್ರಷ್ಟೋ ಯೋ ಭರದ್ವಾಜೇನ | ಸ ಈಕ್ಷಾಂಚಕ್ರೇ ಈಕ್ಷಣಂ ದರ್ಶನಂ ಚಕ್ರೇ ಕೃತವಾನ್ ಇತ್ಯರ್ಥಃ | ಸೃಷ್ಟಿಫಲ ಕ್ರಮಾದಿನಿಷಯಮಮ್ ; ಕಥಮಿತಿ ? ಉಚ್ಯತೇ | ಕಸ್ಮಿನ್ ಕರ್ತೃವಿಶೇಷೇ ದೇಹಾತ್ ಉತ್ಕ್ರಾಮತ್ಯೇ ಉತ್ಕ್ರಾಮ್ಯೋ ಭವಿಷ್ಯಾಮಿ ಅಹಮೇವ | ಕಸ್ಮಿನ್ ವಾ ಶರೀರೇ ಪ್ರತಿಷ್ಠಿತೇ ಅಹಂ ಪ್ರತಿಷ್ಠಾಸ್ಯಾಮಿ ಪ್ರತಿಷ್ಠಿತಃ ಸ್ಯಾಮ್ ಇತ್ಯರ್ಥಃ |

(ಭಾಷ್ಯಾರ್ಥ)

ಅವನು ಎಂದರೆ ಭರದ್ವಾಜನು ಕೇಳಿದ ಹದಿನಾರು ಕಲೆಗಳ ಪುರುಷನು. ಅವನು ನೋಡಿದನು ಎಂದರೆ ಸೃಷ್ಟಿಯ ಫಲ, ಕ್ರಮ–ಮುಂತಾದದ್ದರ ವಿಷಯದಲ್ಲಿ ಈಕ್ಷಣವನ್ನು ದರ್ಶನವನ್ನು (ಆಲೋಚನೆಯನ್ನು)[3] ಮಾಡಿದನು, ಮಾಡಿದವನಾದನು ಎಂದರ್ಥ. ಹೇಗೆ ? ಎಂದರೆ (ಶ್ರುತಿ) ಹೇಳುತ್ತದೆ : ಯಾವನು ಎಂದರೆ (ಯಾವ) ಒಬ್ಬಾನೊಬ್ಬ ಕರ್ತೃವು ದೇಹದಿಂದ ಹೊರಟರೆ ನಾನೇ ಹೊರಟುವನಾಗುವೆನು ?[4] ಅಥವಾ ಯಾವದು ಶರೀರದಲ್ಲಿ ನಿಂತಿದ್ದರೆ (ನಾನೂ) ನಿಂತಿರುವನಾಗುವೆನು ?– ಎಂದರ್ಥ.

ಆತ್ಮನು ಸೃಷ್ಟಿಕರ್ತನೆಂಬ ಬಗ್ಗೆ ಚರ್ಚೆ

(ಭಾಷ್ಯ)

೧೦೧. ನನು ಆತ್ಮಾ ಅಕರ್ತಾ, ಪ್ರಧಾನಂ ಕರ್ತೃ | ಅತಃ ಪುರುಷಾರ್ಥಂ ಪ್ರಯೋಜನಮ್ ಉಪರೀಕೃತ್ಯ ಪ್ರಧಾನಂ ಪ್ರವರ್ತತೇ ಮಹದಾದ್ಯಾಕಾರೇಣ |

1. ಈ ಮೊದಲು ವಾ। ಕಾ। ಪಾಠಗಳಲ್ಲಿದೆ, ಆ॥ ಪಾಠದಲ್ಲಿಲ್ಲ.

2. ಇಂಥ ಕ್ರಮದಲ್ಲಿ ಸೃಷ್ಟಿಮಾಡಬೇಕು. ಇಂಥ ಪ್ರಯೋಜನಕ್ಕಾಗಿ ಮಾಡುವೆನು –ಎಂದು ಮುಂತಾಗಿ.

3. ಈಕ್ಷಧಾತುವಿಗೆ ನೋಡುವದು ಎಂದರ್ಥ. ಆದ್ದರಿಂದ ದರ್ಶನವೆಂಬರ್ಥವನ್ನೂ ಭಾಷ್ಯದಲ್ಲಿ ಕೊಟ್ಟಿದೆ ; ಇದಕ್ಕೆ ಆಲೋಚನೆಯೆಂಬುದೇ ಪ್ರಕೃತವಾದ ಅರ್ಥ.

4. ಇಂಥ ಉಪಾಧಿಯು ಯಾವದು ? ಎಂದು ಅಭಿಪ್ರಾಯ. ಆತ್ಮನಿಗೆ ಸ್ವತಃ ಉತ್ಕ್ರಾಂತಿಯಿಲ್ಲ, ಪ್ರಾಣವೆಂಬ ಉಪಾಧಿಯಿಂದಲೇ ಉತ್ಕ್ರಾಂತಿಯಾಗುತ್ತದೆ. ಇದರಂತೆ ಲೋಕಾಂತರಕ್ಕೆ ಹೋಗುವದು, ಅಲ್ಲಿಂದ ಮರಳಿಬರುವದು–ಇವೆಲ್ಲವೂ ಉಪಾಧಿಯಿಂದಲೇ ಆಗುತ್ತದೆ ಎಂದು ಸೂ. ಭಾ. ೨-೩-೨೯ರಲ್ಲಿ ನಿರ್ಣಯಿಸಿದೆ. ಮಾಂ. ಶಾ. ಭಾ. ೩-೬ನ್ನೂ ನೋಡಿ.

ತತ್ರ ಇದಮನುಪಪನ್ನಂ ಪುರುಷಸ್ಯ ಸ್ವಾತಂತ್ರ್ಯೇಣ ಈಕ್ಷಾಪೂರ್ವಕಂ ಕರ್ತೃತ್ವ ವಚನಂ ಸತ್ತ್ವಾದಿಗುಣಸಾಮ್ಯೇ ಪ್ರಧಾನೇ ಪ್ರಮಾಣೋಪಪನ್ನೇ ಸೃಷ್ಟಿಕರ್ತರಿ ಸತಿ, ಈಶ್ವರೇಚ್ಛಾನುವರ್ತಿಷು ವಾ ಪರಮಾಣುಷು ಸತ್ಸು | ಆತ್ಮನೋಽಸಿ ಏಕತ್ವೇನ ಕರ್ತೃತ್ವೇ ಸಾಧನಾಭಾವಾತ್ | ಆತ್ಮನ ಆತ್ಮನಿ ಅನರ್ಥಕರ್ತೃತ್ವಾನುಪಪತ್ತೇಶ್ಚ | ನ ಹಿ ಚೇತನಾವಾನ್ ಬುದ್ಧಿಪೂರ್ವಕಾರೀ ಆತ್ಮನೋಽನರ್ಥಂ ಕುರ್ಯಾತ್ | ತಸ್ಮಾತ್ ಪುರುಷಾರ್ಥೇನ ಪ್ರಯೋಜನೇನ ಈಕ್ಷಾಪೂರ್ವಕಮಿವ ನಿಯತಕ್ರಮೇಣ ಪ್ರವರ್ತಮಾನೇ ಅಚೇತನೇ ಪ್ರಧಾನೇ ಚೇತನವದುಪಚಾರೋಽಯಂ "ಸ ಈಕ್ಷಾಂಚಕ್ರೇ" ಇತ್ಯಾದಿಃ | ಯಥಾ ರಾಜ್ಞಃ ಸರ್ವಾರ್ಥಕಾರಿಣಿ ಭೃತ್ಯೇ "ರಾಜಾ" ಇತಿ, ತದ್ವತ್ ||

(ಭಾಷ್ಯಾರ್ಥ)

(ಪೂರ್ವಪಕ್ಷ) :–ಆತ್ಮನು ಕರ್ತೃವಲ್ಲ, ಪ್ರಧಾನವೇ ಕರ್ತೃ. ಆದ್ದರಿಂದ ಪುರುಷನಿಗೆ ಪ್ರಯೋಜನವುಂಟಾಗಲೆಂದು ಇಟ್ಟುಕೊಂಡು ಪ್ರಧಾನವು ಮಹತ್ತು ಮುಂತಾದ ರೂಪದಲ್ಲಿ ಮುಂದುವರಿಯುತ್ತಿರುವದು. ಹೀಗಿರುವಲ್ಲಿ ಪುರುಷನು ತಾನೇ ಆಲೋಚನೆಮಾಡಿ (ಸೃಷ್ಟಿ)ಮಾಡುತ್ತಾನೆಂದು (ಹೇಳುವ) ಈ (ಅಭಿಪ್ರಾಯವು) ಸರಿಯಾಗುವದಿಲ್ಲ. ಸತ್ತ್ವಾದಿಗುಣಗಳ ಸಾಮ್ಯವಾದ ಪ್ರಧಾನವು ಸೃಷ್ಟಿ ಮಾಡುವದೆಂದು)[1] ಅಥವಾ ಈಶ್ವರನ ಇಚ್ಛೆಗೆ ಅನುಸಾರವಾಗಿ ಪರಮಾಣುಗಳು (ಸೃಷ್ಟಿಮಾಡುವವೆಂದು)[2] ಪ್ರಮಾಣದಿಂದ ಹೊಂದುತ್ತಿರುವಾಗ (ಹೀಗೇಕೆ ಒಪ್ಪಬೇಕು)? ಇದಲ್ಲದೆ (ನಿಮ್ಮ ಮತದಲ್ಲ) ಆತ್ಮನು ಒಬ್ಬನೇ ಆಗಿರುವದರಿಂದ ಅವನಿಗೆ (ಸೃಷ್ಟಿಯನ್ನು) ಮಾಡ್ಯವದಕ್ಕೆ ಸಾಧನವಿರುವದಿಲ್ಲ.* ಮತ್ತು ಆತ್ಮನು ತನಗೆತಾನೇ ಅನರ್ಥವನ್ನುಂಟುಮಾಡಿಕೊಳ್ಳಲೂ ಆರನು ; ಜ್ಞಾನವುಳ್ಳವನಾಗಿ ಬುದ್ಧಿಪೂರ್ವಕವಾಗಿ

---

1. ಪುರುಷನಿಗೆ ಮೋಕ್ಷವೆನ್ನುಂಟುಮಾಡುವದಕ್ಕಾಗಿ ಪ್ರಧಾನವು ಮಹದಾದಿಗಳ ರೂಪದಿಂದ ಪರಿಣಮಿಸುತ್ತದೆ ಎಂಬುದು ಸಾಂಖ್ಯಸಿದ್ಧಾಂತ. (ಸಾಂ. ಕಾ. ೫೬–೫೮) ಈ ಸಿದ್ಧಾಂತದ ವಿವರವನ್ನು ಸಾಂಖ್ಯಕಾರಿಕಾ, ತತ್ತ್ವಸಮಾಸ–ಈ ಗ್ರಂಥಗಳಿಂದ ತಿಳಿದು ಕೊಳ್ಳಬೇಕು ಸೂ. ಭಾ. ೨–೨–೧ರಿಂದ ೧೦ರವರೆಗಿನ ಭಾಗದಲ್ಲಿ ಇವನ್ನು ಖಂಡಿಸಿದೆ.

2. ಪರಮಾಣುಗಳು ಈಶ್ವರೇಚ್ಛೆಯಿಂದ ಜಗತ್ತಿಗೆ ಕಾರಣವಾಗುವವೆಂಬುದು ವೈಶೇಷಿಕರ ಮತ. ಇದನ್ನು ಸೂ. ಭಾ. ೨–೨–೧೨ರಿಂದ ೧೭ರವರೆಗಿನ ಗ್ರಂಥಭಾಗದಲ್ಲಿ ಖಂಡಿಸಿದೆ.

3. ಅನುಮಾನಪ್ರಮಾಣದಿಂದ ಎಂದರ್ಥ. ಸಾಂಖ್ಯರಿಗೂ, ವೈಶೇಷಿಕರಿಗೂ ಅನುಮಾನವೇ ಮುಖ್ಯಪ್ರಮಾಣವು. ತರ್ಕಶುದ್ಧವಾದ ಮತವನ್ನು ಬಿಟ್ಟು ತರ್ಕವಿರುದ್ಧವಾದ ವೇದಾಂತವನ್ನೇಕೆ ಒಪ್ಪಬೇಕು ?–ಎಂದು ಆಕ್ಷೇಪ.

4. ಈ ಪೂರ್ವಪಕ್ಷವನ್ನೂ ಇದರ ಸಮಾಧಾನವನ್ನೂ ಸೂ. ಭಾ. ೨–೩–೨೫, ೩೫ರಲ್ಲಿ ನೋಡಿ.

ಕೆಲಸವನ್ನಾಡುವನೆನು ತನಗೆ ತಾನೇ ಅನರ್ಥವನ್ನುಂಟುಮಾಡಿಕೊಳ್ಳಲಾರ ನ್ನಲೆ ?[1] ಅದ್ದರಿಂದ ಪುರುಷಾರ್ಥವೆಂಬ ಪ್ರಯೋಜನಕ್ಕಾಗಿ ಆಲೋಚನೆ ಮಾಡಿಕೊಂಡು ನಡೆಯುತ್ತಿದೆಯೋ ಎಂಬಂತೆ ಗೊತ್ತಾದ ಕ್ರಮದಲ್ಲಿ ಪ್ರವರ್ತಿಸುತ್ತಿರುವದರಿಂದ ಅಚೇತನವಾದ ಪ್ರಧಾನವನ್ನು ಚೇತನದಂತೆ (ಇಟ್ಟು ಕೊಂಡು) ಉಪಚಾರಕ್ಕಾಗಿ "ಅವನು ನೋಡಿದನು" ಎಂದು ಮುಂತಾಗಿ (ಶ್ರುತಿಯಲ್ಲಿ) ಹೇಳಿದೆ[2] (ಎಂದು ಒಪ್ಪಬೇಕು). ಅರಸನಿಗಾಗಿ ಎಲ್ಲಾ ಕೆಲಸವನ್ನೂ ಮಾಡುತ್ತಿರುವ ಅಧಿಕಾರಿಯನ್ನೇ ಹೇಗೆ ಅರಸನೆನ್ನುವರೋ ಅದರಂತೆಯೇ ಈ (ಪ್ರಯೋಗವನ್ನೂ) ಅರಿಯಬೇಕು.

(ಭಾಷ್ಯ)

೧೦೩. ನ ! ಆತ್ಮನೋ ಭೋಕ್ತೃತ್ವವತ್ ಕರ್ತೃತ್ವೋಪಪತ್ತೇಃ | ಯಥಾ ಸಾಙ್ಖ್ಯಸ್ಯ ಚಿನ್ಮಾತ್ರಸ್ಯ ಅಪರಿಣಾಮಿನೋಽಪಿ ಆತ್ಮನೋ ಭೋಕ್ತೃತ್ವಮ್, ತದ್ವತ್ ವೇದವಾದಿನಾಮಪಿ ಈಕ್ಷಾದಿಪೂರ್ವಕಂ ಜಗತ್ಕರ್ತೃತ್ವಮ್ ಉಪಪನ್ನಂ ಶ್ರುತಿಪ್ರಾಮಾಣ್ಯಾತ್ ॥

(ಭಾಷ್ಯಾರ್ಥ)

(ಸಿದ್ಧಾಂತಿ) :–ಹಾಗಲ್ಲ. ಏಕೆಂದರೆ ಆತ್ಮನಿಗೆ ಭೋಕ್ತೃತ್ವದಂತೆ ಕರ್ತೃತ್ವವೂ ಇರಬಹುದಾಗಿದೆ. ಬರಿಯ ಚೈತನ್ಯವಾಗಿಯೇ ಇರುವ ಯಾವ ಪರಿಣಾಮವನ್ನೂ ಹೊಂದುವ ಸ್ವಭಾವವಿಲ್ಲದ ಆತ್ಮನಿಗೆ ಭೋಕ್ತೃತ್ವವು (ಇರಬಹುದೆಂದು) ಹೇಗೆ ಸಾಂಖ್ಯನ (ಮತದಲ್ಲಿ ಒಪ್ಪಿದೆಯೋ) ಅದರಂತೆಯೇ ವೇದವಾದಿಗಳ ಪಕ್ಷದಲ್ಲಿ (ಆತ್ಮನು) ಆಲೋಚನೆಮಾಡುವದೇ ಮುಂತಾದವುಗಳಿಂದ ಕೂಡಿ ಜಗತ್ತನ್ನು ಸೃಷ್ಟಿಮಾಡುತ್ತಾನೆಂಬುದೂ ಶ್ರುತಿಪ್ರಾಮಾಣ್ಯದಿಂದ ಹೊಂದುತ್ತದೆ.

ಆತ್ಮನಲ್ಲಿರುವ ಕರ್ತೃತ್ವಭೋಕ್ತೃತ್ವಗಳು ಅವಿದ್ಯಕ

(ಭಾಷ್ಯ)

೧೦೪. ತತ್ರಾನ್ತರಪರಿಣಾಮಃ ಆತ್ಮನೋಽನಿತ್ಯತ್ವಾಶುದ್ಧತ್ವಾನೇಕತ್ವನಿಮಿತ್ತಮ್, ನ ಚಿನ್ಮಾತ್ರಸ್ವರೂಪವಿಕ್ರಿಯಾ | ಅತಃ ಪುರುಷಸ್ಯ ಸ್ವಾತ್ಮನ್ಯೇವ ಭೋಕ್ತೃತ್ವೇ ಚಿನ್ಮಾತ್ರಸ್ವರೂಪವಿಕ್ರಿಯಾ ನ ದೋಷಾಯ | ಭವತಾಂ ಪುನ

---

1. ಈ ಪೂರ್ವಪಕ್ಷವನ್ನೂ ಇದರ ಸಮಾಧಾನವನ್ನೂ ಸೂ. ಭಾ. ೨–೧–೩೧ರಿಂದ ೨ನೇ ಪರಿಚ್ಛೇದದ ಗ್ರಂಥದಲ್ಲಿ ನೋಡಿ.

2 ಈಕ್ಷಣವೆಂಬುದು ಮುಖ್ಯಾರ್ಥದಲ್ಲಿ ಹೊಂದುವದಿಲ್ಲವಾದ್ದರಿಂದ ಗೌಣಾರ್ಥದಲ್ಲಿ ಅದನ್ನು ಪ್ರಧಾನಕ್ಕೆ ಹೊಂದಿಸಿಕೊಳ್ಳಬೇಕೆಂದು ಭಾವ. ಸೂ. ಭಾ. ೧–೧–೫ರಿಂದ ೧೯ರ ವರೆಗಿನ ಗ್ರಂಥದಲ್ಲಿ ಈ ಪೂರ್ವಪಕ್ಷಸಿದ್ಧಾಂತಗಳ ವಿವರವನ್ನು ಕಾಣಬಹುದು. ಇಲ್ಲಿ ಮುಖ್ಯವಾದ ಪೂರ್ವಪಕ್ಷವು ಸಾಂಖ್ಯನದು ; ಇದನ್ನು ವೈಶೇಷಿಕಮತಕ್ಕಾದರೂ ಹೊಂದಿಸಿಕೊಳ್ಳಬಹುದೆಂಬುದನ್ನು ಸೂಚಿಸಲಾರೋಪವಾಗಿ ಹೇಳಿದೆ.

ಮೋದವಾದಿನಾಂ ಸೃಷ್ಟಿಕರ್ತೃತ್ವೇ ತತ್ತ್ವಾನ್ತರಪರಿಣಾಮ ಏವ ಇತಿ ಆತ್ಮ
ನೋಽನಿತ್ಯತ್ವಾದಿ ಸರ್ವದೋಷಪ್ರಸಙ್ಗಃ ಇತಿ ಚೇತ್ । ನ । ಏಕಸ್ಯಾಪ್ಯಾತ್ಮನಃ
ಅವಿದ್ಯಾವಿಷಯನಾಮರೂಪೋಪಾಧ್ಯನುಪಾಧಿಕೃತವಿಶೇಷಾಭ್ಯುಪಗಮಾತ್ ।
ಅವಿದ್ಯಾಕೃತನಾಮರೂಪೋಪಾಧಿನಿಮಿತ್ತೌ ಹಿ ವಿಶೇಷಃ ಅಭ್ಯುಪಗಮ್ಯತೇ
ಆತ್ಮನೋ ಬನ್ಧಮೋಕ್ಷಾದಿಶಾಸ್ತ್ರಕೃತಸಂವ್ಯವಹಾರಾಯ । ಪರಮಾರ್ಥತೋಽ
ನುಪಾಧಿಕೃತಂ ಚ ತತ್ತ್ವಮ್ ಏಕಮೇವಾದ್ವಿತೀಯಮ್ ಅಶೇಷಮನುಪಾ
ಖ್ಯೇಯಂ[1] ಸರ್ವೇತಾರ್ಕಿಕಬುದ್ಧ್ಯನವಗಾಹ್ಯಂ[2] ಹ್ಯಜಮಭಯಂ[3] ಶಿವಮ್
ಇಷ್ಯತೇ । ನ ತತ್ರ[4] ಕರ್ತೃತ್ವಂ ಭೋಕ್ತೃತ್ವಂ ವಾ ಕ್ರಿಯಾಕಾರಕಫಲಂ ವಾ
ಅಸ್ತಿ[5] । ಅವಿದ್ಯೈವೈತತ್ಕೃತತ್ವಾತ್ ಸರ್ವಭಾವಾನಾಮ್[6] ॥

(ಭಾಷ್ಯಾರ್ಥ)

(ಸಾಂಖ್ಯ) :—ಆತ್ಮನು ಬೇರೊಂದು ತತ್ತ್ವವಾಗಿಯೇ ಪರಿಣಮಿಸುವದು (ಅವನು) ಅನಿತ್ಯನು, ಅಶುದ್ಧನು, ಅನೇಕನು—ಎಂಬ (ದೋಷಗಳಿಗೆ) ಕಾರಣ ವಾಗುವದೇ ಹೊರತು ಚಿನ್ಮಾತ್ರಸ್ವರೂಪದಲ್ಲಿ ಆಗುವ ವಿಕಾರವು (ಹಾಗೆ ಯಾವ ದೋಷಕ್ಕೂ), ಕಾರಣವಾಗುವದಿಲ್ಲ.* ಆದ್ದರಿಂದ ಪುರುಷನಿಗೆ ಭೋಕ್ತೃತ್ವವನ್ನು (ಹೊಂದುವದ)ರಲ್ಲಿ ತನ್ನಲ್ಲಿಯೇ ಚಿನ್ಮಾತ್ರಸ್ವರೂಪದಲ್ಲಾ ಗುವ ವಿಕಾರವು ಯಾವ ದೋಷವನ್ನೂ (ಮಾಡ)ಲಾರದು. ಆದರೆ ವೇದವಾದಿ ಗಳಾದ ನಿಮ್ಮ ಪಕ್ಷದಲ್ಲಿ* ಆತ್ಮನು ಸೃಷ್ಟಿಕರ್ತನಾದರೆ ಬೇರೊಂದು ತತ್ತ್ವವೇ ಆಗಿ ಪರಿಣಮಿಸಬೇಕಾಗುತ್ತದೆಯಾದ್ದರಿಂದ ಆತ್ಮನಿಗೆ ಅನಿತ್ಯತ್ವವೇ ಮುಂತಾದ ಎಲ್ಲಾ ದೋಷಗಳೂ ಬಂದೊದಗುವವಲ್ಲ !

---

1. ಇದು ನಾವು ಕಲ್ಪಿಸಿರುವ ಪಾಠ; ಇದರ ಅನುವಾದವನ್ನೂ, ವಿಷ್ಣಚಯನ್ನೂ ನೋಡಿ.

2. "ಬುದ್ಧ್ಯನವಗಮ್ಯಮ್" ವಾ॥.

3. "ಅಜರಮ್" ಎಂಬುದು ಆ॥ ಪಾಠದಲ್ಲಿಲ್ಲ.

4. "ಫಲಂ ಚ ನಾಸ್ತಿ" ಆ॥.

5. ಪ್ರಧಾನವು ಮಹತ್ತು, ಅಹಂಕಾರ ಮುಂತಾದ ಬೇರೆಬೇರೆಯು ತತ್ತ್ವಗಳೇ ಆಗಿ ಬೇರ್ಪಡುವಂತೆ ಪುರುಷನು ಭೋಕ್ತೃವಾದಾಗ ಮತ್ತೊಂದು ತತ್ತ್ವವೇ ಆಗಿಬಿಡುವನೆಂದು ನಾವು ಹೇಳಿದ್ದರೆ ಅನಿತ್ಯತ್ವಾದಿದೋಷಗಳು ಬರುತ್ತಿದ್ದವು. ಆದರೆ ಹಾಗೇನೂ ಹೇಳುವದಿಲ್ಲ; ಅವನು ಇದ್ದಂತೆಯೇ ಭೋಕ್ತೃವಾಗುವನೆನ್ನುತ್ತೇವೆ—ಎಂಬರ್ಥ.

6. ಸಾಂಖ್ಯರೂ ವೇದವನ್ನು ಪ್ರಮಾಣವಾಗಿ ಒಪ್ಪುತ್ತಾರಾದರೂ ತರ್ಕಕ್ಕೆ ಹೆಚ್ಚಿನ ಬೆಲೆಯನ್ನು ಕೊಡುತ್ತಾರೆ. ವೇದಾಂತಿಗಳು ಆತ್ಮಾದಿಗಳ ವಿಷಯಕ್ಕೆ ವೇದವೇ ಮುಖ್ಯ ಪ್ರಮಾಣವೆನ್ನುವರು.

(ಸಿದ್ಧಾಂತಿ) :-ಹಾಗಲ್ಲ. ಏಕೆಂದರೆ ಆತ್ಮನು ಒಬ್ಬನೇ[1] ಆಗಿದ್ದರೂ ಅವಿದ್ಯೆಗೆ ಗೋಚರವಾಗಿರುವ[2] ನಾಮರೂಪಗಳೆಂಬ ಉಪಾಧಿಯಿರುವದು, ಇಲ್ಲದಿರುವದು– ಎಂಬ ವಿಶೇಷವನ್ನು (ನಾವು) ಒಪ್ಪುತ್ತೇವೆ. (ಇದರ ವಿವರ) :-ಆತ್ಮನಿಗೆ ಬಂಧ, ಮೋಕ್ಷ-ಮುಂತಾದ ಶಾಸ್ತ್ರಕೃತವ್ಯವಹಾರಕ್ಕಾಗಿ[3] ಅವಿದ್ಯೆಯಿಂದಾಗಿರುವ ನಾಮರೂಪಗಳೆಂಬ ಉಪಾಧಿಯ ನಿಮಿತ್ತದಿಂದಾಗುವ ವಿಶೇಷವುಂಟೆಂದು (ನಾವು) ಒಪ್ಪಿರುತ್ತೇವೆ. ನಿಜವಾಗಿ ಯಾವ ಉಪಾಧಿಯೂ ಇಲ್ಲದ ತನಗೆರಡನೆಯದಿಲ್ಲದ ಒಂದೇ ಒಂದಾದ, (ಬಿಡುವದಕ್ಕಾಗಲಿ) ತೆಗೆದುಕೊಳ್ಳುವದಕ್ಕಾಗಲಿ (ಬಾರದ)[4] ಯಾವ ತಾರ್ಕಿಕರ ಬುದ್ಧಿಗೂ ನಿಲುಕದ,[5] ಹುಟ್ಟಿಲ್ಲದ ಆಂಜಿಕೆಯಿಲ್ಲದ ಮಂಗಲಕರವಾದ ತತ್ತ್ವವು ಎಂದು ಅಭಿಪ್ರಾಯಪಡುತ್ತೇವೆ. ಆದರಲ್ಲಿ[6] ಕರ್ತೃತ್ವವಾಗಲಿ ಭೋಕ್ತೃತ್ವವಾಗಲಿ ಕ್ರಿಯಾಕಾರಫಲಗಳಾಗಲಿ ಇರುವದಿಲ್ಲ ; ಏಕೆಂದರೆ ಎಲ್ಲಾ ಭಾವಗಳೂ ಅದ್ವೈತಕವಾಗಿರುತ್ತವೆ[7].

ಸಾಂಖ್ಯಾದಿಮತಗಳ ಖಂಡನೆಯ ಉದ್ದೇಶ

(ಭಾಷ್ಯ)

೧೦೪. ಸಾಙ್ಖ್ಯಾಶಸ್ತು ಅವಿದ್ಯಾಧ್ಯಾರೋಪಿತಮೇವ ಪುರುಷೇ ಕರ್ತೃತ್ವಂ ಕ್ರಿಯಾಕಾರಕಫಲಂ ಚ ಇತಿ ಕಲ್ಪಯಿತ್ವಾ ಆಗಮಬಾಹ್ಯತ್ವಾತ್ ಪುನಸ್ತತಸ್ತ್ಯಾಗಿನಃ ಪರಮಾರ್ಥತ ಏವ ಭೋಕ್ತೃತ್ವಂ ಪುರುಷಸ್ಯ ಇಚ್ಛನ್ತಿ | ತತ್ತಾತ್ತ್ವಜ್ಞಾನೇನೈವ ಚ ಪ್ರಧಾನಂ ಪುರುಷಾತ್[8] ಪರಮಾರ್ಥವಸ್ತುಭೂತಮೇವ ಕಲ್ಪಯಿತ್ವಾ, ಅನ್ಯತಾರ್ಕಿಕಬುದ್ಧಿವಿಷಯಾನ್ ಸನ್ತೋ ವಿಹನ್ಯನ್ತೇ| ತಥಾ ಇತರೇ ತಾರ್ಕಿಕಾಃ ಸಾಙ್ಖ್ಯಾದೀನ್ ಇತಿ | ಏವಂ ಪರಸ್ಪರವಿರುದ್ಧಾರ್ಥಕಲ್ಪನಾತಃ ಅವಿ

1. ಅದ್ವಿತೀಯನಾಗಿ ನಿರ್ವಿಶೇಷನಾಗಿದ್ದರೂ.

2. ಅವಿದ್ಯಾವಿಷಯ, ಅವಿದ್ಯಾಕೃತ, ಅವಿದ್ಯಾಲಕ್ಷಣ–ಎಂಬ ಮಾತುಗಳೆಲ್ಲವೂ ಒಂದೇ ಅರ್ಥವುಳ್ಳವು; ನಿಜವಾಗಿಲ್ಲದಿದ್ದರೂ ತೋರುತ್ತಿರುವ ಎಂದು ಅರ್ಥ.

3. ಶಾಸ್ತ್ರವು ಬೋಧನೆಗಾಗಿ ಈ ಅವಿದ್ಯಾವ್ಯವಹಾರವನ್ನು ಇಟ್ಟುಕೊಂಡಿರುವದೇ ಹೊರತು ಅದು ಪರಮಾರ್ಥವೆಂದೇನೂ ಹೇಳುವದಿಲ್ಲ. ಮಾಂ. ಕಾ. ಭಾ. ೧-೧೮, ೨-೩೨.

4. "ಅಹೇಯಮ್ ಅನುಪಾದೇಯಮ್" ಎಂಬ ಪಾಠವು ಬರೆದವರ ಕೈತಪ್ಪಿನಿಂದ "ಉಪಾದೇಯಮ್" ಎಂದಾಗಿರಬೇಕೆಂದು ತೋರುತ್ತದೆ. ಬಿಡುವದಕ್ಕೂ ತೆಗೆದುಕೊಳ್ಳುವದಕ್ಕೂ ಬಾರದ ಎಂಬ ವಿಶೇಷಣವು ಪ್ರಕೃತಕ್ಕೂ ಹೊಂದುತ್ತದೆ.

5. ಕೇ. ೨-೩-೯.

6. ಉಪಾಧಿರಹಿತವಾದ ಪರಮಾರ್ಥದಲ್ಲಿ.

7. ಅವಿದ್ಯಾಕಲ್ಪಿತವಾದ ಭಾವಗಳೂ ನಿಜವಾಗಿ ಅದ್ವೈತದಲ್ಲಿಯೇ ಕಲ್ಪಿತವಾಗಿರುತ್ತವೆ. ಹಾಗೆ ಕಲ್ಪಿತವಾಗಿರುವ ಭಾವಗಳಿಂದಲೇ ವ್ಯವಹಾರವು ಸಾಗುತ್ತಿದೆ. ಮಾಂ. ಕಾ. ಭಾ. ೨-೩೭ ; ಬೃ. ಭಾ. ೩-೫-೧.

8. ಇದಾದ ಬಳಿಕ "ಬಾಹ್ಯಮ್" ಎಂದು ವಾ॥ ಪಾಠದಲ್ಲಿ ಹೆಚ್ಚಾಗಿದೆ.

ಷಾರ್ಥಿನ ಇವ ಪ್ರಾಣಿನಃ ಅನ್ಯೋನ್ಯ ವಿರುಧ್ಯಮಾನಾರ್ಥದರ್ಶಿತ್ವಾತ್ಪರಮಾರ್ಥತತ್ತ್ವಾದ್ ದೂರಮೇವ ಅಪಕೃಷ್ಯನ್ತೇ। ಅತಸ್ತನ್ಮತಮ್ ಅನಾದೃತ್ಯ ವೇದಾನ್ತಾರ್ಥತತ್ತ್ವಮ್ ಏಕತ್ವದರ್ಶನಂ ಪ್ರತಿ ಆದರವನ್ತೋ ಮುಮುಕ್ಷವಃ ಸ್ಯುಃ ಇತಿ ತಾರ್ಕಿಕಮತದೋಷಪ್ರದರ್ಶನಂ ಕಿಂಚಿದುಚ್ಯತೇಽಸ್ಮಾಭಿಃ, ನ ತು ತಾರ್ಕಿಕವತ್ ತಾತ್ಪರ್ಯೇಣ। ತಥಾ ಏತದಪ್ಯುಕ್ತಮ್–“ವಿವದನ್ತೋಽಪಿ ನಿಕ್ಷಿಪ್ಯ ವಿರೋಧೋದ್ಭವಕಾರಣಮ್। ತೈಃ ಸಂರಕ್ಷಿತಸದ್ಬುದ್ಧಿಃ ಸುಖಂ ನಿರ್ವಾತಿ ವೇದವಿತ್ ॥” (?)

(ಭಾಷ್ಯಾರ್ಥ)

ಆದರೆ ಸಾಂಖ್ಯರು ಕರ್ತೃತ್ವವೂ ಕ್ರಿಯಾಕಾರಕಫಲಗಳೂ ಅವಿದ್ಯೆಯಿಂದ[1] ಪುರುಷನಲ್ಲಿ ಆರೋಪಿತವಾಗಿಯೇ ಇರುವವೆಂದು ಕಲ್ಪಿಸಿದಮೇಲೆಯೂ ಆಗಮ ಬಾಹ್ಯರಾದ್ದರಿಂದ[2] ಆದಕ್ಕೆ ಅಂಜಿಕೊಂಡು[3] ಪುರುಷನಿಗೆ ಭೋಕ್ತೃತ್ವವು ನಿಜವಾಗಿ ಇರುವದೆಂದು ಅಭಿಪ್ರಾಯಪಡುತ್ತಿರುವರು. ಪ್ರಧಾನವೆಂಬುದು ಪುರುಷನಿಗಿಂತ ಬೇರೆಯಃ ತತ್ತ್ವವೇ, ಪರಮಾರ್ಥವಾಗಿರುವ ವಸ್ತುವೇ ಎಂದು ಕಲ್ಪಿಸಿಕೊಂಡು ಮಿಕ್ಕ ತಾರ್ಕಿಕರುಗಳು ಮಾಡಿಕೊಂಡಿರುವ ಬುದ್ಧಿಗೆ ಸಿಕ್ಕು ಪೆಟ್ಟು ತಿನ್ನುವರು.[4] ಹೀಗೆಯೇ ಉಳಿದ ತಾರ್ಕಿಕರೂ (ಸಾಂಖ್ಯರಿಂದ (ಪೆಟ್ಟು ತಿನ್ನುವರು)-ಇತ್ಯಾದಿ. ಹೀಗೆ ಒಬ್ಬರಿಗೊಬ್ಬರು ವಿರುದ್ಧವಾಗಿರುವ ವಿಷಯಗಳನ್ನು ಕಲ್ಪಿಸುತ್ತಿರುವದರಿಂದ ಮಾಂಸವನ್ನು ಬಯಸುತ್ತಿರುವ ಪ್ರಾಣಿಗಳಂತೆ[5] ಒಬ್ಬರಿಗೆ ವಿರುದ್ಧವಾದ ಅರ್ಥವನ್ನು ಮತ್ತೊಬ್ಬರು ಒಪ್ಪುತ್ತಿರುವದ

---

1. ಪ್ರಕೃತಿಪುರುಷರ ವಿವೇಕವಿಲ್ಲದ್ದರಿಂದ ಎಂದರ್ಥ. ಪ್ರಕೃತಿಯೂ ಅವಿದ್ಯಾಕಲ್ಪಿತವೆಂಬ ವೇದಾಂತಿಗಳ ವಾದವನ್ನು ಸಾಂಖ್ಯರು ಒಪ್ಪುವದಿಲ್ಲ.

2. ವೇದಕ್ಕೂ ವೇದಾರ್ಥವನ್ನು ಬಲ್ಲವರ ಸಂಪ್ರದಾಯಗತವಾದ ಉಪದೇಶಕ್ಕೂ ಹೊರತಾಗಿ ತರ್ಕವನ್ನೇ ಮುಖ್ಯವೆಂದು ನಂಬಿರುವದರಿಂದ.

3. ಎಲ್ಲವೂ ಅವಿದ್ಯಾಕೃತವೆಂದರೆ ಪ್ರತ್ಯಕ್ಷಾನುಮಾನಗಳಿಗೆ ವಿರೋಧವಾದೀತೆಂಬ ಹೆದರಿಕೆಯಿಂದ ಎಂದರ್ಥ. ಸಾಂಖ್ಯರು ಕೆಲವು ಭಾಗದಲ್ಲಿ ವೇದಕ್ಕೆ ಹೊಂದಿಕೆಯಾಗಿ ವಾದಿಸಿದರೂ ಮಿಕ್ಕ ಅಂಶಗಳಲ್ಲಿ ವೇದವಿರುದ್ಧವಾಗಿಯೇ ಹೇಳುತ್ತಿರುವರೆಂದು ಇದರಿಂದ ಸೂಚಿಸಿದಂತೆ ಆಯಿತು.

4. ಪ್ರತಿವಾದಿಗಳ ತರ್ಕವನ್ನು ಎದುರಿಸಲಾರದೆ ವಾದಜಿತರಾಗುವರು.

5. ಮಾಂಸವನ್ನು ಬಯಸುವ ನಾಯಿ, ನರಿ, ಹದ್ದು–ಮುಂತಾದ ಪ್ರಾಣಿಗಳು ತಮ್ಮತಮ್ಮ ಕಡೆಗೆ ಅದನ್ನು ಎಳೆದುಕೊಳ್ಳುತ್ತಲೂ ತಮ್ಮ ಆಭೀಷ್ಟಕ್ಕೆ ವಿರುದ್ಧವಾಗಿ ಎಳೆಯುತ್ತಿರುವ ಬೇರೆಯ ಪ್ರಾಣಿಗಳೊಡನೆ ಕಜ್ಜಾಡುತ್ತಲೂ ಇರುವವು. ವೇದಾಂತಿಗಳ ಶ್ಲಿಷ್ಟವಾದಿಗಳೂ ಹೀಗೆಯೇ ಒಬ್ಬರೊಡನೊಬ್ಬರು ಕಾದುತ್ತಿರುವರು ಎಂದರ್ಥ.

ರಿಂದ ಪರಮಾರ್ಥತತ್ತ್ವಕ್ಕೆ ದೂರವಾಗಿಯೇ ಹೋಗುತ್ತಿರುವರು. ಆದ್ದರಿಂದ ಅವರ ಮತವನ್ನು ಅಪಡ್ಡೆಮಾಡಿ ಉಪನಿಷತ್ತುಗಳಲ್ಲಿರುವ ವಿಷಯದ ತತ್ತ್ವವಾದ ಏಕತ್ವದರ್ಶನದಲ್ಲಿ ಮುಮುಕ್ಷುಗಳು ಆದರವುಳ್ಳವರಾಗಲಿ ಎಂದು ತಾರ್ಕಿಕರ ಮತದಲ್ಲಿ ದೋಷವನ್ನು ಸ್ವಲ್ಪಮಟ್ಟಿಗೆ ನಾವು ಹೇಳುತ್ತಿರುವೆನೇ ಹೊರತು ತಾರ್ಕಿಕರಂತೆ ಅದೇ ಬೇಕಾಗಿ (ದೂಷಣವನ್ನು ಹೇಳುತ್ತಿಲ್ಲ). ಹೀಗೆಂದು ಈ (ಶ್ಲೋಕ)ದಲ್ಲಿ ಹೇಳಿರುತ್ತದೆ ;

ವಿವದತ್ಸ್ವೇವ ನಿಕ್ಷಿಪ್ಯ ವಿರೋಧೋದ್ಭವಕಾರಣಮ್ |
ತೈಃ ಸಂರಕ್ಷಿತಸದ್ಬುದ್ಧಿಃ ಸುಖಂ ನಿರ್ವಾತಿ ವೇದವಿತ್ ||[೨]

'ವೇದಾರ್ಥವನ್ನು ಬಲ್ಲಾತನು ಒಬ್ಬರಿಗೊಬ್ಬರು ವಿರುದ್ಧವಾಗಿ ವಾದಮಾಡುತ್ತಿರುವವರಲ್ಲಿಯೇ ವಿರೋಧವುಂಟಾಗುವ ಕಾರಣವನ್ನು ಬಿಟ್ಟು ಅವರಿಂದ ಸದ್ಬುದ್ಧಿಯನ್ನು ಕಾಪಾಡಿಕೊಂಡು ಸುಲಭವಾಗಿ ಆನಂದವನ್ನುಹೊಂದುತ್ತಾನೆ||[೩]'

ಆತ್ಮನ ಕರ್ತೃತ್ವ ಭೋಕ್ತೃತ್ವಗಳೆರಡೂ ಅಪರಮಾರ್ಥ

(ಭಾಷ್ಯ)

೧೦೫. ಕಿಂಚ ಭೋಕ್ತೃತ್ವಕರ್ತೃತ್ವಯೋಃ ವಿಕ್ರಿಯಯೋಃ ವಿಶೇಷಾನುಪಪತ್ತಿಃ | ಶಾ ನಾಮ ಅಸೌ ಕರ್ತೃತ್ವಾತ್ ಜಾತ್ಯನ್ತರಭೂತಾ ಭೋಕ್ತೃತ್ವ ವಿಶಿಷ್ಟಾ ವಿಕ್ರಿಯಾ ಯತೋ ಭೋಕ್ತೈವ ಪುರುಷಃ ಕಲ್ಪ್ಯತೇ ನ ಕರ್ತಾ| ಪ್ರಧಾನಂ ತು ಕರ್ತೈವ ನ ಭೋಕ್ತೃ ಇತಿ ? ನನು ಉಕ್ತಮ್ ಪುರುಷ ಶ್ಚಿನ್ಮಾತ್ರ ಏವ, ಸ ಚ ಸ್ವಾತ್ಮಸ್ಥೋ ವಿಕ್ರಿಯತೇ ಭುಞ್ಜಾನಃ | ನ ತತ್ತ್ವಾನ್ತರಪರಿಣಾಮೇನ | ಪ್ರಧಾನಂ ತು ತತ್ತ್ವಾನ್ತರಪರಿಣಾಮೇನ ವಿಕ್ರಿಯತೇ | ಅತಃ ಅನೇಕಮ್ ಅಶುದ್ಧಮ್, ಅಜೇತನಂ ಚ ಇತ್ಯಾದಿಧರ್ಮವತ್ | ತದ್ವಿಪರೀತಃ ಪುರುಷಃ | ನಾನಯೋ ವಿಶೇಷಃ | ವಾಙ್ಮಾತ್ರತ್ವಾತ್ | ಪ್ರಾಗ್

---

1. ತಾರ್ಕಿಕರು ದ್ವೈತಿಗಳಾದ್ದರಿಂದಲೂ ಅವರ ಮತವು ಪರಸ್ಪರವಿರುದ್ಧವಾಗಿರುವದರಿಂದಲೂ ಒಬ್ಬರನ್ನೊಬ್ಬರು ತಾತ್ಪರ್ಯದಿಂದ ಖಂಡಿಸಿದಲ್ಲದೆ ತಮ್ಮತಮ್ಮ ಸಿದ್ಧಾಂತವನ್ನು ಪ್ರತಿಷ್ಠಾಪಿಸಿಕೊಡಲಾರರು. ಉದಾಹರಣೆಗೆ ಸಾಂಖ್ಯರು ಭೋಕ್ತೃತ್ವವು ಪರಮಾರ್ಥವೆಂದರೆ ಕರ್ತೃತ್ವವೂ ಪರಮಾರ್ಥವೇಕಲ್ಲ?-ಎಂಬ ತಾರ್ಕಿಕರಿಗೆ ಉತ್ತರವನ್ನು ಕೊಡಲಾರದೆ ಇರುವರು. ಪ್ರಧಾನವು ಆತ್ಮನಿಗಿಂತ ಬೇರೆಯಾಗಿದೆ, ಸತ್ಯವಾಗಿದೆ ಎಂದರೆ ಪರಮಾಣುಗಳೂ ಬೇರೆಯಾಗಿವೆ, ಸತ್ಯವಾಗಿವೆ-ಎಂಬವರಿಗೆ ವಿರುದ್ಧವಾಗಿ ನುಡಿದವರಾಗುವರು. ಇತ್ಯಾದಿ. ಆದರೆ ಅದ್ವೈತವು ಸರ್ವಾನನ್ಯತ್ವವನ್ನು ಹೇಳುವದರಿಂದ ಯಾರಿಗೂ ವಿರುದ್ಧವಲ್ಲ. ಅದನ್ನು ಅನುಭವದಿಂದ ತೋರಿಸಿಕೊಡಲೂ ಬಹುದು.

2. ಇದು ಯಾರ ಶ್ಲೋಕವೋ ತಿಳಿಯದು. ಇದು ಆಚಾರ್ಯರೇ ಬರೆದದ್ದಾದರೂ ಇರಬಹುದು.

3. ಇದು ಹೇಗೆಂಬುದು ಮಾ. ಕಾ. ಭಾ. ಅಲಾತಶಾಂತಿಪ್ರಕರಣದಲ್ಲಿ ಸ್ಪಷ್ಟ.

ಭೋಗೋತ್ಪತ್ತೇಃ ಕೇವಲಚಿನ್ಮಾತ್ರಸ್ಯ ಭೋಕ್ತೃತ್ವಂ ವಿಶೇಷೋ ಭೋಗೋತ್ಪತ್ತಿಕಾಲೇ ಚೇತ್ ಜಾಯತೇ ನಿವೃತ್ತೇ ಚ ಭೋಗೇ ಪುನಸ್ತದ್ವಿಶೇಷಾಶ್ರಯೇತಶ್ಚಿನ್ಮಾತ್ರ ಏವ ಭವತಿ ಇತಿ[1] ಚೇತ್ ಮಹದಾದ್ಯಾಕಾರೇಣ ಚ ಪರಿಣಮ್ಯ ತತೋಽಪೇತ್ಯ ಪುನಃ ಪ್ರಧಾನಂ ಸ್ವರೂಪೇಣ ಅವತಿಷ್ಠತೇ ಇತ್ಯಸ್ಯಾಂ ಕಲ್ಪನಾಯಾಂ ನ ಕಶ್ಚಿತ್ ವಿಶೇಷಃ ಇತಿ ವಾಙ್ಮಾತ್ರೇಣ ಪ್ರಧಾನ ಪುರುಷಯೋಃ ವಿಶಿಷ್ಟವಿಕ್ರಿಯಾ ಕಲ್ಪ್ಯತೇ ॥

(ಭಾಷ್ಯಾರ್ಥ)

ಇನ್ನೊಂದು ಮಾತು : ಭೋಕ್ತೃತ್ವ, ಕರ್ತೃತ್ವ ಎರಡೂ ವಿಕಾರಗಳಾಗಿರುವದರಿಂದ ಇವೆರಡಕ್ಕೂ ಹೆಚ್ಚುಕಡಿಮೆ ಇರುವದಕ್ಕೆ ಕಾರಣವಿಲ್ಲ. ಪುರುಷನು ಭೋಕ್ತೃವೇ ಕರ್ತೃವಲ್ಲ, ಪ್ರಧಾನವು ಕರ್ತೃವೇ ಭೋಕ್ತೃವಲ್ಲ-ಎಂದು ಕಲ್ಪಿಸಿರುತ್ತೀರಷ್ಟೆ ; ಕರ್ತೃತ್ವಕ್ಕಿಂತ ಬೇರೆಯದಾ ಜಾತಿಯದಾಗಿರುವ ಭೋಕ್ತೃತ್ವವೆಂಬ ವಿಕಾರವಾದರೂ ಯಾವದು ?

(ಸಾಂಖ್ಯ) :-ಪುರುಷನು ಬರಿಯ ಚಿದ್ರೂಪನಾಗಿರುತ್ತಾನೆ, ಅವನು ವಿಷಯವನ್ನು ಅನುಭವಿಸುವಾಗ ತನ್ನ ರೂಪದಿಂದ ತಾನು ಇದ್ದುಕೊಂಡೇ ವಿಕಾರವನ್ನು ಹೊಂದುವನೇ ಹೊರತು ಬೇರೆ ಒಂದು ತತ್ತ್ವವೇ ಆಗಿ ಪರಿಣಮಿಸಿ (ವಿಕಾರ)ವಾಗುವದಿಲ್ಲ[2]; ಆದರೆ ಪ್ರಧಾನವು ಬೇರೊಂದು ತತ್ತ್ವವಾಗಿ ಪರಿಣಮಿಸಿಯೇ ವಿಕಾರವಾಗುತ್ತದೆ. ಆದ್ದರಿಂದ (ಅದು) ಅನೇಕವಾಗಿರುವದು, ಅಶುದ್ಧವಾಗಿರುವದು, ಅಚೇತನವಾಗಿರುವದು[3]-(ಇವೇ) ಮುಂತಾದ ಧರ್ಮಗಳುಳ್ಳದ್ದು. ಪುರುಷನು ಇದಕ್ಕೆ ವಿರುದ್ಧವಾದ ಸ್ವಭಾವವುಳ್ಳವನು. (ಇದನ್ನೆಲ್ಲ ನಾವು) ಆಗಲೇ ಹೇಳಿರುವವಲ್ಲ !

(ಸಿದ್ಧಾಂತಿ) :-ಇದೇನೂ (ನಿಜವಾದ) ಹೆಚ್ಚುಕಡಿಮೆಯಲ್ಲ. ಏಕೆಂದರೆ (ಇದು) ಬರಿಯ ಮಾತಾಗಿದೆ. ಭೋಗವುಂಟಾಗುವ ಮುಂಚೆ ಬರಿಯ ಚಿನ್ಮಾತ್ರನಾಗಿರುವ (ಪುರುಷನಿಗೆ) ಭೋಕ್ತೃತ್ವವೆಂಬ ವಿಶೇಷವು ಭೋಗವುಂಟಾಗುವ ಕಾಲದಲ್ಲಿ ಉಂಟಾಗುವದಾದರೆ ಮತ್ತು ಭೋಗವು ಮುಗಿದಮೇಲೆ ಆ ವಿಶೇಷವನ್ನು ಕಳಚಿಕೊಂಡು (ಅವನು) ಚಿನ್ಮಾತ್ರನೇ ಆಗುವದಾದರೆ, (ಆಗ) ಮಹತ್ತೇ ಮುಂತಾದವುಗಳ ರೂಪದಿಂದ ಪರಿಣಮಿಸಿದ ಪ್ರಧಾನವೂ ಆ

---

1. ಈ ಮಾತು ಇಲ್ಲದಿದ್ದರೂ ಆಗುತ್ತದೆ.

2. ಸ್ಫಟಿಕದ ಹತ್ತಿರ ಇಟ್ಟ ಹೂವಿನಿಂದ ಹೂವಿನ ಬಣ್ಣವು ಅದರಲ್ಲಿಯೂ ತೋರಿಕೊಂಡರೂ ಅದರ ಸ್ಫಟಿಕತ್ವವೇನೂ ಹೋಗದಿರುವಂತೆ ಆತ್ಮನ ಆತ್ಮತ್ವವೇನೂ ಹೋಗುವದಿಲ್ಲ – ಎಂದು ಭಾವ.

3. ನಿಜವಾಗಿ ಪರಿಣಮಿಸುವದರಿಂದ ಸಾವಯವ, ಅಹಂಕಾರಾದಿಗಳ ಅಶುದ್ಧಿಯೂ ಅದರಲ್ಲಿರುತ್ತದೆ.

(ವಿಕಾರವನ್ನೆ) ಬಿಟ್ಟು ತನ್ನ ರೂಪದಿಂದಲೇ ನಿಲ್ಲುವವಾದ್ದರಿಂದ ಈ ಕಲ್ಪನೆಯಲ್ಲಿ (ಅವೆರಡಕ್ಕೂ) ಯಾವ ವಿಶೇಷವೂ ಇರುವದಿಲ್ಲ. ಆದ್ದರಿಂದ ಪ್ರಧಾನಕ್ಕೂ ಪುರುಷನಿಗೂ ಬೇರೆಬೇರೆಯು ಬಗೆದು ವಿಕಾರ(ವಾಗ ವದೆಂದು) ಕಲ್ಪಿಸಿದ್ದು ಒಂದು ಮಾತೇ ಆಯಿತು.

(ಭಾಷ್ಯ)

೧೦೬. ಅಥ ಭೋಗಕಾಲೇಪಿ ಚಿನ್ಮಾತ್ರ ಏವ ಪ್ರಾಗ್ವತ್ ಪುರುಷಃ ಇತಿ ಚೇತ್ ; ನ ತರ್ಹಿ ಪರಮಾರ್ಥತೋ ಭೋಗಃ ಪುರುಷಸ್ಯ | ಭೋಗಕಾಲೇ[1] ಚಿನ್ಮಾತ್ರಸ್ಯ ವಿಕ್ರಿಯಾ ಪರಮಾರ್ಥ್ಯೇವ, ತೇನ ಭೋಗಃ ಪುರುಷಸ್ಯ ಇತಿ ಚೇತ್ ; ನ[2] ; ಪ್ರಧಾನಸ್ಯಾಪಿ ಭೋಗಕಾಲೇ ವಿಪ್ರಯಾವತ್ತ್ವಾದ್ ಭೋಕ್ತೃತ್ವಪ್ರಸಙ್ಗಃ | ಚಿನ್ಮಾತ್ರಸ್ಯೈವ ವಿಕ್ರಿಯಾ ಭೋಕ್ತೃತ್ವಮ್ ಇತಿ ಚೇತ್ ! ಔಷ್ಣ್ಯಾದ್ಯಸಾಧಾರಣಧರ್ಮವತಾಮ್ ಅಗ್ನ್ಯಾದೀನಾಮ್ ಅಭೋಕ್ತೃತ್ವೇ ಹೇತ್ವನುಪಪತ್ತಿಃ ||

(ಭಾಷ್ಯಾರ್ಥ)

(ಸಾಂಖ್ಯ) :–ಭೋಗಕಾಲದಲ್ಲಿಯೂ ಪುರುಷನು ಮುನ್ನಿನಂತೆ ಚಿನ್ಮಾತ್ರನೇ ಆಗಿರುತ್ತಾನೆಲ್ಲ !

(ಸಿದ್ಧಾಂತಿ) :–ಹಾಗಾದರೆ ಪುರುಷನಿಗೆ ನಿಜವಾಗಿಯೂ ಭೋಗವಿಲ್ಲ ವೆಂದಾಯಿತು[3] !

(ಸಾಂಖ್ಯ) :–ಭೋಗಕಾಲದಲ್ಲಿ ಚಿನ್ಮಾತ್ರನಾದ (ಪುರುಷನಿಗೆ) ಆಗುವ ವಿಕಾರವು ನಿಜವಾದದ್ದೇ ; ಆದರಿಂದ ಪುರುಷನಿಗೆ ಭೋಗ(ವುಂಟಾಗುತ್ತದೆ).

(ಸಿದ್ಧಾಂತಿ) :–ಇದು ಸರಿಯಲ್ಲ. (ಏಕೆಂದರೆ) ಪ್ರಧಾನಕ್ಕೂ ಭೋಗ ಕಾಲದಲ್ಲಿ ವಿಕಾರವಾಗುವದರಿಂದ ಅದೂ ಭೋಕ್ತೃವಾಗಬೇಕಾದೀತು !

(ಸಾಂಖ್ಯ) :–ಚಿನ್ಮಾತ್ರವೇ ಆಗಿರುವ (ಪುರುಷನಿಗೆ ಆಗುವ) ವಿಕಾರವೇ ಭೋಕ್ತೃತ್ವ(ವೆನಿಸುತ್ತದೆ)[4].

---

1. "ಅಥ ಭೋಗಕಾಲೇ" ವಾ॥ ಕಾ॥.

2. ಈ ಮಾತು ಇಲ್ಲದಿದ್ದರೂ ಸಾಗುವಂತಿದೆ.

3. ಹಗ್ಗವು ಹಾವೆಂದು ತೋರುವಾಗಲೂ ಹಗ್ಗವೇ ಆಗಿರುವಂತೆ ಪುರುಷನು ಭೋಗಕಾಲದಲ್ಲಿಯೂ ತನ್ನ ಸ್ವರೂಪವನ್ನು ಬಿಡದಿದ್ದರೆ ಸರ್ಪತ್ವದಂತೆ ಭೋಕ್ತೃತ್ವವೂ ಕಲ್ಪಿತವೇ ಎಂದಾಗುವದು. ಆಗ ನೀವೂ ವೇದಾಂತಿಗಳ ಅಭಿಪ್ರಾಯವನ್ನು ಒಪ್ಪಿದಂತೆ ಆಗುವದು ಎಂದು ಭಾವ.

4. ಪುರುಷನು ತನ್ನ ರೂಪದಿಂದಲೇ ಇದ್ದು ಕೊಂಡಿರುವದರಿಂದ ಅವನು ಭೋಕ್ತೃ ವೆನಿಸಬಹುದು ; ಮಹದಾದಿಗಳ ರೂಪವಾಗಿ ಪರಿಣಮಿಸುವ ಪ್ರಧಾನಕ್ಕೆ ಭೋಕ್ತೃತ್ವವು ಪಕ್ಕಾಲಾರದು ಎಂದು ಭಾವ.

(ಸಿದ್ಧಾಂತಿ) :-(ಹಾಗಾದರೆ) ಬಸಿಯೇ ಮುಂತಾದ ಅಸಾಧಾರಣಧರ್ಮವುಳ್ಳ ಬೆಂಕಿಯೇ ಮುಂತಾದವುಗಳಿಗೆ ಭೋಕ್ತೃತ್ವವಿಲ್ಲವೆನ್ನುವದಕ್ಕೆ ಕಾರಣವೇನೂ ಇರುವದಿಲ್ಲ[1].

(ಭಾಷ್ಯ)

೧೦೭. ಪ್ರಧಾನಪುರುಷಯೋರ್ದ್ವಯೋಃ ಯುಗಪದ್ ಭೋಕ್ತೃತ್ವಮ್ ಇತಿ ಚೇತ್ | ನ | ಪ್ರಧಾನಸ್ಯ ಪರಾರ್ಥತ್ವಾನುಪಪತ್ತೇಃ | ನ ಹಿ ಭೋಕ್ತೃತ್ವೇ ದ್ವಯೋಃ ಇತರೇತರಗುಣಪ್ರಧಾನಭಾವ ಉಪಪದ್ಯತೇ ಪ್ರಕಾಶವದಿವ ಇತರೇತರಪ್ರಕಾಶನೇ ||

(ಭಾಷ್ಯಾರ್ಥ)

(ಸಾಂಖ್ಯ) :-(ಹಾಗಾದರೆ) ಪ್ರಧಾನಪುರುಷರಿಬ್ಬರಿಗೂ ಏಕಕಾಲದಲ್ಲಿ ಭೋಕ್ತೃತ್ವವಾಗುವದೆನ್ನೋಣ[2].

(ಸಿದ್ಧಾಂತಿ) :-ಅದು ಸರಿಯಲ್ಲ. (ಏಕೆಂದರೆ) ಆಗ ಪ್ರಧಾನವು ಮತ್ತೊಬ್ಬರಿಗಾಗಿ ಕೆಲಸಮಾಡುವದೆಂಬುದು ಹೊಂದುವದಿಲ್ಲ[3]. ಎರಡು ಜೀವರುಗಳು ಒಂದನ್ನೊಂದು ಜೆಳಗಿದರೆ (ಒಂದು ಪ್ರಧಾನವು, ಇನ್ನೊಂದು ಅದರ ಅಧೀನವು ಎಂಬುದು ಹೇಗೆ ಹೊಂದುವದಿಲ್ಲವೋ) ಹಾಗೆ ಇಬ್ಬರು ಭೋಕ್ತೃಗಳಲ್ಲಿ ಒಬ್ಬನು ಮುಖ್ಯನು, ಇನ್ನೊಂದು ಅಧೀನ-ಎಂಬ ಸಂಬಂಧವು ಇರಬಾರದಾಗುತ್ತದೆ.

(ಶಂಕೆ)

೧೦೮. ಭೋಗದರ್ಶನವತಿ ಸತ್ತ್ವಾಜ್ಞಾನೇ ಚೇತಸಿ ಪುರುಷಸ್ಯ ಚೈತನ್ಯಸ್ಯ ಪ್ರತಿಬಿಮ್ಬೋದಯಃ[4] ಅನಿಕ್ರಿಯಸ್ಯ ಪುರುಷಸ್ಯ ಭೋಕ್ತೃತ್ವಮ್ ಇತಿ ಚೇತ್ ನ | ಪುರುಷಸ್ಯ ವಿಶೇಷಾಭಾವೇ ಭೋಕ್ತೃತ್ವಕಲ್ಪನಾನರ್ಥಕ್ಯಾತ್ | ಭೋಗರೂಪಶ್ಚೇತ್ ಅನರ್ಥಃ ಪುರುಷಸ್ಯ ನಾಸ್ತಿ ಸದಾ ನಿರ್ವಿಶೇಷತ್ವಾತ್ ಪುರುಷಸ್ಯ ಕಸ್ಯ ಅಪನಯನಾರ್ಥಂ ಮೋಕ್ಷಸಾಧನಂ ಶಾಸ್ತ್ರಂ ಪ್ರಣೀಯತೇ | ಅವಿದ್ಯಾಧ್ಯಾರೋಪಿತಾನರ್ಥಾಪನಯನಾಯ ಶಾಸ್ತ್ರಪ್ರಣಯನಮ್ ಇತಿ ಚೇತ್ ಪರ

---

1. ಬೆಂಕಿಯು ಸುಡುವಾಗಲೂ ತಾನೊಂದೇ ಇರುವಾಗಲೂ ತನ್ನ ರೂಪದಿಂದಲೇ ಇರುವದರಿಂದ ಅದಕ್ಕೂ ಭೋಕ್ತೃತ್ವವುಂಟೆಂದು ಸಾಂಖ್ಯನು ಒಪ್ಪದೇಕಾದೀತು.

2. ಪುರುಷನಿಗೆ ಪ್ರಧಾನದಿಂದಲೂ ಪ್ರಧಾನಕ್ಕೆ ತನ್ನ ಪರಿಜ್ಞಾನನಿಮಿತ್ತವಾಗಿಯೂ ಭೋಕ್ತೃತ್ವವೆನ್ನಬಹುದು ಎಂದು ಭ ಪ. ಪುರುಷನಲ್ಲಿ ಔಪಾಧಿಕತ್ವವಾದರೂ ಪರಮಾರ್ಥವಾದ ಭೋಕ್ತೃತ್ವವಿದೆಯೆಂದು ಸಾಧಿಸುವದಕ್ಕೆ ಸಾಂಖ್ಯನು ಹೊರಟಿದ್ದಾನೆ.

3. ಪ್ರಕೃತಿಯೂ ಪುರುಷನ ಭೋಗಮೋಕ್ಷಗಳಿಗಾಗಿ ಕೆಲಸಮಾಡುವದೆಂದು ಸಾಂಖ್ಯರ ಸಿದ್ಧಾಂತ. ಪ್ರಧಾನಕ್ಕೂ ಭೋಕ್ತೃತ್ವವನ್ನೊಪ್ಪಿದರೆ ಈ ಸಿದ್ಧಾಂತವನ್ನು ಸೈಬಿಡಬೇಕಾಗುವದು ಎಂದರ್ಥ.

4. "ಪ್ರತಿಬಿಮ್ಬೋದಯಾತ್" ಎಂದು ವಾ||.

ನಾರ್ಥಕಃ ಪುರುಷೋ ಭೋಕ್ತೈವ ನ ಕರ್ತಾ, ಪ್ರಧಾನಂ ಕರ್ತ್ರೈವ ನ ಭೋಕ್ತೃ ಪರಮಾರ್ಥಸದ್ ವಸ್ತ್ವನ್ತರಂ ಪುರುಷಾಚ್ಚ–ಇತೀಯಂ ಕಲ್ಪನಾ ಆಗಮಬಾಹ್ಯಾ ವ್ಯರ್ಥಾ ನಿರ್ನಿಮಿತ್ತಕಾ ಚೇತಿ ನಾದರ್ತವ್ಯಾ ಮುಮುಕ್ಷುಭಿಃ ॥

(ಭಾಷ್ಯಾರ್ಥ)

(ಸಾಂಖ್ಯ) :–ಭೋಗಧರ್ಮವುಳ್ಳದ್ದಾಗಿ ಸತ್ತ್ವ(ಗುಣವು) ಪ್ರಧಾನವಾಗಿರುವ ಬುದ್ಧಿವೃತ್ತಿಯಲ್ಲಿ ಪುರುಷನ ಚೈತನ್ಯದ ಪ್ರತಿಬಿಂಬವು ಹುಟ್ಟುತ್ತಿರುವುದೇ ವಿಕಾರರಹಿತನಾದ ಪುರುಷನ ಭೋಕ್ತೃತ್ವವು ಎಂದರೆ[1] ?

(ಸಿದ್ಧಾಂತಿ) :–ಇದು ಸರಿಯಲ್ಲ. ಏಕೆಂದರೆ ಪುರುಷನಲ್ಲಿ (ಯಾವ) ವಿಶೇಷವೂ ಇಲ್ಲದಿರುವಾಗ (ಅವನು) ಭೋಕ್ತೃವೆಂದು ಕಲ್ಪಿಸುವದು ವ್ಯರ್ಥವಾಗುತ್ತದೆ. ಭೋಗರೂಪವಾದ ಅನರ್ಥವು ಪುರುಷನಲ್ಲಿ ಇಲ್ಲದಿದ್ದರೆ ಪುರುಷನು ಯಾವಾಗಲೂ ಯಾವ ವಿಶೇಷವೂ ಇಲ್ಲದವನೆಂದಾಗುವದರಿಂದ ಯಾವ (ಬಂಧವನ್ನು) ಪರಿಹರಿಸುವದಕ್ಕಾಗಿ[2] ಮೋಕ್ಷಶಾಸ್ತ್ರವನ್ನು ರಚಿಸಿರುತ್ತದೆ ? (ಎಂಬುದನ್ನು ಹೇಳುವದಕ್ಕೆ ಒರೆಮದಿಲ್ಲ).

(ಸಾಂಖ್ಯ) :–ಅವಿದ್ಯೆಯಿಂದ ಆರೋಪಿತವಾಗಿರುವ ಅನರ್ಥವನ್ನು ತೊಲಗಿಸುವದಕ್ಕಾಗಿ ಶಾಸ್ತ್ರವನ್ನು ರಚಿಸಿರುತ್ತದೆ[3].

(ಸಿದ್ಧಾಂತಿ) :–ಹಾಗಾದರೆ "ಪುರುಷನು ನಿಜವಾಗಿ ಭೋಕ್ತೃವೇ, ಕರ್ತೃವಲ್ಲ; ಪ್ರಧಾನವು ಕರ್ತೃವೇ, ಭೋಕ್ತೃವಲ್ಲ ; ಇದು ಪರಮಾರ್ಥವಾಗಿ ಪುರುಷನಿಗಿಂತ ಬೇರೆಯಾಗಿರುವ ವಸ್ತು" ಎಂಬೀ ಕಲ್ಪನೆಯು ಆಗಮ ಬಾಹ್ಯವೂ ವ್ಯರ್ಥವೂ ಯಾವ ಕಾರಣವೂ ಇಲ್ಲದ್ದೂ (ಆಗಿದೆ) ಎಂದಾಯಿತು. ಆದ್ದರಿಂದ ಇದನ್ನು ಮುಮುಕ್ಷುಗಳು ಒಪ್ಪಬಾರದು[4].

---

1. ಪುರುಷನ ಪ್ರತಿಬಿಂಬವು ಸತ್ತ್ವಪ್ರಧಾನವಾದ ಅಂತಃಕರಣದಲ್ಲಿ ಬಿದ್ದಾಗ ಸುಖವಾಗುತ್ತದೆ. ಪುರುಷನ ಇದಕ್ಕೆ ಬಿಂಬವಾಗಿರುವದರಿಂದ ಭೋಕ್ತೃವೆನಿಸುವನು ಎಂದು ಭಾವ. ಭೋಕ್ತೃತ್ವವೆಂಬ ವಿಕಾರವೂ ಇಲದೆ ಪುರುಷನಲ್ಲಿ ಭೋಕ್ತೃತ್ವವನ್ನು ಕಲ್ಪಿಸುವ ಪ್ರಯತ್ನವಿದು.

2. ಭೋಕ್ತೃತ್ವವೇ ಬಂಧಕಾರಣವು ; ಅದೇ ನಿಜವಾಗಿಲ್ಲವೆಂದಾದರೆ ಇನ್ನು ಮೋಕ್ಷಕ್ಕಾಗಿ ಸಾಂಖ್ಯಶಾಸ್ತ್ರವು ಹೊರಟಿರುವದೇಕೆ ?–ಎಂದು ಆಕ್ಷೇಪ.

3. ಭೋಕ್ತೃತ್ವವು ಅವಿದ್ಯಾರೋಪಿತವೆಂದು ಸಾಂಖ್ಯನು ಮೊದಲು ಒಪ್ಪಿದ್ದರೂ ಈಗ ಭೋಗವು ಪ್ರಕೃತಿಯಲ್ಲಿಯೇ ಆಗುವದು ಎಂದದ್ದರಿಂದ ಒಪ್ಪಬೇಕಾಗಿದೆ.

4. ವೇದಕ್ಕೆ ಒಪ್ಪಾಗಿ ಸಪ್ರಯೋಜನವಾಗಿ ಯುಕ್ತಿಸಮ್ಮತವಾಗಿರುವ ವೇದಾಂತದರ್ಶನವನ್ನು ಒಪ್ಪಿ ಆತ್ಮನ ಕೊಡಲು ವಿಕ್ಷಿಪ್ತವಿಲ್ಲವೂ–ಪ್ರಕೃತಿಯನ್ನಾದರೂ–ಅವಿದ್ಯಾಕಲ್ಪಿತವೆಂದು ಒಪ್ಪಬೇಕು ಎಂದರ್ಥ. "ಮುಮುಕ್ಷುಗಳು ಒಪ್ಪಬಾರದು" ಎಂದದ್ದರಿಂದ ಮುಮುಕ್ಷುಗಳಿಗಾಗಿಯೇ ಈ ಚರ್ಚೆಯನ್ನು ತೆಗೆದಿದೆ ಎಂದು ಮತ್ತೆ ಜ್ಞಾಪಿಸಿದಂತೆ ಆಯಿತು. ಮಾ. ಕಾ. ಭಾ. ೩-೫ರಲ್ಲಿ ಸಾಂಖ್ಯಖಂಡನೆಯನ್ನು ನೋಡಿರಿ.

ಅದ್ವೈತಪ್ರಕ್ರಿಯೆಯಲ್ಲಿ ಯಾವ ದೋಷವೂ ಇಲ್ಲ

(ಭಾಷ್ಯ)

೧೦೯. ಏಕತ್ವೇಽಪಿ ಶಾಸ್ತ್ರಪ್ರಣಯನಾದ್ಯಾನರ್ಥಕ್ಯಮ್ ಇತಿ ಚೇತ್[1] ನ | ಅಧಾವಾತ್ | ಸತ್ಸು ಹಿ ಶಾಸ್ತ್ರಪ್ರಣೇತ್ರಾದಿಷು ತತ್ಫಲಾರ್ಥಿಷು ಚ ಶಾಸ್ತ್ರಸ್ಯ ಪ್ರಣಯನಮ್ ಅನರ್ಥಕಂ ಸಾರ್ಥಕಂ ವಾ ಇತಿ ವಿಕಲ್ಪನಾ ಸ್ಯಾತ್ | ನ ಹಿ ಆತ್ಮೈಕತ್ವೇ ಶಾಸ್ತ್ರಪ್ರಣೇತ್ರಾದಯಸ್ತತೋ ಭಿನ್ನಾಃ ಸನ್ತಿ | ತದಭಾವೇ ಏವಂ ವಿಕಲ್ಪನೈವ ಅನುಪಪನ್ನಾ | ಅಭ್ಯುಪಗಮೇ ಆತ್ಮೈಕತ್ವೇ ಪ್ರಮಾಣಾರ್ಥಶ್ಚಾಭ್ಯುಪಗತೋ ಭವತಾ (ಯದಾತ್ಮೈಕತ್ವಮಭ್ಯುಪಗಚ್ಛತಾ)[2] | ತದಭ್ಯುಪಗಮೇ ಚ ವಿಕಲ್ಪಾನುಪಪತ್ತಿಮಾಹ ಶಾಸ್ತ್ರಮ್ "ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ ಕೇನ ಕಂ ಪಶ್ಯೇತ್" (ಬೃ. ೪-೫-೧೫) ಇತ್ಯಾದಿ | ಶಾಸ್ತ್ರಪ್ರಣಯನಾದ್ಯುಪಪತ್ತಿಂ ಚಾಹ ಅನ್ಯತ್ರ ಪರಮಾರ್ಥವಸ್ತುಸ್ವರೂಪಾತ್ ಅವಿದ್ಯಾವಿಷಯೇ "ಯತ್ರ ಹಿ ದ್ವೈತಮಿವ ಭವತಿ" (ಬೃ. ೪.೫.೧೪) ಇತ್ಯಾದಿ ವಿಸ್ತರತೋ ವಾಜಸನೇಯಕೇ | ಅತ್ರ ಚ ವಿಭಕ್ತೇ ವಿದ್ಯಾವಿದ್ಯೇ ಪರಾಪರೇ ಇತಿ ಆದಾವೇವ ಶಾಸ್ತ್ರಸ್ಯ | ಅತೋ ನ ತಾರ್ಕಿಕವಾದಘಟಿಪ್ರವೇಶೋ ವೇದಾನ್ತರಾಜಪ್ರಮಾಣಬಾಹುಗುಪ್ತೇ ಇಹ ಆತ್ಮೈಕತ್ವವಿಷಯೇ ಇತಿ | ಏತೇನ ಅವಿದ್ಯಾಕೃತನಾಮರೂಪಾದ್ಯುಪಾಧಿಕೃತಾನೇಕಶಕ್ತಿಸಾಧನಕೃತಭೇದವತ್ತ್ವಾತ್ ಬ್ರಹ್ಮಣಃ ಸೃಷ್ಟ್ಯಾದಿಕರ್ತೃತ್ವೇ ಸಾಧನಾದ್ಯಭಾವೋ ದೋಷಃ ಪ್ರತ್ಯುಕ್ತೋ ವೇದಿತವ್ಯಃ ಪರೈರುಕ್ತಃ, ಆತ್ಮಾನರ್ಥಕರ್ತೃತ್ವಾದಿದೋಷಶ್ಚ ||

(ಭಾಷ್ಯಾರ್ಥ)

(ಸಾಂಖ್ಯ) :-(ಆತ್ಮ)ನೊಬ್ಬನೇ (ಪರಮಾರ್ಥ) ಎಂಬ (ಮತ)ದಲ್ಲಿಯೂ ಶಾಸ್ತ್ರವನ್ನು ರಚಿಸುವದೇ ಮುಂತಾದದ್ದು ವ್ಯರ್ಥವಾಗುವದಿಲ್ಲವೆ[3]?

(ಸಿದ್ಧಾಂತಿ) :—ಇಲ್ಲ. ಏಕೆಂದರೆ (ಅವು) ಇರುವದಿಲ್ಲ. ಶಾಸ್ತ್ರವನ್ನು ಮಾಡಿದವರೇ ಮುಂತಾದವರೂ ಅದರ(ಲ್ಲಿ ಹೇಳಿರುವ) ಫಲವನ್ನು ಬಯಸುವವರೂ ಇದ್ದರಲ್ಲವೆ, ಶಾಸ್ತ್ರವನ್ನು ಮಾಡಿದ್ದು ವ್ಯರ್ಥವೊ, ಸಾರ್ಥಕವೊ ?– ಎಂಬ ವಿಕಲ್ಪವುಂಟಾಗುವದು ? ಆತ್ಮನು ಒಬ್ಬನೇ ಆಗಿರುವಾಗ ಶಾಸ್ತ್ರವನ್ನು ಮಾಡಿದವರೇ ಮುಂತಾದವರು (ಆತ್ಮನಿಗಿಂತ) ಬೇರೆಯಾಗಿ ಇರುವದೇ ಇಲ್ಲ. ಅವು ಇಲ್ಲದಿರುವಾಗ ಹೀಗೆ ಕೇಳುವದೇ ಸರಿಯಾಗುವದಿಲ್ಲ[3]. ಆತ್ಮನು ಒಬ್ಬನೆಂದು

---

1. ಈ ಭಾಷ್ಯಭಾಗವು ಬರೆದವರೆ ಕೈತಪ್ಪಿನಿಂದ ಹೆಚ್ಚಾಗಿ ಸೇರಿದೆ ಎಂದು ತೋರುತ್ತದೆ.

2. ಶಾಸ್ತ್ರವನ್ನು ಯಾರಿಗಾಗಿ ರಚಿಸಬೇಕು ? ಯಾವ ಬಂಧವನ್ನು ಕಳೆಯುವದಕ್ಕಾಗಿ ರಚಿಸಬೇಕು ?–ಎಂಬ ಆಕ್ಷೇಪಣೆ ಆಗಲೂ ಬರುತ್ತದೆ–ಎಂದರ್ಥ.

3. ಆತ್ಮನೊಬ್ಬನೇ ಪರಮಾರ್ಥವೆಂದು ಒಪ್ಪಿಕೊಂಡರೆ ಶಾಸ್ತ್ರಾದಿಗಳೂ ಇಲ್ಲವೆಂದೇ ಒಪ್ಪಿಕೊಂಡಾಯಿತೆ. ಆಗ ಈ ಪ್ರಶ್ನೆಯಾಗಲಿ ಉತ್ತರವಾಗಲಿ ಹೇಗೆ ಇವ್ವಾವು ?

ಒಪ್ಪಿಕೊಂಡರೆ ಪ್ರಮಾಣದ ಸಾರ್ಥಕ್ಯವನ್ನು ನೀವು ಒಪ್ಪಿಕೊಂಡಂತೆಯೇ ಆಗುತ್ತದೆ. ಮತ್ತು ಆದನ್ನು ಒಪ್ಪಿದಮೇಲೆ (ಹೀಗೆ) ವಿಕಲ್ಪಿಸುವದು ಆಗುವದಿಲ್ಲವೆಂಬುದನ್ನು ಶಾಸ್ತ್ರವೂ "ಎಲ್ಲಿಯಾದರೆ ಇವನಿಗೆ ಎಲ್ಲವೂ ಆತ್ಮನೇ ಆಯಿತೋ ಅಲ್ಲಿ ಏತರಿಂದ ಯಾವದನ್ನು ಕಾಣಬೇಕು?" (ಬೃ. ೪-೫-೧೫) ಎಂದು ಮುಂತಾದ (ವಾಕ್ಯದಿಂದ) ತಿಳಿಸುತ್ತದೆ[1]. ಪರಮಾರ್ಥವಸ್ತುಸ್ವರೂಪವನ್ನು ಬಿಟ್ಟರೆ ಮಿಕ್ಕ ಅವಿದ್ಯಾವಿಷಯವಾಗಿರುವ (ಕಡೆಯಲ್ಲಿ) ಶಾಸ್ತ್ರವನ್ನು ರಚಿಸುವವೇ ಮುಂತಾದದ್ದು ಯುಕ್ತಿಗೆ ಹೊಂದುತ್ತದೆ ಎಂದೂ "ಎಲ್ಲಿ ದ್ವೈತದಂತೆ ಇರುವದೋ (ಅಲ್ಲಿ ಒಬ್ಬನು ಮತ್ತೊಬ್ಬನನ್ನು ಕಾಣುತ್ತಾನೆ)" (ಬೃ. ೪-೫-೧೫) ಎಂದು ಮುಂತಾದ (ವಾಕ್ಯಗಳಿಂದ) ವಾಜಸನೇಯಕದಲ್ಲಿ ವಿಸ್ತಾರವಾಗಿ ಹೇಳಿರುತ್ತದೆ[2]. ಇಲ್ಲಿಯೂ[3] ಪರವಿದ್ಯೆ, ಅಪರವಿದ್ಯೆ– ಎಂದು ವಿದ್ಯಾವಿದ್ಯೆಗಳನ್ನು[4] ಶಾಸ್ತ್ರದ ಮೊದಲಿನಲ್ಲಿಯೇ ವಿಂಗಡಿಸಿ (ತಿಳಿಸಿರುತ್ತದೆ). ಆದ್ದರಿಂದ ವೇದಾಂತವೆಂಬ ರಾಜಪ್ರಮಾಣದ ಬಾಹುವಿನಿಂದ ರಕ್ಷಿತವಾಗಿರುವ ಈ ಆತ್ಮೈಕತ್ವದ ವಿಷಯದಲ್ಲಿ ತಾರ್ಕಿಕವಾದದ ಭಟರಿಗೆ ಪ್ರವೇಶವಿರುವದಿಲ್ಲ[5].

---

1. ಶಾಸ್ತ್ರಕ್ಕೆ ವಿಷಯವು ಆತ್ಮೈಕತ್ವ ಎಂಬ ನಮ್ಮ ಸಿದ್ಧಾಂತಕ್ಕೆ ಮುಖ್ಯವಾಗಿರುವ ಆತ್ಮೈಕತ್ವವನ್ನು ಒಪ್ಪಿದಮೇಲೆ ಶಾಸ್ತ್ರಕ್ಕೆ ಪ್ರಯೋಜನವಿಲ್ಲವೆಂದು ವಾದಿಸುವದಕ್ಕೆ ಬರುವದಿಲ್ಲ; ದ್ವೈತಜ್ಞಾನವನ್ನು ಕಳೆದು ಆವರಿಂದಾಗುವ ಅನರ್ಥವನ್ನು ಕಳೆಯುವದೇ ಶಾಸ್ತ್ರದ ಪ್ರಯೋಜನವು. ಇಲ್ಲಿ "ಯದಾತ್ಮೈಕತ್ವಮಭ್ಯುಪಗಚ್ಛತಾ" ಎಂಬ ಗ್ರಂಥವನ್ನು ಕನ್ನಡಿಸಿಲ್ಲ.

2. ಆತ್ಮೈಕತ್ವವನ್ನು ಅರಿತ ಅವಸ್ಥೆಯಲ್ಲಿ ಒಬ್ಬನು ಇನ್ನೊಬ್ಬನನ್ನು ಕಾಣುವದೆಂಬುದಾಗಲಿ, ಒಬ್ಬನು ಇನ್ನೊಂದನ್ನು ಕೇಳುವದೆಂಬುದಾಗಲಿ ಇಲ್ಲ—ಎಂದದ್ದರಿಂದ ಶಾಸ್ತ್ರಾದಿ ವಿಷಯವು ವಿಕಲ್ಪವು ಆಗ ಹೊಂದುವದಿಲ್ಲವೆಂತದಂತೆ ಆಯಿತು.

3. ಕಲ್ಪಿತದ್ವೈತವಿರುವಾಗ ಕಲ್ಪಿತಶಾಸ್ತ್ರಾದಿಗಳೂ ಉಂಟೆಂದು 'ಇವ'ಶಬ್ದದಿಂದ ಶ್ರುತಿಯು ತಿಳಿಸಿದಂತೆ ಆಯಿತು

4 ಈ ಅಥರ್ವವೇದದ ಉಪನಿಷತ್ತಿನಲ್ಲಿ ಮಂತ್ರಭಾಗವಾದ ಮುಂಡಕದಲ್ಲಿಯೂ.

5. ಋಗ್ವೇದಾದಿಗಳು ಅಪರವಿದ್ಯೆ, ಬ್ರಹ್ಮವಿದ್ಯೆಯು ಪರವಿದ್ಯೆ-ಎಂದು ವಿಂಗಡಿಸಿರುವದರಿಂದ ಕರ್ಮಕ್ಕೆ ಸಂಬಂಧಪಟ್ಟ ಋಗ್ವೇದಾದಿಗಳು ಅವಿದ್ಯಾಕ್ಷೇತ್ರಕ್ಕೆ ಸೇರಿದವುಗಳೆಂದೂ ಶಾಸ್ತ್ರಾದಿವಿಕಲ್ಪವೂ ಅಪರವಿದ್ಯೆಗೆ ಸೇರಿದ್ದೆಂದೂ ಹೇಳಿದಂತೆ ಆಯಿತು. ''ವಿಧಕ್ಕೇ ವಿದ್ಯೇ'' ಎಂದೂ ಭಾಷ್ಯಕಾರರು ಬರೆದಿರಬಹುದು. ಹೇಗಾದರೂ ಅಪರವಿದ್ಯೆಯು ಅವಿದ್ಯಾಕ್ಷೇತ್ರಕ್ಕೆ ಸೇರಿದ್ದಾಗುತ್ತದೆ.

6. ವೇದಾಂತರಕ್ಷಿತವಾದ ನಮ್ಮ ಸಿದ್ಧಾಂತದ ದುರ್ಗವನ್ನು ತಾರ್ಕಿಕರೆಂಬ ಅಪೂರ್ಣದೃಷ್ಟಿಯು ಭಟರು ಒಳಹೊಗಲಾರರು, ಏಕೆಂದರೆ ಅವಿದ್ಯೆಯಿಂದಾಗಿರುವ ವ್ಯವಹಾರವನ್ನೂ ಪರಮಾರ್ಥವಾಗಿರುವ ಆದ್ವೈತವನ್ನೂ ಒಪ್ಪಿರುವ ವೇದಾಂತವೆಂಬ ಶ್ರೇಷ್ಠಪ್ರಮಾಣವನ್ನು ನಾವು ಒಪ್ಪಿರುತ್ತೇವೆ. ಪ್ರತ್ಯಕ್ಷವೇ ಮುಂತಾದವನ್ನು ಮಾತ್ರ ಒಪ್ಪಿರುವ ತಾರ್ಕಿಕರಿಗೆ ಇದು ಹಿಡಿಯುವ ಸಂಭವವಿಲ್ಲ.

ಅವಿದ್ಯೆಯಿಂದಾದ ನಾಮ, ರೂಪ- ಮುಂತಾದ ಉಪಾಧಿಯಿಂದಾಗಿರುವ ಅನೇಕ ಶಕ್ತಿಗಳಿಂದಲೂ ಸಾಧನಗಳಿಂದಲೂ ಆಗಿರುವ ಭೇದಗಳು ಬ್ರಹ್ಮದಲ್ಲಿರುವದರಿಂದ 'ಸೃಷ್ಟಿಯೇ ಮುಂತಾದವನ್ನು ಮಾಡುವದಕ್ಕೆ (ಬ್ರಹ್ಮಕ್ಕೆ) ಸಾಧನಗಳು ಇಲ್ಲವಲ್ಲ!' ಎಂಬ ದೋಷವನ್ನೂ 'ಆತ್ಮನು (ತನಗೆ ತಾನೇ) ಅನರ್ಥವನ್ನು ಮಾಡಿಕೊಂಡವನಾಗುವನಲ್ಲ' ಎಂಬ ದೋಷವನ್ನೂ ಪರರು ಹೇಳಿದ್ದಕ್ಕೆ ಇದರಿಂದಲೇ ಪರಿಹಾರವನ್ನು ಹೇಳಿದಂತಾಯಿತೆಂದು ತಿಳಿಯಬೇಕು.

ಅಚೇತನಕರ್ತೃತ್ವವಾದದಲ್ಲಿ ದೋಷ

(ಭಾಷ್ಯ)

೧೧೦. ಯಸ್ತು ದೃಷ್ಟಾನ್ತಃ ರಾಜ್ಞಃ ಸರ್ವಾರ್ಥಕಾರಿಣಿ ಕರ್ತರಿ ಉಪಚಾರಾದ್[1] 'ರಾಜಾ' 'ಕರ್ತಾ' ಇತಿ (ಇತಿ)[2], ಸೋಽತ್ರಾನುಪಪನ್ನಃ! 'ಸ ಈಕ್ಷಾಂಚಕ್ರೇ' ಇತಿ ಶ್ರುತೇರ್ಮುಖ್ಯಾರ್ಥಬಾಧನಾತ್ ಪ್ರಮಾಣಭೂತಾಯಾಃ | ತತ್ರ ಹಿ ಗೌಣೇ ಕಲ್ಪನಾ ಶಬ್ದಸ್ಯ ಯತ್ರ ಮುಖ್ಯಾರ್ಥೋ ನ ಸಂಭವತಿ | ಇಹ ತು ಅಚೇತನಸ್ಯ ಮುಕ್ತಬುದ್ಧ್ಯನುಪವಿಶೇಷಾಪೇಕ್ಷಯಾ ಕರ್ತೃಕರ್ಮದೇಶಕಾಲನಿಮಿತ್ತಾಪೇಕ್ಷಯಾ ಚ ಬನ್ಧಮೋಕ್ಷಾದಿಫಲಾರ್ಥಾನಿಯತಾ ಪುರುಷಂ ಪ್ರತಿ ಪ್ರವೃತ್ತಿರ್ನೋಪಪದ್ಯತೇ | ಯಥೋಕ್ತಸರ್ವಜ್ಞೇಶ್ವರಕರ್ತೃತ್ವಪಕ್ಷೇ ತು ಉಪಪನ್ನಾ ||

(ಭಾಷ್ಯಾರ್ಥ)

ರಾಜನಿಗೆ ಎಲ್ಲಾ ಪ್ರಯೋಜನವನ್ನೂ ಮಾಡಿಕೊಡುವ ಕರ್ತೃವನ್ನು 'ರಾಜನು', 'ಕರ್ತನು' ಎಂದು ಉಪಚಾರ(ಕ್ಕಾಗಿ ಕರೆಯುವಂತೆ ಅಚೇತನವಾದ ಪ್ರಧಾನಕ್ಕೂ ಕರ್ತೃತ್ವವನ್ನು ಹೇಳಿದೆ) ಎಂದು ದೃಷ್ಟಾಂತವನ್ನು ಹೇಳಿತ್ತಷ್ಟೆ, ಅದು ಇಲ್ಲಿ ಹೊಂದುವದಿಲ್ಲ; ಏಕೆಂದರೆ "ಅವನು ನೋಡಿದನು" ಎಂದು ಹೇಳುವ ಪ್ರಮಾಣಭೂತವಾದ ಶ್ರುತಿಗೆ ಮುಖ್ಯಾರ್ಥವನ್ನು ತಪ್ಪಿಸಬೇಕಾಗುತ್ತದೆ.[3] ಎಲ್ಲಿ ಶಬ್ದಕ್ಕೆ ಮುಖ್ಯಾರ್ಥವು ಹೊಂದುವದಿಲ್ಲವೋ ಅಲ್ಲಿಯೇ ಗೌಣಾರ್ಥವನ್ನು ಕಲ್ಪಿಸಬೇಕು. ಆದರೆ ಇಲ್ಲಿ ಅಚೇತನವಾದ ಪ್ರಧಾನವು

---

1. "ಉಪಚಾರವತ್" ಎಂದಿದ್ದರೆ ಸರಳವಾಗಿ ಅನ್ವಯವಾಗುವದು.

2. ಇಲ್ಲಿ ಒಂದು ಇತಿ ಶಬ್ದವು ಬಿಟ್ಟುಹೋಗಿದೆ; ಅಥವಾ ಆದನ್ನು ಅಧ್ಯಾಹಾರ ಮಾಡಿಕೊಳ್ಳಬೇಕು.

3. ಸಾಂಖ್ಯನು "ಕರ್ತೃ", "ಈಕ್ಷಿತೃ", "ಆತ್ಮ"-ಎಂಬ ಶಬ್ದಗಳೆಲ್ಲ ಗೌಣಾರ್ಥವನ್ನು ಕಲ್ಪಿಸಿ ಅವುಗಳನ್ನು ಪ್ರಧಾನಕ್ಕೆ ಹೊಂದಿಸಿಕೊಂಡಿರುತ್ತಾನೆ. ಮುಖ್ಯಾರ್ಥವು ಹೊಂದುವಾಗ ಗೌಣಾರ್ಥವನ್ನು ತೆಗೆದುಕೊಳ್ಳುವದು ಸರಿಯಲ್ಲ. ಸೂ. ಭಾ. ೧-೧-೫ ರಿಂದ ೭ ನೋಡಿ.

'ಇನ್ನು ಮುಕ್ತರು, ಇನ್ನು ಬದ್ಧರು' ಎಂದು ಆಯಾ ಪುರುಷರನ್ನೂ (ಆಯಾ) ಕರ್ತೃ, ಕರ್ಮ, ದೇಶ, ಕಾಲ, ನಿಮಿತ್ತ–ಇವುಗಳನ್ನೂ ನೋಡಿಕೊಂಡು ಬಂಧ ಮೋಕ್ಷಗಳೇ ಮುಂತಾದ (?) ಫಲಗಳು ಉಂಟಾಗುವದಕ್ಕೋಸ್ಕರ (ಒಂದು) ನಿಯಮದಿಂದ ಪುರುಷನಿಗಾಗಿ ಪ್ರವರ್ತಿಸುವದೆಂಬುದು ಹೊಂದುವದಿಲ್ಲ.[1] ಮೇರೆ ಹೇಳಿದ ಸರ್ವಜ್ಞನಾದ ಈಶ್ವರನು ಕರ್ತೃವೆಂಬ ಪಕ್ಷದಲ್ಲಿಯಾದರೋ (ಇದು) ಹೊಂದುತ್ತದೆ.

೬. ಅವಿದ್ಯೆಯಿಂದ ಕಲೆಗಳ ಉತ್ಪತ್ತಿ, ವಿದ್ಯೆಯಿಂದ ಲಯ

(ಭಾಷ್ಯ)

೧೧೧. ಈಶ್ವರೇಣೈವ[2] ಸರ್ವಾಧಿಕಾರೀ ಪ್ರಾಣಃ ಪುರುಷೇಣ ಸೃಜ್ಯತೇ ! ಕಥಮ್ ?—

(ಭಾಷ್ಯಾರ್ಥ)

ಒಡೆಯನಾದವನಿಂದ ಸರ್ವಾಧಿಕಾರಿಯು (ಸೃಷ್ಟನಾಗುವನಂತೆ)[3] ಪ್ರಾಣನು ಪುರುಷನಿಂದ ಸೃಷ್ಟನಾಗುತ್ತಾನೆ. ಹೇಗೆಂದರೆ :—

ಸ ಪ್ರಾಣಮಸೃಜತ ಪ್ರಾಣಾಚ್ಛ್ರದ್ಧಾಂ ಖಂ ವಾಯುರ್ಜ್ಯೋತಿ
ರಾಪಃ ಪೃಥಿವೀನ್ದ್ರಿಯಂ ಮನಃ । ಅನ್ನಮನ್ನಾದ್ ವೀರ್ಯಂ
ತಪೋ ಮನ್ತ್ರಾಃ ಕರ್ಮ ಲೋಕಾ ಲೋಕೇಷು ನಾಮ ಚ ॥೪॥

೪. ಅವನು ಪ್ರಾಣನನ್ನು ಸೃಷ್ಟಿಸಿದನು, ಪ್ರಾಣನಿಂದ ಶ್ರದ್ಧೆಯನ್ನೂ, ಆಕಾಶ, ವಾಯು, ಜ್ಯೋತಿ, ಅಪ್ಪು, ಪೃಥಿವಿ, ಇಂದ್ರಿಯ, ಮನಸ್ಸು, ಅನ್ನ–ಇವುಗಳನ್ನೂ ಅನ್ನದಿಂದ ವೀರ್ಯ, ತಪಸ್ಸು, ಮಂತ್ರಗಳು, ಕರ್ಮ, ಲೋಕಗಳು, (ಇವನ್ನೂ), ಲೋಕಗಳಲ್ಲಿ ನಾಮವನ್ನೂ (ಸೃಷ್ಟಿಸಿದನು).

---

1 ಅಜೇತನಕ್ಕೆ ಇದೆಲ್ಲ ಹೇಗೆ ತಿಳಿಯಬೇಕು ? ಸೂ. ಭಾ. ೨–೩–೨, ೩.

2. ಅವಿದ್ಯಾದೃಷ್ಟಿಯಿಂದ ಆತ್ಮನು ಕರ್ತೃವೆಂದಿಟ್ಟುಕೊಂಡರೆ ಜೀವನಾದ ಅವನಿಗೆ ಇದೆಲ್ಲ ತಿಳಿಯುವ ಸಂಭವವಿದೆ.

3. 'ಈಶ್ವರೇಣೈವ' ಎಂಬ ಪಾಠಕ್ಕಿಂತ ಇದೇ ಉತ್ತಮ.

4. ಅರಸನಾದವನು ತನಗೊಬ್ಬ ಅಧಿಕಾರಿಯನ್ನು ಗೊತ್ತುಮಾಡಿಕೊಳ್ಳುವಂತೆ ಚೈತನ್ಯಸ್ವರೂಪನಾದ ಆತ್ಮನು ತನ್ನ ವ್ಯವಹಾರಕ್ಕಾಗಿ ಪ್ರಾಣನನ್ನು ಸೃಷ್ಟಿಮಾಡಿಕೊಂಡನು ಎಂದರ್ಥ. ಇದೂ ಪ್ರಧಾನಕ್ಕೆ ಹೊಂದುವದಿಲ್ಲ. ಈಶ್ವರೇಣೈವ...ಸೃಜ್ಯತೇ ಎಂಬ ವಾಕ್ಯವನ್ನು ಹಿಂದಿನ ಭಾಷ್ಯಭಾಗಕ್ಕಾಗಲಿ, ಅಥವಾ 'ಯಥೋಕ್ತ... ಉಪಸನ್ನಾಃ' ಎಂಬ ವಾಕ್ಯವನ್ನು ಈ ಭಾಷ್ಯಭಾಗಕ್ಕಾಗಲಿ ಜೋಡಿಸಿಕೊಂಡರೂ ಅರ್ಥವು ಒಂದೇ ಆಗುತ್ತದೆ.

(ಭಾಷ್ಯ)

೧೩. ಸ ಪುರುಷಃ ಉಕ್ತಪ್ರಕಾರೇಣ ಈಕ್ಷಿತ್ವಾ ಪ್ರಾಣಾನ್[1] ಹಿರಣ್ಮಯ ಗರ್ಭಾಖ್ಯಂ ಸರ್ವಪ್ರಾಣಿಕರಣಾಧಾರಮ್ ಅಪ್ರಾಕೃತಾತ್ಮಾನಮ್ ಅಸೃಜತ ಸೃಷ್ಟವಾನ್ | ಅತಃ[2] ಪ್ರಾಣಾತ್ ಶ್ರದ್ಧಾಂ ಸರ್ವಪ್ರಾಣಿನಾಂ ಶುಭಕರ್ಮಪ್ರವೃತ್ತಿ ಹೇತುಭೂತಾಮ್ | ತತಃ ಕರ್ಮಫಲೋಪಭೋಗಸಾಧನಾಧಿಷ್ಠಾನಾನಿ ಕಾರಣ ಭೂತಾನಿ ಮಹಾಭೂತಾನಿ ಅಸೃಜತ | ಖಂ ಶಬ್ದಗುಣಮ್[3] | ವಾಯುಃ[4] ಸ್ವೇನ ಸ್ಪರ್ಶೇನ ಕಾರಣಗುಣೇನ ಚ ವಿಶಿಷ್ಟಃ ದ್ವಿಗುಣಃ | ತಥಾ ಜ್ಯೋತಿಃ ಸ್ವೇನ ರೂಪೇಣ ಪೂರ್ವಾಭ್ಯಾಂ ಚ ವಿಶಿಷ್ಟಂ ತ್ರಿಗುಣಂ ಶಬ್ದಸ್ಪರ್ಶಾಭ್ಯಾಮ್ | ತಥಾ ಅಪಃ ರಸಗುಣೇನ[5] ಅಸಾಧಾರಣೇನ ಪೂರ್ವಗುಣಾನಾಂ ಪ್ರವೇಶೇನ ಚ ಚತುರ್ಗುಣಾಃ | ತಥಾ ಗನ್ಧಗುಣೇನ ಪೂರ್ವಗುಣಾನುಪ್ರವೇಶೇನ ಚ ಪಞ್ಚ ಗುಣಾ ಪೃಥಿವೀ | ತಥಾ ತೈರೇವ ಭೂತೈಃ ಆರಬ್ಧಮ್ ಇಸ್ಪ್ರಾಯಂ ದ್ವಿಪ್ರಕಾರಂ ಬುದ್ಧ್ಯರ್ಥಂ ಕರ್ಮಾರ್ಥಂ ಚ ದಶಸಙ್ಖ್ಯಮ್ | ತಸ್ಯ ಚ ಈಶ್ವರಸ್ಯ ಅನ್ತಸ್ಥಂ ಸಂಶಯಸಂಕಲ್ಪಾದಿಲಕ್ಷಣಂ[6] ಮನಃ | ಏವಂ ಪ್ರಾಣಿನಾಂ ಕಾರ್ಯಂ ಕರಣಂ[7] ಚ ಸೃಷ್ಟ್ವಾ ತತ್ ಸ್ಥಿತ್ಯರ್ಥಂ ವ್ರೀಹಿಯವಾವಿಲಕ್ಷಣಮ್ ಅನ್ನಮ್ | ತತಶ್ಚ ಅನ್ನಾತ್ ಅದ್ಯಮಾನಾತ್ ವೀರ್ಯಂ ಸಾಮರ್ಥ್ಯಂ ಬಲಂ ಸರ್ವಕರ್ಮ ಪ್ರವೃತ್ತಿಸಾಧನಮ್ | ತದ್ವೀರ್ಯವತಾಂ ಚ ಪ್ರಾಣಿನಾಂ ತಪಃ ವಿಶುದ್ಧಿ ಸಾಧನಂ ಸಂಕೀರ್ಯಮಾಣಾನಾಮ್| ಮನ್ತ್ರಾಃ ತಪೋವಿಶುದ್ಧಾನ್ತರ್ಬಹಿಃಕರಣೇಭ್ಯಃ ಕರ್ಮಸಾಧನಭೂತಾಃ ಋಗ್ಯಜುಃಸಾಮಾಥರ್ವಾಙ್ಗಿರಸಃ| ತತಃ ಕರ್ಮ ಅಗ್ನಿಹೋತ್ರಾದಿಲಕ್ಷಣಮ್ | ತತಃ ಲೋಕಾಃ ಕರ್ಮಣಾಂ ಫಲಮ್| ತೇಷು ಚ ಸೃಷ್ಟಾನಾಂ ಪ್ರಾಣಿನಾಂ ನಾಮ ಚ "ದೇವದತ್ತಃ", "ಯಜ್ಞದತ್ತಃ" ಇತ್ಯಾದಿ|

---

1. "ಸರ್ವಪ್ರಾಣಾಂ" ಎಂಬ ವಾ। ಪಾಠವು ಬೇಕಿಲ್ಲ.

2. 'ತತಃ' ವಾ.

3. "ಶಬ್ದ ಗುಣಕಮ್" ವಾ।.

4. "ವಾಯುರ್ವಮ್" ಎಂಬ ದ್ವಿತೀಯೊಂಕವಾಜ ಅ। ಪಾಠಕ್ಕಿಂತ ಈ ವಾಗಿರುವ ಪಾಠವು ಮೂಲಾನುಸಾರಿಯಾಗಿರುವದರಿಂದ ಉಕ್ತವೆಂ.

5. "ರಸೇನ ಗುಣೇನ" ಅ।.

6. "ಸಂಶಯಸಂಕಲ್ಪಲಕ್ಷಣಮ್" ಅ।, "ಸಂಶಯವಿಕಲ್ಪಾದಿಲಕ್ಷಣಮ್" । ಈ ಎರಡು ಪಾಠಗಳಿಗಿಂತ ಅ। ಪಾಠವ ಔಪ್ಪಜೆಯಲ್ಲಿ ಕೊಟ್ಟಿರುವ ಈ ಪಾಠವು ಮೇಲ

7. "ಕಾರಣಂ ಚ" ಎಂಬ ಪಾಠಕ್ಕಿಂತ ಇದೇ ಮೇಲು.

(ಛಾಪ್ಯಕ್ಷರ)

ಆ ಪ್ರಜೆಯನ್ನು ಹಿಂದೆ ಹೇಳಿದಂತೆ ಆಲೋಚನೆಮಾಡಿ ಹಿರಣ್ಯಗರ್ಭನೆಂಬ[1] ಎಲ್ಲಾ ಪ್ರಾಣಿಗಳ ಕರಣಗಳಿಗೂ ಆಧಾರನಾಗಿರುವ ಅಂತರಾತ್ಮನಾದ[2] ಪ್ರಾಣನನ್ನು ಸೃಷ್ಟಿಮಾಡಿದನು. ಈ ಪ್ರಾಣನಿಂದ ಎಲ್ಲಾ ಪ್ರಾಣಿಗಳೂ ಶುಭ ಕರ್ಮದಲ್ಲಿ ತೊಡಗುವದಕ್ಕೆ ಕಾರಣವಾಗಿರುವ ಶ್ರದ್ಧೆಯನ್ನು[3] (ಸೃಷ್ಟಿಮಾಡಿದನು); ಆಮೇಲೆ ಕರ್ಮಫಲವನ್ನು ಅನುಭವಿಸುವದಕ್ಕೂ ಸಾಧನವನ್ನು ಮಾಡುವದಕ್ಕೂ ಆಶ್ರಯವಾಗಿ ಕಾರಣವಾಗಿರುವ ಮಹಾಭೂತಗಳನ್ನು ಸೃಷ್ಟಿಸಿದನು. ಖಂ ಎಂದರೆ ಶಬ್ದಗುಣವುಳ್ಳ (ಆಕಾಶವು); ವಾಯು ಎಂದರೆ ತನ್ನ (ಸ್ಪರ್ಶವೆಂಬ ಗುಣದಿಂದಲೂ) ಕಾರಣದ ಗುಣ(ವಾದ ಶಬ್ದ)ದಿಂದಲೂ ಕೂಡಿ ಎರಡು ಗುಣಗಳುಳ್ಳ ಭೂತವು); ಇದರಂತೆ ಜ್ಯೋತಿ ಎಂದರೆ ತನ್ನ ದಾವ ರೂಪದಿಂದಲೂ ಹಿಂದಿನ ಶಬ್ದಸ್ಪರ್ಶಗಳೆಂಬ (ಗುಣ)ಗಳಿಂದಲೂ ಕೂಡಿ ಮೂರು ಗುಣವುಳ್ಳ (ಭೂತವು); ಇದರಂತೆ ಆಪ್ಪು ಎಂದರೆ (ತನ್ನ) ಅಸಾಧಾರಣವಾದ ರಸಗುಣದಿಂದಲೂ ಹಿಂದಿನ ಗುಣಗಳ ಸೇರುವಿಕೆಯಿಂದಲೂ ನಾಲ್ಕು ಗುಣವುಳ್ಳ (ಭೂತ); ಹಾಗೂ ಗಂಧಗುಣದಿಂದಲೂ ಹಿಂದಿನ ಗುಣಗಳ ಸೇರುವಿಕೆಯಿಂದಲೂ ಐದು ಗುಣಗಳುಳ್ಳ ಪೃಥಿವಿ (ಈ ಐದು ಭೂತಗಳು)[4] ಹೀಗೆಯೇ ಅದೇ ಭೂತಗಳಿಂದ ಉಂಟಾಗಿರುವ ಆರಿವಿಗಾಗಿಯೂ ಕೆಲಸ ಕ್ಕಾಗಿಯೂ (ಏರ್ಪಟ್ಟಿರುವ) ಹತ್ತು ಸಂಖ್ಯೆಯ ಇಂದ್ರಿಯ; ಮತ್ತು ಅದನ್ನು ಅಳುವ ಒಳಗಿರುವ ಸಂಶಯ, ಸಂಕಲ್ಪ– ಮುಂತಾದ ರೂಪದ ಮನಸ್ಸು. (ಇವನ್ನೂ ಸೃಷ್ಟಿಸಿದನು)[5].

---

1. "ಹಿರಣ್ಯಗರ್ಭನೆಂಬ ಹೆಸರು ಯಾವ ಉಪಾಧಿಯಿಂದ ಬರುತ್ತದೆಯೋ ಆ ಸಮಷ್ಟಿಪ್ರಾಣವನ್ನು ಎಂದರ್ಥ. ಏಕೆಂದರೆ 'ಯಾವದರ ಉತ್ಕ್ರಾಂತಿಯಿಂದ ನಾನು ಉತ್ಕ್ರಾಂತನಾಗುವೆನು" ಎಂಬ ಆಲೋಚನೆಗೆ ಅನುಗುಣವಾಗಬೇಕಾದರೆ ಪ್ರಾಣವೇ ಬೇಕು"–ಎಂದು ಆ) ವ್ಯಾಖ್ಯಾನಕಾರರು ಬರೆದಿರುತ್ತಾರೆ. ಹಿರಣ್ಯಗರ್ಭನ ಸೃಷ್ಟಿಯೊಡನೆ ಯೇ ಪ್ರಾಣವೂ ಸೃಷ್ಟಿಯಾಗಿರುವದರಿಂದ ಆಚಾರ್ಯರು ಹಿರಣ್ಯಗರ್ಭನೆಂದು ಬರೆದಿರುವಂತೆ ತೋರುತ್ತದೆ. ಪೀಠಿಕೆಯನ್ನು ನೋಡಿರಿ.

2. ಹಿರಣ್ಯಗರ್ಭನೇ ಪ್ರಾಣಿಗಳಲ್ಲಿ ದ್ರಷ್ಟೃ, ಶ್ರೋತೃ– ಎಂದುಮುಂತಾಗಿ ತೋರಿಕೊಳ್ಳುವ ಸರ್ವಕರಣಾತ್ಮನು. ಮುಂ. ಭಾ. ೨.೦.೪.

3. ತೈ. ಭಾ. ೨–೪ ನೋಡಿ. ಶ್ರದ್ಧೆಯೆಂದರೆ ಭೂತಸೂಕ್ಷ್ಮವೆಂಬ ಅರ್ಥವನ್ನೂ ಮಾಡಬಹುದಾದರೂ (ಸೂ. ಭಾ. ೩–೧–೩) ಇಲ್ಲಿ ಆ ಅರ್ಥವಿಲ್ಲವೆಂದು ತೋರುವದು.

4. ಭೂತಗಳ ಈ ಉತ್ತರೋತ್ತರಗುಣವೃದ್ಧಿಯನ್ನು ಮುಂ. ಭಾ. ೨–೧–೪. ತೈ. ಭಾ. ೨–೧ ಇವುಗಳಲ್ಲಿ ನೋಡಿರಿ.

5. ಇಲ್ಲಿ ಹೇಳಿರುವ ಸೃಷ್ಟಿಯ ಕ್ರಮದ ವಿಷಯಕ್ಕೆ ಪೀಠಿಕೆಯನ್ನು ನೋಡಿರಿ.

ಹೀಗೆ ಪ್ರಾಣಿಗಳ ಕಾರ್ಯವನ್ನೂ ಕರಣವನ್ನೂ ಸೃಷ್ಟಿಸಿ ಅವುಗಳು ಬಾಳುವದಕ್ಕಾಗಿ ಒತ್ತ, ಜನ– ಮುಂತಾದ ರೂಪದ ಅನ್ನವನ್ನೂ : ಆ ಅನ್ನವನ್ನು ತಿಂದದ್ದರಿಂದ ವೀರ್ಯವನ್ನೂ ಎಂದರೆ ಸಾಮರ್ಥ್ಯವನ್ನೂ. ಎಲ್ಲ ಕರ್ಮಗಳಲ್ಲಿಯೂ ತೊಡಗುವದಕ್ಕೆ ಸಾಧನವಾಗಿರುವ ಬಲವನ್ನೂ : ಆ ವೀರ್ಯವುಳ್ಳ ಪ್ರಾಣಿಗಳು ಸಂಕರವಾದರೆ ವಿಶುದ್ಧಿಯಾಗುವದಕ್ಕಾಗಿ ತಪಸ್ಸನ್ನೂ ; ತಪಸ್ಸಿನಿಂದ ಅಂತಃಕರಣದಲ್ಲಿಯೂ ಬಹಿಃಕರಣದಲ್ಲಿಯೂ ವಿಶುದ್ಧಿಯನ್ನು ಹೊಂದಿದ (ಜೀವರು)ಗಳಿಗೆ ಕರ್ಮಕ್ಕೆ ಸಾಧನವಾಗಿರುವ ಋಕ್ಕು, ಯಜುಸ್ಸು, ಸಾಮ, ಅಥರ್ವಾಂಗಿರಸ್ಸು– ಎಂಬ ಮಂತ್ರಗಳನ್ನೂ, ಅವೇಲೆ ಅಗ್ನಿಹೋತ್ರವೇ ಮುಂತಾದ ರೂಪದ ಕರ್ಮವನ್ನೂ ಅವೇಲೆ ಕರ್ಮಗಳಿಗೆ ಫಲವಾಗಿರುವ ಲೋಕಗಳನ್ನೂ ; ಆ ಲೋಕಗಳಲ್ಲಿ ಸೃಷ್ಟಿಯಾಗುವ ಪ್ರಾಣಿಗಳ ದೇವದತ್ತ, ಯಜ್ಞದತ್ತ–ಎಂದು ಮುಂತಾದ ಹೆಸರುಗಳನ್ನೂ (ಸೃಷ್ಟಿಮಾಡಿದನು)೩.

(ಛಾಪ್ಯ)

ಗಗಿ ಏವಮೇತಾಃ ಕಲಾಃ ಪ್ರಾಣಿಸಾನಾರ್ ಅವಿದ್ಯಾದೋಷಬೀಜಾಪೇಕ್ಷಯಾ ಸೃಷ್ಟ್ವಾ ; ತೈಮಿರಿಕಸೃಷ್ಟಿಸೃಷ್ಟ್ವಾ ಇವ ದ್ವಿಚಂದ್ರ್ರಮಶಕಲಮಕ್ಷಿಕಾದ್ಯಾಃ ಸ್ವಪ್ನದೃಕ್ಸೃಷ್ಟ್ವಾ ಇವ ಚ ಸರ್ವಪದಾರ್ಥಾಃ ಪ್ರವಿಶ್ಯಸ್ವೇನ ಪುರುಷೇ ಪ್ರಲೀಯಂತೇ ಹಿತ್ವಾ ನಾಮರೂಪಾದಿವಿಭಾಗಮ್ ; ಕಥಮ್ ?—

(ಛಾಪ್ಯಾರ್ಥ)

ಹೀಗೆ ಈ ಕಲೆಗಳು ತಿಮಿರರೋಗವುಳ್ಳವನ ದೃಷ್ಟಿಯಿಂದ ಸೃಷ್ಟಿಯಾಗುವ ಎರಡನೆಯ ಚಂದ್ರ, ಸೊಳ್ಳೆಗಳು, ನೊಣಗಳು– ಮುಂತಾದ ವುಗಳಂತೆಯೂ ಕನಸುಕಾಣುವಾತನಿಂದ ಸೃಷ್ಟವಾದ ಎಲ್ಲಾ ಪದಾರ್ಥಗಳಂತೆಯೂ ಪ್ರಾಣಿಗಳ ಅವಿದ್ಯೆಯೇ ಮುಂತಾದ ದೋಷಗಳಿಂದ

---

1. ದೇಹೇಂದ್ರಿಯಗಳನ್ನು ಎಂದರ್ಥ ; ಭೂತಸೃಷ್ಟಿಯನ್ನು ಹೇಳಿರುವದೆ. ಭೌತಿಕವಾದ ದೇಹೇಂದ್ರಿಯಗಳ ಸೃಷ್ಟಿಯನ್ನೂ ತಿಳಿಸುವದಕ್ಕೆ ಎಂದರ್ಥ.

2. ಇಲ್ಲಿ ಎಲ್ಲಾ ವಸ್ತುಗಳ ನಾಮಗಳನ್ನೂ ಹೆಸರುಕೊಳ್ಳಬೇಕು. ನಾಮರೂಪಗಳೆರಡನ್ನೂ ಸೃಷ್ಟಿಸಿದನು ಎಂದು ಒಟ್ಟರ್ಥ.

3. ಮುಂಡಕದಲ್ಲಿ ವಿಸ್ತಾರವಾಗಿ ಹೇಳಿರುವ ಸೃಷ್ಟಿಯನ್ನೆಲ್ಲ ಇಲ್ಲಿ ಹದಿನಾರು ಕಲೆಗಳ ರೂಪದಲ್ಲಿ ಸಂಗ್ರಹಿಸಿ ಹೇಳಿರುತ್ತದೆ.

ಬೀಜದ[1] ಅಪೇಕ್ಷೆಯಿಂದ ಸೃಷ್ಟವಾಗಿ ನುಕ್ತೆ ನಾನು, ರೂಪ-ಮುಂತಾದ ಲಿಂಗಪನನ್ನು ಬಿಟ್ಟು ಅದೇ ಪುರುಷನಲ್ಲಿ ಲಯವಾಗುತ್ತವೆ. ಹೇಗೆಂದರೆ:

ಸ ಯಥೈವಾಂ ನದ್ಯಃ ಸ್ಯಂದಮಾನಾಃ ಸಮುದ್ರಾಯಣಾಃ
ಸಮುದ್ರಂ ಪ್ರಾಪ್ಯಾಸ್ತಂ ಗಚ್ಛನ್ತಿ ಭಿದ್ಯೇತೇ ತಾಸಾಂ ನಾಮರೂಪೇ
ಸಮುದ್ರ ಇತ್ಯೇವಂ ಪ್ರೋಚ್ಯತೇ ಏವಮೇವಾಸ್ಯ ಪರಿದ್ರಷ್ಟುರಿಮಾಃ
ಷೋಡಶಕಲಾಃ ಪುರುಷಾಯಣಾಃ ಪುರುಷಂ ಪ್ರಾಪ್ಯಾಸ್ತಂ ಗಚ್ಛನ್ತಿ
ಭಿದ್ಯೇತೇ ಚಾಸಾಂ ನಾಮರೂಪೇ ಪುರುಷ ಇತ್ಯೇವಂ ಪ್ರೋಚ್ಯತೇ
ಸ ಏಷೋಽಕಲೋಽಮೃತೋ ಭವತಿ ತದೇಷ ಶ್ಲೋಕಃ ॥೫॥

೫. ಅದು ಹೇಗೆಂದರೆ, (ಹೇಗೆ) ಸಮುದ್ರಕ್ಕೆ ಹೋಗಬೇಕಾಗಿ ಹರಿಯುತ್ತಿರುವ ಈ ನದಿಗಳು ಸಮುದ್ರನನ್ನು ಸೇರಿದಮೇಲೆ ಅಸ್ತವಾಗುವವೋ (ಹೇಗೆ) ಅವುಗಳ ನಾಮರೂಪಗಳು ನಾಶವಾಗುವವೋ (ಹೇಗೆ ಎಲ್ಲವೂ) ಸಮುದ್ರವೆಂದೀಪರಿಯಲ್ಲಿ ಹೇಳಲ್ಪಡುತ್ತದೆಯೋ, ಇವರಂತೆ ಯೇ ಪುರುಷನನ್ನು ಸೇರಬೇಕಾಗಿರುವ ಈ ಪರಿದ್ರಷ್ಟೃವಿನ ಈ ಹದಿನಾರು ಕಲೆಗಳು ಪುರುಷನನ್ನು ಸೇರಿದಮೇಲೆ ಅಸ್ತವಾಗುತ್ತವೆ; ಇವುಗಳ ನಾಮರೂಪಗಳು ನಾಶವಾಗಿಬಿಡುತ್ತವೆ: ಎಲ್ಲವೂ ಪುರುಷನೆಂದೀ ಪರಿಯಲ್ಲಿ ಹೇಳಲ್ಪಡುತ್ತದೆ. ಆ ಈತನು ಅಕಲನೂ ಅಮೃತನೂ ಆಗುತ್ತಾನೆ. ಅಲ್ಲಿ ಈ ಶ್ಲೋಕ(ವಿದೆ).

(ಭಾಷ್ಯ)

೧೧೪. ಸ ದೃಷ್ಟಾನ್ತಃ ಯಥಾ ಲೋಕೇ ಇಮಾ ನದ್ಯಃ ಸ್ಯನ್ದಮಾನಾಃ ಸ್ರವನ್ತ್ಯಃ ಸಮುದ್ರಾಯಣಾಃ ಸಮುದ್ರ (ಏವ)[2] ಅಯನಂ ಗತಿಃ ಅಸ್ಕಂಭಾವಃ ಯಾಸಾಂ ತಾಃ ಸಮುದ್ರಾಯಣಾಃ ಸಮುದ್ರಂ ಪ್ರಾಪ್ಯ ಉಪಗಮ್ಯ ಅಸ್ತಮ್ ಅದರ್ಶನಂ ನಾಮರೂಪತಿರಸ್ಕಾರಂ ಗಚ್ಛನ್ತಿ | ತಾಸಾಂ ಚ ಅಸ್ತಂಗತಾನಾಂ

1. ಇಲ್ಲಿ ಬೀಜವೆಂಬ ಶಬ್ದವಿರುವುದರಿಂದ ನಿಜವಾಗಿ ಉಪಾದಾನಕಾರಣವೊಂದು ಇರಬೇಕೆಂದು ಭಾವಿಸಬಾರದು. ಅವಿದ್ಯಾಕಾಮಕರ್ಮಗಳೆಂಬ ದೋಷಗಳಿರುವವರೆಗೂ ಮತ್ತೆ ಮತ್ತೆ ಹುಟ್ಟಿ ಸಾಯಲೇಬೇಕಾದರೂ ಆತ್ಮನಿಗಿಂತ ಬೇರೆಯಾಗಿ ಯಾವದೊಂದೂ ಪರಮಾರ್ಥವಾಗಿ ಹುಟ್ಟಿರುವದಿಲ್ಲ, ಲಯವಾಗುವದೂ ಇಲ್ಲ ಎಂದರ್ಥ. ಪ್ರಾತಿಭಾಸಿಕ ರಜತಾದಿಗಳೂ ಒಂದು ಉಪಾದಾನದಿಂದ ಹುಟ್ಟುವವೆಂದು ಕೆಲವರು ಭಾವಿಸಿರುವರು; ಇದು ತಪ್ಪೆಂಬುದಕ್ಕೆ ನೈ. ಭಾ. ೨-೮; ಸೂ. ಭಾ. ೩-೨-೧೨, ೨೩- ಇವುಗಳನ್ನೂ ನೋಡಿ. ದ್ವಿತೀಯಚಂದ್ರಾದಿಗಳಂತೆ ಕಲೆಗಳೂ ಹುಸಿತೋರಿಕೆಯವು ಎಂಬುದೇ ಇಲ್ಲಿ ವಿವಕ್ಷಿತ. 2. ಈ ಮಾತು ಆನಂ ಪಾಠದಲ್ಲಿಲ್ಲ.

3. ಇದು ಆನಂ ಪಾಠದಲ್ಲಿಲ್ಲದಿದ್ದರೂ ಅವಶ್ಯ.

ಭಿದ್ಯೇತೇ ವಿನಶ್ಯೇತೇ ನಾಮರೂಪೇ ಗಙ್ಗಾ ಯಮುನಾ–ಇತ್ಯಾದಿಲಕ್ಷಣೇ ತದ ಭೇದೇನ[1] ಸಮುದ್ರ ಇತ್ಯೇವಂ ಪ್ರೋಚ್ಯತೇ ತದ್ವಚ್ಚ ಖಾದಕಲಕ್ಷಣಮ್। ಏವಂ ಯಥಾಯಂ ದೃಷ್ಟಾನ್ತಃ ಉಕ್ತಲಕ್ಷಣಸ್ಯ ಪ್ರಕೃತಸ್ಯ ಅಸ್ಯ ಪುರುಷಸ್ಯ ಪರಿ ದ್ರಷ್ಟುಃ ಪರಿ ಸಮನ್ತಾತ್ ದ್ರಷ್ಟುಃ ದರ್ಶನಸ್ಯ ಕರ್ತುಃ ಸ್ವರೂಪಭೂತಸ್ಯ। ಯಥಾ ಅರ್ಕಃ ಸ್ವಾತ್ಮಪ್ರಕಾಶಸ್ಯ ಕರ್ತಾ ಸರ್ವತಃ ತದ್ವತ್[2]। ಇಮಾಃ ಷೋಡಶ[3] ಪ್ರಾಣಾದ್ಯಾ ಉಕ್ತಾಃ ಕಲಾಃ ಪುರುಷಾಯಣಾಃ ನದೀನಾಮಿವ ಸಮುದ್ರಃ ಪುರುಷಃ ಅಯನಮ್ ಆತ್ಮಭಾವಗಮನಮ್ ಯಾಸಾಂ ಕಲಾನಾಂ ತಾಃ ಪುರುಷಾ ಯಣಾಃ ಪುರುಷಂ ಪ್ರಾಪ್ಯ ಪುರುಷಾತ್ಮಭಾವಮ್ ಉಪಗಮ್ಯ ತಸ್ಮಿನ್ನೇವ ಅಸ್ತಂ ಗಚ್ಛನ್ತಿ। ಭಿದ್ಯೇತೇ ಚ ಅಸಾಂ ನಾಮರೂಪೇ ಪ್ರಾಣಾದ್ಯಾಖ್ಯಾ ರೂಪಂ ಚ ಯಥಾ ಸ್ವಮ್। ಭೇದೇ ಚ ನಾಮರೂಪಯೋಃ ಯದನಷ್ಟಂ ತತ್ತ್ವಂ ಪುರುಷ ಇತ್ಯೇವಂ ಪ್ರೋಚ್ಯತೇ ಬ್ರಹ್ಮನಿದ್ವಿ[4]॥

(ಭಾಷ್ಯಾರ್ಥ)

ಈ ದೃಷ್ಟಾಂತವು ಹೇಗೆಂದರೆ[5] ಹೇಗೆ ಲೋಕದಲ್ಲಿ ಸಮುದ್ರಾಯಣವಾಗಿ ಎಂದರೆ ಸಮುದ್ರವೇ ತಮಗೆ ಗತಿಯಾಗಿ, (ತಮ್ಮ) ಸ್ವರೂಪವಾಗಿ ಉಳ್ಳವಾಗಿ[6] ಹರಿಯುತ್ತಿರುವ ಓಡಿಸಿಡಿಯುತ್ತಿರುವ ಈ ನದಿಗಳು ಸಮುದ್ರವನ್ನು ಸೇರಿದಮೇಲೆ ಅಸ್ತವಾಗುವವೋ ; ಕಾಣದಂತೆ ನಾಮರೂಪಗಳ ಮರೆಯಾಗುವಿಕೆಯನ್ನು ಹೊಂದುವವೋ, ಹೀಗೆ ಅಸ್ತವಾಗುವ ಅವುಗಳ ಗಂಗೆ, ಯಮುನೆ–ಮುಂತಾದ ನಾಮರೂಪಗಳು (ಹೇಗೆ) ಭಿನ್ನವಾಗುವವೋ, ನಾಶವಾಗುವವೋ ; ಅವರೊಡನೆ ಒಂದಾಗಲು[7] ಆ ನೀರೆಂಬ ವಸ್ತುವು ಸಮುದ್ರ ಎಂದೀಪರಿಯಲ್ಲಿ (ಹೇಗೆ) ಎನಿಸಿ ಕೊಳ್ಳುವದೋ, ಹೀಗೆಯೇ ಈ ದೃಷ್ಟಾಂತದಂತೆಯೇ, ಹಿಂದೆ ಹೇಳಿದ ಸ್ವರೂಪದ ಈ ಪರಿದ್ರಷ್ಟೃವಿನ–ಹೇಗೆ ಸೂರ್ಯನು ತನ್ನ ಬೆಳಕನ್ನು ಎಲ್ಲಾ ಕಡೆಗೂ (ಪಸರಿಸುವ) ತನ್ನ ಬೆಳಕಿಗೆ ಕರ್ತೃವೋ ಹಾಗೆ ಪರಿ-ಸುತ್ತಲೂ ದ್ರಷ್ಟೃವಾಗಿರುವ ತನ್ನ ಸ್ವರೂಪವಾದ ನೋಟಕ್ಕೆ ಕರ್ತೃವಾದ[8]–ಪ್ರಕೃತನಾದ ಈ ಪುರುಷನ ಈ

---

1. ‘‘ತದಭೇದೇ’’ ಎಂದಿಷ್ಟೇ ಅ। ಪಾಠ.
2. ಇಲ್ಲಿ ‘‘ಕಲಾಃ’’ ಎಂಬ ಮಾತು ಅ। ಪಾಠದಲ್ಲಿ ಹೆಚ್ಚಾಗಿದೆ.
3. ಯಥಾ ಎಂಬ ಮಾತು ಎರಡೂ ಕಡೆಗೆ ಅನ್ವಯಿಸುವಂಗಿದೆ.
4. ನೋಡುವದಕ್ಕೆ ಬೇರೆಬೇರೆಯ ರೂಪವಾಗಿದ್ದರೂ ಅವುಗಳ ರೂಪವು ಆಗಲೂ ಸಮುದ್ರವೇ ಎಂದರೆ ನೀರೇ.
5. ‘‘ತದಭೇದೇ’’ ಎಂಬುದರ ಅನುವಾದವಿದು ; ‘‘ತದ್ವಿಭೇದೇ’’ ಎಂದಿದ್ದರೆ ಅವುಗಳು ನಾಶವಾಗಲು ಎಂದರ್ಥ.
6. ಸೂರ್ಯನು ಪ್ರಕಾಶಕನೆಂಬುದು ಹೇಗೋ ಆತ್ಮನು ದ್ರಷ್ಟೃವೆಂಬುದೂ ಹಾಗೆಯೇ ; ನೋಟಕ್ಕೂ ಅವನ ಸ್ವರೂಪಕ್ಕೂ ಭೇದವಿರುವದಿಲ್ಲ.

ಪ್ರಾಣನೇ ಮುಂತಾದ ಮೇಲೆ ಹೇಳಿದ ಹದಿನಾರು ಕಲೆಗಳು ಪುರುಷಾಯಣವಾಗಿ[1] —ನಮಿಗಳಿಗೆ ನಮುಪ್ರದಂತೆ ಪುರುಷನೆ ಆಯನವು, ಎಂದರೆ ಸ್ವರೂಪವನ್ನು ಪಡೆಯುವಿಕೆಯು ಯಾವ ಕಲೆಗಳಿಗೆ (ಆಗಿರುವನೋ, ಅವು ಪುರುಷಾಯಣವಾಗಿ-ಪುರುಷನನ್ನು ಸೇರಿದಮೇಲೆ ಪುರುಷನೆ ಸ್ವರೂಪವನ್ನು ಹೊಂದಿದ ಬಳಿಕ ಹಾಗೆಯೇ ಅಸ್ತವಾಗುತ್ತವೆ, ಮತ್ತು ಇವುಗಳ ನಾಮರೂಪಗಳು ಪ್ರಾಣನೇ ಮುಂತಾದ ಆಯಾ ಹೆಸರೂ ರೂಪವೂ ಭಿನ್ನವಾಗುತ್ತವೆ. ನಾಮರೂಪಗಳು ನಾಶವಾಗುತ್ತಲೂ ನಾಶವಾಗದೆ ಇರುವ ತಕ್ತ್ವವಿರುವದಷ್ಟೆ, ಅದನ್ನು ಬ್ರಹ್ಮಜ್ಞಾನಿಗಳು ಪುರುಷನು ಎಂದು ಕರೆಯುತ್ತಾರೆ.

(ಭಾಷ್ಯ)

ಗಾಯಿ. ಯ ಏವಂ ವಿದ್ವಾನ್ ಗುರುಣಾ ಪ್ರದರ್ಶಿತಕಲಾಪ್ರಲಯಮಾರ್ಗಃ ಸ ಏಷ ವಿದ್ಯಯಾ ಪ್ರವಿಲಾಪಿತಾಸು ಅವಿದ್ಯಾಕಾಮಕರ್ಮಜನಿತಾಸು ಪ್ರಾಣಾದಿ ಕಲಾಸು ಅಕಲಃ| ಅವಿದ್ಯಾಕೃತಕಲಾನಿಮಿತ್ತೋ ಹಿ ಮೃತ್ಯುಃ | ತದಪಗಮೇ ಅಕಲತ್ವಾದೇವ ಅಮೃತಃ ಭವತಿ | ತತ್ ಏತಸ್ಮಿನ್ ಅರ್ಥೇ ಏಷಃ ಶ್ಲೋಕಃ |

(ಭಾಷ್ಯಾರ್ಥ)

ಯಾವನು ಹೀಗೆಂದು ತಿಳಿದುಕೊಂಡು ಗುರುವು ತೋರಿಸಿಕೊಟ್ಟಂತೆ ಕಲೆಗಳನ್ನು ಪ್ರವಿಲಯಮಾಡಿಕೊಳ್ಳುವ ಮಾರ್ಗವನ್ನು (ಕಂಡುಕೊಂಡಿರುವನೋ) ಆ ಈತನು ಅವಿದ್ಯಾಕಾಮಕರ್ಮಗಳಿಂದುಂಟಾದ ಪ್ರಾಣನೇ ಮುಂತಾದ ಕಲೆಗಳು ವಿದ್ಯೆಯಿಂದ ಲಯವಾಡಲ್ಪಡಲಾಗಿ[2] ಅಕಲನಾಗಿರುತ್ತಾನೆ, (ಅಮೃತನಾಗಿರುತ್ತಾನೆ). ಅವಿದ್ಯೆಯಿಂದಾಗಿರುವ ಕಲೆಗಳೆಂಬ ನಿಮಿತ್ತದಿಂದಲೇ ಅಲ್ಲವೆ ಮೃತ್ಯು ಉಂಟಾಗುವದು ?[3] ಅದು ಹೋಗಲಾಗಿ ಕಲೆಗಳಿಲ್ಲದವನಾಗಿರುವದರಿಂದಲೇ ಅಮೃತನಾಗಿರುತ್ತಾನೆ. ಆ ಈ ಅರ್ಥದಲ್ಲಿ ಈ (ಮುಂದಿನ) ಶ್ಲೋಕ(ವಿರುತ್ತದೆ) :—

ಅರಾ ಇವ ರಥನಾಭೌ
ಕಲಾ ಯಸ್ಮಿನ್ ಪ್ರತಿಷ್ಠಿತಾಃ |

---

1. ನಿಜವಾಗಿ ಪುರುಷಸ್ವರೂಪವೇ ಆಗಿದ್ದು.

2. ಪ್ರಪಂಚಪ್ರವಿಲಯವಾದಿಗಳೆಂಬ ಕೆಲವರು ಕಲೆಗಳನ್ನು ಲಯಗೊಳಿಸುವದಕ್ಕೆ ಒಂದಾನೊಂದು ಸಾಧನೆಯು ಬೇಕೆಂದು ವಾದಿಸುತ್ತಿದ್ದರು. ಆತ್ಮವಸ್ತುಜ್ಞಾನದಿಂದಲೇ ಕೃತಕೃತ್ಯತೆಯನ್ನು ಹೇಳುವ ಆಚಾರ್ಯರು ಅವರ ಮತವನ್ನು ಖಂಡಿಸಿ ಜ್ಞಾನದಿಂದಲೇ ಪ್ರಪಂಚವಿಲಯವಾಗುತ್ತದೆ ಎಂದು ತಮ್ಮ ಭಾಷ್ಯದಲ್ಲಿ ಅಲ್ಲಲ್ಲಿ ತಿಳಿಸಿರುತ್ತಾರೆ. ಸೂ. ಭಾ. ೧-೩-೧ ; ೩-೨-೩೧. ಸುಷುಪ್ತಿಮರಣಪ್ರಲಯಗಳಲ್ಲಿ ಕಲೆಗಳ ಲಯವಾದರೂ ಅವು ತೀರ ಹೋಗುವದು ವಿದ್ಯೆಯಿಂದ ಮಾತ್ರ ಸೂ. ಭಾ. ೪-೩-೪, ೧೬.

3. ಕಲೆಗಳು ಮಾರ್ಪಡುತ್ತಿರುವದನ್ನು ಪುರುಷನಲ್ಲಿ ಅಧ್ಯಾಸಮಾಡಿಕೊಳ್ಳುವದರಿಂದ ಅವನಲ್ಲಿ ಜನನಮರಣಾದಿವಿಕಾರಗಳಿರುವಂತೆ ತೋರುತ್ತದೆ—ಎಂದು ಭಾವ.

ತಂ ವೇದ್ಯಂ ಪುರುಷಂ ವೇದ
ಯಥಾ ವೋ ಮೃತ್ಯುಃ ಪರಿವ್ಯಥಾ ಇತಿ ॥೬॥

೬. ಬಂಡಿಯ ಗಾಲಿಯ ಗುಂಬದಲ್ಲಿ ಹಾಕಿದ ಕೋಲುಗಳಂತೆ ಯಾವನಲ್ಲಿ ಕಲೆಗಳು ನಿಂತಿರುವವೋ ವೇದ್ಯನಾದ ಆ ಪುರುಷನನ್ನು ಅರಿತುಕೊಳ್ಳಬೇಕು, (ಹಾಗಾದರೆ) ನಿಮ್ಮನ್ನು ಮೃತ್ಯು ವ್ಯಥೆಗೊಳಿಸದೆ ಇದ್ದೀತು.

(ಭಾಷ್ಯ)

೧೧೬. ಆರಾ ಇವ[1] ರಥಚಕ್ರಪರಿವಾರಾ ಇವ ರಥನಾಭೌ ರಥಚಕ್ರಸ್ಯ ನಾಭೌ ಯಥಾ ಪ್ರನೇಶಿತಾಃ ತದಾಶ್ರಯಾ ಭವನ್ತಿ ಯಥಾ ತಥಾ ಇತ್ಯರ್ಥಃ । ಕಲಾಃ ಪ್ರಾಣಾದ್ಯಾಃ ಯಸ್ಮಿನ್ ಪುರುಷೇ ಪ್ರತಿಷ್ಠಿತಾಃ ಉತ್ಪತ್ತಿಸ್ಥಿತಿಪ್ರಲಯಕಾಲೇಷು ತಂ ಪುರುಷಂ ಕಲಾನಾಮ್ ಆತ್ಮಭೂತಂ ವೇದ್ಯಂ ವೇದನೀಯಂ ಪೂರ್ಣತ್ವಾತ್ ಪುರುಷಂ ಪುರಿ ಶಯನಾದ್ ವಾ ವೇದ ಜ್ಞಾನೀಯಾತ್[3] । ಯಥಾ ಹೇ ಶಿಷ್ಯಾಃ ಮಾ ವೋ ಯುಷ್ಮಾನ್ ಮೃತ್ಯುಃ ಪರಿವ್ಯಥಾ ವ್ಯಥಾಂ ಪರಿವ್ಯಧಯತು । ನ ಚೇದ್ ವಿಜ್ಞಾಯೇತ ಪುರುಷಃ ಮೃತ್ಯುನಿಮಿತ್ತಾಂ ವ್ಯಥಾಮಾಪನ್ನಾ ದುಃಖಿನ ಏವ ಯೂಯಂ ಸ್ಥ । ಅತಃ ತನ್ಮಾಭೂತ್ ಯುಷ್ಮಾಕಮ್ ಇತ್ಯಭಿಪ್ರಾಯಃ ॥

(ಭಾಷ್ಯಾರ್ಥ)

ಬಂಡಿಯ ಚಕ್ರದ ಸುತ್ತಲೂ ಇರುವ ಹಾರಿಕೋಲುಗಳು ಹೇಗೆ ರಥನಾಭಿಯಲ್ಲಿ ಎಂದರೆ ಬಂಡಿಯ ಗಾಲಿಯ ಗುಂಬದಲ್ಲಿ ಸೇರಿಕೊಂಡು ಅದನ್ನೇ ಆಶ್ರಯಿಸಿಕೊಂಡಿರುವವೋ ಹಾಗೆ ಎಂದರ್ಥ. (ಹಾಗೆ) ಪ್ರಾಣವೇ ಮುಂತಾದ ಕಲೆಗಳು ಯಾವ ಪುರುಷನಲ್ಲಿ ಹುಟ್ಟುವದು, ಇರುವದು, ನಾಶವಾಗುವದು–(ಈ ಮೂರು) ಕಾಲಗಳಲ್ಲಿಯೂ ನಿಂತಿರುವವೋ ಕಲೆಗಳಿಗೆ ಆತ್ಮನಾಗಿರುವ ವೇದ್ಯನಾದ ಅರಿಯಲ್ಪಡಬೇಕಾಗಿರುವ ಆ ಪುರುಷನನ್ನು– ಪೂರ್ಣನಾಗಿರುವದರಿಂದ[2] ಅಥವಾ ಪುರು(ಶರೀರ)ದಲ್ಲಿ ಇದ್ದುಕೊಂಡಿರುವದರಿಂದ[3] ಪುರುಷನೆನಿಸಿಕೊಂಡಿರುವ (ಆತ್ಮನನ್ನು) ತಿಳಿಯಬೇಕು, ಅರಿತುಕೊಳ್ಳಬೇಕು. ಎಲೈ ಶಿಷ್ಯರೆ, ಹಾಗಾದರೆ ಮೃತ್ಯುವು ನಿಮ್ಮನ್ನು ವ್ಯಥೆಗೊಳಿಸದೆ ಇದ್ದೀತು ; ಪುರುಷನನ್ನು ಅರಿತುಕೊಳ್ಳ

1. ಇದು ವಾ॥ ಕಾ॥ ಪಾಠದಲ್ಲಿದೆ.

2. ಕಲೆಗಳು ತೋರುವಾಗ ಅವುಗಳನ್ನೆಲ್ಲ ವ್ಯಾಪಿಸಿಕೊಂಡಿರುವದರಿಂದ, ಅವುಗಳು ಅಡಗಿದಾಗ ತಾನೊಬ್ಬನೇ ಇರುವದರಿಂದ.

3. ಹಿಂದೆ ೬–೨ ಭಾ. ಭಾ. ೯೬ರಲ್ಲಿ ಹೇಳಿರುವಂತೆ ಜಿಜ್ಞಾಸುವಿನ ಶರೀರದಲ್ಲಿಯೇ ಅರಿತುಕೊಳ್ಳಬೇಕಾಗಿರುವದರಿಂದ.

ದಿದ್ದರೆ ಸೃಷ್ಟ್ಯುನ್ಮುಖತ್ವವಾದ ವ್ಯಥೆಯನ್ನು ಹೊಂದಿ ನೀವು ದುಃಖಿಗಳಾಗಿಯೇ ಇರುವಿರಿ, ಆವ್ದರಿಂದ ಅದು ನಿಮಗೆ ಆಗದೆ ಇರಲಿ' –ಎಂದಭಿಪ್ರಾಯ.

ಕಥೆಯ ಉಪಸಂಹಾರ

ತಾನ್ ಹೋವಾಚೈತಾವದೇವಾಹಮೇತತ್ಪರಂ ಬ್ರಹ್ಮ
ವೇದ ನಾತಃ ಪರಮಸ್ತೀತಿ ॥೭॥

೭. ಆತನು ಅವರಿಗೆ ಹೇಳಿದ್ದೇನೆಂದರೆ :– "ಇಷ್ಟೇ, ಈ ಪರ ಬ್ರಹ್ಮನನ್ನು ನಾನು ಅರಿತಿರುವೆನು ; ಇದಕ್ಕಿಂತ ಹೆಚ್ಚಿನದು ಇಲ್ಲ."

(ಭಾಷ್ಯ)

೧೧೭. ತಾನ್ ಏವಂ ಅನುಶಿಷ್ಯ ಶಿಷ್ಯಾನ್ ತಾನ್ ಹೋವಾಚ ಪಿಪ್ಪಲಾದಃ ಕಿಲ ಏತಾವದೇವ ವೇದ್ಯಂ ಪರಂ ಬ್ರಹ್ಮ | ವೇದ ವಿಜಾನಾಮಿ ಅಹಮ್ ಏತತ್ | ನ ಅತಃ ಅಸ್ಮಾತ್ ಪರಮ್ ಅಸ್ತಿ ಪ್ರಕೃಷ್ಟತರಂ ವೇದಿತವ್ಯಂ ಇತಿ ಏವಮ್ ಉಕ್ತವಾನ್ ಶಿಷ್ಯಾಣಾಮ್ ಅವಿದಿತಶೇಷಾಸ್ತಿತ್ವಾ ಶಙ್ಕಾನಿವೃತ್ತಯೇ ಕೃತಾರ್ಥಬುದ್ಧಿಜನನಾರ್ಥಂ ಚ ||

(ಭಾಷ್ಯಾರ್ಥ)

ಆ ಶಿಷ್ಯರಿಗೆ ಈ ರೀತಿ ಬೋಧಿಸಿದವನಾಗಿ ಪಿಪ್ಪಲಾದನು ಅವರನ್ನು ಕುರಿತು ಇಂತೆಂದನಂತೆ : 'ತಿಳಿಯಬೇಕಾದ ಪರಬ್ರಹ್ಮವು ಇಷ್ಟೇ.[1] ನಾನು ಇದನ್ನು ಅರಿತಿರುವೆನು. ಇದಕ್ಕಿಂತಲೂ ಈ (ಬ್ರಹ್ಮಕ್ಕಿಂತಲೂ) ಹೆಚ್ಚಿನದು, ತಿಳಿಯಬೇಕಾದ ಹೆಚ್ಚಿನ (ವಸ್ತು) ಇರುವದಿಲ್ಲ' ಎಂದು ಹೀಗೆ ಶಿಷ್ಯರಿಗೆ ತಿಳಿಯದೆ ಉಳಿದಿರುವದು (ಏನಾದರೂ) ಇರಬಹುದೆಂಬ ಶಂಕೆಯನ್ನು ತೊಲಗಿಸುವದಕ್ಕಾಗಿಯೂ (ತಾವು) ಕೃತಾರ್ಥರಾದೆವೆಂಬ ಬುದ್ಧಿಯನ್ನುಂಟುಮಾಡುವದಕ್ಕಾಗಿಯೂ ಹೇಳಿದನು.

ತೇ ತಮರ್ಚ್ಯಮೆನ್ತೇಸ್ತ್ವಂ ಹಿ ನಃ ಪಿತಾ ಯೋಽಸ್ಮಾಕ
ಮವಿದ್ಯಾಯಾಃ ಪರಂ ಪಾರಂ ತಾರಯಸೀತಿ| ನಮಃ ಪರಮ
ಋಷಿಭ್ಯೋ ನಮಃ ಪರಮಋಷಿಭ್ಯಃ ॥೮॥

೮. ಅವರು ಆತನನ್ನು ಅರ್ಚಿಸುತ್ತಾ 'ನೀನೇ ನಮ್ಮ ತಂದೆಯು. ಯಾವ ನೀನು ನಮ್ಮ ಅವಿದ್ಯೆಯ ಆಚೆಯ ದಡವನು

---

1. ಏತಾವದೇವ–ಎಂಬಲ್ಲಿಗೇ ವಾಕ್ಯವನ್ನು ಮುಗಿಸಿಕೊಳ್ಳದಿದ್ದರೆ "ಇಷ್ಟೇ ನನಗೆ ತಿಳಿಯುವದು" ಎಂದಂತಾಗಿ ಗುರುವು ಪೂರ್ಣವಾಗಿ ಹೇಳಲಿಲ್ಲವೆಂದಾಗುವದು.

2 ಇನ್ನಿಲ್ಲ ಎಂದದ್ದರಿಂದ ನೀವು ಎಲ್ಲವನ್ನೂ ತಿಳಿದುಕೊಂಡಿರಿ, ಕೃತಾರ್ಥರಾದಿರಿ –ಎಂದಂತೆ ಆಯಿತು.

ನುಷ್ಟಿಸಿರುತ್ತೀಯೆ' ಎಂದರು. ಪರಮಸಂಸ್ಥಿಗಳಿಗೆ ನಮಸ್ಕಾರ ! ಪರಮಋಷಿಗಳಿಗೆ ನಮಸ್ಕಾರ !

(ಶ ಷ್ಕ)

೧೧೮. ತತಃ ತೇ ಶಿಷ್ಯಾಃ ಗುರವೇ ಅನುಶಿಷ್ಟಾಃ ತಾಂ ಗುರುಂ ಕೃತಾರ್ಥಾಃ ಸನ್ತಃ ವಿದ್ಯಾನಿಷ್ಕ್ರಯಾಯ[1] ಅಪಶ್ಯನ್ತಃ ಕಿಂ ಕೃತವನ್ತಃ ಇತಿ ? ಉಚ್ಯತೇ ! ಅರ್ಚಯನ್ತಃ ಪೂಜಯನ್ತಃ ಪಾದಯೋಃ ಪುಷ್ಪಾಞ್ಜಲಿಪ್ರಕಿರಣೇನ ಪ್ರಣಿಪಾತೇನ ಚ ಶಿರಸಾ; ಕಿಮ್ ಊಚುಃ ಇತಿ ? ಅಹ-ತ್ವಂ ಹಿ ನಃ ಅಸ್ಮಾಕಂ ಪಿತಾ ! ಬ್ರಹ್ಮಶರೀರಸ್ಯ ವಿದ್ಯಯಾ ಜನಯಿತೃತ್ವಾತ್ ನಿತ್ಯಸ್ಯ ಅಜರಾಮರಣಸ್ಯ ಅಭಯಸ್ಯ | ಯಃ ತ್ವಮೇವ ಅಸ್ಮಾಕಮ್ ಅವಿದ್ಯಾಯಾಃ ವಿಪರೀತಜ್ಞಾನಾತ್ ಜನ್ಮಜರಾಮರಣದೋಷಸಮಾಪಾದಿನ್ಯಾಶ್ಚ[2] ಅಪಾರಾತ್ ಅವಿದ್ಯಾಮಹೋದಧೇಃ ವಿದ್ಯಾಪ್ಲವೇನ ಪರಮ್ ಅಪ್ಲವಾನ್ಯಾತ್ಮಿಲಕಣಾಂ ಮೋಕ್ಷಾಖ್ಯಾಂ ಮಹೋದಧೇರಿನ ಪಾರಂ ತಾರಯಸಿ ಅಸ್ಮಾನ್ ಇತ್ಯತಃ ಪಿತೃತ್ವಂ ತವ ಅಸ್ಮಾನ್ ಪ್ರತಿ ಉಪಪದ್ಯತೇ[3] ಇತರಸ್ಮಾತ್ | ಇತರೋಽಪಿ ಹಿ ಪಿತಾ ಶರೀರಮಾತ್ರಂ ಜನಯತಿ ತಥಾಪಿ ಸ ಪೂಜ್ಯತಮೋ ಲೋಕೇ | ಕಿಮು ವಕ್ತವ್ಯಮ್ ಆತ್ಯನ್ತಿಕಾಭಯಮದಾತೃಃ ಇತ್ಯಭಿಪ್ರಾಯಃ | ನಮಃ ಪರಮಋಷಿಭ್ಯಃ ಬ್ರಹ್ಮವಿದ್ಯಾಸಂಪ್ರದಾಯಕರ್ತೃಭ್ಯಃ | 'ನಮಃ ಪರಮಋಷಿಭ್ಯಃ' ಇತಿ ದ್ವಿರ್ವಚನಮ್ ಆದರಾರ್ಥಮ್ |

(ಭಾಷ್ಯಾರ್ಥ)

ಆಮೇಲೆ ಗುರುವಿನಿಂದ ಬೋಧಿತರಾಗಿದ್ದ ಆ ಶಿಷ್ಯರು ಕೃತಾರ್ಥರಾಗಿ ವಿದ್ಯೆಗೆ ನಿಷ್ಕ್ರಯವೇನೂ[2] ತೋರದ್ದರಿಂದ ಆ ಗುರುವಿಗೆ ಏನು ಮಾಡಿದರು ? ಎಂದರೆ ಹೇಳುತ್ತಾರೆ : ಆತನನ್ನು ಅಡಿಗಳಿಡೆಯಲ್ಲಿ ಪುಷ್ಪಾಂಜಲಿಯನ್ನು ಎರಚುವದು, ತಲೆಬಾಗಿ ನಮಸ್ಕರಿಸುವದು ಇವುಗಳಿಂದ ಅರ್ಚಿಸುತ್ತಾ ಪೂಜಿಸುತ್ತಾ[3] ಏನು ಹೇಳಿದರೆಂದರೆ (ಶ್ರುತಿ) ಹೇಳುತ್ತದೆ : ನೀನೇ ನಮಗೆ ನಮ್ಮಂಗಳಿಗೆ ತಂದೆಯು ; ಏಕೆಂದರೆ ನಿತ್ಯವಾಗಿಯೂ ಮುಪ್ಪುಸಾವುಗಳಿಲ್ಲದ ಅಂಜಿಕೆಯಿಲ್ಲದ್ದಾಗಿಯೂ ಇರುವ ಬ್ರಹ್ಮಶರೀರವನ್ನು (ನೀನು) ವಿದ್ಯೆಯಿಂದ ಉಂಟುಮಾಡಿಕೊಟ್ಟಿರು

---

1. "ಅನ್ಯತ್" ಎಂದು ವಾ|| ಪಾಠದಲ್ಲಿ ಹೆಚ್ಚಾಗಿದೆ.

2. ವಾ|| ಪಾಠಕ್ಕೆ ಬೇರೆಯೇನೂ "ತೋರದ್ದರಿಂದ" ಎಂದರ್ಥ. ಬ್ರಹ್ಮವಿದ್ಯೆಗೆ ಯಾವ ಗುರುದಕ್ಷಿಣೆಯನ್ನು ಕೊಟ್ಟರೂ ಸರಿತೂಗಲಾರದು ಎಂದು ಭಾವ.

3. ಗುರುಭಕ್ತಿಗಿಂತ ಹೆಚ್ಚಿನ ದಕ್ಷಿಣೆಯಿಲ್ಲ, ಇದು ಜ್ಞಾನಕ್ಕೆ ಒಂದು ಮುಖ್ಯ ಕಾರಣ-ಎಂದು ಭಾವ.

ತ್ತೀಯೆ.[1] ಯಾವ (ಈ) ನೀನೇ ನಮ್ಮಗಳ ಅವಿದ್ಯೆಯಿಂದ ಎಂದರೆ ತಪ್ಪು ತಿಳಿವಳಿಕೆಯಿಂದ[2] ಹುಟ್ಟಿ, ಮುಪ್ಪು, ಸಾವು, ಜೇಸೆ, ದುಗುಡ–ಮುಂತಾದ ಮೊಸಳೆಗಳುಳ್ಳ, ಕಡೆಗಾಣದ ಅವಿದ್ಯೆಯೆಂಬ ಮೊಡ್ಡ ಸಾಗರದಿಂದ ನಮ್ಮನ್ನು ವಿದ್ಯೆಯೆಂಬ ಹಡಗಿನಲ್ಲಿ ಏಚೆಯೆ ಎಂದರೆ ಮತ್ತೆ ಹಿಂತಿರುಗದ ಸ್ವರೂಪದ ಮೋಕ್ಷವೆಂಬ ಹೆಸರಿನ –ಕಪಲಿನ ಆಚೆಯ ದಡದಂತೆ (ಸಂಸಾರದ ಕಡಲಿನ)– ಆಚೆಯ ದಡವನ್ನು ಮುಟ್ಟಿಸುತ್ತೀಯೆ. ಆದ್ದರಿಂದ ಇನ್ನೊಬ್ಬ (ದೇಹಪಾತ್ಯವಾದ: ತಂದೆಗಿಂತಲೂ ನೀನೇ ನಮ್ಮಗಳ ತಂದೆ ಎನ್ನುವದು ಯುಕ್ತವು. ಆ ಇನ್ನೊಬ್ಬ ತಂದೆಯಾದರೂ ಶರೀರವನ್ನು ಮಾತ್ರ ಉಂಟುಮಾಡಿಕೊಂಡು ತ್ತಾನೆ : ಆದರೂ (ಅಷ್ಟು ಮಾತ್ರದಿಂದಲೇ) ಆವನು ಲೋಕದಲ್ಲಿ (ಉಳಿದ) ಎಲ್ಲರಿಗಿಂತಲೂ ಪೂಜ್ಯನಾಗಿರುತ್ತಾನೆ. ಅತ್ಯಂತಿಕವಾದ[3] ಅಭಯವನ್ನು ಕೊಟ್ಟಿರುವ (ನಿನ್ನ ವಿಷಯದಲ್ಲಿ ಪೂಜ್ಯತಮನೆಂದು) ಹೇಳುವದೇನು ? ಎಂದು ಅಭಿಪ್ರಾಯ. ಬ್ರಹ್ಮವಿದ್ಯಾಸಂಪ್ರದಾಯಕರ್ತೃಗಳಾದ ಪರಮ ಋಷಿಗಳಿಗೆ ನಮಸ್ಕಾರ ! "ಪರಮಋಷಿಗಳಿಗೆ ನಮಸ್ಕಾರ" ಎಂದು ಎರಡು ಸಲ ಹೇಳಿರುವದು ಆದರವನ್ನು ಸೂಚಿಸುವದಕ್ಕೆ.

ಓಂ ತತ್ ಸತ್

1. ಅವಿದ್ಯೆಯಿಂದ ಸಂಸಾರಿಗಳಾಗಿದ್ದ ನಮಗೆ ವಿದ್ಯೆಯಿಂದ ನಮ್ಮ ಸ್ವರೂಪವು ಈಗ ಹೊಸದಾಗಿ ಹುಟ್ಟಿದಂತಾಯಿತು ಎಂದರ್ಥ.

2. ಆಚಾರ್ಯರ ಸಿದ್ಧಾಂತದಲ್ಲಿ ಅವಿದ್ಯೆಯೆಂದರೆ ಅಧ್ಯಾಸವೇ ಎಂಬುದಕ್ಕೆ ಈ ಪದವೊಂದು ಗಮಕವು.

3. ನಿತ್ಯವಾದ, ಕೊನೆಗಾಣದ.

ಉಪನಿಷತ್ತಿನ ಸಾರ

ಒಂದನೆಯ ಪ್ರಶ್ನೆ

೧-೩. ಸುಕೇಶಭಾರದ್ವಾಜನೇ ಮುಂತಾಗಿ ಇರು ವರು ಪ್ರಖ್ಯಾತ ಋಷಿಗಳಾದರೆ ಬಳಿಗೆ ಒಂದು ಒಂದು ವರ್ಷದವರೆಗೆ ಬ್ರಹ್ಮಚರ್ಯವನ್ನು ನಡಿಸಿಬಳಿಕ ಆತನನ್ನು ಕೇಳಿದ ಪ್ರಶ್ನೆಗಳಿಗೆ ಪಿಪ್ಪಲಾದನು ತಿಳಿಪಿ ಉತ್ತರಗಳು ಈ ಉಪನಿಷತ್ತಿನಲ್ಲಿವೆ.

೪. ಕಬಂಧಿಕಾತ್ಯಾಯನನ ಪ್ರಶ್ನೆ : ಪೂಜ್ಯರೆ, ಈ ಪ್ರಜೆಗಳು ಹೇಗೆ ಹುಟ್ಟಿ ಬರುತ್ತವೆ?

೫. ಪಿಪ್ಪಲಾದನ ಉತ್ತರ: ಪೂರ್ವಕಲ್ಪದಲ್ಲಿ ಎಲ್ಲಿ ನಿರಂತರವಾಗಿ ಬ್ರಹ್ಮಸ್ವರೂಪಧ್ಯಾನವನ್ನು ಮಾಡಿದವನು ಅದರ ಫಲವಾಗಿ ಈ ಕಲ್ಪಕ್ಕೆ ಪ್ರಜಾಪತಿಯಾಗುತ್ತಾನೆ. ಅವನು ಎಲ್ಲವನ್ನೂ ಸೃಷ್ಟಿಸುತ್ತಾನೆ. ಅವನು ರಯಿ, ಪ್ರಾಣ ಎಂಬ ಎರಡು ರೂಪಗಳನ್ನು ತಳೆದು ಕ್ರಮವಾಗಿ ಎಲ್ಲವೂ ಆಗುತ್ತಾನೆ.

೬-೮. ಹೇಗೆಂದರೆ ಸೂರ್ಯನು ಆದಿತ್ಯನೆಂಬ ಪ್ರಾಣನೂ ಚಂದ್ರನೆಂಬ ರಯಿಯೂ ಆಗುತ್ತಾನೆ. ಆದಿತ್ಯನು ಸರ್ವರ ಪ್ರಾಣವನ್ನೂ ತೆಪ್ಪಿಸಿ ತನ್ನ ಕಿರಣಗಳಿಂದ ಅವಕಾಶವಾಗಿ ಮಾಡಿಕೊಳ್ಳುತ್ತಿರುತ್ತಾನೆ. ಅದರಿಂದ ಸರ್ವಪ್ರಾಣಿಗಳಿಗೂ ಪ್ರಾಣರೂಪದಿಂದ ಕಾರಣನಾಗಿರುವವನು ಆದಿತ್ಯರೂಪದಲ್ಲಿ ಪ್ರಜಾಪತಿ.

೯-೧೧. ಆದಿತ್ಯಪ್ರಜಾಪತಿರೂಪದಲ್ಲಿರುವ ಪ್ರಾಣರಯಿಗಳಿಂದ ಸಂವತ್ಸರವಾಗುತ್ತದೆ. ಅದ್ದರಿಂದ ಸಂವತ್ಸರವೂ ಪ್ರಜಾಪತಿಯೇ ; ಸಂವತ್ಸರದ ಒಂದು ಭಾಗವಾದ ಉತ್ತರಾಯಣವು ಪ್ರಾಣ. ದಕ್ಷಿಣಾಯನವು ರಯಿ. ಉತ್ತರಾಯಣದ ಮಾರ್ಗದಿಂದ ಹೋಗುವ ಸಾಧಕರು ಪುನರಾವೃತ್ತಿಯಿಲ್ಲದ ಗತಿಯನ್ನು ಪಡೆಯುವರು ; ದಕ್ಷಿಣಾಯನದಿಂದ ಹೋಗುವವರು ಸಂಸಾರಕ್ಕೆ ಮತ್ತೆ ಹಿಂತಿರುಗುವರು. ಐ.ತ.ವಷಿಸಗಳೆಂಬ ಅವಯವಗಳಿಂದ ಕೂಡಿದ ಸಂವತ್ಸರರೂಪಿಯಾದ ಪ್ರಜಾಪತಿಯಲ್ಲಿ ಇಡಿಯ ಜಗತ್ತೇ ಸೇರಿಕೊಂಡಿರುವದು.

೧೨-೧೩. ಸಂವತ್ಸರದ ಅವಯವಗಳಾದ ಮಾಸವೂ ದಿವಸವೂ ಒಂದೊಂದೂ ಪ್ರಜಾಪತಿಯೆಂದೇ ಭಾವಿಸಬೇಕು. ಉದಾಹರಣೆಗೆ ಮಾಸರೂಪಿಯಾದ ಪ್ರಜಾಪತಿಗೆ ಶುಕ್ಲಪಕ್ಷವೇ ಪ್ರಾಣ, ಕೃಷ್ಣಪಕ್ಷವೇ ರಯಿ. ಇದರಂತೆ ದಿವಸರೂಪಿಯಾದ ಪ್ರಜಾಪತಿಗೆ ಹಗಲೇ ಪ್ರಾಣ, ರಾತ್ರಿಯೇ ರಯಿ ಪ್ರಾಣರೂಪವಾದ ಶುಕ್ಲಪಕ್ಷವಲ್ಲಿ ಯಾಗಮೂಡುವವರಿಗೆ ಉತ್ತಮಗತಿ ; ಪ್ರಾಜೋಪಾಸಕರಿಗೆ ಎರಡೂ ಶುಕ್ಲಪಕ್ಷವೇ ಆಗಿರುತ್ತವೆ, ಆದ್ದರಿಂದ ಅವರಿಗೆ ಶುಭಫಲವೇ ಆಗುತ್ತದೆ. ಇದರಂತೆ ಪ್ರಾಣರೂಪವಾದ ಹಗಲಿನಲ್ಲಿ ಸ್ತ್ರೀಸಂಯೋಗವನ್ನು ಮಾಡದೆ ರಾತ್ರಿಯಲ್ಲಿ ಮಾತ್ರವೇ ಋತುಕಾಲದಲ್ಲಿ ಭಾರ್ಯಾಗಮನವನ್ನು ಮಾಡುವವರಿಗೆ ಬ್ರಹ್ಮಚರ್ಯದ ಫಲವೇ ದೊರೆಯುತ್ತದೆ.

೧೪. ಪ್ರಜಾಪತಿಯು ದಿವಸರೂಪಿಯಾಗಿ ಆಮೇಲೆ ಬತ್ತವೇ ಮುಂತಾದ ಧಾನ್ಯಗಳ ರೂಪವನ್ನು ತೆಗೆದುಕೊಳ್ಳುತ್ತಾನೆ. ಅನ್ನವನ್ನು ತಿಂದ ಜನರಲ್ಲಿ ರಕ್ತವೂ ರೇತಸ್ಸೂ ಆಗಿ ಅದರಿಂದ ಪ್ರಜೆಗಳು ಹುಟ್ಟುತ್ತವೆ.

೧೫-೧೬. ಕರ್ಮಾನುಸಾರವಾಗಿ ಮರಣಾನಂತರ ಗೃಹಸ್ಥರು ಚಂದ್ರಲೋಕವನ್ನು ಸೇರುತ್ತಾರೆ. ಕರ್ಮಾನುಷ್ಠಾನ ಉಪಾಸನೆಯನ್ನೂ ಚೆನ್ನಾಗಿ ಮಾಡಿದ ಮಿಕ್ಕ ಆತ್ಮವಿದರು ಸೂರ್ಯದ್ವಾರದಿಂದ ಬ್ರಹ್ಮಲೋಕವನ್ನು ಸೇರುತ್ತಾರೆ. ಬ್ರಹ್ಮಲೋಕದಿಂದ ಮುಂದೆ ಹಿಂತಿರುಗುವುದಿಲ್ಲ. ಆದರೆ ಚಂದ್ರಲೋಕಕ್ಕೆ ಹೋದ ಕರ್ಮಿಗಳು ಕರ್ಮದ ಫಲವು ಸವೆಯುವಷ್ಟರಲ್ಲಿ ಸಂಸಾರಕ್ಕೆ ಮರಳಿ ಬರುತ್ತಾರೆ. ಅವರೇ ನೀರಿನ ರೂಪದಿಂದ ಅನ್ನ, ರೇತಸ್ಸು-ಇವುಗಳ ಮೂಲಕವಾ ಬೇರೆಬೇರೆಯ ಪ್ರಜೆಗಳಾಗಿ ಹುಟ್ಟುತ್ತಾರೆ. ಆದ್ದರಿಂದ ಕರ್ಮಕ್ಕನುಗುಣವಾಗಿ ಪ್ರಜೆಗಳು ಹುಟ್ಟುತ್ತಿವೆ, ಅವು ನಿಜವಾಗಿ ಪ್ರಜಾಪತಿಯಿಂದಲೇ ಬಂದಿರುತ್ತವೆ.

ಎರಡನೆಯ ಪ್ರಶ್ನೆ

೧. ಭಾರ್ಗವವೈದರ್ಭಿಯ ಪ್ರಶ್ನೆ : ಈ ಶರೀರವನ್ನು ಧರಿಸುವುದಕ್ಕೆ ಯಾವ ದೇವತೆಯು ಬೇಕಾಗಿರುತ್ತದೆ ? ಇದರಲ್ಲಿ ಯಾವುವು ತಮ್ಮ ಹೆಚ್ಚಿಗೆಯನ್ನು ತೋರ್ಪಡಿಸಿಕೊಳ್ಳುತ್ತಿರುವವು ? ಇವುಗಳಲ್ಲಿಲ್ಲ ಶ್ರೇಷ್ಠವಾದುದು ಯಾವುದು ?

೨-೪. ಪಿಪ್ಪಲಾದನ ಉತ್ತರ: ಆಕಾಶವೇ ಮುಂತಾದ ಐದು ಭೂತಗಳು ಶರೀರದ ನಿರ್ಮಾಣವನ್ನು ತಳೆದಿರುತ್ತವೆ. ಪಂಚಬುದ್ಧೀಂದ್ರಿಯಗಳೂ ಪಂಚಕರ್ಮೇಂದ್ರಿಯಗಳೂ ಇದರಲ್ಲಿ ತಮ್ಮ ವ್ಯಾಪಾರವನ್ನು ಮಾಡುತ್ತಿರುವವು ಒಂದಾನೊಂದು ಕಾಲದಲ್ಲಿ ಇವು ತಾವು ಒಬ್ಬೊಬ್ಬರೇ ಈ ದೇಹವನ್ನು ತಡೆದಿಟ್ಟುಕೊಂಡಿರುವೆವೆಂದು ಹೆಮ್ಮೆಪಡುವುದಕ್ಕೆ ಮೊದಲು ಮಾಡಿದವು. ಆದರೆ ಮುಖ್ಯಪ್ರಾಣನು "ಎಲಾ, ಭ್ರಾಂತರಾಗದಿರಿ, ನಾನೇ ಪ್ರಾಣಾಪಾನಾದಿ ವೃತ್ತಿಭೇದಗಳಿಂದ ಶರೀರದಲ್ಲಿರುವ ವ್ಯಾಪಾರವನ್ನೆಲ್ಲ ನಡೆಯಿಸುತ್ತಿರುವೆನು" ಎಂದು ಅವಕ್ಕೆ ತಿಳಿಯುವೇಳಿದನು. ಆದರೆ ಕರಣಗಳಿಗೆ ಈ ವಿಷಯದಲ್ಲಿ ನಂಬಿಕೆಯಾಗದೆಹೋಯಿತು. ಆದ್ದರಿಂದ ಪ್ರಾಣನು ಸ್ವಲ್ಪ ಮುನಿಸಿನಿಂದ ಶರೀರವನ್ನು ಬಿಟ್ಟು ಮೇಲಕ್ಕೇಳುವವನಂತೆ ಮಾಡಿದನು. ಕೂಡಲೆ, ಜೇನುಗಳರಸನು ಎದ್ದ ಕ್ಷಣದಲ್ಲಿ ಮಿಕ್ಕ ನೊಣಗಳೂ ತಾವೂ ಏಳುವಂತೆ, ಪ್ರಾಣನ ಹಿಂಗಡೆಯಲ್ಲಿಯೇ ಮಿಕ್ಕ ಪ್ರಾಣಗಳಾದ ಕರಣಗಳೂ ಏಳಬೇಕಾಗಿ ಬಂದಿತು. ಆಗ ಆ ಪ್ರಾಣನ ಹೆಚ್ಚುಗಾರಿಕೆಯನ್ನು ಮನಗಂಡು ಹೀಗೆಂದು ಅವನನ್ನು ಹೊಗಳಿದವು.

೫-೧೩. ಈ ಪ್ರಾಣನೇ ಅಗ್ನಿ, ಸೂರ್ಯ, ಪರ್ಜನ್ಯ, ವಾಯು, ಭೂಮಿ, ಚಂದ್ರ-ಮುಂತಾದ ದೇವತೆಯು ಮೂರ್ತಾಮೂರ್ತಸ್ವರೂಪವಾಗಿರುವದೆಲ್ಲವೂ ಈತನೇ. ಈತನೇ ದೇವತೆಗಳ ಐಕ್ಯತವು. ವೇದಗಳೂ ಬ್ರಹ್ಮಕ್ಷತ್ರಬಲವೂ ಇವನೇ. ಸಂತಾನಬೀಜವೂ ಶರೀರಾಯಿಗಳೂ ಮುಕ್ಕಳೂ ಈತನೇ. ಈತನೇ ಜಕ್ಷುರಾದಿಪ್ರಾಣಗಳ ರೂಪದಲ್ಲಿ ನಿಂತಿರುವನು ; ಆ ಜಕ್ಷುರಾದಿಗಳು ತಮ್ಮ ತಮ್ಮ ವಿಷಯವನ್ನು ಈತನಿಗೇ ಕಾಣಿಕೆಯಾಗಿ ಒಪ್ಪಿಸುತ್ತಿರುವವು. ದೇವತೆಗಳಿಗೂ ಪಿತೃಗಳಿಗೂ ಹವ್ಯಕವ್ಯಗಳನ್ನು ಮುಟ್ಟಿಸುವವನು ಈತನೇ. ಅಧ್ಯಾತ್ಮದಲ್ಲಿ ಸಮಸ್ತಶರೀರವ್ಯಾಪಾರವನ್ನೂ ನಡೆಯಿಸುತ್ತಾ ಅಂಗಗಳಿಗೆಲ್ಲ ಸಾರವೆನಿಸಿಕೊಂಡಿರುವವನು ಈತನೇ. ಪರ್ಜನ್ಯನಾಗಿ ಮಳೆಯನ್ನು ಸುರಿಸಿ ತನ್ನ ಸ್ವರೂಪರಾದ ಪ್ರಜೆಗಳಿಗೆಲ್ಲ ಆನಂದವನ್ನುಂಟುಮಾಡುವವನೂ ಈತನೇ "ಪ್ರಾಣನೆ, ನೀನು ಸ್ವಭಾವಶುದ್ಧನು, ಅಥರ್ವಣರಿಗೆ ಪೂಜ್ಯನಾಗಿರುವ ವೈಶ್ವಾನರಿಯೆಂಬ ಅಗ್ನಿಯು ನೀನೇ. ಜಕ್ಷುರಾದಿಗಳಾದ ನಾವು ಹೋಮದ್ರವ್ಯವನ್ನು ನಿನಗೆ ಕೊಡುವವರು. ನೀನಿ

ಜಗತ್ತಿನಲ್ಲಿ ಒಡೆಯನು. ನೀನೇ ನಮಗೆ ತಂದೆ, ಎಲ್ಲಕ್ಕೂ ತಂದೆ. ನಮ್ಮಲ್ಲಿಯೂ ಮುನಿಸ್ಸುಗಳಲ್ಲಿಯೂ ಇರುವ ನಿನ್ನಿಂದಲೇ ನಾವು ಮಂಗಳಸ್ವರೂಪರಾಗಿ ಕಾಣಿಸಿಕೊಳ್ಳುತ್ತಿರುವೆವು ; ಆದ್ದರಿಂದ ನಮ್ಮನ್ನು ಬಿಟ್ಟುಹೋಗಿ ನಮ್ಮನ್ನು ಅಮಂಗಲರೂಪರನ್ನಾಗಿ ಮಾಡದಿರು. ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಇರುವ ಭೋಗ್ಯವೆಲ್ಲ ಭೋಕ್ತನಾದ ನಿನ್ನ ವಶದಲ್ಲಿರುವುದು. ಆದಕಾರಣ ಪ್ರಾಣನೆ, ಮುಕ್ಕಳನ್ನು ತಾಯಿ ಕಾಪಾಡುವಂತೆ ನೀನೂ ನಮ್ಮನ್ನು ಕಾಪಾಡಬೇಕು. ಜನರಿಗೆ ಬ್ರಾಹ್ಮಣಸಂಪತ್ತು ಕ್ಷತ್ರಿಯಸಂಪತ್ತೂ ನಿನ್ನಿಂದಲೇ ದೊರಕಬೇಕಾಗಿರುವುದು ; ನೀಡಿದ್ದನ್ನೆಲ್ಲವೂ ಜೊತೆಬಹುದಾಗಿರುವ ಸಂಪತ್ತನ್ನೂ ಪ್ರಜ್ಞೆಯನ್ನೂ ನಮಗೆ ಅನುಗ್ರಹಿಸು.

ಹೀಗೆ ಕಾರ್ಯಕರಣರೂಪವಾಗಿರುವ ಆಕಾಶಾದಿಗಳ್ಗೆ, ವಾಕ್ಕಕ್ಷುರಾದಿಗಳು, ಮನಸ್ಸು –ಇವೆಲ್ಲದರೊಳಗೂ ಇದ್ದುಕೊಂಡಿರುವ ಪ್ರಾಣನೇ ಎಲ್ಲಕ್ಕೂ ಶ್ರೇಷ್ಠನಹನು. ಇವನೇ ಭೋಕ್ತೃವಾದ ಸರ್ವಾತ್ಮನಾದ ಪ್ರಜಾಪತಿಯು.

ಮೂರನೆಯ ಪ್ರಶ್ನೆ

೧. ಕೌಸಲ್ಯ ಆಶ್ವಲಾಯನನ ಪ್ರಶ್ನೆ : ಪ್ರಾಣನು ಎಕದಿಂದ ಹುಟ್ಟುತ್ತಾನೆ ? ಶರೀರದಲ್ಲಿ ಹೇಗೆ ಪ್ರವೇಶಿಸುತ್ತಾನೆ ? ಇಲ್ಲಿ ಹೇಗೆ ವಿಭಜಿಸಿಕೊಂಡಿರುವನು ? ಇವನು ಉತ್ಕ್ರಮಣವಾಗುವದು ಹೇಗೆ ? ಇವನು ಹೊರಗೂ ಒಳಗೂ ಎಲ್ಲವನ್ನೂ ಧರಿಸಿರುವದು ಹೇಗೆ ?

೨-೩. ಪಿಪ್ಪಲಾದನ ಉತ್ತರ : ಮನುಷ್ಯನಿಂದ ನೆರಳು ಹುಟ್ಟುವಂತೆ ಆತ್ಮನಿಂದಲೇ ಪ್ರಾಣನು ಉತ್ಪತ್ತಿಯಾಗುತ್ತಾನೆ. ಇವನು ಕರ್ಮವಾಸನೆಯ ದೆಸೆಯಿಂದ ಈ ಶರೀರಕ್ಕೆ ಬರುತ್ತಾನೆ.

೪-೭. ಇವನು ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ– ಎಂದು ಐದು ಬಗೆಯಾಗಿ ಹಂಚಿಕೊಂಡು ಶರೀರದಲ್ಲಿ ಕೆಲಸಮಾಡುತ್ತಿರುತ್ತಾನೆ. ಇಂದ್ರಿಯಗಳನ್ನೂ ತನ್ನ ವೃತ್ತಿಗಳನ್ನೂ ಇಂತಿಂಥ ಕೆಲಸವನ್ನಾದಬೇಕೆಂದು ಕಟ್ಟುಮಾಡಿ ನಿಲ್ಲಿಸುತ್ತಾನೆ. ಕೆಳಭಾಗದಲ್ಲಿ ಅಪಾನ, ಮೇಲೆ ಪ್ರಾಣ, ನಡುವೆ ಸಮಾನ, ಹೃದಯದಿಂದ ದೇಹದ ಎಲ್ಲಾ ಕಡೆಗೂ ಹಬ್ಬಿಕೊಂಡಿರುವ ನಾಡಿಗಳಲ್ಲಿ ವ್ಯಾನ, ಈ ನಾಡಿಗಳಲ್ಲಿ ಮೇಲಕ್ಕೆ ಹೋಗಿರುವ ಸುಷುಮ್ನೆಯಲ್ಲಿ ಉದಾನ–ಹೀಗೆ ಹಂಚಿಕೊಂಡಿರುತ್ತಾನೆ.

೮–೯. ಪ್ರಾಣನು ಹೊರಗೆ ಆದಿತ್ಯಾದಿರೂಪದಿಂದ ಇದ್ದುಕೊಂಡು ಒಳಗಿರುವ ಚಕ್ಷುರಾದಿಗಳನ್ನು ಅನುಗ್ರಹಿಸುತ್ತಾನೆ. ಆದಿತ್ಯಪ್ರಾಣನು ಶರೀರದಲ್ಲಿರುವ ಪ್ರಾಣವೃತ್ತಿಗೂ ಭೂಪ್ರಾಣನು ಅಪಾನವೃತ್ತಿಗೂ ಅಂತರಿಕ್ಷಪ್ರಾಣನು ಸಮಾನಕ್ಕೂ ವಾಯುಪ್ರಾಣನು ವ್ಯಾನಕ್ಕೂ ತೇಜಃಪ್ರಾಣನು ಉದಾನಕ್ಕೂ ಅನುಗ್ರಾಹಕರಾಗಿರುತ್ತಾರೆ. ಹೀಗೆ ಪ್ರಾಣನು ಆದಿತ್ಯಾದಿರೂಪದಿಂದಲೂ ಚಕ್ಷುರಾದಿರೂಪದಿಂದಲೂ ಒಳಗೂ ಹೊರಗೂ ವ್ಯಾಪಿಸಿಕೊಂಡಿರುತ್ತಾನೆ.

೧೦. ಉದಾನವೃತ್ತಿರೂಪದಿಂದ ಈ ಪ್ರಾಣನು ಮನುಷ್ಯನನ್ನು ಇಂದ್ರಿಯಗಳಿಂದ ಶೂನ್ಯಲೋಕಕ್ಕೂ ಪಾಪಲೋಕಕ್ಕೂ ಅವನನ ಭಾವನೆಯಂತೆ ಕರೆದೊಯ್ಯುತ್ತಾನೆ.

೧೨–೧೩. ಹೀಗೆ ಪ್ರಾಣನ ಉತ್ಪತ್ತಿ, ಶರೀರಕ್ಕೆ ಬರುವಿಕೆ, ಬೇರೆಬೇರೆಯ ಸ್ಥಾನಗಳಲ್ಲಿ ಇರುವಿಕೆ, ಜೊತೆ ಒಳಗಿನ ವ್ಯಾಪ್ತಿ–ಇವುಗಳನ್ನು ತಿಳಿದು ಉಪಾಸನೆ ಮಾಡಿದವನಿಗೆ ಈ ಲೋಕದಲ್ಲಿ ಪ್ರಜಾಸುಖವೂ ಪರ ಲೋಕದಲ್ಲಿ ಪ್ರಾಜಾತ್ಮಸಾಯುಜ್ಯವೂ ಆಗುವವು.

ನಾಲ್ಕನೆಯ ಪ್ರಶ್ನೆ

೧. ಸೌರ್ಯಾಯಣಿ ಗಾರ್ಗ್ಯನ ಪ್ರಶ್ನೆ : ಶರೀರದಲ್ಲಿ ನಿದ್ರೆಮಾಡುವ ಭಾಗಗಳು ಯಾವವು ? ಎಚ್ಚರಿರುವವು ಯಾವವು ? ಕನಸುಗಳನ್ನು ನೋಡುತ್ತಿರುವವರು ಯಾರು? ಗಾಢನಿದ್ರೆಯಲ್ಲಿ ಆಗುವ ಸುಖವು ಯಾರದು ? ಆಗ ಮಿಕ್ಕೆಲ್ಲವೂ ಏತರಲ್ಲಿ ಸೇರಿಕೊಳ್ಳುವದು ?

೨–೪ ಪಿಪ್ಪಲಾದನ ಉತ್ತರ : ಶ್ರೋತ್ರವೇ ಮುಂತಾದ ಕರಣಗಳು ತಮ್ಮ ವ್ಯಾಪಾರವನ್ನು ಬಿಟ್ಟು ಮನಸ್ಸಿನಲ್ಲಿ ಲಯವಾಗುತ್ತವೆ ; ಆಗ ಮನುಷ್ಯನು ನಿದ್ರಿಸುತ್ತಾನೆ ಎನ್ನುತ್ತಾರೆ. ಆಗಲೂ ಪ್ರಾಣಗಳು ಎಚ್ಚರವಾಗಿರುತ್ತವೆ ಈ ಪ್ರಾಣಗಳಲ್ಲಿ ಉದಾನವೆಂಬುದು ಮನುಷ್ಯನಿಗೆ ಸುಷುಪ್ತಿಯಲ್ಲಿ ಪ್ರತಿದಿನವೂ ಬ್ರಹ್ಮಪ್ರಾಪ್ತಿಯಾಗುವಂತೆ ಮಾಡುತ್ತದೆ.

೫–೯. ಮನಸ್ಸು ಕನಸಿನಲ್ಲಿ ವಿಷಯವಿಷಯಿಭಾವವನ್ನು ತಳೆಯುತ್ತಿರುವದು. ಆ ಮನುಷ್ಯನು ಜಾಗ್ರತ್ತಿನ ವಾಸನೆಯಿಂದ ಎಲ್ಲವನ್ನೂ ಕಾಣುತ್ತಿರುವನು. ಯಾವಾಗ ಈ ಮನಸ್ಸು ಪಿತ್ತವೆಂಬ ತೇಜಸ್ಸಿನಿಂದ ವ್ಯಾಪ್ತವಾಗಿ ಸುಮ್ಮನಾಗುವದೋ ಆಗ ಮನಸ್ಸಿನ ವೃತ್ತಿಗಳೂ ಕರಣಗಳೂ ಹೃದಯದಲ್ಲಿ ಲಯವಾಗುತ್ತವೆ. ಆಗ ಆತ್ಮರೂಪದ ಸಾಮಾನ್ಯವಾದ ಸಂವಿಧೂ ಸಾಮಾನ್ಯವಾದ ಅರಿವೂ ಇರುತ್ತವೆ ; ಪೃಥ್ವ್ಯಾದಿಸೂಕ್ಷ್ಮ ಭೂತಗಳು, ಸೂಕ್ಷ್ಮಭೂತಗಳು, ಚಕ್ಷುರಾದಿಕರಣಗಳು, ರೂಪಾದಿವಿಷಯಗಳು, ಅಗ್ನ್ಯಾದಿ ದೇವತೆಗಳು, ಮನ ಆದಿ ಅಂತಃಕರಣ, ಪ್ರಾಣಕಾರ್ಯ– ಇವೆಲ್ಲವೂ ಪರಮಾತ್ಮಸ್ವರೂಪದಲ್ಲಿಯೇ ಸೇರಿಹೋಗಿರುತ್ತವೆ. ಉಪಾಧಿಗಳಿಂದಾಗಿದ್ದ ಕರ್ತೃಭೋಕ್ತೃಸ್ವರೂಪನಾದ ಜೀವನೂ ಪರಮಾತ್ಮನಲ್ಲಿ ಬೆರೆತುಕೊಂಡಿರುತ್ತಾನೆ.

೧೦–೧೧. ಯಾವ ವಿಶೇಷಣವೂ ಇಲ್ಲದ ಅಕ್ಷರವೆಂಬ ಪರಮಾತ್ಮನ ಈ ಸ್ವರೂಪವನ್ನೂ ಇದರಲ್ಲಿ ಕಾರ್ಯಕರಣಗಳಿಂದೊಡಗೂಡಿದ ವಿಜ್ಞಾನಾತ್ಮನು ಐಕ್ಯವಾಗುವನೆಂಬುದನ್ನೂ ಅರಿತುಕೊಂಡವನಿಗೆ ಅಕ್ಷರಪ್ರಾಪ್ತಿಯೂ ಸರ್ವಾತ್ಮತ್ವವೂ ದೊರಕುವವು.

ಐದನೆಯ ಪ್ರಶ್ನೆ

೧. ಶೈಬ್ಯಸತ್ಯಕಾಮನ ಪ್ರಶ್ನೆ : ಸಾಯುವವರೆಗೂ ತತ್ಪರನಾಗಿ ಓಂಕಾರವನ್ನು ಉಪಾಸನೆಮಾಡುವವನಿಗೆ ಯಾವ ಲೋಕವು ದೊರಕುತ್ತದೆ ?

೨. ಪಿಪ್ಪಲಾದನ ಉತ್ತರ : ಓಂಕಾರವು ಪರಬ್ರಹ್ಮಕ್ಕೂ ಅಪರಬ್ರಹ್ಮಕ್ಕೂ ಪ್ರತೀಕವಾಗಿರುತ್ತದೆ. ಅದ್ದರಿಂದ ಸಾಧಕನು ಇದನ್ನು ಯಾವ ದೃಷ್ಟಿಯಿಂದ ಉಪಾಸನೆಮಾಡುತ್ತಾನೋ ಆ ಬ್ರಹ್ಮವನ್ನು ಪಡೆಯುತ್ತಾನೆ,

೩–೫. ಹೇಗೆಂದರೆ ಯಾವನು ಓಂಕಾರದ ಒಂದು ಮಾತ್ರೆಯ ಸ್ವರೂಪವನ್ನೆರಿಸಿ ಓಂಕಾರವನ್ನುಪಾಸನೆಮಾಡಿದರೆ, ಎಂದರೆ ಅಕಾರವೊಂದಕ್ಕೆ ಅರ್ಥವನ್ನು ತಿಳಿದುಕೊಂಡು

ಉಪಾಸನೆಮಾಡಿದರೆ, ಮನುಷ್ಯಲೋಕದಲ್ಲಿ ಬ್ರಾಹ್ಮಣಶ್ರೇಷ್ಠನಾಗಿ ಪುಟ್ಟಿ ಬ್ರಹ್ಮಚರ್ಯ ತಪಸ್ಸು, ಶ್ರದ್ಧೆ – ಇವುಗಳಿಂದೊಡಗೂಡಿ ಪ್ರಯಾಣವಾಗುತ್ತಾನೆ. ಹೀಗೆಯೇ ಎರಡು ಮಾತ್ರೆಗಳ ಜ್ಞಾನದಿಂದೊಡಗೂಡಿ ಓಂಕಾರವನ್ನು ಉಪಾಸನೆಮಾಡಿದರೆ ಸೋಮಲೋಕವನ್ನು ಪಡೆಯುತ್ತಾನೆ. ಆದರೆ ಮೂರುಮಾತ್ರೆಗಳ ಜ್ಞಾನದಿಂದ ಕೂಡಿದ ಓಂಕಾರೋಪಾಸನೆಯಿಂದ ಬ್ರಹ್ಮಲೋಕವನ್ನೇ ಪಡೆಯುತ್ತಾನೆ; ಅಲ್ಲಿಂದ ಮುಂದಕ್ಕೆ ಜ್ಞಾನವನ್ನು ಹೊಂದಿ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುತ್ತಾನೆ.

೬–೭. ಹೀಗೆ ಓಂಕಾರವನ್ನು ಅದರ ಪೂರ್ಣಸ್ವರೂಪವನ್ನರಿತು ಉಪಾಸನೆಮಾಡಿದ್ದರಿಂದ ಅಪರಬ್ರಹ್ಮನನ್ನೂ ಅದರ ಮೂರು ಮಾತ್ರೆಗಳ ಸ್ವರೂಪದ ವಿವೇಚನೆಯನ್ನು ಮಾಡಿ ಹೊಂದಿಸಿಕೊಂಡು ಉಪಾಸನೆಮಾಡಿದ್ದರಿಂದ ಪೂರ್ವದಲ್ಲಿ ಅಪರಬ್ರಹ್ಮನನ್ನೂ ಕ್ರಮಕ್ರಮವಾಗಿ ಶಾಂತಶಿವಾದ್ವೈತಸ್ವರೂಪವಾದ ಪರಬ್ರಹ್ಮನನ್ನೂ ಕಾಣುವುತ್ತಾನೆ.

ಆರನೆಯ ಪ್ರಶ್ನೆ

೧. ಸುಕೇಶಭಾರದ್ವಾಜನ ಪ್ರಶ್ನೆ : ಹದಿನಾರು ಕಲೆಗಳಿಂದ ಕೂಡಿದ ಪುರುಷನನ್ನು ಎಲ್ಲಿ ಅರಿತುಕೊಳ್ಳಬೇಕು ?

೨. ಪಿಪ್ಪಲಾದನ ಉತ್ತರ : ಈ ಕಲೆಗಳಿಗೆ ಆಧಾರವಾಗಿರುವ ಪುರುಷನು ನಮ್ಮ ಶರೀರದಲ್ಲಿ ಹೃದಯದಲ್ಲಿಯೇ ಇರುತ್ತಾನೆ.

೩. ಪ್ರಾಣದ ಉತ್ಕ್ರಾಂತಿಯಿಂದ ಆತ್ಮನಿಗೆ ಉತ್ಕ್ರಾಂತಿಯೆಂದೂ ಪ್ರಾಣವಿಲ್ಲದೆ ಆತ್ಮನು ಶರೀರದಲ್ಲಿರುವನೆಂದೂ ವ್ಯವಹಾರ.

೪–೫. ಆದರೆ ಪ್ರಾಣಾದಿಕಲೆಗಳು ಅವಿದ್ಯೆಯು ದೃಷ್ಟಿಯಲ್ಲಿ ಆತ್ಮನಿಂದಲೇ ಹುಟ್ಟಿ ಆತ್ಮನಲ್ಲಿಯೇ ತೋರುತ್ತಿದ್ದು, ನದಿಗಳು ಸಮುದ್ರದಲ್ಲಿ ಸೇರಿಕೊಳ್ಳುವಂತೆ ಕೊನೆಗೆ ಆತ್ಮನಲ್ಲಿಯೇ ಸೇರಿಕೊಳ್ಳುತ್ತವೆ, ನಿಜವಾಗಿ ನೋಡಿದರೆ ನದಿಗಳೆಲ್ಲವೂ ಸೀನ ರೂಪದಿಂದ ಯಾವಾಗಲೂ ಸಮುದ್ರವೇ ಆಗಿರುವಂತೆ ಕಲೆಗಳೆಲ್ಲವೂ ಪುರುಷನೇ ಆಗಿರುತ್ತವೆ. ಪ್ರಾಣ, ಶ್ರದ್ಧೆ, ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವಿ, ಇಂದ್ರಿಯಗಳು, ಮನಸ್ಸು, ಅನ್ನ, ವೀರ್ಯ, ತಪಸ್ಸು, ವೇದಗಳು, ಕರ್ಮ, ಲೋಕಗಳು, ಹೆಸರುಗಳು– ಈ ಹದಿನಾರು ಕಲೆಗಳೂ ಪುರುಷನಿಂದಲೇ ಸೃಷ್ಟವಾಗಿ, ಪುರುಷನಿಗಿಂತ ಬೇರೆಯಾಗಿರದೆ, ಪುರುಷನಲ್ಲಿಯೇ ಅಡಗುತ್ತಿರುವುದರಿಂದ ಎಲ್ಲವೂ ಪುರುಷನೇ ಎಂದು ಜೀವನು ವಿದ್ಯೆಯಿಂದ ತಿಳಿದುಕೊಳ್ಳುವನೋ ಅವನು ನಿಷ್ಕಲನೂ ಅಮೃತನೂ ಆಗಿರುವ ಪುರುಷನೇ ಆಗುವನು.

೭–೮. ಕಥೆಯ ಉಪಸಂಹಾರ : ಪಿಪ್ಪಲಾದನು ಶಿಷ್ಯರಿಗೆ ಹೀಗೆಂದು ಉಪದೇಶ ಮಾಡಿದ ಬಳಿಕ "ಇಷ್ಟೇ ತಿಳಿದುಕೊಳ್ಳಬೇಕಾದ ಪರಬ್ರಹ್ಮವೆಂಬುದು; ಇದಕ್ಕಿಂತ ಹೆಚ್ಚಿನದೇನೂ ಇಲ್ಲ" ಎಂದು ನುಡಿದನು. ಅವರು "ನೀನು ನಮ್ಮ ತಂದೆಗಿಂತಲೂ ಪೂಜ್ಯನು, ಏಕೆಂದರೆ ತತ್ತ್ವಬೋಧೆಯಿಂದ ನಮ್ಮನ್ನು ಅವಿದ್ಯೆಯೆಂಬ ಹೆಗ್ಗಡಲಿನ ಆಚೆಯ ದಡವನ್ನು ಸೇರಿಸಿರುವೆ" ಎಂದು ನಮಸ್ಕಾರಾದಿಗಳಿಂದ ಆತನನ್ನು ಪೂಜಿಸಿದರು. ಅದ್ದರಿಂದ ಈ ಪರಬ್ರಹ್ಮವಿದ್ಯೆಯನ್ನು ಉಪದೇಶಮಾಡುವ ಸಂಪ್ರದಾಯವನ್ನು ನಡೆಯಿಸಿಕೊಂಡುಬಂದಿರುವುದರಿಂದ ಪರಮಋಷಿಗಳಿಗೆ ಮುಮುಕ್ಷುವಾದವನು ಆದರದಿಂದ ನಿತ್ಯವೂ ನಮಸ್ಕಾರಮಾಡಬೇಕು.

ಮಂತ್ರಗಳ ಅನುಕ್ರಮಣಿಕೆ

ಮಂತ್ರಗಳ ಪ್ರತೀಕ		ಪ್ರ.	ಮು.	ಪುಟ
ಅಕ್ರೈಷ ದೇವಃ		೪	೫	೭೩
ಅಥ ಕಬನ್ಧೀ ಕಾತ್ಯಾಯನಃ		೧	೩	೬
ಅಥ ಯದಿ ದ್ವಿಮಾತ್ರೇಣ		೫	೪	೧೦೦
ಅಥ ಹೈನಂ ಕೌಸಲ್ಯಃ		೩	೧	೪೬
ಅಥ ಹೈನಂ ಭಾರ್ಗವಃ		೨	೧	೩೦
ಅಥ ಹೈನಂ ಶೈಬ್ಯಃ		೫	೧	೯೪
ಅಥ ಹೈನಂ ಸುಕೇಶಾಃ		೬	೧	೧೧೧
ಅಥ ಹೈನಂ ಸೌರ್ಯಾಯಣೀ		೪	೧	೬೩
ಅಥಾದಿತ್ಯ ಉದಯನ್		೧	೬	೧೦
ಅಥೈಕಯೋರ್ಧ್ವ ಉದಾನಃ		೩	೭	೫೩
ಅಥೋತ್ತರೇಣ ತಪಸಾ		೧	೧೦	೧೭
ಅನ್ನಂ ವೈ ಪ್ರಜಾಪತಿಃ		೧	೧೪	೨೫
ಅರಾ ಇವ ರಥನಾಭೌ		೨	೬	೩೬
”		೬	೬	೧೫೦
ಅಹೋರಾತ್ರೋ ವೈ		೧	೧೩	೨೩
ಅತ್ಮನ ಏಷ ಪ್ರಾಣಃ		೩	೩	೪೮
ಆದಿತ್ಯೋ ಹ ವೈ ಪ್ರಾಣಃ		೧	೫	೯
ಆದಿತ್ಯೋ ಹ ವೈ ಬಾಹ್ಯಃ ಪ್ರಾಣಃ		೩	೮	೫೫
ಇನ್ದ್ರಾಸ್ತ್ವಂ ಪ್ರಾಣ ತೇಜಸಾ		೨	೯	೪೦
ಉತ್ಪತ್ತಿಮಾಯತಿಂ ಸ್ಥಾನಮ್		೩	೧೨	೬೦
ಋಗ್ಭಿರೇತಂ ಯಜುರ್ಭಿಃ		೫	೭	೧೦೭
ಏಷ ಹಿ ದ್ರಷ್ಟಾ ಸ್ರಷ್ಟಾ		೪	೯	೮೯
ಏಷೋಽಗ್ನಿಸ್ತಪತಿ		೨	೫	೩೫
ತದ್ಯೇಹ ವೈ ತತ್		೧	೧೫	೨೬
ತಸ್ಮೈ ಸ ಹೋವಾಚ		೧	೪	೭
”		೨	೨	೩೧
”		೩	೨	೪೭

ಮಂತ್ರಗಳ ಪ್ರತೀಕ		ಪ್ರ.	ಸಂ.	ಪುಟ
ತಸ್ಮೈ ಸ ಹೋವಾಚ	....	೪	೩	೬೬
,,	....	೫	೩	೯೬
,,	....	೬	೩	೧೧೪
ತಾನ್ ವರಿಷ್ಠಃ ಪ್ರಾಣಃ	....	೨	೩	೩೬
ತಾನ್ ಹ ಸ ಋಷಿಃ	....	೧	೨	೪
ತಾನ್ ಹೋವಾಚೈತಾವದೇವ	....	೬	೭	೧೫೨
ತಿಸ್ರೋ ಮಾತ್ರಾ ಮೃತ್ಯುಮತ್ಯ್ಕಃ	....	೫	೬	೧೦೪
ತೇಜೋ ಹ ವಾ ಉದಾನಃ	....	೩	೯	೫೬
ತೇ ತಮರ್ಚಯಶ್ಚಃ	....	೬	೮	೧೫೨
ತೇಷಾಮಸೌ ವಿರಜಃ	....	೧	೧೬	೨೭
ದೇವಾನಾಮಸಿ ವಹ್ನಿತಮಃ	....	೨	೯	೩೯
ಪಞ್ಚಪಾದಂ ಪಿತರಮ್	....	೧	೧೫	೧೯
ಪರಮೇವಾಕ್ಷರಮ್	....	೪	೧೦	೯೦
ಪೃಥಿವೀ ಚ ಪೃಥಿವೀಮಾತ್ರಾ ಚ	....	೪	೮	೮೫
ಪಾಯೂಪಸ್ಥೇಽಪಾನಮ್	....	೩	೫	೫೦
ಪ್ರಜಾಪತಿಶ್ಚರಸಿ	....	೨	೭	೩೭
ಪ್ರಾಣಸ್ಯೇದಂ ವಶೇ	....	೨	೧೩	೪೪
ಪ್ರಾಣಾಗ್ನಯ ಏವೈತಸ್ಮಿನ್	....	೪	೩	೬೮
ಮಾಸೋ ವೈ ಪ್ರಜಾಪತಿಃ	....	೧	೧೨	೨೧
ಯ ಏವಂ ವಿದ್ವಾನ್ ಪ್ರಾಣಮ್	....	೩	೧೧	೫೯
ಯಚ್ಚಿತ್ತಸ್ತೇನೈಷ ಪ್ರಾಣಮ್	....	೩	೧೦	೫೮
ಯಥಾ ಸಮ್ರಾಡೇವ	....	೩	೪	೪೯
ಯದಾ ತ್ವಮಭಿವರ್ಷಸಿ	....	೨	೧೦	೪೦
ಯದುಚ್ಛ್ವಾಸನಿಸ್ವಾಸೌ	....	೪	೪	೭೦
ಯಃ ಪುನರೇತಂ ತ್ರಿಮಾತ್ರೇಣ	....	೫	೫	೧೦೧
ಯಾ ತೇ ತನೂರ್ವಾಚಿ	....	೨	೧೨	೪೩
ವಿಜ್ಞಾನಾತ್ಮಾ ಸಹ	....	೪	೧೧	೯೨
ವಿಶ್ವರೂಪಂ ಹರಿಣಮ್	....	೧	೮	೧೩
ವ್ರಾತ್ಯಸ್ತ್ವಂ ಪ್ರಾಣ	....	೨	೧೧	೪೨
ಸ ಈಕ್ಷಾಂಚಕ್ರೇ	....	೬	೩	೧೨೯

ಸ ವಿಷ ವೈಶ್ವಾನರಃ	....	೧	೭	೧೨
ಸಂವತ್ಸರೋ ವೈ ಪ್ರಜಾಪತಿಃ	....	೧	೮	೧೪
ಸ ಪ್ರಾಣಮಸೃಜತ	....	೩	೪	೧೪೪
ಸ ಯಥೇಮಾ ನದ್ಯಃ	....	೩	೫	೧೪೮
ಸ ಯೆವಾ ತೇಜಸಾ	....	೪	೩	೨೩
ಸ ಯಥಾ ಸೋಮ್ಯ	....	೪	೭	೨೪
ಸ ಯದ್ಯೇಕಮಾತ್ರಮ್	....	೫	೩	೯೮
ಸುಕೇಶಾ ಚ ಭಾರದ್ವಾಜಃ	....	೧	೧	೨
ಸೋಽಭಿಮಾನಾದೂರ್ಧ್ವಮ್	....	೨	೪	೩೪
ಹ್ಯದಿ ಹ್ಯೇಷ ಆತ್ಮಾ	....	೩	೩	೫೨

ಶಬ್ದಾನುಕ್ರಮಣಿಕೆ

ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಸಂಸ್ಕೃತಭಾಷ್ಯದ ಭಾಗವನ್ನು ಸೂಚಿಸುವವು.

೧. ಅಕ್ಷರಮ್—
ಪರಮಾತ್ಮ, ೫೯, ೫೨, ೫೮, ೭೨. ೭೪, ೭೬, ೭೭.

೨. ಅಜ್ಞಾನಮ್—
ತಿಳಿಯದೆ ಇರುವಿಕೆ, ೩, ೮೮.

೩. ಅನ್ನೋತ್ಪತ್ತಿಕ್ರಮಃ—
ಬ್ರಹ್ಮಾಂಡವು ಉತ್ಪತ್ತಿಯಾಗುವ ಕ್ರಮ ೪.

೪. ಅದೈಷ್ಟಂ ಫಲಮ್—
ಈ ಲೋಕದಲ್ಲಿ ಕಾಣಲಿರುವಿಕೆ, ಪರಲೋಕದಲ್ಲಾಗುವುದೆಂದು ಶಾಸ್ತ್ರದಲ್ಲಿ ಹೇಳಿರುವ ಫಲ, ೨೦.

೫. ಅಧಿಭೂತಮ್—
ಭೂತಗಳಿಗೆ ಸಂಬಂಧಪಟ್ಟ, ಹೊರಗಿನ, ೫೭.

೬. ಅಧಿದೈವತಮ್—
ಸೂರ್ಯನೇ ಮುಂತಾದ ದೇವತೆಗಳಿಗೆ ಸಂಬಂಧಪಟ್ಟಿರುವ, ೫೭, ೪೫.

೭. ಅಧ್ಯಾತ್ಮಮ್, ಆಧ್ಯಾತ್ಮಿಕಮ್—
ತನಗೆ ಸಂಬಂಧಪಟ್ಟ, ತನ್ನ ಶರೀರದೊಳಗಿನ, ೫೭, ೪೫, ೫೦.

೮. ಅಧ್ಯಾರೋಪಃ—
ಕಲ್ಪನೆ, ತತ್ತ್ವವನ್ನು ತಿಳಿಸುವುದಕ್ಕಾಗಿ ಶ್ರುತಿಯಲ್ಲಿಟ್ಟುಕೊಂಡಿರುವ ಕಲ್ಪನೆ, ೯೦

೯. ಅನಪಾಯೋಪಜನಧರ್ಮಕಮ್—
ನಾಶವಾಗಲಿ, ಹುಟ್ಟಾಗಲಿ ತನ್ನ ಧರ್ಮವಲ್ಲದಿರುವ ಜೈತನ್ಯ ೯೧.

೧೦. ಅನೃತಮ್—
ಸುಳ್ಳಾಡುವಿಕೆ, ೫೦, ೨೨, ಮುಂತೋರಿಕೆ ೩೨.

೧೧. ಅನ್ತರಾತ್ಮಾ—
ಆತ್ಮನಿಗೂ ಶರೀರಕ್ಕೂ ನಡುವೆ ಇದ್ದು ಆತ್ಮ ಸಂತೆ ಕಾಣುತ್ತಿರುವ ಸೂಕ್ಷ್ಮಶರೀರ, ೮೩, ೧೧೨.

೧೨. ಅನ್ತರ್ಬಹಿಃಕರಣಾನಿ—
ಒಳಗಿನ ಕರಣವಾದ ಮನಸ್ಸು ಮುಕ್ತ ಹೊರಗಿನ ಕರಣಗಳಾದ ಇಂದ್ರಿಯಗಳು, ೧೧೨.

೧೩. ಅನ್ನಮ್—
ಭೋಗ್ಯವಾದದ್ದು : ಪ್ರಾಣ, ರಯಿ—ಇವುಗಳಲ್ಲಿ ಎರಡನೆಯದು, ೫, ೬, ೧೩, ೧೭ : ಆಹಾರವಸ್ತು, ೩೮.

೧೪. ಅಪರಂ ಬ್ರಹ್ಮ—
ಕಡಿಮೆಯ ಬ್ರಹ್ಮ, ಹಿರಣ್ಯಗರ್ಭ, ೨, ೨೬, ೬೦, ೮೬.

೧೫. ಅಪರಾ ವಿದ್ಯಾ—
ಕಡಿಮೆಯ ವಿದ್ಯೆ, ಕರ್ಮ ಮತ್ತು ಉಪಾಸನೆ, ೪, ೫೧.

೧೬. ಅಭಿಧ್ಯಾನಮ್—
ಯಮನಿಯಮಾದಿಗಳಿಂದ ಕೂಡಿಕೊಂಡು ಭಕ್ತಿಯಿಂದ ಚಿಂತಿಸುವಿಕೆ, ೭೯, ೮೧.

೧೭. ಅಮೃತಮ್—
ನಾಶವಿಲ್ಲದ ಮೋಕ್ಷ (ಆಪೇಕ್ಷಿಕ), ೧೪, ೪೮, ೫೦ ; ಮರಣವಿಲ್ಲದ ಸ್ಥಿತಿ, ಮುಖ್ಯ ಮೋಕ್ಷ, ೮೬, ೧೧೫.

೧೪. ಅವಿದ್ಯಾ—
ಆತ್ಮನ ಸ್ವರೂಪವನ್ನು ತಪ್ಪಾಗಿ ತಿಳಿದು ಕೊಂಡಿರುವದು, ೬೩, ೬೬, ೭೬, ೧೦೩, ೧೦೯, ೧೧೪.

೧೯. ಅವಿದ್ಯಾಕಾಮಕರ್ಮಾಣಿ—
ತತ್ತ್ವವನ್ನು ತಪ್ಪಾಗಿ ತಿಳಿದುಕೊಂಡಿರುವದು ಪಿಪ್ಪಲುದ ಆಸೆ, ಅದಕ್ಕಾಗಿ ಕರ್ಮವನ್ನು ಮಾಡುವದು-ಇವು, ೬೬, ೬೯.

೨೦. ಅವಿದ್ಯಾಕೃತ—
ತಪ್ಪು ತಿಳಿವಳಿಕೆಯಿಂದ ಹುಟ್ಟುಗಟ್ಟಿರುವ (ನಾನುರೂಪಗಳು), ೧೦೩, ೧೦೯; (ಪ್ರಾಣಾದಿಕಲೆಗಳು), ೧೧೫; (ಭೂತ ಮಾತ್ರೆಗಳು), ೬೪.

೨೧. ಅವಿದ್ಯಾದಿದೋಷಾಃ—
ಅವಿದ್ಯೆ ಕಾಮ, ಕರ್ಮ-ಇವು, ೧೧೩.

೨೨. ಅವಿದ್ಯಾಧ್ಯಾರೋಪಿತಮ್—
ತಪ್ಪುತಿಳಿವಳಿಕೆಯಿಂದ ಹುಟ್ಟುಗಟ್ಟಿರುವ, (ಕರ್ತೃತ್ವಭೋಕ್ತೃತ್ವ), ೧೦೪,

೨೩. ಅಹಙ್ಕಾರಃ—
ಅಂತಃಕರಣದ ಅಭಿಮಾನಾತ್ಮಕವೃತ್ತಿ, ೭೨.

೨೪. ಆಕಾಶಃ—
ಪಂಚಭೂತಗಳಲ್ಲಿ ಒಂದು, ೨೫; ಸಮಾನ ವೆಂಬ ಪ್ರಾಣವೃತ್ತಿ, ೪೫.

೨೫. ಆಗಮಬಾಹ್ಯ—
ವೇದಾಂತಸಂಪ್ರದಾಯಕ್ಕೆ ಹೊರಜ್ಞಾದ, ೧೦೪, ೧೦೮.

೨೬. ಆಚಾರ್ಯಃ—
ತತ್ತ್ವವನ್ನು ಹೇಳಬಲ್ಲ ಗುರು, ೨, ೫೮.

೨೭. ಆತ್ಮಾ—
ಲಿಂಗಾತ್ಮ ೪೩; ಸ್ಥಾವರಜಂಗಮಗಳ ಅಂತರಾತ್ಮನಾದ ಸೂರ್ಯ, ೧೪; ಭೋಕ್ತೃವಾದ ಜೀವ, ೪೭; ಪರಮಾತ್ಮ, ೬೫, ೬೬, ೮೦, ೮೪.

೨೮. ಆಲಮ್ಬನಮ್—
ವಾಚಕವಾಗಿ, ಅಥವಾ ಪ್ರತೀಕವಾಗಿ ಇರುವ ವಸ್ತು (ಓಂಕಾರ), ೮೦.

೨೯. ಇಜ್ಯೇಶಃ—
ಪರಮೇಶ್ವರನು, ೫೨.

೩೦. ಇಷ್ಟಾಪೂರ್ತಮ್—
ಯಾಗ, ಭಾವಿಯೇ ಮುಂತಾದವುಗಳನ್ನು ಕಟ್ಟಿಸುವದು-ಇವು, ೧೩, ೨೧.

೩೧. ಉತ್ತರಾಯಣಃ—
ಉತ್ತರಾಯಣಮಾರ್ಗದಿಂದ ಹೋಗಿ ಪಡೆಯುವ (ಪ್ರಾಜ್ಞಾತ್ಮಭಾವ), ೨೩.

೩೨. ಉಪಸನ್ನಃ—
ಶಿಷ್ಯವೃತ್ತಿಗಾಗಿ ಗುರುವಿನ ಬಳಿಗೆ ಬಂದವನು, ೨, ೮೮.

೩೩. ಉಪಾಧಿಃ—
ವಸ್ತುಸ್ವರೂಪಕ್ಕೆ ಸಂಬಂಧಪಡದೆ ಅದನ್ನು ಗುರುತಿಸುವದಕ್ಕೆ ಉಪಯೋಗವಾಗುವ ಸುತ್ತುಗಟ್ಟು, (ಉದಾಹರಣೆಗೆ ಆತ್ಮನಿಗೆ ದೇಹ ಪ್ರಾಣಗಳು), ೬೨, ೬೭, ೬೯, ೭೪,

೩೪. ಋಷಿಃ—
ಸ್ವರ್ಗವನ್ನು ಬಲ್ಲವನು, ೧೩; ಪ್ರಾಣತತ್ತ್ವವನ್ನು ಬಲ್ಲವನು, ೧೭; ಹಕ್ಕುರಾದಿ ಪ್ರಾಣಿಗಳು, ೪೧; ಪರತತ್ತ್ವವನ್ನು ಬಲ್ಲವನು, ೩.

೩೫. ಏಕರ್ಷಿಃ—
ಅಥರ್ವವೇದದಲ್ಲಿ ಹೇಳಿರುವ ಒಂದಾನೊಂದು ಅಗ್ನಿ, ೩೪.

೩೬. ಏಕತ್ವದರ್ಶನಮ್
ತತ್ತ್ವವು ತನಗೆರಡನೆಯದಿಲ್ಲದೆ ಒಂದೇ ಇರುವದೆಂಬ ತಿಳಿವಳಿಕೆ, ೧೦೪.

೩೭. ಏಕಾತ್ಮವಿದಃ—
ಅದ್ವಿತೀಯಾತ್ಮಜ್ಞಾನಿಗಳು, ೬೩.

೩೮. ಕರ್ತೃತ್ವಮ್—
ಕರ್ಮವನ್ನು ಮಾಡುವ ಸ್ವಭಾವ, ೧೦೧, ೧೦೪, ೧೦೫, ೧೧೦.

೩೯. ಕರ್ಮೇಂದ್ರಿಯಾಣಿ—
ಬೇರೆಬೇರೆಯ ಕೆಲಸವನ್ನು ಮಾಡುವ ವಾಕ್ಕು, ಪಾಣಿ, ಪಾದ, ಪಾಯು, ಉಪಸ್ಥ-ಎಂಬ ಇಂದ್ರಿಯಗಳು, ೩೪, ೩೫, ೭೨.

೪೦. ಕಲಾಃ—
ಆತ್ಮನಿಗೆ ಉಪಾಧಿಗಳಾಗಿ ಅವುಗಳಿಂದ ಸೃಷ್ಟವಾಗಿರುವ ಬ್ರಾಹ್ಮಣಾದಿನಾಮಾಂತವಾದ ತತ್ತ್ವಗಳು, ೮೯, ೯೦, ೯೬, ೯೯, ೧೧೩, ೧೧೪, ೧೧೬.

೪೧. ಕಲಾಪ್ರಲಯಃ—
ಕಲೆಗಳು ಆತ್ಮನಿಂದ ಬೇರೆಯಾಗಿರುವುದಿಲ್ಲವೆಂದು ಅರಿತುಕೊಂಡು ಆತ್ಮನಲ್ಲಿಯೇ ಅವುಗಳನ್ನು ಅಡಗಿಸುವುದು, ೧೧೫.

೪೨. ಕಾರ್ಯಕರಣಾನಿ—
ದೇಹವೂ ಇಂದ್ರಿಯಗಳೂ, ೩೪, ೩೫, ೫೩, ೫೮, ೬೯, ೭೨, ೮೭.

೪೩. ಕಾರ್ಯಕರಣಸಜ್ಞಾತಃ—
ದೇಹೇಂದ್ರಿಯಗಳ ಒಟ್ಟು ಗುಂಪು, ೩೫, ೫೪, ೭೪.

೪೪. ಕ್ರಿಯಾಕಾರಕಫಲಮ್—
ಕರ್ಮ, ಅದರ ಸಾಮಗ್ರಿ, ಅದರ ಫಲ-ಇವುಗಳ ರೂಪದಲ್ಲಿರುವ ಸಂಸ್ಕಾರ, ೧೦೩.

೪೫. ಕ್ಷೇತ್ರಜ್ಞಃ—
ಕ್ಷೇತ್ರವೆಂಬ ಅನಾತ್ಮವಾದ ದೇಹಾದಿಗಳ ಗುಂಪನ್ನು ಅರಿಯುವ ಆತ್ಮ, ಜೀವ, ೬೨, ೬೩.

೪೬. ಗುಣಸಾಮ್ಯಮ್—
ಸತ್ತ್ವ, ರಜಸ್ಸು, ತಮಸ್ಸು-ಎಂಬ ಮೂರು ಗುಣಗಳು ಸಮ ಪ್ರಧಾನವಾಗಿರುವ ಪ್ರಕೃತಿ, ಪ್ರಧಾನ, ೧೦೧.

೪೭. ಚಿತ್ತಮ್—
ಸಾಮಾನ್ಯವಾಗಿ ಅರಿಯುವ ಜ್ಞಾಪಕ, ಆಂತಃಕರಣದ ಒಂದು ವೃತ್ತಿ, ೬೨.

೪೮. ಚಿನ್ಮಾತ್ರಃ —
ಬರಿಯ ಜ್ಞಾನವಾಗಿರುವ (ಆತ್ಮ), ೧೦೨, ೧೦೫, ೧೦೬.

೪೯. ಜಲಸೂರ್ಯಕಃ—
ನೀರಿನಲ್ಲಿ ಕಾಣುವ ಸೂರ್ಯ ಪ್ರತಿಬಿಂಬ, (ಜೀವನಿಗೆ ಉಪಮಾನ) ೭೩.

೫೦. ಜೀವಘನಃ—
ಎಲ್ಲ ಜೀವರುಗಳೂ ಒಟ್ಟುಗೂಡಿರುವ ಹಿರಣ್ಯಗರ್ಭ, ೮೩.

೫೧. ಜ್ಞಾನಮ್—
ಉಪಾಸನೆ, ೧೩, ೧೪, ; ಅರಿಯುವಿಕೆ, ೫, ೪೧, ೪೪ ; ಜ್ಞಾನದ ತಿರಳು, ೬೧, ೬೨, ೭೩, ೭೫.

೫೨. ತನ್ಮಾತ್ರಾಣಿ—
ಶಬ್ದವೇ ಮುಂತಾದ ಗುಣಗಳು ಒಂದೊಂದೇ ಇರುವ ರೂಪ, ೭೨.

೫೩. ತಪಃ—
ಇಂದ್ರಿಯನಿಯಮನ, ೧೨, ೩೭, ೧೪ : ಆಲೋಚನೆ, ೫.

೫೪. ತಾರ್ಕಿಕಃ—
ಶ್ರುತಿಯನ್ನು ಹಿಡಿಯದೆ ಸ್ವತಂತ್ರತರ್ಕವನ್ನು ನಂಬಿರುವವನು, ೬೬, ೧೦೩, ೧೦೪.

೫೫. ತೃತೀಯೋ ದ್ಯೌಃ—
ಸುವರ್ಲೋಕ, ೩೬.

೫೬. ದಕ್ಷಿಣಾಯನಃ, ಪಿತ್ರ್ಯಯಾಣಃ—
ಕರ್ಮಗಳು ಫಲವನ್ನು ಪಡೆಯುವದಕ್ಕೆ ಹೋಗಬೇಕಾಗಿರುವ ಮಾರ್ಗ, ೧೩.

೫೭. ದೃಷ್ಟಂ ಫಲಮ್—
ಈ ಲೋಕದಲ್ಲಿ ಕಾಣಬರುವ ಫಲ, ೩೧.

೫೮ ನೆರೆಕೆಃ—
ತಿರ್ಯಗ್ಜಂತುಗಳ ಜನ್ಮನೇ ಮುಂತಾದ ದುಃಖಸ್ಥಾನ, ೪೪.

೫೯. ನಾಮರೂಪೆಃ—
ಪ್ರಪಂಚವು ತೋರಿಕೊಳ್ಳುವ ಎರಡು ಬಗೆಗಳು, ೭೨, ೭೬, ೯೦, ೧೦೩, ೧೧೩, ೧೧೪

೬೦. ನಿರಾಬಾಧಮ್, ಅನಾಬಾಧಮ್
ಬಾಧಿತವಾಗದ, ಸಹಜವಾಗಿರುವ ಸುಖ, ಸ್ವರೂಪಸುಖ, ೫೩, ೬೮.

೬೧. ನಿರ್ವಿಶೇಷಮ್—
ಇಂಥದ್ದು, ಅಂಥದ್ದು ಎಂಬ ವಿಶೇಷವು ಯಾವದೂ ಇಲ್ಲದ, ೯೧.

೬೨. ಪರಂ ಶ್ರೇಯಃ—
ಹೆಚ್ಚಿನ ಒಳ್ಳೆಯದು, ಮೋಕ್ಷ, ೮೭.

೬೩. ಪರಂ ಬ್ರಹ್ಮ—
ಹೆಚ್ಚಿನ ಬ್ರಹ್ಮ, ನಮ್ಮ ಆತ್ಮನೇ ಎಂದು ಆರಿತುಕೊಳ್ಳಬೇಕಾಗಿರುವ ಬ್ರಹ್ಮ, ೨, ೮೦

೬೪. ಪರಮಾತ್ಮಾ, ಪರ ಆತ್ಮಾ—
ಎಲ್ಲರಿಗೂ ಆತ್ಮನಾಗಿರುವ ಬ್ರಹ್ಮ. ನಿಜವಾದ ಆತ್ಮ, ೫೧, ೭೦, ೭೪, ೮೩.

೬೫. ಪರಮಾಣವಃ—
ಜಗತ್ತಿಗೆ ಕಾರಣವೆಂದು ವೈಶೇಷಿಕರು ಹೇಳುವ ಪೃಥ್ವಿಯೇ ಮುಂತಾದವುಗಳ ತೀರ ಸೂಕ್ಷ್ಮವಾದ ಅಂಶಗಳು, ೧೦೧.

೬೬. ಪರಮಾರ್ಥವಸ್ತು—
ನಿಜವಾಗಿಯೂ ಇರುವ ಆತ್ಮತತ್ತ್ವ, ೧೦೯.

೬೭. ಪರಾಪರಬ್ರಹ್ಮಣೀ—
ಹೆಚ್ಚಿನ ಬ್ರಹ್ಮವಾದ ಪರಮಾತ್ಮ ಮತ್ತು ಕಡಿಮೆಯ ಬ್ರಹ್ಮವಾದ ಹಿರಣ್ಯಗರ್ಭ, ೭೮.

೬೮. ಪರಾವಿದ್ಯಾ—
ಹೆಚ್ಚಿನ ವಿದ್ಯೆ, ಬ್ರಹ್ಮವಿದ್ಯೆ, ೫೧.

೬೯. ಪುರುಷಃ—
ಶರೀರ, ೫೯, ೫೩ ; ಶರೀರವನ್ನು ತುಂಬಿಕೊಂಡಿರುವ ಜೀವ, ೭೪ ; ಆತ್ಮ, ೫೯, ೭೪, ೭೫, ೭೬, ೧೦೦, ೧೦೩, ೧೦೪ ೧೦೬, ೧೦೭, ೧೦೮, ೧೧೧, ೧೧೩, ೧೧೫ ೧೧೪, ೧೧೬.

೭೦. ಪುರುಷಾರ್ಥಃ—
ಮನುಷ್ಯನು ಬಯಸುವ ಭೋಗ, ಮೋಕ್ಷ, ೧೧೧.

೭೧. ಪ್ರಜಾ—
ಶರೀರ, ೪, ೫, ೨೩.

೭೨. ಪ್ರಜಾಪತಿಃ—
ಸೃಷ್ಟಿಯಾಗುವ ಪ್ರಜೆಗಳ ಒಡೆಯ, ಹಿರಣ್ಯಗರ್ಭ, ೫.

೭೩. ಪ್ರತೀಕಮ್—
ಉಪಾಸ್ಯಕ್ಕೆ ಬದಲಾಗಿಟ್ಟುಕೊಂಡು ಧ್ಯಾನ ಮಾಡುವ ಓಂಕಾರಾದಿ, ೮೦, ೮೩.

೭೪. ಪೃಥಮಜಃ—
ಎಲ್ಲಕ್ಕೂ ಮೊದಲು ಹುಟ್ಟಿದವನು, ಹಿರಣ್ಯಗರ್ಭ, ೫೪.

೭೫. ಪ್ರಧಾನಮ್—
ಸತ್ತ್ವರಜಸ್ತಮೋಗುಣಗಳ ಸಾಮ್ಯವನ್ನೆಯ ಪ್ರಕೃತಿ ೧೦೧, ೧೦೫, ೧೦೬ ೧೦೭, ೧೦೮ ; ಅಧೀನವಲ್ಲದ, ಮುಖ್ಯವಾದ, ೬, ೧೦೭.

೭೬. ಪ್ರಾಣಃ—
ಪ್ರಜಾಪತಿಯು ಸೃಷ್ಟಿಮಾಡಿದ ಆತ್ಮರೂಪವಾದ ಶಕ್ತಿವಿಶೇಷ, ೫, ೬, ೭, ೯, ೧೭. ೧೮ ; ಇಂದ್ರಿಯಗಳು, ೨೭, ೩೧ ; ಹಿರಣ್ಯಗರ್ಭ, ೩೨, ೪೩, ೧೧೨, ; ಆಧ್ಯಾತ್ಮಿಕ ಪ್ರಾಣ, ಮುಖ್ಯಪ್ರಾಣ, ೨೬, ೨೭.

೭೭. ಬುದ್ಧಿಃ—
ಅಂತಃಕರಣದ ನಿಶ್ಚಯಾತ್ಮಕವೃತ್ತಿ, ೭೩

೬೮. ಬುದ್ಧೀಂದ್ರಿಯಾಣಿ– ಶಕ್ಷುಸ್ಸು, ಶೋತ್ರ, ಘಾಣಿಕೆ, ಜಿಹ್ವೆ, ತ್ವಕ್ಕು– ಎಂಬ ಅರಿವಿನ ಇಂದ್ರಿಯಗಳು. ೨೪, ೨೫, ೬೨.

೬೯. ಬ್ರಹ್ಮ– ಬ್ರಾಹ್ಮಣ ಜಾತಿ, ೨೬; ಪರಮಾತ್ಮ, ೩೬.

೭೦. ಬ್ರಹ್ಮಚರ್ಯೆಮ್– ಮೈಥುನಾಸಮಾಚರಣ, ೩; ಋತುಕಾಲ ಭಾರ್ಯಾಗಮನ, ೧೫.

೭೧. ಬ್ರಹ್ಮಪರಾಃ, ಬ್ರಹ್ಮನಿಷ್ಠಾಃ– ಬ್ರಹ್ಮವೇ ಜೆಜ್ಜೆಂದು, ಬ್ರಹ್ಮದ ಉಪಾಸನೆ ಯಲ್ಲಿಯೇ ನಿರತರು, ಪರಬ್ರಹ್ಮನ ಉಪಾಸಕರು, ೨.

೭೨. ಬ್ರಹ್ಮಲೋಕಃ– ಹೆಚ್ಚಿನ ಚಂದ್ರಲೋಕ, ೨೯, ೨೨; ಪರಬ್ರಹ್ಮ ಗರ್ಭನ ಲೋಕ, ೨೨, ೮೩, ೮೫.

೭೩. ಬ್ರಹ್ಮವಿತ್– ದೊಡ್ಡ ತತ್ತ್ವವನ್ನು ಬಲ್ಲವ, ೩೭; ಪರಬ್ರಹ್ಮ ಗರ್ಭನ ತತ್ತ್ವವನ್ನು ಬಲ್ಲವ, ೧೧.

೭೪. ಬ್ರಹ್ಮಶರೀರಮ್– ಬ್ರಹ್ಮಸ್ವರೂಪು, ೧೧೮.

೭೫. ಬ್ರಹ್ಮಿಷ್ಠಃ– ಎಲ್ಲಕ್ಕೂ ದೊಡ್ಡ ತತ್ತ್ವವನ್ನು ಬಲ್ಲವ, ೩೮

೭೬. ಭೋಕ್ತೃತ್ವಮ್– ಅನುಭವಿಸುವ ಸ್ವಭಾವ, ೧೮೩, ೧೮೩, ೧೮೪, ೧೮೫, ೧೮೭, ೧೮೫.

೭೭. ಮನಃ– ಮನಸ್ಸು, ಅಂತಃಕರಣದ ಮನಸ್ಸಮೃಶ್ರಿ, ೭೨.

೭೮. ಮನ್ಯೇ ಬ್ರಹ್ಮವಿದಃ– ಅಲ್ಪಬ್ರಹ್ಮನನ್ನು ಬಲ್ಲನೆಂದು, ಬ್ರಹ್ಮದ ನಿಜವನ್ನು ಅರಿಯದವನೆಂದು, ೬೩.

೭೯. ಮರೀಚ್ಯುದಕಮ್– ಮಿಲುಕೆಯುದುರಿದ ನೀರು, ನಿಜವಾಗಿ ನೀರಲ್ಲದೆ ನೀರಿನಂತೆ ತೋರುವುದು, ೬೭.

೮೦. ಮಹದಾದಯಃ– ಪ್ರಧಾನದಿಂದ ಉದ್ಭವಿಸಿದವೆಂದು ಸಾಂಖ್ಯರು ಹೇಳುವ ತತ್ತ್ವಗಳು, ಅಹಂಕಾರ, ತನ್ಮಾತ್ರೆಗಳು, ೧೦೧, ೧೦೫.

೮೧. ಮಹಾಭೂತಾನಿ– ಸೂಕ್ಷ್ಮವಾದ ಪೃಥ್ವಿಯೇ ಮುಂತಾದ ಐದು ಭೂತಗಳು, ೨೫, ೧೦೫.

೮೨. ಮಾಯೆಯಾ– ಮಿಥ್ಯಾಚಾರ, ೨೨.

೮೩. ಮುಖ್ಯಃ, ಪ್ರಾಣಃ– ಶರೀರದಲ್ಲಿ ಮುಖಸಾಕೆಗಳ ಮೂಲಕ ಸಂಚರಿಸುವ ಪ್ರಾಣಗಳಲ್ಲಿ ಅಧಾರವಾಗಿರುವ ಪ್ರಾಣ, ೨೬, ೪೦, ೪೭.

೮೪. ಮೂರ್ತಾಮೂರ್ತೆ?– ಸೂಕ್ಷ್ಮಸೂಪ್ಷ್ಮಗಳು, ೬.

೮೫. ಯೋಗಕ್ರಿಯಾಃ– ಅವಘಾತ್ರಯೂಹ್ಯರನ್ನು ಚಂಚಿಸುವ ಜಾಪಸನಾಕ್ರಿಯೆಗಳು, ೬೪,

೮೬. ರಯಿಃ– ಪ್ರಜಾಪತಿಯು ಸೃಷ್ಟಿಸಿರುವ ಭೋಗ್ಯವಸ್ತು, ೫, ೬, ೧೭, ೧೫.

೮೭. ಲಿಙ್ಗಾತ್ಮಾ– ಆತ್ಮನೊಡನೆ ಸೇರಕೊಂಡಿರುವ ಲಿಂಗಶರೀರ ೪೩; ಸಮಷ್ಟಿಲಿಂಗಾತ್ಮನಾದ ಹಿರಣ್ಯಗರ್ಭ, ೮೩.

೮೮. ಲೋಕಾಯತಿಕಾಃ– ಚೈತನ್ಯವೆಂಬುದು ಭೂತಗಳ ಧರ್ಮವೆನ್ನುವ ಚಾರ್ವಾಕರು, ೯೦.

೯೯. ವಾಸನಾ–
ಕನಸಿನಲ್ಲಿ ಬೇರೆಯ ವಸ್ತುವಿನಂತೆ ತಪ್ಪು ತಿಳಿವಳಿಕೆಯಿಂದ ತೋರುವ ಮನಸ್ಸಿನ ಸಂಸ್ಕಾರ, ೬೬, ೬೭.

೧೦೦. ವಿಜ್ಞಾನಮ್–
ಆಲೋಚನೆ, ೫; ಅನುಭವ, ೬೮; ಬೈಶದ್ಯ ೬೮; ಬುದ್ಧ್ಯಾದಿಗಳು, ೭೯; ಆರಿಯುವ ಸ್ವಭಾವ, ೭೪.

೧೦೧. ವಿಜ್ಞಾನಾತ್ಮಾ–
ಆರಿಯುವ ಸ್ವಭಾವದ ಜೀವನು, ೭೪.

೧೦೨. ವಿದ್ಯಾ–
ಬ್ರಹ್ಮಜ್ಞಾನ, ೧, ೫೧, ೭೬, ೧೦೯; ಉಪಾಸನೆ, ೧೩, ೫೧.

೧೦೩. ವಿಷಯವಿಷಯಿಲಕ್ಷಣಃ–
ತಾನೇ ವಿಷಯವೂ ವಿಷಯಿಯೂ ಆಗುವ ಹಿರಿಮೆ, ೬೧.

೧೦೪. ವೃತ್ತಿಃ–
ಬ್ರಾಹ್ಮಣ ವ್ಯಾಪಾರ, ೫೬.

೧೦೫. ವೈನಾಶಿಕಃ–
ಯಾವುದೂ ಸ್ಥಿರವಲ್ಲವೆಂಬ ಬೌದ್ಧ, ೯೦, ೯೫

೧೦೬. ವ್ರಾತ್ಯಃ–
ಸಂಸಾರದ ಅಪೇಕ್ಷೆಯಿಲ್ಲದೆ ಶುದ್ಧವಾಗಿರುವ ಪ್ರಾಣ, ಹಿರಣ್ಯಗರ್ಭ, ೫೪.

೧೦೭. ವ್ಯಾಕೃತಮ್–
ನಾಮರೂಪಗಳಾಗಿ ವಿಂಗಡಿಸಿಕೊಂಡಿರುವ (ಪ್ರಪಂಚ) ೫೧.

೧೦೮. ಸಂಹತ–
ಒಂದರೊಡನೊಂದು ಸೇರಿಕೊಂಡು ಸ್ವತಂತ್ರವಾಗಿರುವ ಬೇರೊಬ್ಬನಿಗಾಗಿ ಕೆಲಸಮಾಡುವ ಸ್ವಭಾವದ, ೫೭, ೫೪, ೭೨, ೮೩.

೧೦೯. ಸತ್ಯಮ್–
ನಿಜವನ್ನೇ ಆಡುವದು, ೨೧; ನಿಜವಾಗಿರುವ ೫೯, ೫೧.

೧೧೦. ಸತ್ಯಲೋಕಃ–
ಹಿರಣ್ಯಗರ್ಭಲೋಕ, ಬ್ರಹ್ಮಲೋಕ, ೮೩.

೧೧೧. ಸಾಧ್ಯಸಾಧನಲಕ್ಷಣಮ್–
ಕರ್ಮೋಪಾಸನೆಗಳೆಂಬ ಸಾಧನಗಳು : ಅವುಗಳಿಂದ ಪಡೆಯುವ ಲೋಕಗಳೆಂಬ ಸಾಧ್ಯಗಳು. ಈ ರೂಪದ, ೫೧.

೧೧೨. ಸುಷುಮ್ನಾ–
ಉಪಾಸಕನು ಬ್ರಹ್ಮಲೋಕಕ್ಕೆ ಹೋಗುವಾಗ ಮೂರ್ಧಪ್ರಾಪ್ತಿಗಾಗಿ ಅನುಸರಿಸಬೇಕಾದ ನಾಡಿ, ೪೪.

೧೧೩. ಸ್ಥೂಲಭೂತಾನಿ–
ಒಂದರಲ್ಲೊಂದು ಬೆರೆತುಕೊಂಡಿರುವ ಮಹಾಭೂತಗಳು, ೭೨.

೧೧೪.. ಹಿರಣ್ಯಗರ್ಭಃ–
ಪರಬ್ರಹ್ಮದಿಂದ ಮೊದಲು ಹುಟ್ಟುವ ಕಾಮೆಯ ಬ್ರಹ್ಮ, ೫, ೫೩.

೧೧೫. ಹೃದಯಪುಣ್ಡರೀಕಾಕಾಶಃ, ಹೃದಯಾಕಾಶಃ—
ಹೃದಯದ ಆಕಾಶ, ಲಿಂಗಾತ್ಮನಿರುವ ಸ್ಥಾನ ೪೩; ಸುಷುಮ್ನಿಸ್ಥಾನ, ೬೬.

1-12-92, ಅಧ್ಯಾತ್ಮಪ್ರಕಾಶಮುದ್ರಣಾಲಯ, ಹೊಳೆನರಸೀಪುರ.